ಸ್ಥಾಪನೆ : ೧೮೫೬ 1910 ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯ

ಶತಮಾನೋತ್ಸವ [illegible]

ಪುಸ್ತಕ ಪ್ರದರ್ಶನ [illegible]



ಶತಮಾನೋತ್ಸವ ಬೆಳ್ಳಿ [illegible] (ಏಪ್ರಿಲ್ [illegible] ರಿಂದ)

ಶ್ರೀ ಚನ್ನಬಸಪ್ಪನವರು ([illegible])

ವರ್ಷ 1911 [illegible]

ಕನ್ನಡ ಶಾಲಾ ಪತ್ರಿಕೆ



ಶಿಕ್ಷಣ [illegible]

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯುಟಿ ಚನ್ನಬಸಪ್ಪ [illegible]. [illegible]. ಧಾರವಾಡ

ಕಾಯ್ದು, ಒಮ್ಮೆ ಹಿಂದುಸ್ತಾನದ ಸುತ್ತಲಿದ್ದ ಸೃಷ್ಟಿನಿರ್ಮಿತವಾ
ಿಯ ಮೇಲ್ಭಾಗದಲ್ಲಿ ನಿಂತು, ನೋಟವು ಹರಿಯುವವರೆಗೆ ಕಡೆ
ತೆ ಹಬ್ಬಿರುವ ಬೈಲುಪ್ರದೇಶವನ್ನು ನೋಡಿದ ಸಾಹಸಿಕರಾದ
ುಯರಾದ ದಾಳಿಗಾರರ ಮನಸಿಗೆ ಎಷ್ಟು ಆನಂದವಾಗಿರಬಹುದೆಂ
ವಾಚಕರೇ ಕಲ್ಪಿಸಬಹುದು. ಆದರೆ ಉತ್ತರದಿಂದಂತೂ ಹಿಂದು
ನ್ನು ಪ್ರವೇಶಿಸುವದು ಅಸಂಭವವಾದದ್ದು. ಅಲ್ಲಿಯ ಕಣಿವೇ
ಳು ಯಾವಾಗಲೂ ಹಿಮದಿಂದ ಆಚ್ಛಾದಿತವಾಗಿರುತ್ತವೆ. ಇವು
ಸುಮಾರು ೧೩೦೦೦ ಫೂಟು ಎತ್ತರವಾದ ತಪ್ಪಲಭೂಮಿಯು
ುದೆ. ಆದರೆ ಹಿಂದುಸ್ತಾನದ ಪರ್ವತಕವಚವೆಂಬ ಬಹುಭದ್ರ
ೋಟೆಯಿಂದ ಸುತ್ತುಗಟ್ಟಲ್ಪಟ್ಟ ವಿಸ್ತೀರ್ಣವಾದ ಬೈಲುಭೂಮಿಯು
ಮುದ್ರಕವಚದಲ್ಲಿರುವ ಒಡಕಿನಿಂದ ಒಳಹೊಕ್ಕವನಿಗೆ ಇವೆಲ್ಲ
ು ಸಂಗತಿಗಳೂ ಅನುಕೂಲವಾಗುತ್ತವೆ. ಇವನ ಪ್ರವೇಶದ
ತೆರೆದು ಬಿದ್ದಂತಿರುತ್ತದೆ; ಕೋಟೆಯ ಒಳಭಾಗದವರಿಗೆ ತಡ
ೋಗಲಿಕ್ಕೆ ಅಸಂಖ್ಯ ಶಾಖೆಗಳಿಂದ ಕೂಡಿದ ಗಂಗೆಯು ಕರೆಯು
ತ್ತ ನೋಡಿದರೂ ಹಬ್ಬಿರುತ್ತದೆ. ಇವನು ಕೋಟೆಯವರೆಗೆ
ಮಾರ್ಗಗಳನ್ನು ವಶ ಮಾಡಿಕೊಂಡು, ಪರರನ್ನು ಹಿಮ್ಮೆಟ್ಟಿಸ
ೋಟೆಯ ಉಪಯೋಗವನ್ನು ಬಹು ಸುಲಭವಾಗಿ ಮಾಡಿಕೊ
. ಒಳಭಾಗದಲ್ಲಿರುವ ಸಣ್ಣಪುಟ್ಟ ನಾಯಕರನ್ನು ಹಣಿಯು
೧೭೫೭ ರಿಂದ ೧೮೫೭ ರವರೆಗೆ ಇಂಗ್ಲಿಷರು ಈ ಕಾರ್ಯವ
ದರು. ಪ್ಲಾಸಿಯ ಯುದ್ಧದಲ್ಲಿ ಕ್ಲೈವನ ಕಲಿತನದಿಂದ ಇಂಗ್ಲಿ
ಮುಂಟಾಗದಿದ್ದರೆ ಹಿಂದುಸ್ತಾನವನ್ನು ಇಷ್ಟು ತೀವ್ರವಾಗಿಯೂ
ಿಯೂ ಇಂಗ್ಲಿಷರು ವಶಮಾಡಿಕೊಳ್ಳಲಾಗುತ್ತಿದ್ದಿಲ್ಲವೆಂದು
ಗಿ ಹೇಳಬಹುದು.

V. N. MAGDAL.

ಸಿದ್ಧನಾಥ ಪಾಠಕನ ಮಂದಿರ.
ಮೊರಬ. ಜಿ ಧಾರವಾಡ.

ನಿಬಂಧಶಿಕ್ಷಣ.

(ದಶಂಬರ ೧೯೦೯ನೇ ಸಂಚಿಕೆಯಿಂದ ಮುಂದೆ ಸಾಗಿದ್ದು.)

೧ನೆಯಭಾಗ—೫ನೆಯ ಇಯತ್ತೆ.

(ಸಹಜಾನುಭವದ ವಿಷಯಗಳು—ಹಿಂದಿನ ೩೮೧ನೇ ಪುಟದಿಂದ ಸಾಗಿದ್ದು.)

೧ನೇ ಪಾಠ—ಊಟಗಳು.

ಊಟದಲ್ಲಿ ದಿನದ ಊಟ, ಹಬ್ಬಹುಣ್ಣಿವೆಯ ಊಟ, ಪ್ರಸ್ತಪ್ರಯೋಜನದ ಊಟ, ಮೇಜವಾನಿ, ಪಂತಿ ಮೊದಲಾದ ಪ್ರೀತಿಯ ಊಟ ಎಂದು ಹಲವು ಪ್ರಕಾರಗಳನ್ನು ಮಾಡಬಹುದು. ಈ ಎಲ್ಲ ಬಗೆಯ ಊಟಗಳನ್ನು ವರ್ಣಿಸುವಾಗ ಅನುಸರಿಸತಕ್ಕ ಕ್ರಮವನ್ನು ಸಾಮಾನ್ಯ ವಿವರಣೆಯೊಂದಿಗೆ ಕೆಳಗೆ ಬರೆದಿರುತ್ತದೆ:—

೧. ವಿಷಯವಿವೇಚನಕ್ರಮ.

(ಅ) ಊಟದಕಾಲ—ಊಟಕ್ಕೆ ಕಾಲವು ಮುಖ್ಯವಾದದ್ದು; ಕಾರಣ ವಿದ್ಯಾರ್ಥಿಗಳು ಮೊದಲು ಊಟದ ಕಾಲವನ್ನು ತಮ್ಮ ತಮ್ಮ ಸಮಾಜದ ಪದ್ಧತಿಯಂತೆ ವರ್ಣಿಸಬೇಕು. ಅದನ್ನು ವರ್ಣಿಸುವಾಗ ಹುಡುಗರ ಊಟಗಳ ಕಾಲಗಳ ವರ್ಣನೆಯನ್ನೂ, ದೊಡ್ಡವರ ಊಟಗಳ ಕಾಲಗಳ ವರ್ಣನೆಯನ್ನೂ, ಹಬ್ಬಹುಣ್ಣಿವೆಯ ಹಾಗು ಪ್ರಸ್ತಪ್ರಯೋಜನಗಳ ಊಟದ ಕಾಲಗಳ ವರ್ಣನೆಯನ್ನೂ, ಪಂತಿ, ಮೇಜವಾನಿ ಮೊದಲಾದ ಪ್ರೀತಿಯ ಊಟಗಳ ಕಾಲಗಳ ವರ್ಣನೆಯನ್ನೂ ಪ್ರಸಂಗ ಬಿದ್ದಂತೆ ಮಾಡಬೇಕಾಗಬಹುದು.

(ಬ) ಊಟದ ಸ್ಥಳ—ಕಾಲವನ್ನು ವರ್ಣಿಸಿದನಂತರ ಊಟದ ಸ್ಥಳವನ್ನು ವರ್ಣಿಸಬೇಕು. ಮೇಲೆ ಹೇಳಿದ ಪ್ರಕಾರ ಊಟದ ಬೇರೆ ಬೇರೆ ಪ್ರಸಂಗಗಳಿದ್ದಂತೆ ಅವರವರ ಸಮಾಜದ ಪದ್ಧತಿಯನ್ನನುಸರಿಸಿ ಊಟದ ಬೇರೆಬೇರೆ ಸ್ಥಳಗಳನ್ನು ವರ್ಣಿಸಬೇಕಾಗಬಹುದು; ಅಂದರೆ, ದಿನದ ಊಟದ ಸ್ಥಳ, ಪ್ರಸ್ತಪ್ರಯೋಜನದ ಊಟದ ಸ್ಥಳ, ಪ್ರೀತಿಭೋಜನದ ಊಟದ ಸ್ಥಳ, ಇವುಗಳನ್ನು ಅವಶ್ಯಬಿದ್ದಂತೆ ವರ್ಣಿಸಬೇಕಾಗುವದು.

(ಕ) ಊಟದಸಿದ್ಧತೆ—ಹೀಗೆ ಊಟದ ಕಾಲವನ್ನೂ, ಸ್ಥಳವನ್ನೂ ವರ್ಣಿಸಿದನಂತರ, ಊಟದ ಸಿದ್ಧತೆಯನ್ನು ವರ್ಣಿಸಬೇಕು; ಅಂದರ, ಊಟಕ್ಕೆ ಮಾಡಿದ ಪದಾರ್ಥಗಳು, ಊಟಕ್ಕೆ ಕೂಡುವ ಕ್ರಮ, ಪದಾರ್ಥಗಳನ್ನು ಬಡಿಸುವ ರೀತಿ, ಊಟಕ್ಕೆ ಕೂಡುವಾಗ ಉಪಯೋಗಿಸುವ ಸಂಜ್ಞೆ ಇವನ್ನು ಅವರವರ ಪದ್ಧತಿಯಂತೆ ವರ್ಣಿಸಬೇಕು.

(ಡ) ಊಟದ ರೀತಿ—ಇಷ್ಟಾದ ಬಳಿಕ ಊಟಮಾಡುವ ರೀತಿಯನ್ನು ವರ್ಣಿಸಬೇಕು; ಅಂದರೆ, ಪದಾರ್ಥಗಳನ್ನು ಉಣ್ಣುವ ಕ್ರಮ, ಪದಾರ್ಥಗಳನ್ನು ಪ್ರೂರಯಿಸುವ ಬಗೆ, ಊಟ ಮಾಡುತ್ತಿರುವಾಗ ವರ್ತಿಸುವ ನಾಮಸ್ಮರಣ, ವಿನೋದ, ಗಾಯನ, ಸುಖಸಲ್ಲಾಪ ಮೊದಲಾದ ಪ್ರಸಂಗಗಳು ಇವನ್ನು ವರ್ಣಿಸಬೇಕು.

೨. ಉದಾಹರಣಗಳು:-

ಹುಡುಗರ ಪಂತಿ.

ಹುಡುಗರು ಪಂತಿಯನ್ನು ಮಾಡಲಿಕ್ಕೆ ಬಹಳವಾಗಿ ಮೆಚ್ಚುವರು. ಅವರು ಪಂಕ್ತಿಯನ್ನು ಒಮ್ಮೊಮ್ಮೆ ಮುಂಜಾವಿನ ಊಟದ ಹೊತ್ತಿಗೆ ಮಾಡುವರು; ಒಮ್ಮೊಮ್ಮೆ ಮಧ್ಯಾಹ್ನದ ಊಟದಹೊತ್ತಿಗೆ ಮಾಡುವರು; ಒಮ್ಮೊಮ್ಮೆ ಇಳಿಹೊತ್ತಿನ ಮುಂದೆ ಮಾಡುವರು. ರಾತ್ರಿ ಹಿಟ್ಟು ಚಲ್ಲಿದಹಾಗೆ ಬೆಳದಿಂಗಳು ಬಿದ್ದಾಗ ಮನಸಿಗೆ ಸೊಗಸಾಗುವದರಿಂದ ಆಗ ಪಂತಿ ಮಾಡುವದು ವಾಡಿಕೆಯಾಗಿರುವದು.

ಹುಡುಗರು ಮಾಳಿಗೆಯಮೇಲೆ ಪಂತಿ ಮಾಡುವದೇ ಬಹಳ. ಒಮ್ಮೊಮ್ಮೆ ತುಳಸಿಯ ಕಟ್ಟೆಯಮೇಲೆ ಮಾಡುವರು. ಒಮ್ಮೊಮ್ಮೆ ಗುಡಿಗೆ ಹೋಗುವರು. ಹೊತ್ತು ಸಿಕ್ಕರೆ ಅಪರೂಪವಾಗಿ ತೋಟಕ್ಕೂ ಹೊಲಕ್ಕೂ ಪಂತಿಗೆ ಹೋಗುವದುಂಟು.

ಪಂತಿಗೆ ಬೇರೆಬೇರೆ ಹುಡುಗರು ಬೇರೆಬೇರೆ ಜೀನಸು ತರುವರು. ಕೆಲವರು ಬಕ್ಕರಿ ಬೆಣ್ಣೆ ತರುವರು; ಕೆಲವರು ಬುತ್ತಿ ಕಲಸನ್ನ ತರುವರು; ಕೆಲವರು ಕರಿಗಡಬು ಬುರುಬುರಿ ತರುವರು; ಕೆಲವರು ಪಾಯಸ ತರುವರು. ಪಂತಿಯ ಹುಡುಗರು ಸಾಲಾಗಿ ಕುಳಿತುಕೊಳ್ಳುವರು. ಅವರವರ ಹಿರಿಯರು ಎಲೆಯ ಮೇಲೆ ಪಂತಿಯ ಜೀನಸು ಬಡಿಸುವರು. ಬಡಿಸುವಾಗ ತಮ್ಮತಮ್ಮ ಜೀನಸನ್ನು ಎಲ್ಲರಿಗೆ ಪಂತಿ ಹಾಕುವರು. ಬಡಿ

ನುವದಾದಮೇಲೆ ಹುಡುಗರು ದೇವರ ಸ್ಮರಣಮಾಡಿ ಪಂತಿಗೆ ಕುಳತು ಕೊಳ್ಳುವರು.

ಪಂತಿ ಮಾಡುವಾಗ ಹುಡುಗರು ನಗುವರು, ಕೆಲೆಯುವರು, ಹುಕ ಟುವರು, ತಮ್ಮತಮ್ಮ ಜೀನಸಿನ ರುಚಿಯನ್ನು ಕೇಳುವರು. ಹಿರಿಯರು ಕೂತವರಿಗೆ ಬೇಕಾದ ಜೀನಸನ್ನು ಬಡಿಸುವರು. ನಡುನಡುವೆ ಸಣ್ಣ ಹುಡುಗರು ಅಳುವವು. ತಾಯಂದಿರು ಅವನ್ನು ರಮಿಸುವರು. ಕೆಟ್ಟ ಹುಡುಗರು ತಮಗೆ ಇನ್ನಿಷ್ಟು ಬೇಕೆಂದು ಹಟ ಮಾಡುವರು. ಕೆಲವ ರು ಕೂಳುಬಾಕರು ಹೊಟ್ಟೆಯ ಅಳತೆಯಿಲ್ಲದೆ ತಿನ್ನುವರು. ಹೀಗೆ ಚೆಕ್ಕಂದದಿಂದ ಪಂತಿಯಾದಮೇಲೆ ಎಲ್ಲರೂ ಆನಂದದಿಂದ ತಮ್ಮತಮ್ಮ ಮನೆಗೆ ಹೋಗುವರು.

ಐದನೆಯ ಇಯತ್ತೆಯವರು ಮಾಡಿದ ಪಂತಿ.

ನನಗೆ ಪಂತಿಯಮೇಲೆ ಪ್ರೀತಿ ಬಹಳ. ಹಿರಿಗೆಯವರೊಡನೆ ನಾನು ಯಾವಾಗಲೂ ಪಂತಿಯನ್ನು ಮಾಡುತ್ತಿರುವೆನು. ಮೊನ್ನೆ ನಮ್ಮ ಐನೆಯ ಇಯತ್ತೆಯ ವಾರ್ಷಿಕ ಪರೀಕ್ಷೆಯು ಆಯಿತು. ಆಗ ನಮ್ಮ ಇಯತ್ತೆಯ ವಿದ್ಯಾರ್ಥಿಗಳು ಆದಿತ್ಯವಾರ ನಾಲ್ಕುಗಂಟೆಗೆ ಪಂತಿಗೆ ಹೋಗಬೇಕೆಂದು ಮಾಡಿದರು.

ಪಂತಿಗೆ ಬೇರೆ ಬೇರೆ ಹುಡುಗರು ಬೇರೆ ಬೇರೆ ಸ್ಥಳಗಳನ್ನು ತೋರಿ ಸಿದರು. ಕೆಲವರು ಗೌಡರ ತೋಟಕ್ಕೆ ಹೋಗಬೇಕೆಂದರು. ಕೆಲವರು ಹಳ್ಳದ ದಂಡೆಯ ಮಾವಿನ ತೋಪಿಗೆ ಹೋಗಬೇಕೆಂದರು. ಕೆಲವರು ಸಾಲೆ ಯ ಸಿತ್ರಲಕ್ಕೆ ಹೋಗಬೇಕೆಂದರು. ಇದು ಗೌಡರ ಬಸವಣ್ಣನ ಮನ ಸ್ಸಿಗೆ ಬರಲಿಲ್ಲ. ಆತನು ತಮ್ಮ ತೋಟದಲ್ಲಿಯೇ ಎಲ್ಲ ಸಿದ್ಧತೆಯನ್ನು ಮಾ ಡಿಸಿದನು.

ಪಂತಿಯ ಜೀನಸಿಗಾಗಿ ಪಟ್ಟಿಯನ್ನು ಹಾಕಿದರು. ಬೇರೆ ಬೇರೆ ಜಾತಿ ಯವರು ಬೇರೆ ಬೇರೆ ಜೀನಸು ಮಾಡಿಸುವದನ್ನು ಗೊತ್ತು ಮಾಡಿದರು. ಬ್ರಾಹ್ಮಣರು ಗೋದಿಯ ದಸಿಮಿ, ಬಾಳೆಯಹಣ್ಣಿನಸೀಕರಣೆ ಮಾಡಿಸಿದರು. ಲಿಂಗವಂತರು ಕರಿಗಡಬು-ಬುತ್ತಿ ಮಾಡಿಸಿದರು. ಅದರಂತೆ ಮುಸಲ್ಮಾನ ರು ಬಿರಂಜಿಯನ್ನೂ, ಕುರುಬತು ಮಾಲದಿಯನ್ನೂ ಮಾಡಿಸಿದರು. ನಾಲುಕ

ಗಂಟೆಗೆ ಎಲ್ಲರು ಮನೆಯಿಂದ ಹೊರಟೆವು. ಒಟ್ಟಿಗೆ ಇಪ್ಪತ್ತೈದು ಜನರು ಪಂತಿಗೆ ಹೋಗಿದ್ದೆವು. ನಮ್ಮನಮ್ಮ ಜಾತಿಯಂತೆ ಒತ್ತೊತ್ತಟ್ಟಿಗೆ ಸಾಲಾಗಿ ಕುಳಿತುಕೊಂಡೆವು. ಬ್ರಾಹ್ಮಣರು, ಲಿಂಗವಂತರು, ಕುರುಬರು, ಮುಸಲ್ಮಾನರು ಈ ನಾಲ್ಕು ಜಾತಿಯವರ ನಾಲ್ಕು ಸಾಲುಗಳು ಆದವು. ಇವುಗಳಲ್ಲಿ ಲಿಂಗವಂತರ ಸಾಲು ಎಲ್ಲಕ್ಕೂ ದೊಡ್ಡದಿತ್ತು. ನಮ್ಮ ನಮ್ಮ ಸಾಮಾನುಗಳನ್ನು ನಾವು ಬಡಿಸಿಕೊಂಡೆವು. ಬ್ರಾಹ್ಮಣರೂ, ಲಿಂಗವಂತರೂ ತಮ್ಮ ತಮ್ಮ ಜೀನಸುಗಳನ್ನು ಮುಸಲ್ಮಾನರಿಗೂ ಕುರುಬರಿಗೂ ಪಂತಿ ಹಾಕಿದರು. ಕುರುಬರು ತಮ್ಮ ಜೀನಸನ್ನು ಮುಸಲ್ಮಾನರಿಗೆ ಹಾಕಿದರು. ಮುಸಲ್ಮಾನರು ತಾವು ತಂದಿದ್ದ ಮಾವಿನ ಹಣ್ಣುಗಳನ್ನು ಎಲ್ಲರಿಗೆ ಹಾಕಿಸಿದರು.

ಪಂತಿಗೆ ಕೂಡುವಾಗ ನಾವೆಲ್ಲರು ನಮ್ಮ ನಮ್ಮ ದೇವರ ಹೆಸರಿನಿಂದ ಗಟ್ಟಿಯಾಗಿ ಒದರಿದೆವು. ಅದನ್ನು ನೋಡಿ ಮುಸಲ್ಮಾನರು ನಕ್ಕರು. ಪಂತಿಗೆ ಆರಂಭವಾಯಿತು. ಮೇಲೆ ಬಡಿಸಲಿಕ್ಕೆ ಗುಂಪಿಗೊಬ್ಬನಂತೆ ನಿಂತುಕೊಂಡಿದ್ದರು. ಸುತ್ತಲಿನ ಹೆಚ್ಚನ್ನ ಗಿಡಗಳು, ಸಂಜೆಯ ಹೊಂಬಿಸಿಲು, ಸುವಾಸನೆಯ ಸುಳಿಗಾಳಿ ಇವುಗಳಿಂದ ನಮಗೆ ಬಹಳ ಆನಂದವಾಯಿತು. ಬಾವಿಯ ನೀರು ಬಹಳ ಸವಿಯಿದ್ದವು. ಹೊಟ್ಟೆಯು ಚನ್ನಾಗಿ ಹಸಿದಿತ್ತು. ಅಂದ ಬಳಿಕ ಕೇಳುವದೇನು? ಪಂತಿಯು ಬಹು ಸವಿಕಟ್ಟಾಯಿತು. ಪುರೋಹಿತರ ಗುರುಮೂರ್ತಿಯೂ, ಹಿರಿಯ ಮಠದ ಗುರುಲಿಂಗಯ್ಯನೂ ಬಲು ಹುಡುಗಾಟಕೆಯವರು! ಅವರ ಮಾತಿನಿಂದ ಎಲ್ಲರು ನಕ್ಕು ನಕ್ಕು ಬಿದ್ದೆವು. ಹೀಗೆ ನಗುತ್ತ ಕೆಲೆಯುತ್ತ ಪಂತಿಯಾಯಿತು. ಬಡಿಸಿದವರ ಊಟವಾದ ಮೇಲೆ ಎಲ್ಲರು ಮನೆಗೆ ಹೋದೆವು. ಇಷ್ಟು ಹುಡುಗರಲ್ಲಿ ಒಬ್ಬನಾದರೂ ತೋಟದ ಒಂದು ಹೂವನ್ನು ಸಹ ಮುಟ್ಟಲಿಲ್ಲ. ಮನೆಗೆ ಹೋಗುವಾಗ ಬಸವಣ್ಣೆಯು ಎಲ್ಲರಿಗೂ ಒಂದೊಂದು ಎಳಿಗಾಯಿ ಕೊಟ್ಟನು.

---

೩. ಅಭ್ಯಾಸಕ್ಕಾಗಿ ವಿಷಯಗಳು:— ೧. ಸೀಗಿಯಹುಣ್ಣಿವೆಯಊಟ. ೨. ಮೇಜವಾನಿ. ೩. ಹುಟ್ಟಿನ ದಿವಸದ ಊಟ. ೪. ಕಾಮನಪೋಸ್ತು. ೫. ಕುತಿಬೆಯ ಊಟ. ೬. ಪಟ್ಟಿಯ ಫಲಾಹಾರ. ೭. ಊರಪ್ರಸ್ತ.

೮. ನಿತ್ಯದ ಊಟ. ೯. ಹಬ್ಬದ ಊಟ. ೧೦. ಬಳಿಸಿ ತಿನ್ನುವದು, ಇತ್ಯಾದಿ.

೨ನೇ ಪಾಠ—ಉಡಿಗೆತೊಡಿಗೆಗಳು.

ಸೀರಿ, ದೋತರ, ಲುಂಗಿ, ಪರಕಾರ ಮೊದಲಾದ ಉಟ್ಟುಕೊಳ್ಳುವ ಬಟ್ಟೆಗಳಿಗೆ ಉಡಿಗೆಗಳೆಂತಲೂ, ಅಂಗಿ, ಚಣ್ಣ, ಕುಪ್ಪಸ ಮೊದಲಾದ ತೊಟ್ಟುಕೊಳ್ಳುವ ಬಟ್ಟೆಗಳಿಗೆ ತೊಡಿಗೆಗಳೆಂತಲೂ, ವಸ್ತ್ರ, ಹಚ್ಚಡ, ಕಂಬಳಿ, ನಕಲಾತಿ ಮೊದಲಾದ ಹೊದ್ದುಕೊಳ್ಳುವ ಬಟ್ಟೆಗಳಿಗೆ ಹೊದಿಕೆಗಳೆಂತಲೂ ಅನ್ನುವರು. ರುಮಾಲ, ಟೊಪ್ಪಿಗೆ, ಮುಂಡಾಸ ಮೊದಲಾದ ತಲೆಗೆ ಹಾಕಿಕೊಳ್ಳುವ ಉಡವೆಗಳಿಗೆ ಸ್ವತಂತ್ರ ಹೆಸರು ಇಲ್ಲದಿದ್ದರೂ ಅವನ್ನು ತೊಡಿಗೆಗಳಲ್ಲಿಯೇ ಎಣಿಸುವರು. ಆದ್ದರಿಂದ ಉಡಿಗೆತೊಡಿಗೆಯೆಂಬ ಸಮಸ್ತಶಬ್ದದಲ್ಲಿ ಮನುಷ್ಯರು ಉಪಯೋಗಿಸುವ ಎಲ್ಲ ಬಟ್ಟೆಗಳ ಸಮಾವೇಶವಾಗುತ್ತದೆ. ಉಡಿಗೆತೊಡಿಗೆಗಳನ್ನು ಸಾಮಾನ್ಯವಾಗಿ ಬಟ್ಟೆಗಳೆಂತಲೂ ಕರೆಯುವದುಂಟು.

ಬಟ್ಟೆಗಳಲ್ಲಾದರೂ ದಿನದವು, ಹಬ್ಬಹುಣ್ಣಿವೆಯವು, ಬೇಸೆಯವು, ರಾತ್ರಿಯವು, ಕೆಲಸಬೊಗಸೆಯವು ಎಂದು ಹಲವು ಪ್ರಕಾರದವಿರುವವು. ಈ ಎಲ್ಲ ಬಗೆಯ ಬಟ್ಟೆಗಳನ್ನು ವರ್ಣಿಸುವಾಗ ಅನುಸರಿಸತಕ್ಕ ಕ್ರಮವನ್ನು ಸಾಮಾನ್ಯವಿವರಣೆಯೊಂದಿಗೆ ಕೆಳಗೆ ಬರೆದಿರುತ್ತದೆ:—

೧. ವಿಷಯವಿವೇಚನಕ್ರಮ.

(ಅ) ಬಟ್ಟೆಗಳ ಪ್ರಯೋಜನ—ಇದನ್ನು ಕುರಿತು ಬರೆಯುವಾಗ ವಿದ್ಯಾರ್ಥಿಗಳು ಶರೀರರಕ್ಷಣ, ಮರ್ಯಾದೆ, ಚಂದ ಇವುಗಳಿಗಾಗಿ ಬಟ್ಟೆಗಳನ್ನು ಉಪಯೋಗಿಸುತ್ತಾರೆಂಬದನ್ನು ನೆನಪಿಗೆ ತಂದುಕೊಳ್ಳಬೇಕು. ದಿನದ ಬಟ್ಟೆಗಳಲ್ಲಿ ಶರೀರರಕ್ಷಣವೂ ಮರ್ಯಾದೆಯೂ, ಹಬ್ಬಹುಣ್ಣಿವೆಯವುಗಳಲ್ಲಿ ಚಂದವೂ ಮರ್ಯಾದೆಯೂ, ಬೇಸೆಯ ಹಾಗು ರಾತ್ರಿಯವುಗಳಲ್ಲಿ ಶರೀರರಕ್ಷಣವೂ ಮುಖ್ಯವಾಗಿ ಕಾದುಕೊಳ್ಳಲ್ಪಡುವದನ್ನು ತಿಳಿದಿರಬೇಕು.

(ಬ) ಬಟ್ಟೆಗಳ ವರ್ಣನ.—ಬಟ್ಟೆಗಳ ಪ್ರಯೋಜನವನ್ನು ಕುರಿತು ಬರೆದ ಬಳಿಕ, ಬಟ್ಟೆಗಳ ವರ್ಣನವನ್ನು ಬರೆಯಬೇಕು. ಮೇಲೆ

ಹೇಳಿದಂತೆ ಬೇರೆ ಬೇರೆ ಪ್ರಕಾರದ ಉಡಿಗೆ-ತೊಡಿಗೆಗಳನ್ನು ವರ್ಣಿಸಬೇಕಾಗಿದ್ದಾಗ ಅವರವರ ಸಮಾಜದ ಪದ್ಧತಿಯನ್ನನುಸರಿಸಿ ಬೇರೆ ಬೇರೆ ವಿಧವಾಗಿ ವರ್ಣಿಸಬೇಕಾಗುವದು; ಅಂದರೆ, ದಿನದ ಬಟ್ಟೆಗಳು, ಹಬ್ಬಹುಣ್ಣಿವೆಯ ಬಟ್ಟೆಗಳು, ಬೇನೆಯ ಬಟ್ಟೆಗಳು, ಅದರಂತೆ ಬ್ರಾಹ್ಮಣರವು, ಮುಸಲ್ಮಾನರವು, ಒಕ್ಕಲಿಗರವು, ಸರಕಾರಿಯ ನೌಕರರವು, ಕಮ್ಮಾರರವು, ಒಡಿಗರವು, ಒಡ್ಡರವು, ಭಿಕ್ಷುಕರವು ಇವನ್ನು ಬೇರೆ ಬೇರೆ ವಿಧವಾಗಿ ವರ್ಣಿಸಬೇಕಾಗುವದು.

(ಕ) ಬಟ್ಟೆಗಳನ್ನು ಜೋಕೆ ಮಾಡಿಕೊಳ್ಳುವದು:—ಹೀಗೆ ಬಟ್ಟೆಗಳನ್ನು ವರ್ಣಿಸಿದನಂತರ, ಅವುಗಳನ್ನು ಓರಣದಿಂದ ಇಟ್ಟುಕೊಳ್ಳುವ ರೀತಿಯನ್ನು ಬರೆಯಬೇಕು. ಇದನ್ನು ಬರೆಯು ಬೇಕಾದರೆ, ದಿನದಬಟ್ಟೆ-ಹಬ್ಬಹುಣ್ಣಿವೆಯ ಬಟ್ಟೆಗಳನ್ನಿಡುವ ರೀತಿಯನ್ನೂ, ಬೇರೆ ಬೇರೆ ಸಮಾಜದವರು, ಬೇರೆ ಬೇರೆ ಉದ್ಯೋಗದವರು ಇಟ್ಟುಕೊಳ್ಳುವ ರೀತಿಗಳನ್ನೂ ಬೇರೆ ಬೇರೆ ವಿಧವಾಗಿ ವರ್ಣಿಸಬೇಕಾಗಬಹುದು.

(ಡ) ಬಟ್ಟೆಗಳ ಸಂಬಂಧದ ಕೆಟ್ಟ ಚಾಳಿಗಳು:—ಕಟ್ಟಕಡೆಗೆ ಬಟ್ಟೆಗಳ ಸಂಬಂಧವಾಗಿ ಜನರಲ್ಲಿರುವ ಕೆಟ್ಟ ಚಾಳಿಗಳನ್ನು ಹೇಳಬೇಕು; ಅಂದರೆ, ಚಂದಕ್ಕೆ ಮೆಚ್ಚಿದವರ ಚಾಳಿ, ಫ್ಯಾಸನಕ್ಕೆ ಮೆಚ್ಚಿದವರ ಚಾಳಿ, ಡಾಂಭಿಕರ ಚಾಳಿ, ಜೀನರ ಚಾಳಿ, ಹೇಸಿಜನರ ಚಾಳಿ, ಆಲಸ್ಯವುಳ್ಳವರ ಚಾಳಿ ಮುಂತಾದವನ್ನು ಕುರಿತು ಪ್ರಸಂಗ ಬಿದ್ದಂತೆ ವರ್ಣಿಸಬೇಕು.

೨. ಉದಾಹರಣಗಳು:-

ಬ್ರಾಹ್ಮಣರ ಹುಡುಗರ ದಿನದ ಬಟ್ಟೆಗಳು.

ಹುಡುಗರಿಗೆ ಬಟ್ಟೆಗಳು ಅವಶ್ಯವಾಗಿ ಬೇಕು. ಮೈಗೆ ಬೆಚ್ಚಗಾಗಬೇಕೆಂತಲೂ, ಮರ್ಯಾದೆ ಬರಬೇಕೆಂತಲೂ, ಚಂದ ಕಾಣಬೇಕೆಂತಲೂ ತಾಯಿತಂದೆಗಳು ಹುಡುಗರಿಗೆ ಬಟ್ಟೆಗಳನ್ನು ಒದಗಿಸಿ ಕೊಡುವರು. ಚಳಿಗಾಲದಲ್ಲಿ ತಕ್ಕಬಟ್ಟೆಗಳಿಲ್ಲದಿದ್ದರೆ ಹುಡುಗರಿಗೆ ಬೇನೆ ಬರುವದು. ಬರಿಮೈ ಒಕ್ಕನೆತ್ತಿಯವರಿಗೂ, ಹರಕು ಬಟ್ಟೆಯವರಿಗೂ ನಾಲ್ಕು ಮಂದಿಯಲ್ಲಿ ಮರ್ಯಾದೆಯು ಬರುವದಿಲ್ಲ. ಇಂಥವರು ಚಂದಗೇಡಿಗಳಾಗಿ ಕಾಣುವದನ್ನಂತು ಎಲ್ಲರು ಬಲ್ಲರು.

ಮುಂಜಿಯಾಗುವವರೆಗೆ ಬ್ರಾಹ್ಮಣರ ಹುಡುಗರು ಬತ್ತಲೆ ಇರುವದೇ ಬಹಳ. ಆಗ ಅವರು ದೋತರವನ್ನಂತು ಉಟ್ಟುಕೊಳ್ಳುವದೇ ಇಲ್ಲ; ತೊಟ್ಟುಕೊಂಡರೆ ಕೆಲವರು ಚಣ್ಣವನ್ನು ತೊಟ್ಟುಕೊಳ್ಳುವರು. ವೈಯೊಳಗೆ ಅಂಗಿಯನ್ನು ಹಾಕಿಕೊಳ್ಳುವರು. ಕೆಲವರು ದೋತರ ಹೊದ್ದುಕೊಳ್ಳುವರು. ಮೊದಲಿನ ಬಗಲಕಸಿಯ ಅಂಗಿಗಳೂ, ನಿರಿಗೆಯ ಅಂಗಿಗಳೂ ಈಗ ಕಡಿಮೆಯಾಗಿವೆ. ಬಹುತರ ಎಲ್ಲರು ಪೈರನವನ್ನೂ, ಕೋಟನ್ನೂ ತೊಟ್ಟುಕೊಳ್ಳುತ್ತಾರೆ. ತಲೆಗೆ ಟೊಪ್ಪಿಗೆ ಹಾಕಿಕೊಳ್ಳುವರು. ಕೆಲವರು ಸಣ್ಣ ರುಮಾಲ ಸುತ್ತಿಕೊಳ್ಳುವರು. ಮುಂಜಿಯಾದ ಬಳಿಕ ಹುಡುಗರು ಲಂಗೋಟಿಯನ್ನು ಹಾಕಿಕೊಳ್ಳುವದೇ ಬಹಳ. ಕೆಲವರು ಚಣ್ಣವನ್ನು ತೊಟ್ಟುಕೊಳ್ಳುವರು. ಕೆಲವರು ದೋತರ ಉಡುವರು.

ಹುಡುಗರ ಉಡಿಗೆ ತೊಡಿಗೆಗಳನ್ನು ಮುಖ್ಯವಾಗಿ ತಾಯಿತಂದೆಗಳು ಹಿರಣಿದಿಂದ ಇಡುವರು. ಕೆಲವರು ಅವನ್ನು ಮನೆಯಲ್ಲಿ ಒಗೆಯುವರು. ಕೆಲವರು ಅಗಸರಿಗೆ ಕೊಡುವರು. ಹರಿದವುಗಳನ್ನು ಆಗಾಗ್ಗೆ ಹೊಲಿಯುವರು. ಇಲ್ಲದಿದ್ದರೆ ಚಿಂಪಿಗರಿಂದ ಹೊಲಿಸುವರು. ಅಂಗಿ ಟೊಪ್ಪಿಗೆಗಳನ್ನು ಇಟ್ಟುಕೊಳ್ಳಲಿಕ್ಕೆ ಸ್ಥಳವನ್ನು ಗೊತ್ತುಮಾಡಿಕೊಡುವರು. ಕೆಲವರು ಗೂಟ ಬಡಿದು ಕೊಡುವರು. ಬಟ್ಟೆಗಳನ್ನು ಸಿಕ್ಕಲ್ಲಿ ಒಗೆಯಬಾರದೆಂತಲೂ, ಹೊಲಸು ಮಾಡಬಾರದೆಂತಲೂ, ಹರಿಯಬಾರದೆಂತಲೂ ಆಗಾಗ್ಗೆ ತಿಳಿಯ ಹೇಳುವರು.

ಕೆಲವರು ತಮ್ಮ ಮಕ್ಕಳಿಗೆ ಚಂದಕಾಣಬೇಕೆಂದು ತಕ್ಕಷ್ಟಕ್ಕಿಂತ ಹೆಚ್ಚು ಬಟ್ಟೆಗಳನ್ನು ಕೊಡುತ್ತಾರೆ. ಕೆಲವರು ಡೌಲಿಗೆ ಬಿದ್ದು ಯೋಗ್ಯತೆ ಮೀರಿದ ಬಟ್ಟೆಗಳನ್ನು ಕೊಡುತ್ತಾರೆ. ಕೆಲವರು ಜೀನತನದಿಂದ ಸಾಕಷ್ಟು ಬಟ್ಟೆಗಳನ್ನೇ ಕೊಡುವದಿಲ್ಲ. ಇವೆಲ್ಲ ಕೆಟ್ಟ ಚಾಳಿಗಳಾಗಿರುವವು. ಹುಡುಗರ ಬಟ್ಟೆಗಳನ್ನು ಆಗಾಗ್ಗೆ ಒಗೆಯದಿರುವದು ಹೇಸಿತನದ ಚಾಳಿಯು. ಎಷ್ಟೋಮಂದಿ ತಾಯಿತಂದೆಗಳು ಹುಡುಗರ ಹರಕು ಬಟ್ಟೆಗಳನ್ನು ಆಗಾಗ್ಗೆ ಹೊಲಿದುಕೊಡುವದಿಲ್ಲ. ಇದೂ ಕೆಟ್ಟ ಚಾಳಿಯೇ. ಹೊಲಸುತನದ ಚಾಳಿಯು ಬ್ರಾಹ್ಮಣರಲ್ಲಿ ಬಹುತರ ಕಡಿಮೆಯೆಂದು ಹೇಳಬಹುದು.

ಒಬ್ಬ ಬಡವೈದಿಕರ ಹುಡುಗನ ದಿನದ ಬಟ್ಟೆಗಳು.

ನನ್ನ ಮನೆಯವರು ಬಡವರು. ನನಗೆ ಚಲೋ ಉಡಿಗೆತೊಡಿಗೆಗಳಿಲ್ಲ. ಅವು ತೀರ ಸಾಧಾರಣ ಇರುವವು. ಅವುಗಳಿಂದ ನನಗೆ ಚಳಿಯು ಹೋಗುವದಿಲ್ಲ. ಅವನ್ನು ಹಾಕಿಕೊಂಡು ಹೋಗಲಿಕ್ಕೆ ಮಂದಿಯೊಳಗೆ ನಾಚಿಕೆ ಬರುತ್ತದೆ. ಕಾಡುಬಟ್ಟೆಯವನೆಂದು ಓರಿಗೆಯವರು ನನ್ನನ್ನು ಹಳಿಯುತ್ತಾರೆ.

ನನ್ನ ಮುಂಜಿಯಾಗಿರುವದು. ನಾನು ದೊಡ್ಡವನಾಗಿರುವದರಿಂದ ಲಂಗೋಟಿಯನ್ನು ಹಾಕಿಕೊಳ್ಳುವದಿಲ್ಲ. ಪಂಚೆಯನ್ನು ಉಟ್ಟುಕೊಳ್ಳುವೆನು. ಮೈಯೊಳಗೆ ಬಗಲಕಸಿಯ ಅಂಗಿಯನ್ನು ಹಾಕಿಕೊಳ್ಳುವೆನು. ನನ್ನ ಗೆಳೆಯರಂತೆ ನಾನೂ ಪೈರನು ಹಾಕಿಕೊಳ್ಳಬೇಕೆನ್ನುತ್ತೇನೆ. ಅದಕ್ಕೆ ನಮ್ಮ ಹಿರಿಯರು ಸಿಟ್ಟುಮಾಡುವರು. ತಲೆಗೆ ಹಾಕಿಕೊಳ್ಳಲಿಕ್ಕೆ ನನಗೆ ಒಂದು ಉಣ್ಣೆಯ ಕಿವಿಟೊಪ್ಪಿಗೆ ಇರುವದು. ಅದರ ಬಣ್ಣ ಕೆಂಪು. ಅದು ಅಲ್ಲಲ್ಲಿಗೆ ಗುನಿಗಡಿದಹಾಗಾಗಿರುತ್ತದೆ. ನಾನು ಅಂಗಿಯಮೇಲೆ ಗೋಲು ಅಂಚಿನ ದೋತರವನ್ನು ಹೊದ್ದುಕೊಳ್ಳುವೆನು. ನನ್ನ ಅಂಗಿಯನ್ನು ಒಗೆಯಲಿಕ್ಕೆ ಕೊಟ್ಟಾಗ ನಮ್ಮ ಅಪ್ಪನ ಅಂಗಿಯನ್ನು ಹಾಕಿಕೊಳ್ಳುವೆನು. ನನ್ನ ಟೊಪ್ಪಿಗೆಯ ಬದಲು ಒಮ್ಮೊಮ್ಮೆ ನಮ್ಮ ಅಪ್ಪನ ರುಮಾಲವನ್ನು ಸುತ್ತಿಕೊಳ್ಳುವೆನು. ಮನೆಯಲ್ಲಿ ಅಂಗಿಟೊಪ್ಪಿಗೆಗಳನ್ನು ಹಾಕಿಕೊಂಡರೆ, ನಮ್ಮ ತಾಯಿತಂದೆಗಳು ಸಿಟ್ಟುಮಾಡುವರು. ಆಗ ನಾನು ದೋತರ ಹೊದ್ದುಕೊಂಡಿರುವೆನು.

ನಮ್ಮ ಹಿರಿಯರು ಬಟ್ಟೆಗಳನ್ನು ಅಗಸರಿಗೆ ಕೊಡುವದಿಲ್ಲ. ಮನೆಯಲ್ಲಿಯೇ ಒಗೆಯುವರು. ನನ್ನ ಬಟ್ಟೆಗಳನ್ನು ನಾನೇ ಒಗೆದುಕೊಳ್ಳುತ್ತೇನೆ. ಒಮ್ಮೊಮ್ಮೆ ನಮ್ಮ ಅವ್ವನು ಒಗೆಯುವಳು. ನಮ್ಮ ಮನೆಯಲ್ಲಿ ಯಾರಿಗೂ ಹೊಲಿಯಲಿಕ್ಕೆ ಬರುವದಿಲ್ಲ. ಒಮ್ಮೊಮ್ಮೆ ನನ್ನ ಅಂಗಿಯ ಕಸಿಗಳು ಹರಿಯುವವು. ಅವನ್ನು ತಿರುಗಿ ಹಚ್ಚಿಸುವದು ಆಗುವದೇ ಇಲ್ಲ. ಇದಕ್ಕಾಗಿ ನಾನು ಎಷ್ಟೋಸಾರೆ ಮಾಸ್ತರರಿಂದ ಸಿಟ್ಟು ಮಾಡಿಸಿಕೊಂಡಿದ್ದೇನೆ. ನನ್ನ ಅಂಗಿಟೊಪ್ಪಿಗೆಗಳನ್ನು ಗಣಪತಿಯ ಮಾಡದಲ್ಲಿ ಇಡುತ್ತಿರುತ್ತೇನೆ.

ಬಟ್ಟೆಗಳಿಗೆ ದುಡ್ಡು ಹಾಕುವದು ನಮ್ಮ ತಂದೆಯವರ ಮನಸ್ಸಿಗೆ ಬರುವದಿಲ್ಲ. ಗೃಹಸ್ಥರ ಮನೆಯಲ್ಲಿ ಬಂದ ಪಂಜೆಗಳನ್ನೇ ಇಲ್ಲಿಯವರೆಗೆ ಉಟ್ಟುಕೊಳ್ಳುತ್ತ ಬಂದಿದ್ದೇನೆ. ಹೊಲಸುತನವು ನಮ್ಮ ಹಿರಿಯರಿಗೆ ಸೇರುವದಿಲ್ಲ. ನನಗೂ ಸೇರುವದಿಲ್ಲ. ಬೆಳ್ಳಗಿಲ್ಲದಿದ್ದರೂ ನನ್ನ ಬಟ್ಟೆಗಳು ಜಳಜಳ ಇರುತ್ತವೆ. ನಾನು ಪಂಜೆಗಳನ್ನು ದಿನಾಲು ಒಗೆದುಕೊಳ್ಳುತ್ತೇನೆ. ಅಂಗಿಟೊಪ್ಪಿಗೆಗಳನ್ನು ಆದಿತ್ಯವಾರಕ್ಕೊಮ್ಮೆ ಒಗೆಯುವೆನು.

೩. ಅಭ್ಯಾಸಕ್ಕಾಗಿ ವಿಷಯಗಳು:— ೧. ಹಬ್ಬಹುಣಿವೆಯ ಬಟ್ಟೆಗಳು. ೨. ಊಟಕ್ಕೆ ಕೂಡುವಾಗಿನ ಬಟ್ಟೆಗಳು. ೩. ಮಲಗುವಾಗಿನ ಬಟ್ಟೆಗಳು. ೪. ಸರಕಾರಿಯ ನೌಕರರ ಬಟ್ಟೆಗಳು. ೫. ಒಕ್ಕಲಿಗರ ಬಟ್ಟೆಗಳು. ೬. ಕೂಸುಗಳ ಬಟ್ಟೆಗಳು. ೭. ಹೆಣ್ಣುಮಕ್ಕಳ ಬಟ್ಟೆಗಳು. ೮. ತಾಲೀಮು ಮಾಡುವಾಗಿನ ಬಟ್ಟೆಗಳು. ೯. ಬೇಸಿಗೆಯ ಬಟ್ಟೆಗಳು. ೧೦. ಮುದುಕರ ಬಟ್ಟೆಗಳು, ಇತ್ಯಾದಿ.

ವೆ. ತಿ. ಕುಲಕರ್ಣಿ.

ಪತ್ರವ್ಯವಹಾರ.

ಗುರುವರ್ಯ ರಾವಸಾಹೇಬ ಶಾಲಾಪತ್ರಿಕದ ಎಡಿಟರ ದೊರೆಗಳವರ ಸನ್ನಿಧಿಗೆ—

ಸಾಷ್ಟಾಂಗ ನಮಸ್ಕಾರಯುಕ್ತ ವಿಜ್ಞಾಪನೆಗಳು.

ಕನ್ನಡ ಭಾವೇಪ್ರಯೋಗದ ಸಂಬಂಧವಾಗಿ ಕಳೆದ ಸಪ್ಟಂಬರ ತಿಂಗಳ ಶಾಲಾಪತ್ರಿಕೆಯಲ್ಲಿ ಮಿ. ಮರಡೂರ ಇವರು ಕೊಟ್ಟ ಲೇಖವನ್ನು ಓದಿ, ಮನಸ್ಸಿನಲ್ಲಿ ಹುಟ್ಟಿದ ಸಂಶಯಗಳನ್ನು ನಿವಾರಿಸಿಕೊಳ್ಳುವದಕ್ಕಾಗಿ ಪುನಃ ತಮ್ಮ ಸನ್ನಿಧಿಗೆ ಈ ಪತ್ರದ್ವಾರದಿಂದ ಬಂದಿರುತ್ತೇನೆ. ವಿಷಯದ ಮಹತ್ವದ ಕಡೆಗೆ ನೋಡಲು, ಅನಾದರವಾಗಲಿಕ್ಕಿಲ್ಲೆಂದು ನಂಬಿದ್ದೇನೆ.

ಮಿ. ಮರಡೂರ ಇವರು ಆಖ್ಯೇಯಾಖ್ಯಾತಪದಗಳ ಪಲ್ಲಟದಿಂದ ಅವುಗಳ ನಿಜತ್ವವನ್ನು ನಿರ್ಣಯಿಸಲು ಯತ್ನಿಸಿದ್ದಾರೆ; ಆದರೆ ವಾಕ್ಯಾರ್ಥದ ವಿಪರ್ಯಾಸವು ಅಥವಾ ಅಸಂಭದ್ಧತೆಯು ಉಂಟಾಗದಂತೆ ಆ ಪದಗಳನ್ನು ಪಲ್ಲಟಿಸಲು ಬರಲಿಕ್ಕೇ ಬೇಕೆಂದು ಎಲ್ಲಿ ಹೇಳಿಯದೆ? (ಅ) ನಿಯಮ

ದೊಳಗಿನ ಭಾವೇ ಪ್ರಯೋಗವು ಮಿ. ಮುರಡೂರ ಇವರಿಗೆ ಸಮ್ಮತವಿದೆ ಯಷ್ಟೇ; ಮತ್ತು ಅದರೊಳಗಿನ "ಸೀತೆಯನ್ನು ರಾಮುನಿಗೆ ಕೊಟ್ಟಿತ್ತು" ಈ ಮಾದರಿಯ ವಾಕ್ಯಗಳಲ್ಲಿ "ಕೊಟ್ಟು" ಎಂಬದು ಆಖ್ಯೇಯವೆಂತಲೂ, "ಇತ್ತು"ಎಂಬದು ಆಖ್ಯಾತವೆಂತಲೂ ಅವರು ಒಪ್ಪುತ್ತಾರಷ್ಟೇ. ಹಾಗಾದರೆ, ಅದರೊಳಗಿನ ಈ ಆಖ್ಯೇಯಾಖ್ಯಾತಪದಗಳನ್ನು ಪಲ್ಲಟಿಸಿ ನೋಡಲಿ! ಅಂದರೆ ಅವರ ಪ್ರಯತ್ನದ ನೈಷ್ಫಲ್ಯವು ಕಂಡು ಬರುವದು. ಶಬ್ದಗಳ ಪಲ್ಲಟದಿಂದ ಆಖ್ಯೇಯಾಖ್ಯಾತಗಳನ್ನು ಪರೀಕ್ಷಿಸುವ ಇದೊಂದು ಹೊಸ ಯುಕ್ತಿಯೇ ಸರಿ!

ವಾಕ್ಯದಲ್ಲಿ ಮುಖ್ಯವಾಗಿರುವ ಆಖ್ಯೇಯಾಖ್ಯಾತಪದಗಳಿಗೆ ಕ್ರಮದಿಂದ ಉದ್ದೇಶ, ವಿಧೇಯಪದಗಳೆಂತಲೂ, ಅವುಗಳೊಳಗಿನ ಪರಸ್ಪರ ಸಂಬಂಧಕ್ಕೆ ಉದ್ದೇಶ-ವಿಧೇಯ ಭಾವವೆಂತಲೂ ವ್ಯಾಕರಣದಲ್ಲಿ ಹೆಸರುಗಳಿವೆ. ಮಾತಿನ ಸರಣಿಯಂತೆ ಆಖ್ಯಾತವು ಕರ್ತೃವಿಗೆ ಇಲ್ಲವೆ ಕರ್ಮಕ್ಕೆ ಇಲ್ಲವೆ ಭಾವಕ್ಕೆ ಅಂದರೆ ಮುಖ್ಯ ಕ್ರಿಯೆಗೆ ವಿಧೇಯವಾಗಿರುವದು. ಇದೇ ಕಾರಣದಿಂದ ವಾಕ್ಯಗಳಲ್ಲಿ ಕರ್ತರಿ, ಕರ್ಮಣಿ, ಭಾವೇ ಪ್ರಯೋಗಗಳೆಂದು ಭೇದಗಳುಂಟಾಗಿರುವವು. ಇದು ಪ್ರಯೋಗಭೇದಗಳ ಸಾಮಾನ್ಯ ತತ್ವವಾಗಿದೆ. ಈ ತತ್ವಕ್ಕನುಸರಿಸಿ ವಿಚಾರ ಮಾಡಿ, ಯಾವದೊಂದು ವಾಕ್ಯದ ಪ್ರಯೋಗವನ್ನು ನಿರ್ಣಯಿಸತಕ್ಕದ್ದು ಯೋಗ್ಯವಿರುತ್ತದೆ.

ಮೇಲಿನ ತತ್ವಕ್ಕನುಸರಿಸಿ, ನುಡಿಗಟ್ಟಿನೊಳಗಿನ ಭಾವೇಪ್ರಯೋಗದ (ಇ) ನಿಯಮದೊಳಗಿನ ಉದಾಹರಣೆಗಳ ವಿಷಯಕ್ಕೆ ವಿಚಾರ ಮಾಡಲು, "ನೀನು ಅದನ್ನು ಮಾಡಕೂಡದು" ಮುಂತಾದ ವಾಕ್ಯಗಳಲ್ಲಿ "ಮಾಡ" ಮುಂತಾದ ಭಾವರೂಪಗಳಿಂದ ಸೂಚಿತವಾಗುವ ಮುಖ್ಯ ಕ್ರಿಯೆಯು ಆಖ್ಯೇಯವೆಂತಲೂ, "ಬಾರದು, ಕೂಡದು" ಮುಂತಾದ ಸಹಾಯ ಕ್ರಿಯಾಪದಗಳು ಆಖ್ಯಾತಗಳೆಂತಲೂ ಸಹಜವಾಗಿ ತಿಳಿಯುವಂತಿದೆ. ಯಾಕಂದರೆ ಅವುಗಳಲ್ಲಿ ಪುರುಷಲಿಂಗವಚನಗಳ ಐಕ್ಯವಿರುತ್ತದೆ. ಆದರೆ ಮಿ. ಮುರಡೂರ ಇವರ ಮತದಂತೆ ಅಂಥ ವಾಕ್ಯಗಳನ್ನು ಕರ್ತರಿಯೊಳಗೆ ಎಣಿಸಬೇಕಾದರೆ—"ಮಾಡಬಾರದು, ಮಾಡಕೂಡದು" ಮುಂತಾದ

ಕ್ರಿಯಾಪದಗಳನ್ನು ಅವರು ಹೇಳುವಂತೆ ಸಂಯುಕ್ತಾವ್ಯಯಕ್ರಿಯಾಪದ (ಅವ್ಯಯ?) ಗಳೆಂದು ತಿಳಿಯಬೇಕು; "ನೀನು" ಮುಂತಾದ ಕರ್ತೃಪದಗಳೇ ಅವುಗಳ ಅಧ್ಯೇಯಗಳೆಂದು ತಿಳಿಯಬೇಕು; ಅಂದರೆ ಆ ಕ್ರಿಯಾಪದಗಳೊಳಗಿನ ಮುಖ್ಯಕ್ರಿಯೆ, ಸಹಾಯಕ್ರಿಯೆ ಎಂಬ ಭೇದಗಳನ್ನು ತೆಗೆದು ಹಾಕಬೇಕು; ಮತ್ತು ಅವುಗಳ ಪ್ರಥಮಪುರುಷ ನಪುಂಸಕೈಕವಚನವನ್ನೂ ಮರೆತು ಬಿಡಬೇಕು!! ಇಷ್ಟೆಲ್ಲ ಸುಧಾರಣೆಯನ್ನು ಮಾಡಬೇಕಾದರೆ ನುಡಿಗಟ್ಟಿನೊಳಗಿನ ಅವ್ಯಯಕ್ರಿಯಾಪದಗಳನ್ನು ವರ್ಣಿಸುವ ೧೬೦ನೆಯ ನಿಯಮದಲ್ಲಿಯೂ, ಅನುಬಂಧಕ್ರಿಯಾಪದಗಳ ಪ್ರಕರಣದಲ್ಲಿಯೂ ಏನೂ ಹೆಚ್ಚು ಕಡಿಮೆಯನ್ನು ಮಾಡುವ ಅವಶ್ಯಕತೆಯಿಲ್ಲೇನು? ಬಲ್ಲವರು ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದರೆ ನೆಟ್ಟಗಾಗುವದು.

ಅವ್ಯಯ ಕ್ರಿಯಾಪದಗಳು, ಅವ್ಯಯಗಳು ಇವೆರಡನ್ನೂ ಕೂಡಿಸಿ ಗೊಂದಲ ಹಾಕುವದು ನೆಟ್ಟಗಲ್ಲ. "ಮಾಡಬಾರದು, ಮಾಡಕೂಡದು" ಇತ್ಯಾದಿ ಪದಗಳು ಅವ್ಯಯ ಕ್ರಿಯಾಪದಗಳೆಂದು ಒಮ್ಮೆ ಹೇಳೋಣವಾಗುತ್ತದೆ; ಅವ್ಯಯಗಳೆಂದು ಒಮ್ಮೆ ಹೇಳೋಣವಾಗುತ್ತದೆ. ಇವುಗಳಲ್ಲಿ ಯಾವದು ನಿಶ್ಚಿತವಾದದ್ದು? ಅಥವಾ ಎರಡೂ ಒಂದೆಯೋ? ಅವ್ಯಯ ಕ್ರಿಯಾಪದಗಳ ಲಕ್ಷಣವು ಬೇರೆಯಿರುತ್ತದೆ; ಕೇವಲ ಅವ್ಯಯಗಳ ಲಕ್ಷಣವು ಬೇರೆ ಇರುತ್ತದೆ. ಮೇಲಿನಂಥ ಅನುಬಂಧಕ್ರಿಯಾಪದಗಳನ್ನು ಅವ್ಯಯಗಳಲ್ಲೆಣಿಸಬೇಕಾದರೆ ಅವ್ಯಯಪ್ರಕರಣದಲ್ಲಿ ಹೆಚ್ಚು ಕಡಿಮೆ ಮಾಡುವ ಕಾರಣವೇನೂ ಇಲ್ಲವೇ ಹೇಗೆ? "ಯಾಕೆ, ಏನು" ಮುಂತಾದ ಸರ್ವನಾಮಗಳು "ಅಂದರೆ" ಎಂಬ ಶಬ್ದದೊಡನೆ ಕೂಡಿ ಉಂಟಾದ "ಯಾಕೆಂದರೆ, ಏನೆಂದರೆ" ಮುಂತಾದ ಅವ್ಯಯಗಳು ಸಮುಚ್ಚಾಯಕಾವ್ಯಯಗಳ ವರ್ಗದೊಳಗೆ ಸೇರಿದಂತೆ "ಮಾಡಬಾರದು" ಇತ್ಯಾದಿ ಕ್ರಿಯಾಪದಗಳು ಅವ್ಯಯಗಳ ಯಾವ ವರ್ಗಕ್ಕೆ ಸೇರುವವು? ಸಾರಾಂಶ ಇವುಗಳನ್ನು ಅವ್ಯಯಕ್ರಿಯಾಪದಗಳಲ್ಲಾಗಲಿ, ಅವ್ಯಯಗಳಲ್ಲಾಗಲಿ ಎಣಿಸಬೇಕಾದರೆ ವ್ಯಾಕರಣದಲ್ಲಿ ಕ್ರಾಂತಿಯುಂಟಾಗದೆ ಇರದು.

ಅವ್ಯಯಗಳಿಗಾಗಲಿ, ಬೇರೆ ಯಾವ ಶಬ್ದಗಳಿಗಾಗಲಿ, ಅವುಗಳ ಮೂಲಕ್ಕೆ ಹೋಗಿ ನೋಡಿದರೆ ಪ್ರಕೃತಿಪ್ರತ್ಯಯಗಳಿರುವದು. ಸಾಮಾನ್ಯ

ವಾಗಿದೆ. ಮೂಲದಲ್ಲಿ ಸಹ ಪ್ರಕೃತಿಪ್ರತ್ಯಯಗಳಿಲ್ಲದಂಥ ಶಬ್ದಗಳಿಗೇ ಅವ್ಯಯಗಳೆನ್ನಬೇಕೆಂದು ಯಾರು ಹೇಳುವರು? ಹಾಗೆ ಹೇಳಿದರೆ "ಮಾಡು ಮಾಡಿ, ಮಾಡಲು" ಮುಂತಾದ ಕೃದಂತಾವ್ಯಯಗಳು ಸಹ ಅವ್ಯಯಗಳ ವರ್ಗದೊಳಗೆ ಬರಲಾರವು. ಅವ್ಯಯಗಳ ಲಕ್ಷಣವನ್ನು ನೋಡುವದೆಂದರೆ, ಅವುಗಳ ಮೂಲದೊಳಗಿನ ಪ್ರಕೃತಿಪ್ರತ್ಯಯಗಳನ್ನು ನೋಡುವದಲ್ಲ; ಕೃದಂತಾವ್ಯಯಗಳಿಗೂ, "ಅಲ್ಲಿ, ಇಲ್ಲಿ, ಆಗ, ಈಗ" ಮುಂತಾದ ತದ್ಧಿತಾವ್ಯಯಗಳಿಗೂ ಮೂಲದಲ್ಲಿ ಪ್ರಕೃತಿಪ್ರತ್ಯಯಗಳಿರುವದು ಪ್ರಸಿದ್ಧವೇ ಅದೆ. ಆದರೆ ಕ್ರಮವುಳ್ಳ ವಿಭಕ್ತಿಪ್ರತ್ಯಯಗಳು ಅವಕ್ಕೆ ಸೇರುತ್ತವೆಯೋ, ಇಲ್ಲವೋ ಎಂಬದನ್ನು ನೋಡುವದು ಇದರಲ್ಲಿ ಮುಖ್ಯ ಸಂಗತಿಯಾಗಿರುತ್ತದೆ. ಕ್ರಮವುಳ್ಳ ನಾಮವಿಭಕ್ತಿಗಳನ್ನು ಅಥವಾ ಕ್ರಿಯಾವಿಭಕ್ತಿಗಳನ್ನು ಹೊಂದದಿರುವ ಶಬ್ದಗಳೇ ರೂಪಭೇದವಿಲ್ಲದ ಅವ್ಯಯಗಳೆಂದು ಹೇಳಲ್ಪಡುತ್ತದೆ. "ಬಾರದು, ಕೂಡದು" ಮುಂತಾದ ಕ್ರಿಯಾಪದಗಳಿಗೆ ಧಾತುಗಳೂ ಪ್ರತ್ಯಯಗಳೂ ಇರುತ್ತವೆಂದು, ನನ್ನ ಮೊದಲಿನ ಪತ್ರದಲ್ಲಿ ಹೇಳಿದ್ದರ ಅರ್ಥವೇನಂದರೆ, ಅವುಗಳಿಗೆ ಕ್ರಮವುಳ್ಳ ಕ್ರಿಯಾವಿಭಕ್ತಿಪ್ರತ್ಯಯಗಳಿರುತ್ತವೆ; ಮತ್ತು ಅವಕ್ಕೆ ಲಿಂಗವಚನಗಳ ವಿಕಾರವಿರುತ್ತದೆ. ಆದುದರಿಂದ ಅವುಗಳನ್ನು ಕ್ರಿಯಾಪದಗಳೊಳಗಿಂದ ತೆಗೆದು ಅವ್ಯಯಗಳೊಳಗೆ ಸೇರಿಸಲಿಕ್ಕೆ ಬರಲಾರದು. ವಿಭಕ್ತಿಪ್ರತ್ಯಯವೆಂಬದಕ್ಕೆ ಬದಲಾಗಿ ಬರೇ "ಪ್ರತ್ಯಯ"ವೆಂದು ಬರೆದ ಮಾತ್ರಕ್ಕೆ ವಿಪರೀತಾರ್ಥವನ್ನು ತೆಗೆದುಕೊಂಡು, "ಬಾರದು, ಕೂಡದು" ಮುಂತಾದ ಕ್ರಿಯಾಪದಗಳನ್ನು "ಅಲ್ಲಿ, ಇಲ್ಲಿ" ಮುಂತಾದ ತದ್ಧಿತಾವ್ಯಯಗಳೊಡನೆ ಸರಿ ಹಚ್ಚಿ ನೋಡುವದು ಎಂದಿಗೂ ಸಯುಕ್ತಿಕವಾಗಲಾರದು. ಅಂಥ ಕ್ರಿಯಾಪದಗಳಿಗೆ ಅವ್ಯಯಗಳೆಂಬ ಬರೇ ಸಾಮಾನ್ಯವಾದ ಹೆಸರನ್ನಿಟ್ಟರೆ ಆಗುವದಿಲ್ಲ; ಅರ್ಥದಿಂದ ಆರು ಭೇದಗಳಾಗಿರುವ ಕ್ರಿಯಾವಿಶೇಷಣಾವ್ಯಯ ಮುಂತಾದವುಗಳಲ್ಲಿ ಅವುಗಳನ್ನು ಯಾವದೊಂದು ವರ್ಗಕ್ಕೆ ಹೊಂದಿಸಿ ತೋರಿಸಬೇಕಾಗುವದು.

ಈ ಪ್ರಕಾರದ ಸಂಶಯಗಳು ಮನದಲ್ಲಿ ಹುಟ್ಟಿ, ಅವುಗಳ ನಿವಾರಣೆಗಾಗಿ ಪುನಃ ತಮ್ಮ ಸನ್ನಿಧಿಗೆ ಬಂದಿರುವೆನು. ಬಲ್ಲವರು ಸರಿಯಾದ ನಿರ್ಣಯವನ್ನು ಕೊಡಲು, ನನ್ನ ವಿಚಾರಗಳು ತಪ್ಪಾದವೆಂದು ಕಂಡು

ಬಂದಲ್ಲಿ, ಅವುಗಳನ್ನು ಒಳ್ಳೇ ಕೃತಜ್ಞತೆಯಿಂದ ತಿದ್ದಿಕೊಳ್ಳುವೆನೆಂಬ ಕುತೂಹಲವುಳ್ಳ,

ತಮ್ಮ ನಮ್ರ ಸೇವಕ.
ಬಾ. ಗೋ. ಅಂಕಲಗಿ.
ಸ್ಕೂಲಮಾಸ್ತರ, ಸಿಂದಗಿ.

ರಾವಸಾಹೇಬ—ಕನ್ನಡ ಶಾಲಾಪತ್ರಿಕಾಕರ್ತರಿಗೆ—

ತಮ್ಮ ವಿಧೇಯಸೇವಕನ ಶಿರಸಾಷ್ಟಾಂಗ ನಮಸ್ಕಾರಗಳು, ವಿನಂತಿ ವಿಶೇಷ.

ತಮ್ಮ ಕಳೆದ ಸಪಟೆಂಬರ ತಿಂಗಳ ಶಾಲಾಪತ್ರಿಕದಲ್ಲಿ ಪ್ರಕಟವಾದ ಕುರಿಪೂರ (ಶಿರಹಟ್ಟಿ) ಶಾಲೆಯ ಹೆ|| ಮಾಸ್ತರ ವಿ|| ಶೇಷಾಚಾರ್ಯರು ಕೊಟ್ಟ ಎರಡೂ ಲೆಕ್ಕಗಳನ್ನು ನನಗೆ ತಿಳಿದಮಟ್ಟಿಗೆ ಬಿಡಿಸಿರುತ್ತೇನೆ. ಸರಿದೋರಿದರೆ ತಮ್ಮ ಸುಪವಿತ್ರ ಮಾಸಪತ್ರಿಕದಲ್ಲಿ ಪ್ರಕಟಪಡಿಸುವಿರೆಂದು ನೆರೆನಂಬಿದ್ದೇನೆ.

(೧) ರೀತಿಯು:—



ಅ ಬ, ಕ ಡ = ಕೊರತಗಳು.

ಮೊದಲನೆಯವನು ಅ ಇ (೧/೨ ಅ ಬ), ಕ ಇ (೧/೨ ಕ ಡ) ಕೊರತಗಳಿಂದ ೧ ತುಂಡನ್ನು ಮಾಡಿಕೊಟ್ಟನು. ಎರಡನೆಯವನು ಬ ಇ (೧/೨ ಅ ಬ), ಡ ಇ (೧/೨ ಕ ಡ) ಕೊರತಗಳಿಂದ ೩ ತುಂಡುಗಳನ್ನು ಮಾಡಿಕೊಟ್ಟನು. ಆದ್ದರಿಂದ ಹಣವನ್ನು ಇಬ್ಬರಿಗೂ ಸಮವಾಗಿ ಹಂಚಿಕೊಡಬೇಕು.

ರೂಪಾಯಿ.

ರೂ. ೧।೦।೮ ÷ ೨ = ೦।೮।೪ ಮೊದಲನೆಯವನಿಗೆ.
೦।೮।೪ ಎರಡನೆಯವನಿಗೆ.

ಉತ್ತರ.

(೨) ರೀತಿಯು:—

ಇನ್ನೊಂದು ಬಿಲ್ಲಿಯು ಎಲ್ಲಿ ಹೋಯಿತೆಂದರೆ—೧ ಬಿಲ್ಲಿಗೆ ೨ ರಂತೆ

೩೦ ಹಣ್ಣುಗಳನ್ನೂ ೧ ಬಿಲ್ಲಿಗೆ ೩ ರಂತೆ ೩೦ ಹಣ್ಣುಗಳನ್ನೂ ಮಾರಿದ್ದರೆ ೨೫ ಬಿಲ್ಲಿ ಬರುತ್ತಿದ್ದವು. ಅಂದರೆ ೬೦ ಹಣ್ಣುಗಳನ್ನು ಮಾರಿ ೨೫ ಬಿಲ್ಲಿ ತರಬೇಕಾದರೆ ಸರಾಸರಿಯಿಂದ ೨ ಬಿಲ್ಲಿಗೆ ೪⅘ ಹಣ್ಣುಗಳಂತೆ ಮಾರಬೇಕಾಗಿತ್ತು; ಆದರೆ ಹಾಗೆ ಮಾಡದೆ ೨ ಬಿಲ್ಲಿಗೆ ೫ ಹಣ್ಣುಗಳಂತೆ ಮಾರಿದ್ದರಿಂದ ೬೦ ಹಣ್ಣುಗಳ ವ್ಯಾಪಾರದಲ್ಲಿ ೧ ಬಿಲ್ಲಿ ಕಡಿಮೆಯಾಯಿತು.

ಎರಡನೆಯವಳಿಗೆ ಸಮಾಧಾನ ಹೇಳತಕ್ಕದ್ದೇನಂದರೆ—ಇವಳ (ಮೊದಲನೆಯವಳ) ಹಣ್ಣುಗಳು ಬಿಲ್ಲಿಗೆ ೩ ರಂತೆ ಸಿಗುತ್ತಿದ್ದದರಿಂದ ಗಿರಾಕಿಗಳು ನಿನ್ನ ಹಣ್ಣುಗಳನ್ನು ಬಿಲ್ಲಿಗೆ ೨ ರಂತೆ ಕೊಳ್ಳಲಿಚ್ಛಿಸಲಿಲ್ಲ; ಅದದರಿಂದ ನಿನ್ನ ಹಣ್ಣುಗಳು ಮಾರದೆ ಹಾಗೇ ಉಳಿಯುವಂತೆ ತೋರಿದವು ಆದರೆ ನೀನು "ಬಿಲ್ಲಿಗೆ ೨ ರಂತೆ ಮಾರದಿದ್ದರೆ ಹಣ್ಣುಗಳನ್ನೇ ತಂದು ಕೊಡು, ಅಥವಾ ೧ ಬಿಲ್ಲಿಗೆ ೨ ರಂತೆ ಮಾರಿದಷ್ಟು ಹಣ್ಣುಗಳ ಬೆಲೆಯನ್ನೂ ಮಾರದೆ ಉಳಿದಷ್ಟು ಹಣ್ಣುಗಳನ್ನೂ ತಂದುಕೊಡು" ಎಂದು ಆಕೆಗೆ ಹೇಳಿದ್ದಿಲ್ಲ. ಆದ್ದರಿಂದ ಇವಳು ಅವನ್ನು ಮಾರಾಟಮಾಡಿರುತ್ತಾಳೆ. "ಬಂದ ಹಣವನ್ನು ಮನೆಗೆ ತಂದುಕೊಡು" ಎಂದು ನೀನು ಹೇಳಿದಂತೆ, ಇವಳು ಈಗ ಹಣವನ್ನು ಕೊಡಬಂದದ್ದು ನ್ಯಾಯವು. ತನ್ನ ಹಣ್ಣುಗಳನ್ನು ಮಾರಿಬಂದ ೧೨ ಬಿಲ್ಲಿಗಳಲ್ಲಿ ತನಗೆ ಬರತಕ್ಕ ೧೦ ಬಿಲ್ಲಿಗಳನ್ನು ಮಾತ್ರ ತಾನು ತಕ್ಕೊಂಡು ಹೆಚ್ಚಿನ ೨ ಬಿಲ್ಲಿಗಳನ್ನು ನಿನಗೇ ಕೊಡಬಂದಿರಲು ಇವಳಲ್ಲಿ ಅನ್ಯಾಯವು ತಿಲಮಾತ್ರವಾದರೂ ದೊರೆಯದು. ನೀನು ಇನ್ನೂ ೧ ಬಿಲ್ಲಿ ಕೊಡೆಂದು ಕೇಳುವದು ಮಾತ್ರ ಅನ್ಯಾಯವಾಗದಿರದು.

ನರೇಗಲ್ಲು (ರೋಣ)
ತಾ॥ ೬-೧-೧೦

ಕರಿಬಸವಯ್ಯ ಪ. ಸಂಗನಾಳಮಠದ,
೪ ನೇ ಅ॥ ಮಾಸ್ತರ.

ಕಳೆದ ಸಪ್ಟಂಬರ ತಿಂಗಳ ಶಾಳಾಪತ್ರಕದಲ್ಲಿ ಕೊಟ್ಟ ಎರಡು ಲೆಖ್ಖಗಳನ್ನು ಕೆಳಗೆ ಕಾಣಿಸಿದ ಶಾಳಾಧ್ಯಾಪಕರೂ ಬಿಡಿಸಿಕಳುಹಿದ್ದಾರೆ. ಆದರೆ ಅವೆಲ್ಲವುಗಳನ್ನು ಮುದ್ರಿಸುವ ಅವಶ್ಯಕತೆ ಇರುವದಿಲ್ಲ. ಸಂಕಪ್ಪಾ ಭೀಮಪ್ಪಾ ಪಾಟೀಲ, ವಿದ್ಯಾರ್ಥಿ, ಶಾಳಾಕುಲಿಗೋಡ ತಾ॥ ಗೋಕಾಕ. ಭೀಮಪ್ಪಾ ಚನ್ನಬಸಪ್ಪಾ ಆವಟೆ, ವಿದ್ಯಾರ್ಥಿ, ಶಾಳಾತೇಲಸಂಗ ತಾ॥ ಅಥಣಿ. ವ್ಯಾಸಾಚಾರ್ಯ ಅನಂತಾಚಾರ್ಯ ಹೆರಕಲ್, ಶಾಳಾ ಮುದ್ದೇಬಿಹಾಳ.

ಕಲ್ಲೋ ನರಹರ ದೇಶಪಾಂಡೆ, ಶಾಳಾ ಸಿರಗಾವ ತಾ|| ಹುಕ್ಕೇರಿ. ವ್ಯಾಸೋ ಶ್ರೀನಿವಾಸಾಚಾರ್ಯ ಮಳಗಿ, ಶಾಳಾ ದಾಸನಕೊಪ್ಪ ತಾ|| ಶಿರ್ಶಿ. ಗೋ. ಗ. ನಾಯಿಕ ವಿದ್ಯಾರ್ಥಿ ಶಾಳಾ ಗಳತಗೆ ತಾ|| ಚಿಕ್ಕೋಡಿ. ಬಂಡೋ ಭೀಮಾಜಿ ಶಾಳಾ, ಹೊಸಹಳ್ಳಿ ತಾ|| ಗದಗ. ಕಂಬಾಳಯ್ಯಾ ಮಲ್ಲಯ್ಯಾ ಕಿರೇಸೂರ, ಹೆಬಸೂರ ಗರ್ಲಸ್ಕೂಲ. ಫಕ್ಕೀರಪ್ಪಾ ನಿಂಗಪ್ಪಾ ಬಸರೀಕಟ್ಟಿ, ಶಾಳಾ ಕಬನೂರ. ಬೋಧಾ ಕೃಷ್ಣಾಚಾರ್ಯ ಕಟ್ಟಿ, ಶಾಳಾ ಹೂಲಿಕಟ್ಟಿ.

ರಾವಸಾಹೇಬ ಕನ್ನಡ ಶಾಲಾಪತ್ರಿಕಕರ್ತರವರ ಸನ್ನಿಧಾನಕ್ಕೆ—

ತಮ್ಮ ಕರಕಮಲದಿಂದುದ್ಭವಿಸುವ ಸುಂದರವಾದ ಮಾಸಪತ್ರಿಕೆಯಲ್ಲಿ, ಮುಂದಿನ ನಾಲ್ಕು ಮಾತುಗಳಿಗೆ ಇಂಬುಗೊಡುವಿರೆಂದು ನಂಬಿದ್ದೇನೆ:—

ನಮ್ಮ ಶಾಲೆಯ ವಾರ್ಷಿಕ ಪರೀಕ್ಷೆಯಾಗಿ, ತಾ|| ೧೪- ೧೨- ೧೯೦೯ ನೇ ದಿವಸ ರಾವಸಾಹೇಬ ನಾಲ್ಕನೇ ಅ| ಡಿ| ಇ| ಜಿಲ್ಲಾ| ಧಾರವಾಡ, ಇವರ ಅಧ್ಯಕ್ಷತೆಯ ಕೆಳಗೆ ಇನಾಮು ಕೊಡುವ ಸಮಾರಂಭವು ನೆರವೇರಿಸಲ್ಪಟ್ಟಿತು. ಊರೊಳಗಿನ ಪ್ರಮುಖ ಜನರು ಸಮಾರಂಭಕ್ಕೆ ಬಂದಿದ್ದರು. ವಿದ್ಯಾರ್ಥಿಗಳು ದೇವತಾಸ್ತೋತ್ರ ಮಾಡಿದ ಮೇಲೆ ಗುರುವರ್ಯ ನಮ್ಮ ಹೆ| ಮಾ| ಹನುಮಪ್ಪಾ ಲಿಂಗಪ್ಪಾ ಹೆಬ್ಬಾಳಕರರವರು ಉಗಿದೀಪದ ಪ್ರಯೋಗವನ್ನು ಮಾಡಿ ತೋರಿಸಿ, ಅದರ ವಿಷಯಕ್ಕೆ ಅರ್ಧ ತಾಸಿನವರೆಗೆ ವಿವರಿಸಿ ಹೇಳಿದರು. ಪರ್ವತಗೌಡಾ ಹಳೇಮನಿ ಇವರು ವಿದ್ಯೆಯನ್ನು ಕಲಿಯುವದರಿಂದ ಆಗುವ ಲಾಭವನ್ನು ಕುರಿತು, ಕೆಲವು ವೇಳೆ ಮನೋಹರವಾಗಿ ಭಾಷಣ ಮಾಡಿದರು. ಅನಂತರ ಅಧ್ಯಕ್ಷರು ಇನಾಮಿನ ಉದ್ದೇಶವನ್ನು ಕುರಿತು, ಒಂದು ತಾಸಿನ ವರೆಗೆ ತಿಳಿಸಿ ಹೇಳಿದರು. ಇಲ್ಲಿಯ ಶ್ರೀಯುತ ಸಿದ್ಧನಗೌಡಾ ಬಸನಗೌಡಾ ಪಾಟೀಲ ಇವರು, ತಮ್ಮ ಕೈಯಿಂದ ೫ ರೂಪಾಯಿಗಳನ್ನು ಖರ್ಚು ಮಾಡಿ ತಂದ ಪಾಟಿ, ಕಾಗದ, ಸೀಸಪೇನು, ಮಿಠಾಯಿ ಇವೆಲ್ಲವುಗಳನ್ನು ಅಧ್ಯಕ್ಷರು ಇನಾಮು ಕೊಟ್ಟ ಬಳಿಕ ಸಭೆಯು ವಿಸರ್ಜನವಾಯಿತು. ತಾ|| ೨೧- ೧- ೧೯೧೦ ಇಸ್ವಿ—

ತಮ್ಮ ನಮ್ರ ಸೇವಕ.

ರಾಮಚಂದ್ರ ಗೋವಿಂದ ಪಾಟೀಲ.

ಶಾಲಾಪತ್ರಕ.

ಪದ್ಯಂ

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀ ಪತ್ರಮಂ ಮುದ್ರಿಸಿ ||
ನಯದಿಂದಿತ್ತಪೆವೋದುವರ್ಗೆ ಸುಗುಣಂದೋರಲ್ಕೆ ಕೈಕೊಂಬುದೈ
ದಯೆಯಿಂ ದೋಷವತಿದ್ದವೇಳ್ಪುದು ಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ||೧||

ಪುಸ್ತಕ ೪೬. | ಫೆಬ್ರುವರಿ-೧೯೧೦. | ಸಂಚಿಕೆ ೨.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಆರ್ಯಗಾಯನಶಾಸ್ತ್ರವೂ ೨೨ ಶ್ರುತಿಗಳೂ.

ಆರ್ಯಗಾಯನಶಾಸ್ತ್ರವು ಬಹು ಪ್ರಾಚೀನಕಾಲದಿಂದ ಪ್ರಸಿದ್ಧವಾದಂಥ ಶಾಸ್ತ್ರವು. ಹಿಂದಕ್ಕೆ ಒಂದು ಕಾಲದಲ್ಲಿ ಭರತಖಂಡದಲ್ಲಿ ಈ ಶಾಸ್ತ್ರವು ಬಹಳ ಸುಧಾರಣೆಯನ್ನು ಹೊಂದಿತ್ತು. ಗಾಯನಶಾಸ್ತ್ರಕ್ಕೆ ಮೂಲಾಧಾರವಾದ ಸಪ್ತಸ್ವರಗಳನ್ನು ಕೂಡಾ ಮೊಟ್ಟಮೊದಲು ಹಿಂದುಸ್ತಾನದ ಆರ್ಯರೇ ಕಂಡು ಹಿಡಿದರೆಂದು ಪರದೇಶದ ಪಂಡಿತರೂ ಒಪ್ಪಿಕೊಳ್ಳುತ್ತಾರೆ. ಆದರೆ ಈ ದೇಶದ ಇತರ ಅನೇಕ ಶಾಸ್ತ್ರಗಳಂತೆ ಈ ಶಾಸ್ತ್ರವೂ ಕಾಲಚಕ್ರದ ಮಹಿಮೆಯಿಂದ ಕಳೆಗುಂದಿ, ಕೀಳ್ತರದ ಜನರ ಕೈಸೇರಿ, ತನ್ನ ಗೌರವವನ್ನು ಕಳೆದುಕೊಂಡಿತು. ಆದರೆ ಸುದೈವದಿಂದ ಇತ್ತೀತ್ತಲಾಗಿ ನಮ್ಮ ದೇಶದ ಕೆಲವರು ಸುಶಿಕ್ಷಿತ ಜನರು ಈ ಶಾಸ್ತ್ರದ ಮಹತ್ವವನ್ನರಿತು ಅದನ್ನು ವ್ಯಾಸಂಗ ಮಾಡಲಾರಂಭಿಸಿದ್ದಲ್ಲದೆ, ನಮ್ಮ ಪ್ರಾಚೀನಗಾಯನಶಾಸ್ತ್ರದ ಉಚ್ಚಸ್ಥಿತಿಯನ್ನು ಬೆಳಕಿಗೆ ತರಲು ಯತ್ನಿಸುತ್ತ ಇದ್ದಾರೆ. ಇಂಥ ಸುಶಿಕ್ಷಿತ ಜನರೊಳಗಿನವರೇ ನಮ್ಮ ಪ್ರಾಂತದಲ್ಲಿ ಪ್ರಸಿದ್ಧರಾದ ಪೆನಶನರ್ ಡಿಪುಟಿಕಲೆಕ್ಟರ ಮ|| ರಾ|| ರಾ|| ಕೃಷ್ಣಾಜಿ ಬಲ್ಲಾಳ ದೇವಲರೆಂಬರಿರುವರು. ಇವರು ಈ ವಿಷಯವನ್ನು ಈಗ ೮।೧೦ ವರ್ಷಗಳಿಂದ ವ್ಯಾಸಂಗಮಾಡಿ ಅದರ ನಿಜವಾದ ಮಹತ್ವವನ್ನು ಸುಶಿಕ್ಷಿತ ಜನರ ಲಕ್ಷಕ್ಕೆ ತಂದುಕೊಡುವದಕ್ಕೋಸ್ಕರ ಮುಂಬಯಿ ಇಲಾಖೆಯಲ್ಲಿ ಇರುವ ಕಾಲೇಜುಗಳಲ್ಲಿಯೂ

ಇತರ ಪ್ರಸಿದ್ಧ ಸ್ಥಳಗಳಲ್ಲಿಯೂ ಸಪ್ರಯೋಗವಾಗಿ ವ್ಯಾಖ್ಯಾನಗಳನ್ನು ಕೊಟ್ಟು ಆರ್ಯರ ಪ್ರಾಚೀನಗಾಯನಶಾಸ್ತ್ರದ ಪುನರುಜ್ಜೀವನವನ್ನು ಗೆಯ್ಯುವದಕ್ಕೆ ಅಶ್ರಾಂತ ಶ್ರಮವನ್ನು ಮಾಡುತ್ತ ಇದ್ದಾರೆ. ಈ ಬಗೆ ಅವರು ಮಾಡುವ ಪ್ರಯತ್ನಗಳು ಬಹಳ ಶ್ಲಾಘಿಸತಕ್ಕಂಥವುಗಳು. ಧಾರವಾಡ ಟ್ರೇನಿಂಗಕಾಲೇಜದಲ್ಲಿ ಶಿಕ್ಷಣಹೊಂದಿ ಮುಂದೆ ವಿದ್ಯಾಪ್ರಸಾರದ ಕೆಲಸವನ್ನು ಕೈಕೊಳ್ಳುವ ವಿದ್ಯಾರ್ಥಿಗಳಿಗೋಸ್ಕರ ಮೇಲ್ಕಾಣಿಸಿದ ವಿಷಯವನ್ನು ಕುರಿತು ಕಾಲೇಜದಲ್ಲಿ ಕಳೆದ ದಿಶಂಬರ ತಾ. ೧೦|೧೯ ನೇ ದಿವಸಗಳಲ್ಲಿ ದೇವಲರವರು ಪ್ರಸಿದ್ಧ ಗಾಯಕರಾದ ಪ್ರೊ. ಅಬ್ದುಲ್ ಕರೀಮ ಎಂಬವರ ಸಹಾಯದಿಂದ ಸಪ್ರಯೋಗವಾದ ಎರಡು ವ್ಯಾಖ್ಯಾನಗಳನ್ನು ಕೊಟ್ಟರು. ಆ ವ್ಯಾಖ್ಯಾನಗಳ ಸಾರವನ್ನು ನಮ್ಮ ವಾಚಕರಿಗೋಸ್ಕರ ಇಲ್ಲಿ ಕೊಡುತ್ತೇವೆ:—

“ಗಾಯನ ಕಲೆಯು ಹಿಂದುಸ್ತಾನದಲ್ಲಿ ಬಹು ಪ್ರಾಚೀನಕಾಲದಿಂದ ಇರುತ್ತದೆ; ಮತ್ತು ಗಾಯನಶಾಸ್ತ್ರವನ್ನು ಕುರಿತು ಅನೇಕ ಪ್ರಾಚೀನ ಗ್ರಂಥಗಳೂ ಉಂಟು. ಅವುಗಳಲ್ಲಿ ಶಾರ್ಙದೇವಕೃತ ಸಂಗೀತ ರತ್ನಾಕರ, ರಾಗವಿಬೋಧ, ಸಂಗೀತ ಪಾರಿಜಾತ ಎಂಬಿವು ಪ್ರಸಿದ್ಧವಾಗಿರುವವು. ಈ ಗ್ರಂಥಗಳಲ್ಲಿಯೂ ಬೇರೆ ಪ್ರಾಚೀನ ಗ್ರಂಥಗಳಲ್ಲಿಯೂ ಗಾಯನಶ್ರೇಢಿಯು ಹೇಳಲ್ಪಟ್ಟಿರುತ್ತದೆ. ಪಾಯಾದ ಷಡ್ಜ ಮತ್ತು ಅದರ ಇಮ್ಮಡಿಯಾದ ಷಡ್ಜ ಇವುಗಳ ನಡುವೆ ಬೇರೆ ಬೇರೆ ಸ್ವರಗಳು ಸೇರಿ ಉಂಟಾಗುವ ಸ್ವರಗಳ ಕ್ರಮವು ಗಾಯನಶ್ರೇಢಿಯೆನಿಸುವದು. ಈ ಗಾಯನ ಶ್ರೇಢಿಯು ಸಪ್ತಸ್ವರಗಳುಳ್ಳದ್ದಾಗಿರುತ್ತದೆ. ಹಲಕೆಲವು ದೇಶಗಳಲ್ಲಿ ಈ ಶ್ರೇಢಿಯಲ್ಲಿ ಐದೇ ಸ್ವರಗಳಿರುತ್ತವೆ. ರಾಷ್ಟ್ರಗಳು ಸುಧಾರಿಸಿದ ಹಾಗೆ ಅವುಗಳಲ್ಲಿ ಪ್ರಚಾರದಲ್ಲಿದ್ದ ಗಾಯನಕಲೆಯೂ ಸುಧಾರಿಸಿ, ಅದರ ಸ್ವರಗಳಲ್ಲಿ ಸೂಕ್ಷ್ಮ ಭೇದಗಳುಂಟಾಗುತ್ತವೆ. ಈ ಮೇರೆಗೆ ಮೊದಲಿನ ಏಳು ಸ್ವರಗಳಲ್ಲಿ ಕೋಮಲ, ತೀವ್ರ ಎಂಬ ಭೇದಗಳುಂಟಾಗಿ ೧೨ ಸ್ವರಗಳ ಶ್ರೇಢಿಯುಂಟಾಯಿತು. ಮುಂದೆ ಇದೇ ಕ್ರಮವು ನಡೆಯುತ್ತ ಅತಿಕೋಮಲ, ಅತಿತೀವ್ರ ಎಂಬ ಸೂಕ್ಷ್ಮತರವಾದ ಭೇದಗಳುಂಟಾಗಿ ೨೨ ಸ್ವರಗಳ ಗಾಯನಶ್ರೇಢಿಯು ಪ್ರಚಾರದಲ್ಲಿ ಬಂದಿತು. ಈ ಬಗೆಯ ಸುಧಾರಣೆಯು ನಮ್ಮ ಭರತಖಂಡದಲ್ಲಿ ಸುಮಾರು ಕ್ರಿ. ಶ. ದ

೧೨ನೇ ಶತಮಾನದ ವರೆಗೆ ಅವ್ಯಾಹತವಾಗಿ ನಡೆಯಿತು. ಆದರೆ ಮುಂದೆ ೧೨ನೆಯ ಶತಮಾನದಿಂದ ಹಿಂದುಸ್ತಾನದ ಮೇಲೆ ಮುಸಲ್ಮಾನರು ಮೇಲೆ ಮೇಲೆ ದಂಡೆತ್ತಿ ಬರತೊಡಗಲು, ಹಿಂದೂ ರಾಷ್ಟ್ರಗಳು ಒಂದರ ಹಿಂದೊಂದು ಲಯವಾಗಹತ್ತಿದವು. ಅವುಗಳ ಸಂಗಡ ಈ ದೇಶದ ಕಲಾಕೌಶಲ್ಯಗಳೂ ಲಯವಾಗಹತ್ತಿದವು. ಈ ಪ್ರಕಾರ ಗಾಯನಕಲೆಯೂ ಕಳೆಗುಂದುತ್ತ ಕಡೆಗೆ ಉಳಿದ ಅಲ್ಪ ಸ್ವಲ್ಪ ಗಾಯನವು ಹಿಂದಕ್ಕೆ ಬಿದ್ದಿರುವ ಕೆಳಗಿನ ವರ್ಗದ ಜನರಲ್ಲಿ ಉಳಿಯಿತು; ಹಾಗೂ ಗಾಯನಸಂಬಂಧದ ಶಾಸ್ತ್ರವು ಪುಸ್ತಕದಲ್ಲಿಯೇ ಉಳಿಯಿತು. ಪ್ರಾಚೀನ ಸಂಸ್ಕೃತ ಗ್ರಂಥಗಳಲ್ಲಿ ಹೇಳಿರುವ ಏಳು ಮುಖ್ಯ ಸ್ವರಗಳನ್ನೂ, ಹನ್ನೆರಡು ಕೋಮಲ ಇಲ್ಲವೆ ತರತೀವ್ರ ಸ್ವರಗಳನ್ನೂ, ಅತಿತೀವ್ರ ಅತಿಕೋಮಲ ಸ್ವರಗಳು ಕೂಡಿ ಆದ ೨೪।೨೫ ಸ್ವರಗಳನ್ನೂ ವೀಣೆಯ ತಂತಿಯ ಮೇಲೆ ಯಾವ ಪ್ರಮಾಣದಿಂದ ತಿಳಕೊಳ್ಳಬೇಕೆಂಬುದೂ ಶ್ರುತಿಯ ಪಡದೆಗಳನ್ನು ಹ್ಯಾಗೆ ಕಟ್ಟಿದರೆ ಆ ಪಡದೆಗಳ ಮೇಲೆ ಶುದ್ಧಸ್ವರಗಳು ಹೊರಡುತ್ತವೆಂಬುದೂ ಗಾಯಕರಿಗೆ ಗೊತ್ತಾಗದ ಹಾಗಾಯಿತು. ಹೀಗಾಗಲು ಬರೆ ಕಿವಿಚಾಟಿಕೆಯಿಂದ ಸ್ವರಗಳನ್ನು ಗೊತ್ತು ಹಿಡಿದು ಪಡದೆಗಳನ್ನು ಕಟ್ಟುವ ಕ್ರಮವು ಪ್ರಚಾರದಲ್ಲಿ ಬಂದಿತು. ಇದರಿಂದ ಆದ ಪರಿಣಾಮವೇನಂದರೆ, ಬರಬರುತ್ತ ಗಾಯಕನ ಕಿವಿಗಳು ತೀಕ್ಷ್ಣವಿದ್ದಮಾನದಿಂದ, ಅಂದರೆ ಅವನ ಕಿವಿಯಲ್ಲಿ ಸ್ವರದ ತೀವ್ರತೆಯನ್ನು ಗೊತ್ತುಹಿಡಿಯುವ ಶಕ್ತಿಯು ಹೆಚ್ಚು ಇದ್ದಮಾನದಿಂದ ಅವನ ತಂಬೂರಿಯ ತಂತಿಗಳು ಇಲ್ಲವೆ ಬೀನವೆಂಬ ವಾದ್ಯದ ಪಡದೆಗಳು ಒಳ್ಳೆಯ ಸ್ವರವನ್ನು ಕೊಡುವವುಗಳಾದವು. ಈ ಮೇರೆಗೆ ಬರಬರುತ್ತ ಈ ಸಂಬಂಧದ ಗಣಿತವನ್ನೆಲ್ಲ ಗೊತ್ತಿಲ್ಲದೆ ಹೋಗಿ, ಈ ವಿದ್ಯೆಯು ಮನೆತನಸ್ಥರಾದ ಗಾಯಕರು, ಇಲ್ಲವೆ ಬೀನಕಾರರು ತಮ್ಮ ಮಕ್ಕಳಿಗೆ ಕೇವಲ ಗುಪ್ತವಿದ್ಯೆಯೆಂದು ಕಲಿಸುವಂಥ ದುಃಸ್ಥಿತಿಯು ಒದಗಿತು. ಆದರೆ ಸುದೈವದಿಂದ ಈ ದುಃಸ್ಥಿತಿಯು ದೂರಾಗುವ ಲಕ್ಷಣಗಳು ಇತ್ತಲಾಗಿ ಕಂಡುಬರಹತ್ತಿವೆ. ಬಂಗಾಲದಲ್ಲಿ ಕಂಪನಿಯ ಸರಕಾರದ ಅಮಲು ಉಂಟಾದನಂತರ ಮೊದಲು ಸನ್ ೧೮೩೪ನೇ ಇಸವಿಯಿಂದ ಹಿಂದುಸ್ತಾನದೊಳಗಿನ ಗಾಯನಕಲೆಯನ್ನು ಕುರಿತು ಪಾಶ್ಚಾತ್ಯಪಂಡಿತರು ವಿಚಾರಮಾಡತೊಡಗಿದರು; ಕ್ಯಾಪ್ಟನ್ ವಿಲ್ಲಾರ್ಡ,

ಸರ್ ಉಯ್ಯೆಲಿಯಮ್ ಜೋನ್ಸ್, ಸರ್ ಡಬ್ಲ್ಯು. ಊಸ್ಲೆ, ಜೆ. ಅಲೆಕ್ಸಾಂಡರ ಎಲಿಸ್, ಮಿ. ಬೊರ್ಘೂಂಕ್ವೆಟ್, ಕ್ಯಾಪಟನ್ ಡೇ ಇವರೇ ಮೊದಲಾದ ವಿದ್ವಾಂಸರು ಈ ವಿಷಯವನ್ನು ಕುರಿತು ನಿಬಂಧಗಳನ್ನು ಬರೆದು ಅವನ್ನು ರಾಯಲ್ ಏಸಿಯಾಟಿಕ್ ಸೊಸಾಯಿಟಿ ಎಂಬ ಸಂಘದ ದ್ವಾರದಿಂದ ಪ್ರಸಿದ್ಧಮಾಡುವ ಕ್ರಮವನ್ನು ಉಪಕ್ರಮಿಸಿದರು. ಆಗಿನಿಂದ ಸಪ್ತಸ್ವರಗಳನ್ನೂ, ಅವುಗಳ ಒಳಭಾಗಗಳನ್ನೂ ಹ್ಯಾಗೆ ಎಣಿಸಬೇಕೆಂಬ ಬಗ್ಗೆ ಯತ್ನವು ನಡೆಯಿತು. ಈ ನಿಬಂಧಕಾರರು ತಂತಿಯ ಉದ್ದಳತೆಯಲ್ಲಿ ಸರಿಯಾಗಿ ೪೪ ಭಾಗಗಳನ್ನು ಮಾಡಿ, ತಂತಿಯ ಸರಿಯಾದ ಅರ್ಧಭಾಗದಲ್ಲಿ ಇಪ್ಪತ್ತೆರಡನೇ ಶ್ರುತಿ, ಅಂದರೆ ಮೇಲಿನ ಷಡ್ಜವು ನುಡಿಯುತ್ತದೆಂತಲೂ, ಉಳಿದ ಇಪ್ಪತ್ತೊಂದು ಶ್ರುತಿಗಳು ಉಳಿದ ಇಪ್ಪತ್ತೊಂದು ಪಡದೆಗಳಮೇಲೆ ನುಡಿಯುತ್ತವೆಂತಲೂ ಅಳತೆಯನ್ನು ತೋರಿಸಿದರು.

ಡಾ. ಸುರೇಂದ್ರಮೋಹನ ಟಾಗೋರ ಎಂಬವರು ಸನ್ ೧೮೭೪ರಲ್ಲಿ ಶ್ರುತಿವಿಷಯವನ್ನು ಕುರಿತು ಒಂದು ನಿಬಂಧ ಬರೆದರು; ಮತ್ತು ಸಪ್ತಸ್ವರಗಳನ್ನೂ, ಅವುಗಳ ಭಾಗಗಳಾದ ೨೨ ಶ್ರುತಿಗಳನ್ನೂ ವೀಣೆಯ ಮೇಲೆ ಹ್ಯಾಗೆ ಎಣಿಸಬೇಕೆಂಬದನ್ನೂ ಕುರಿತು ಗಣಿತದೃಷ್ಟಿಯಿಂದ ಒಂದು ರೀತಿಯನ್ನು ಹೇಳಿದರು. ಇವರು ತಂತಿಯ ೧/೨ ಭಾಗದಲ್ಲಿ ೯ ಶ್ರುತಿಗಳನ್ನು ಸಮಾನವಾದ ಅಂತರಗಳಮೇಲೆ, ಮತ್ತು ಉಳಿದ ೧/೨ ಭಾಗದಲ್ಲಿ ೧೩ ಶ್ರುತಿಗಳನ್ನು ಸಮಾನವಾದ ಅಂತರಗಳಮೇಲೆ, ಈ ಪ್ರಕಾರ ಪಡದೆಗಳನ್ನು ಕಟ್ಟುವ ರೀತಿಯನ್ನು ತೋರಿಸಿದರು. ಆದರೆ ಮೇಲಿನ ಇವೆರಡೂ ರೀತಿಗಳಿಂದ ಹೊರಟ ಸ್ವರಗಳನ್ನು, ವಿದ್ವಾಂಸರಾದ ಗಾಯಕರೂ ಬೀನಕಾರರೂ ಹಾಡುವ ಮತ್ತು ಬಾರಿಸುವ ಸ್ವರಗಳಿಗೆ ಸರಿಹಚ್ಚಿನೋಡಲಾಗಿ, ಅವುಗಳಲ್ಲಿ ವ್ಯತ್ಯಾಸ ತೋರಹತ್ತಿತು. ಈ ಕೊರತೆಯು ಇದುವರೆಗೆ ಹಾಗೇ ಉಳಿದಿರುತ್ತದೆ. ಈ ಸಂಗತಿಯನ್ನು ಕ್ಯಾಪಟನ್ ಡೇ ಮತ್ತು ಇ. ಎಫ್. ಎಲಿಸ್ ಇವರು ತಮ್ಮ ನಿಬಂಧಗಳಲ್ಲಿ ನಮೂದಿಸಿ ಇಟ್ಟಿದ್ದಾರೆ.

ಗಾಯನಶಾಸ್ತ್ರದಲ್ಲಿ ಇದುವರೆಗೆ ಉಳಿದಿದ್ದ ಈ ಕುಂದನ್ನು ಸಾಧ್ಯವಾದ ಮಟ್ಟಿಗೆ ದೂರಮಾಡಬೇಕೆಂದು ರಾಗವಿಬೋಧದಲ್ಲಿಯೂ, ಬೇರೆ ಗ್ರಂಥ

ಗಳಲ್ಲಿಯೂ ತಂತಿಗಳಮೇಲೆ ಸಪ್ತಸ್ವರಗಳನ್ನು ಸ್ಥಿರಗೊಳಿಸುವ ಬಗೆ ಹೇಳಿರುವ ರೀತಿಯ ಮನನ-ಸಂಶೋಧನಗಳನ್ನು ಮಾಡುವಲ್ಲಿ ನಾನು ಶಕ್ಯಲಾದಮಟ್ಟಿಗೆ ಪರಿಶ್ರಮ ಮಾಡಿದ್ದೇನೆ; ಮತ್ತು ಈ ವಿಷಯವನ್ನು ಕುರಿತು ನಾನು ಇಂಗ್ಲೀಷದಲ್ಲಿ ಒಂದು ಸಣ್ಣ ನಿಬಂಧವನ್ನೂ ಬರೆದಿದ್ದೇನೆ. ಈಗ ಎರಡು ವರ್ಷಗಳಿಂದ ಪುಣೆ ಮೊದಲ ದ ಶಹರಗಳಲ್ಲಿಯೂ, ಫರ್ಗ್ಯೂಸನ್, ಡೆಕ್ಕನ್ ಮುಂತಾದ ಕಾಲೇಜುಗಳಲ್ಲಿಯೂ ಪ್ರೊ. ಅಬ್ದುಲ್ ಕರೀಮಖಾ ಇವರ ಸಹಾಯದಿಂದ ಗಣಿತದ ರೀತಿಯಿಂದ ಹೊರಡುವ ಸ್ವರಗಳಿಗೆ, ಪ್ರತ್ಯಕ್ಷ ಗಾಯಕರೂ ಬೀನಕಾರರೂ ಹಾಡುವ ಹಾಗು ಬಾರಿಸುವ ಸ್ವರಗಳು ಹ್ಯಾಗೆ ಅಚ್ಚಳಿಯದೆ ಕೂಡುತ್ತವೆಂಬದನ್ನು ಸಪ್ರಯೋಗವಾಗಿ ತೋರಿಸುತ್ತ ಬಂದಿದ್ದೇನೆ. ಅದರಂತೆ ಈ ನಿಮ್ಮ ಟ್ರೇನಿಂಗ ಕಾಲೇಜದಲ್ಲಿಯೂ ೭ ಮೂಲಸ್ವರಗಳು, ೧೨ ವಿಕೃತಸ್ವರಗಳು, ೨೨ ಶ್ರುತಿಭೇದಗಳು ಇವುಗಳಲ್ಲಿ ಪರಸ್ಪರ ಪ್ರಮಾಣವು ಹ್ಯಾಗೆ ಇರುತ್ತದೆಂಬದನ್ನು ಕರೇಹಲಿಗೆಯಮೇಲೆ ಬರೆದು ತೋರಿಸುತ್ತೇನೆ. ಈ ಪ್ರಮಾಣಗಳಿಗನುಸರಿಸಿ ವೀಣೆಯಮೇಲೆ ಪಡದೆಗಳನ್ನು ನಿಲ್ಲಿಸಿ ಹೊರಡುವ ಸ್ವರಗಳನ್ನು ಪ್ರೋ. ಅಬ್ದುಲ್ ಕರೀಮಖಾ ಇವರು ಬೇರೆ ಬೇರೆ ರಾಗಗಳಲ್ಲಿ ಉಪಯೋಗಿಸಿ, ವೀಣೆಯಿಂದ ಹೊರಡುವ ಸ್ವರಗಳೂ ಪ್ರಖ್ಯಾತಗಾಯಕರು ಮಾನ್ಯಮಾಡುವ ಸ್ವರಗಳೂ ಒಂದಕ್ಕೊಂದು ಹ್ಯಾಗೆ ಕೂಡುತ್ತವೆಂಬದನ್ನು ತೋರಿಸುವರು."

ಈ ಪ್ರಕಾರ ಮ|| ರಾ|| ರಾ|| ದೇವಲರವರು ಕರೇಹಲಿಗೆಯ ಮೇಲೆ ಬರೆದ ಪ್ರಮಾಣಗಳಿಗನುಸಾರವಾಗಿ ವೀಣೆಯಮೇಲೆ ಪಡದೆಗಳನ್ನು ನಿಲ್ಲಿಸಿದ ತರುವಾಯ ಆ ಆ ಸ್ಥಳಗಳಲ್ಲುಂಟಾದ ಸ್ವರಗಳನ್ನು ಪ್ರೊ. ಅಬ್ದುಲ್ ಕರೀಮಖಾ ಇವರು ಬೇರೆ ಬೇರೆ ರಾಗಗಳಲ್ಲಿ ಉಪಯೋಗಿಸಿ, ಅವುಗಳ ಸತ್ಯತೆಯನ್ನು ನಿದರ್ಶನಕ್ಕೆ ತಂದುಕೊಟ್ಟು, ತಮ್ಮ ಮಧುರಗಾಯನದಿಂದ ಕಾಲೇಜದ ವಿದ್ಯಾರ್ಥಿಗಳನ್ನೂ ಶಿಕ್ಷಕರನ್ನೂ ಆನಂದಗೊಳಿಸಿದರು. ದೇವಲರವರು ಬರೆದುತೋರಿಸಿದ ಬೇರೆ ಬೇರೆ ಸ್ವರಗಳ ಪ್ರಮಾಣಗಳು ಮುಂದೆ ಕೊಟ್ಟ ಪ್ರಕಾರ:-

ಸಪ್ತಸ್ವರಗಳ ಪಟ್ಟಿ.

ಶ್ರೇಣಿ ನಂಬರು.	ಸಪ್ತ ಸ್ವರ ಹೆಸರುಗಳು.	ತಂತಿಯ ಉದ್ದ (ಅಂಗುಲಗಳು)	ಒಂದು ಸೆಕೆಂಡಿಗೆ ಆಗುವ ಆಂದೋಲನಗಳು	ಶ್ರುತಿಗಳ ಸಂಖ್ಯೆ	ಶರಾ.
೧	ಷಡ್ಜ	೩೬	೨	೦	
೨	ಋಷಭ	೩೨	೨೭೦	೩	
೩	ಗಾಂಧಾರ	೨೮ ೪/೫	೩೦೦	೨	
೪	ಕೋ. ಮಧ್ಯಮ	೨೭	೩೨೦	೪	
೫	ಪಂಚಮ	೨೪	೩೬೦	೪	
೬	ಧೈವತ	೨೧ ೩/೫	೪೦೦	೩	
೭	ನಿಷಾದ	೧೯ ೧/೫	೪೫೦	೨	
೮	ಷಡ್ಜ	೧೮	೪೮೦	೪	

೧೨ ಸ್ವರಗಳ ಪಟ್ಟಿ.

ಶ್ರೇಣಿ ನಂಬರು.	ಸ್ವರಗಳ ಹೆಸರು	ತಂತಿಯ ಉದ್ದಳತೆ.	ಆಂದೋಲನಗಳ ಸಂಖ್ಯೆ	ಶರಾ.
೧	ಷಡ್ಜ	೩೬	೨೪೦	
೨	ಕೋ. ಋಷಭ	೩೩ ೩/೪	೨೫೬	
೩	ಋಷಭ	೩೨	೨೭೦	
೪	ಕೋ. ಗಾಂಧಾರ	೩೦	೨೮೮	
೫	ಗಾಂಧಾರ	೨೮ ೪/೫	೩೦೦	
೬	ಕೋ. ಮಧ್ಯಮ	೨೭	೩೨೦	
೭	ತೀ. ಮಧ್ಯಮ	೨೫ ೩/೫	೩೩೭ ೧/೨	
೮	ಪಂಚಮ	೨೪	೩೬೦	
೯	ಕೋ. ಧೈವತ	೨೨ ೧/೨	೩೮೪	
೧೦	ಧೈವತ	೨೧ ೩/೫	೪೦೦	
೧೧	ಕೋ. ನಿಷಾದ	೨೦	೪೩೨	
೧೨	ನಿಷಾದ	೧೯ ೧/೫	೪೫೦	
೧೩	ಷಡ್ಜ	೧೮	೪೮೦	

೨೬ ಸ್ವರಗಳ ಪಟ್ಟಿ

ಕ್ರಮ ಸಂಖ್ಯೆ	ಸ್ವರದ ಹೆಸರು	ತಂತಿಯ ಉದ್ದಳತೆ	ಆಂದೋಲನಗಳ ಸಂಖ್ಯೆ	ಶರಾ.
೧	ಷಡ್ಜ	೩೬	೨೪೦	
೨	ಅ. ಕೋ. ಋಷಭ	೩೪ ೧೪/೨೫	೨೫೦	
೩	ಕೋ. ಋಷಭ	೩೩ ೩/೪	೨೫೬	
೪	ಮಧ್ಯಮ ಋಷಭ	೩೨ ೯/೧೦	೨೬೨ ೨/೩	
೫	ತೀ. ಋಷಭ	೩೨	೨೭೦	
೬	ಅ. ತೀ. ಋ.	೩೧ ೫/೯	೨೭೩ ೯/೧೦	
೭	ಅ. ಕೋ. ಗಾಂಧಾರ	೩೧	೨೭೮ ೭/೧೦	
೮	ಕೋ. ಗಾ.	೩೦ ೩/೮	೨೮೪ ೪/೯	
೯	ಮ. ಗಾ.	೩೦	೨೮೮	
೧೦	ತೀ. ಗಾ.	೨೮ ೪/೫	೩೦೦	
೧೧	ಅ. ತೀ. ಗಾ.	೨೮ ೧/೫	೩೦೬ ೪/೧೦	
೧೨	ಕೋ. ಮಧ್ಯಮ	೨೭	೩೨೦	
೧೩	ತೀ. ಮಧ್ಯಮ	೨೫ ೩/೫	೩೩೭ ೧/೨	
೧೪	ಅ. ತೀ. ಮ.	೨೫	೩೪೫ ೩/೫	
೧೫	ಪಂಚಮ	೨೪	೩೬೦	
೧೬	ಅ. ಕೋ. ಧೈವತ	೨೩ ೧/೨೫	೩೭೫	
೧೭	ಕೋ. ಧೈ.	೨೨ ೧/೨	೩೮೪	
೧೮	ಮ. ಧೈವತ	೨೧ ೧೪/೧೫	೩೯೩ ೯/೧೦	
೧೯	ತೀ. ಧೈ.	೨೧ ೧/೩	೪೦೫	
೨೦	ಅ. ತೀ. ಧೈ.	೨೧ ೧/೧೫	೪೧೦ ೧/೫	
೨೧	ಅ. ಕೋ. ನಿಷಾದ	೨೦ ೨/೩	೪೧೮ ೧/೧೫	
೨೨	ಕೋ. ನಿ.	೨೦ ೮/೧೫	೪೨೧ ೪/೫	
೨೩	ಮ. ನಿ.	೨೦	೪೩೨	
೨೪	ತೀ. ನಿ.	೧೯ ೧/೫	೪೫೦	
೨೫	ಅ. ತೀ. ನಿ.	೧೮ ೪/೫	೪೫೯ ೩/೭	
೨೬	ಷಡ್ಜ	೧೮	೪೮೦	

ಸೂರ್ಯಕಿರಣಗಳ ಪರಿಣಾಮಗಳು.

ಸೂರ್ಯಪ್ರಕಾಶವನ್ನು ತ್ರಿಕೋನಾಕೃತಿಯಾದ ಲೋಲಕದೊಳಗಿಂದ ನೋಡಲು, ಅದರಲ್ಲಿ ಏಳು ಬೇರೆಬೇರೆ ಬಣ್ಣಗಳು ಕಾಣುವವು. ಈ ಏಳು ಬಣ್ಣಗಳ ಪಟ್ಟಿಗಳಿಗೆ ಸ್ಪೆಕ್ಟ್ರಮ್ (ರಶ್ಮಿವರ್ಣ) ಎಂದು ಅನ್ನುವರು. ಈ ವರ್ಣಪಂಕ್ತಿಗಳ ಒಂದು ತುದಿಗೆ ಕೆಂಪು ಬಣ್ಣವೂ ಮತ್ತೊಂದು ತುದಿಗೆ ನೀಲಲೋಹಿತ (Violet) ಬಣ್ಣವೂ ಇರುತ್ತವೆ. ಅವುಗಳ ಆಚೆಯಲ್ಲಿ ಸಹ ಅದೃಶ್ಯಕಿರಣಗಳು ಇರುವವು. ಕೆಂಪು ಬಣ್ಣದ ಆಚೆಗೆ ಇರುವ ಅದೃಶ್ಯಕಿರಣಗಳಿಗೆ ಅತಿ ತಾಮ್ರಕಿರಣಗಳೆಂತಲೂ, ನೀಲಲೋಹಿತ ಕಿರಣಗಳ ಆಚೆಗೆ ಇರುವ ಅದೃಶ್ಯಕಿರಣಗಳಿಗೆ ಅತಿ ನೀಲಲೋಹಿತ ಕಿರಣಗಳೆಂತಲೂ ಅನ್ನುವರು. ಈ ಎರಡೂ ಬಗೆಯ ಅದೃಶ್ಯಕಿರಣಗಳಿಂದ ರಾಸಾಯನಿಕ ಉಷ್ಣತಾವರ್ಧಕ ಪರಿಣಾಮಗಳು ಬಹಳ ಚೆನ್ನಾಗಿ ಆಗುತ್ತವೆ.

ಅತಿ ಸೂಕ್ಷ್ಮ ಜೀವಿಗಳು ಸೂರ್ಯಪ್ರಕಾಶದಲ್ಲಿ ಸಾಯುತ್ತವೆ, ಎಂಬ ಮಾತು ಈಗ ಅನುಭವಸಿದ್ಧವಾಗಿರುತ್ತದಷ್ಟೇ. ಇದಕ್ಕೆ ಸೂರ್ಯಪ್ರಕಾಶದ ಅತಿ ನೀಲಲೋಹಿತಕಿರಣಗಳೇ ಕಾರಣವೆಂದು ಗೊತ್ತಾಗಿರುತ್ತದೆ. ಈ ಸಂಗತಿಯನ್ನು ನಾವು ವ್ಯವಹಾರದಲ್ಲಿ ಮೇಲೆಮೇಲೆ ಉಪಯೋಗಿಸಿಕೊಳ್ಳುತ್ತೇವೆ. ಸ್ಪರ್ಶಜನ್ಯರೋಗದಿಂದ ಪೀಡಿತರಾದವರ ಅರಿವೆಗಳನ್ನು ಬಿಸಿಲಿಗೆ ಹಾಕಿ ಆ ಅರಿವೆಗಳಲ್ಲಿದ್ದ ರೋಗೋತ್ಪಾದಕ ಸೂಕ್ಷ್ಮ ಜೀವಿಗಳು ಸತ್ತುಹೋದಬಳಿಕ ಅವುಗಳನ್ನು ಪುನಃ ಉಪಯೋಗಕ್ಕೆ ತಕ್ಕೊಳ್ಳುತ್ತೇವೆ. ಸೂಕ್ಷ್ಮಜಂತುಗಳಮೇಲೆ ಆಗುವಂತೆ ಮನುಷ್ಯಪ್ರಾಣಿಗಳ ಮೇಲೆ ಸೂರ್ಯಪ್ರಕಾಶದ ದುಷ್ಪರಿಣಾಮವು ಆಗುವದಿಲ್ಲೆಂಬ ತಪ್ಪು ತಿಳುವಳಿಕೆಯು ಜನರಲ್ಲಿ ಹಬ್ಬಿರುತ್ತದೆ. ಆದರೆ ವಸ್ತುಸ್ಥಿತಿಯು ಇದಕ್ಕೆ ತೀರ ವಿಪರೀತವಾಗಿರುವದು. ಯಾವತ್ತು ಪ್ರಾಣಿಗಳ ಶರೀರವ್ಯಾಪಾರವು ಕೆಲವು ಸಜೀವ ಕಣಗಳಿಂದಲೇ ನಡೆಯುತ್ತಿರುತ್ತದೆ. ಈ ಕಣಗಳನ್ನು ಸೂರ್ಯಕಿರಣಗಳಿಂದ ಸಂರಕ್ಷಿಸಲಿಕ್ಕೆಬೇಕು. ಈ ಸಜೀವಕಣಗಳು ಹಗಲು ಕತ್ತಲೆಯಲ್ಲಿ ಅಡಗಿಕೊಂಡಿರುವವು. ಇಲ್ಲವೆ, ಅವುಗಳ ಶರೀರಗಳು ಕೂದಲಿನಿಂದಾಗಲಿ, ಗರಿಗಳಿಂದಾಗಲಿ ಅಪಾರದರ್ಶಕ ಬಣ್ಣಗಳಿಂದಾಗಲಿ ಆಚ್ಛಾದಿತವಾಗಿರುವವು.

ಪೃಥ್ವಿಯು ಹೊರತಾಗಿ ಉಳಿದ ಗ್ರಹಗಳಲ್ಲಿ ಜೀವರಾಶಿಯು ಉಂಟೋ? ಇಲ್ಲವೋ?

ಸೂರ್ಯಮಾಲೆಯಲ್ಲಿ ಪೃಥ್ವಿಯು ಒಂದು ವಿವಕ್ಷಿತ ಸ್ಥಳದಲ್ಲಿರುವದರಿಂದ ಜೀವರಾಶಿಗೆ ಅತ್ಯವಶ್ಯವಾದ ಅನುಕೂಲತೆಗಳು ಅದಕ್ಕೆ ಉಂಟಾಗಿರುತ್ತವೆಂದು ಹಿಂದೆ "ಎಲ್ಲ ಗ್ರಹಗಳಲ್ಲಿ ಪೃಥ್ವಿಯೇ ಪ್ರಾಣಿ-ವನಸ್ಪತಿಗಳ ವಾಸ್ತವ್ಯಕ್ಕೆ ತಕ್ಕದ್ದಾದ ಗ್ರಹವು" ಎಂಬ ಲೇಖದಲ್ಲಿ ಹೇಳಿದ್ದೇವೆ. ಯಾವದೊಂದು ಗ್ರಹದಲ್ಲಿ ಜೀವರಾಶಿಯು ಉಂಟೋ, ಇಲ್ಲವೋ ಎಂಬದನ್ನು ನಿಶ್ಚಯಿಸುವದಕ್ಕೆ ಸೂರ್ಯನಿಂದ ಆ ಗ್ರಹದ ಅಂತರವು ನಮಗೆ ಅವಶ್ಯವಾಗಿ ಗೊತ್ತಾಗಲಿಕ್ಕೆ ಬೇಕು. ಪೃಥ್ವಿ ಹಾಗು ಸೂರ್ಯಗೋಲ ಇವುಗಳ ಮಧ್ಯದಲ್ಲಿರುವ ಮಧ್ಯಮಾಂತರವು ೯,೨೦,೦೦,೦೦೦ ಮೈಲು ಇರುವದರಿಂದ ಸೂರ್ಯನ ಉಷ್ಣತೆಯ $\frac{೧}{೨೩೮೧೦೦೦೦೦೦}$ ಪಾಲು ಉಷ್ಣತೆಯು ಪೃಥ್ವಿಗೆ ದೊರೆಯುವದೆಂದು ಪೌಲೆಟನು ಶೋಧ ಮಾಡಿರುವನು. ಉಷ್ಣತೆಯು ಒಂದೇ ಸ್ಥಳದಲ್ಲಿ ಒಟ್ಟುಗೂಡಿ ಪ್ರಖರವಾಗದೆ, ಹವೆ-ನೀರುಗಳ ಸಹಾಯದಿಂದ ಪೃಥ್ವಿಯ ಎಲ್ಲ ಭಾಗಗಳಲ್ಲಿ ಹಬ್ಬಿಕೊಳ್ಳುವದರಿಂದ ಸಮಶೀತೋಷ್ಣತೆಯುಂಟಾಗಿ, ನಾನಾತರದ ಜೀವರಾಶಿಯ ಉತ್ಪತ್ತಿ ವೃದ್ಧಿಗಳಿಗೆ ಅನುಕೂಲವಾಗುತ್ತದೆ. ಹೀಗಾಗದಿದ್ದರೆ ಸೂರ್ಯನ ಪ್ರಕಾಶವುಳ್ಳ ಭಾಗದಲ್ಲಿ ಅತಿಶಯವಾದ ಸೆಕೆಯೂ ಸೂರ್ಯನ ಪ್ರಕಾಶವಿರದ ಭಾಗದಲ್ಲಿ ಅತಿಶಯವಾದ ಚಳಿಯೂ ಉಂಟಾಗುತ್ತಿದ್ದವು. ಅದರಿಂದ ಎಷ್ಟೋ ಪ್ರಾಣಿ-ವನಸ್ಪತಿಗಳು ನಾಮಶೇಷವಾಗುತ್ತಿದ್ದವು. ಆಫ್ರಿಕಾ, ಆಸ್ಟ್ರೇಲಿಯಾ, ಹಿಂದುಸ್ತಾನ ಮೊದಲಾದ ಉಷ್ಣಪ್ರದೇಶಗಳಲ್ಲಿರುವ ಉಸುಬಿನ ಬೈಲುಗಳಲ್ಲಿ ಉಸುಬು ತೋಡಿ ತತ್ತಿಗಳನ್ನಿಟ್ಟು ನೋಡಿದರೆ, ಅವು ತುಸು ಹೊತ್ತಿನಲ್ಲಿ ಕಾಯ್ದ ಉಸುಬಿನಿಂದ ಬೆಂದು ಹೋಗುವವು. ಇದರಂತೆ ೪೦ ರೇಖಾಂಶವುಳ್ಳ ಹಾಗು ಸಮುದ್ರ ಪಾತಳಿಯಿಂದ ೧೨,೦೦೦ ಫೂಟು ಎತ್ತರವಾದ ಪ್ರದೇಶಗಳಲ್ಲಿ ರಾತ್ರಿಯ ಕಾಲಕ್ಕೆ ಹಿಮವು ಬೀಳಹತ್ತುವದು. ಇಂಥ ಸ್ಥಳಗಳಲ್ಲಿ ಪ್ರಾಣಿ-ವನಸ್ಪತಿಗಳಿರುವದು ಅಪರೂಪವು.

ಸೂರ್ಯನಿಂದ ನಮಗೆ ಪ್ರತಿನಿತ್ಯ ಬರುವ ಉಷ್ಣತೆಯ ಪ್ರಮಾಣವು "ಅಂತರದ ವರ್ಗದ ವ್ಯಸ್ತ ಪ್ರಮಾಣದಿಂದಿರುತ್ತದೆ;" ಅಂದರೆ,

ಸೂರ್ಯ ಪೃಥ್ವಿಗಳ ಮಧ್ಯದಲ್ಲಿರುವ ಅಂತರವು ಈಗಿರುವ ಅಂತರದ ಅರ್ಧವಾಗಿದ್ದರೆ ಸೂರ್ಯನಿಂದ ಸದ್ಯಕ್ಕೆ ನಮ್ಮ ಪೃಥ್ವಿಗೆ ಬರುವ ಉಷ್ಣತೆಯು ೪ ಪಟ್ಟು ಉಷ್ಣತೆಯು ಬರುತ್ತಿತ್ತು; ಹಾಗು ಅಂತರವು ಇಮ್ಮಡಿಯಾಗಿದ್ದರೆ ಉಷ್ಣತೆಯು ಈಗಿನ ಉಷ್ಣತೆಯ ¼ ಮಾತ್ರ ಬರುತ್ತಿತ್ತು. ಇವೆರಡೂ ಸಂಗತಿಗಳು ಜೀವರಾಶಿಯ ಅಭಿವೃದ್ಧಿಗೆ ತಕ್ಕವುಗಳಲ್ಲೆಂಬದು ಮೇಲಿನ ವಿವರಣದಿಂದ ನಮಗೆ ಗೊತ್ತಾಗಿದೆ.

ಯಾವದೊಂದು ಗ್ರಹದ ಮೇಲೆ ಜೀವರಾಶಿಯು ಇರಲಿಕ್ಕೆ ಅದರ ಪ್ರಕೃತ್ಯಂಶವೂ (Mass) ವಾತಾವರಣವೂ ಮಹತ್ವವುಳ್ಳ ಕಾರಣಗಳಾಗಿವೆ. ವಾತಾವರಣದ ಉಷ್ಣತೆ, ಆರ್ದ್ರತೆ, ಮೋಡಗಳನ್ನುಂಟು ಮಾಡುವ ಧೂಳಿಯಂಥ ಕಣಗಳು ಮೊದಲಾದವುಗಳನ್ನು ಹಿಡಿದಿಟ್ಟುಕೊಳ್ಳುವ ಶಕ್ತಿ ಇವುಗಳೆಲ್ಲ ವಾತಾವರಣದ ವಿಸ್ತಾರ-ದಾರ್ಢ್ಯಗಳನ್ನು ಅವಲಂಬಿಸಿರುವವು. ಇದಲ್ಲದೆ ಜೀವರಾಶಿಗೆ ಅತ್ಯವಶ್ಯವಾದ ಸಮಶೀತೋಷ್ಣತೆಯನ್ನುಂಟು ಮಾಡಲಿಕ್ಕೆ ಸಾಧನಗಳಾದ ಬಾಷ್ಪಭವನದ ವ್ಯಾಪಾರವೂ, ಗಲ್ಫಸ್ಟ್ರೀಮವೆಂಬ ಉಷ್ಣೋದಕದ ಪ್ರವಾಹವೂ ಮುಖ್ಯವಾಗಿ ಸಾಕಷ್ಟು ದಾರ್ಢ್ಯವುಳ್ಳ ವಾತಾವರಣವನ್ನೇ ಅವಲಂಬಿಸಿರುವವು.

ಇನ್ನು, ಯಾವದೊಂದು ಗ್ರಹದ ವಾತಾವರಣಕ್ಕೆ ಕೆಲವೊಂದು ಪ್ರಮಾಣದ ದಾರ್ಢ್ಯತೆಯು ಬರುವದು ಆ ಗ್ರಹದ ಪ್ರಕೃತ್ಯಂಶಗಳನ್ನೂ ಅದರ ಘಟಕಗಳ ಪರಿಮಾಣವನ್ನೂ ಅನುಸರಿಸಿರುವದು. ನಮ್ಮ ಪೃಥ್ವಿಗೆ ಇರುವ ಪ್ರಕೃತ್ಯಂಶದಿಂದ ಹೈಡ್ರೋಜನವನ್ನು ವಾತಾವರಣದಲ್ಲಿ ಹಿಡಿದಿಟ್ಟುಕೊಳ್ಳುವ ಶಕ್ತಿಯು ಅದಕ್ಕಿರುವದಿಲ್ಲ. ಡಾಕ್ಟರ ಸ್ಟೋನಿ ಎಂಬವನು ಚಂದ್ರಗೋಲದ ವಾತಾವರಣವನ್ನು ಪರೀಕ್ಷಿಸಿ, ಆ ಗೋಲದ ಪ್ರಕೃತ್ಯಂಶವು ಪೃಥ್ವಿಯ ಪ್ರಕೃತಂಶದ ೧/೮೦ ಇರುವದರಿಂದ ಅದರ ವಾತಾವರಣದಲ್ಲಿ ಆಕ್ಸಿಜನ್, ನೈಟ್ರೋಜನ್, ನೀರಿನ ಉಗಿ, ಕಾರ್ಬನಿಕ್ ಆಸಿಡ್‌ಗ್ಯಾಸ್‌ಗಳು ಉಳಿಯಲಾರವೆಂದು ಶೋಧ ಮಾಡಿದ್ದಾನೆ. ಇದರಿಂದ ಚಂದ್ರಗೋಲದಲ್ಲಿ ಜೀವರಾಶಿಯು ಇರಲಾರದೆಂದು ಬೇರೆ ಹೇಳುವ ಅವಶ್ಯಕತೆಯಿಲ್ಲ. ನಮ್ಮ ಪೃಥ್ವಿಯ ಪ್ರಕೃತ್ಯಂಶದ ¼ ಪ್ರಕೃತ್ಯಂಶವುಳ್ಳ ಗ್ರಹದ ವಾತಾವರಣಕ್ಕೆ ನೀರಿನ ಉಗಿಯನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವುಂಟು. ಅದರೆ

ಅದು ಆಕ್ಸಿಜನ್ ನೈಟ್ರೋಜನ್ ಮೊದಲಾದ ಹಗುರಾದ ವಾಯುಗಳನ್ನಿಟ್ಟು ಕೊಳ್ಳಲಾರದು. ಪೃಥ್ವಿಯಷ್ಟೇ ಪ್ರಕೃತ್ಯಂಶವುಳ್ಳ ಗ್ರಹದ ವಾತಾವರಣಕ್ಕೆ ಮಾತ್ರ ಜೀವರಾಶಿಗೆ ಬೇಕಾಗುವ ಅನುಕೂಲತೆಗಳನ್ನು ಒದಗಿಸಿ ಕೊಡುವ ಶಕ್ತಿಯುಂಟು. ನಮ್ಮ ಪೃಥ್ವಿಯ ವ್ಯಾಸವು ೮೦೦೦ ಮೈಲು ಇರದೆ, ೯೫೦೦ ಮೈಲು ಇದ್ದದ್ದಾಗಿದ್ದರೆ ಅದರ ಆಕಾರಮಾನವು ೩ ಹೆಚ್ಚುತ್ತಿತ್ತು; ಅದರಿಂದ ಅದರ ಗುರುತ್ವಾಕರ್ಷಣಶಕ್ತಿಯು ಹೆಚ್ಚಾಗಿ ಅದರ ದಾರ್ಢ್ಯವು ಹೆಚ್ಚಾಗುತ್ತಿತ್ತು. ಪ್ರಕೃತ್ಯಂಶವು ಆಕಾರಮಾನ ಹಾಗು ದಾರ್ಢ್ಯ ಇವುಗಳ ಗುಣಾಕಾರಕ್ಕೆ ಸರಿಯಿರುವದರಿಂದ ಈಗಿನ ಇಮ್ಮಡಿಯಾಗುತ್ತಿತ್ತು. ಜ್ವಾಲಾಮುಖಿಗಳಲ್ಲಿ ಏಳುವ ಹೈಡ್ರೋಜನವು ವಾತಾವರಣದಲ್ಲಿ ಉಳಿದ್ದ ಆಕ್ಸಿಜನ್‌ದೊಡನೆ ಸಂಯೋಗವಾಗಿ ನೀರನ್ನು ಹುಟ್ಟಿಸುತ್ತಿತ್ತು. ಅದರಿಂದ ನೀರಿನ ಸಂಚಯವು ಹೆಚ್ಚಾಗಿ ಒಣ ನೆಲದ ಮೇಲೆ ಎಷ್ಟೋ ಮೈಲು ಆಳವಾಗಿ ನಿಲ್ಲುತ್ತಿತ್ತು. ಇದರಿಂದ ಜೀವರಾಶಿಯು ಬದುಕುವ ಬಗೆ ಹ್ಯಾಗೆ?

ಸೂರ್ಯಮಾಲೆಯಲ್ಲಿರುವ ಗ್ರಹಗಳ ವ್ಯಾಸ, ಪ್ರಕೃತ್ಯಂಶ, ಅವು ಸೂರ್ಯನಿಂದ ಇರುವ ಅಂತರ ಮೊದಲಾದವುಗಳನ್ನು ಮುಂದೆ ಕೊಟ್ಟ ಪಟ್ಟಿಯಲ್ಲಿ ತೋರಿಸಿದ್ದೇವೆ. ಈ ಪಟ್ಟಿಯಲ್ಲಿ ಪೃಥ್ವಿಯ ಆಕಾರಮಾನ, ಪ್ರಕೃತ್ಯಂಶ ಮೊದಲಾದವು ಎಕ್ಕಂ ಎಂದು ಗ್ರಹಿಸಿಯಿದೆ. ಪೃಥ್ವಿಯ ವ್ಯಾಸವನ್ನು ಕೊಟ್ಟಿರುವದರಿಂದ ಅದರ ಆಕಾರಮಾನವನ್ನು ಸಹಜವಾಗಿ ತೆಗೆಯಲಿಕ್ಕೆ ಬರುವದು. ಪ್ರಕೃತ್ಯಂಶವು ಆಕಾರಮಾನ ಹಾಗು ದಾರ್ಢ್ಯ ಇವುಗಳ ಗುಣಾಕಾರಕ್ಕೆ ಸರಿಯಿರುವದು. ಪೃಥ್ವಿಯ ನಿಜವಾದ ಕ್ಷೇತ್ರವು ೧೯,೬೯,೦೯,೨೨೨ ಚೌರಸಮೈಲು; ಆಕಾರಮಾನವು ೨,೬೦,೬೧,೩೦,೦೦,೦೦೦, ಪ್ರಕೃತ್ಯಂಶ = ೬,೦೬,೯೦,೦೦,೦೦,೦೦,೦೦,೦೦,೦೦,೦೦ ಟನ್, ದಾರ್ಢ್ಯ (ನೀರಿನ ದಾರ್ಢ್ಯವು ೧ ಆದರೆ) = ೫.೬೨.

ಸೂರ್ಯಮಾಲೆಯಲ್ಲಿರುವ ಗ್ರಹಗಳ ವ್ಯಾಸ, ಪ್ರಕೃತ್ಯಂಕ, ಮೊದಲಾದವುಗಳನ್ನು ತೋರಿಸುವ ಪಟ್ಟಿ.

ಗ್ರಹಗಳ ಹೆಸರು	ವ್ಯಾಸ.	ಘನಫಲ ಪೃಥ್ವಿಯ ಘನಫಲ=೧	ಪದಾರ್ಥಸಂಚಯ ಪೃಥ್ವಿಯ ಪದಾರ್ಥಸಂಚಯ=೧	ಸಾಂದ್ರತ್ವ ಪೃಥ್ವಿಯ ಸಾಂದ್ರತ್ವ=೧	ಸೂರ್ಯನಿಂದಿರುವ ಮಧ್ಯಮಾಂತರ	ಗುರುತ್ವಾಕರ್ಷಣ ಪೃಥ್ವಿಯ ಆಕರ್ಷಣ=೧	ಆರ್ಕಪ್ರದಕ್ಷಿಣೆಯ ಕಾಲ	ಸೂರ್ಯನಿಂದ ಬರುವ ಉಷ್ಣತೆ ಪ್ರಕಾಶಗಳ ಪ್ರಮಾಣ.
							ದಿ. | ಘಂ. | ಸೇ.	
ಬುಧ	೩೯೬೩ ಮೈ	೦·೦೫೩	೦·೦೬೫	೧·೨೪	೩೬೦೦೦೦೦೦ ಮೈ	೦·೪೬	೮೮	೬·೬೭
ಶುಕ್ರ	೭೫೧೦ ,,	೦·೮೫೧	೦·೭೮೫	೦·೯೩	೬೭೦೦೦೦೦೦ ,,	೦·೮೭	೨೨೫	೧·೯೧
							ತಾ. ಘಂ. ಸೇ.	
ಪೃಥ್ವಿ	೭೯೩೫ ,,	೧·೦೦೦	೧·೦೦೦	೧.೦೦	೯೩೦೦೦೦೦೦ ,,	೧·೦೦	೩೬೫ ೫೬ ೪	೧·೦೦
ಮಂಗಳ	೪೯೩೦ ,,	೦·೩೬೯	೦·೧೩೪	೦·೫೩	೧೪೧೦೦೦೦೦೦ ,,	೦·೪೦	೩೪ ೬೭ ೩೬	೦·೪೬
ಗುರು	೮೮೬೯೦ ,,	೧೬೮೭·೪೬೧	೬೦೦·೮೫೭	೦·೩೩	೪೭೭೦೦೦೦೦೦ ,,	೩·೪೩	೯ ೫೫ ೩೧	೦·೦೬೭
ಶನಿ	೭೧೯೦೪ ,,	೭೪೬·೮೯೮	೯೦·೦೬೩	೦·೧೩	೮೭೩೦೦೦೦೦೦ ,,	೧.೦೯	೧೦ ೩೯ ೧೭	೦·೦೧೧
ಯುರೆನಸ	೩೩೦೩೪ ,,	೭೩·೬೫೯	೧೩·೬೪೧	೦·೧೮	೧೭೫೪೦೦೦೦೦೦ ,,	೦·೭೬	೯ ೬೦	೦.೦೦೩
ನೆಪಚೂನ	೩೬೬೩೦ ,,	೯೮·೬೬೪	೧೬·೭೬೧	೦·೧೭	೨೭೨೬೦೦೦೦೦೦ ,,	೦·೭೯	ಅನಿಶ್ಚಿತ	೦·೦೦೧

ಹಿಂದೆ ಕೊಟ್ಟ ಪಟ್ಟಿಯಲ್ಲಿ ನೋಡಲು, ಬುಧ-ಮಂಗಳಗಳಿಗೆ ನೀರಿನ ಉಗಿಯನ್ನು ವಾತಾವರಣದಲ್ಲಿ ಹಿಡಿದಿಟ್ಟುಕೊಳ್ಳಲಿಕ್ಕೆ ಅವಶ್ಯವಾಗಿ ಬೇಕಾಗುವಷ್ಟು ಪ್ರಕೃತ್ಯಂಶವಿಲ್ಲದ್ದರಿಂದ ಅವುಗಳ ಮೇಲೆ ಜೀವರಾಶಿಯು ಇರಲಾರದು. ಶುಕ್ರ ಹಾಗು ಪೃಥ್ವಿ ಇವು ಹೊರತಾಗಿ, ಉಳಿದ ಗುರು, ಶನಿ, ಯುರೆನಸ್, ನೆಪಚೂನ್ ಇವುಗಳ ಪ್ರಕೃತ್ಯಂಶವು ಹೆಚ್ಚು ಇದ್ದರೂ ಅವುಗಳ ದಾರ್ಢ್ಯವು ಪೃಥ್ವಿಯ ದಾರ್ಢ್ಯಕ್ಕಿಂತ ಕಡಿಮೆಯಿರುವದರಿಂದ ಆ ಗ್ರಹಗಳು ಇನ್ನೂ ತಪ್ತಸ್ಥಿತಿಯಲ್ಲಿರುತ್ತವೆಂದು ಗೊತ್ತಾಗುತ್ತದೆ. ಇಂಥ ಸ್ಥಿತಿಯಲ್ಲಿರುವ ಗ್ರಹಗಳ ಮೇಲೆ ಜೀವರಾಶಿಯ ಅಸ್ತಿತ್ವವು ಸಂಭವನೀಯವಿಲ್ಲ. ಪ್ರಕೃತ್ಯಂಶದ ಮೇಲಿಂದ ಶುಕ್ರನಲ್ಲಿ ಮಾತ್ರ ಜೀವರಾಶಿಯು ಇರಬಹುದೆಂದು ಅನುಮಾನಿಸಬೇಕಾಗುವದು. ಆದರೆ ಉಳಿದ ಬೇರೆ ಸಂಗತಿಗಳನ್ನು ವಿಚಾರಿಸಿದರೆ ಆ ಗ್ರಹದ ಮೇಲೆ ಸಹ ಜೀವರಾಶಿಯು ಇರುವದಿಲ್ಲೆಂಬದು ಸಿದ್ಧವಾಗುತ್ತದೆ. ಅಂತರ್ಗ್ರಹವಾದ ಬುಧನ ಪ್ರಕೃತ್ಯಂಶವು ಪೃಥ್ವಿಯ ಪ್ರಕೃತ್ಯಂಶದ ೩/೮ ಇರುವದರಿಂದ ಅದರ ವಾತಾವರಣದಲ್ಲಿ ನೀರಿನ ಉಗಿಯನ್ನೂ, ಆಕ್ಸಿಜನ್ ನೈಟ್ರೋಜನ್ ವಾಯುಗಳನ್ನೂ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವು ಇರುವದಿಲ್ಲ. ಅಂದರೆ, ಬುಧನ ಮೇಲೆ ವಾತಾವರಣವಿರುವದಿಲ್ಲ. ಆ ಗ್ರಹದ ಮೇಲೆ ಬೀಳುವ ಸೂರ್ಯನ ೧೦೦ ಕಿರಣಗಳಲ್ಲಿ ೮೩ ಕಿರಣಗಳು ಶೋಷಿಸಲ್ಪಡುವವು. ಉಳಿದ ೧೭ ಕಿರಣಗಳು ಮಾತ್ರ ಪರಾವರ್ತನ ಹೊಂದುವ ಕಾರಣ, ಅಲ್ಲಿ ವಾತಾವರಣವು ಇರುವದಿಲ್ಲೆಂಬದು ಸ್ಪಷ್ಟವು. ಇದಲ್ಲದೆ ಆ ಗ್ರಹದ ಅಕ್ಷಪ್ರದಕ್ಷಿಣೆಯ ಕಾಲವೂ ವಾರ್ಷಿಕಪ್ರದಕ್ಷಿಣೆಯ ಕಾಲವೂ ಅಷ್ಟೇ, ಅಂದರೆ ೮೮ ದಿವಸಗಳಿರುತ್ತದೆಂದು ಷಿಪಾರೇಲಿ ಎಂಬ ಜ್ಯೋತಿಷಿಯು ಸನ್ನ ೧೮೮೯ ರಲ್ಲಿ ಶೋಧ ಮಾಡಿದ್ದಾನೆ. ಈ ಕಾರಣದಿಂದ ಸೂರ್ಯನ ಕಡೆಗಿರುವ ಗೋಲದ ಭಾಗವು ಅತಿಶಯ ಕಾಯುವದು; ಸೂರ್ಯನ ಕಿರಣಗಳು ಬೀಳದ ಭಾಗದಲ್ಲಿ ಅತಿಶಯ ಚಳಿಯಿರುವದು. ಇದು ಜೀವರಾಶಿಗೆ ವಿಘಾತಕವು. ಈ ಗ್ರಹವು ಸೂರ್ಯನಿಗೆ ಅತಿ ಸಮೀಪವಾಗಿರುವದರಿಂದ ಪೃಥ್ವಿಗೆ ಬರುವ ಸೂರ್ಯನ ಉಷ್ಣತೆಯ ೬.೬೭ ಪಟ್ಟು ಉಷ್ಣತೆಯು ಅದಕ್ಕೆ ಬರುವದು. ಇಷ್ಟು ಉಷ್ಣತೆಯನ್ನು ಎಲ್ಲ ಕಡೆಯಲ್ಲಿಯೂ ಸಮವಾಗಿ ಹಂಚಿಬಿಡುವದಕ್ಕೆ ಅನುಕೂಲವಾದ ವಾತಾವರಣವು ಅಲ್ಲಿ ಇಲ್ಲದ್ದರಿಂದ ಜೀವ

ರಾಶಿಗೆ ಅತ್ಯವಶ್ಯವಾದ ಸಮಶೀತೋಷ್ಣತೆಯು ಅಲ್ಲಿ ಇರುವ ಸಂಭವವಿಲ್ಲ. ಶುಕ್ರನ ಪ್ರಕೃತ್ಯಂಶವು ಪೃಥ್ವಿಯ ಪ್ರಕೃತ್ಯಂಶದ ೩/೪ ಇರುವದರಿಂದಲೂ ಅದರ ದಾರ್ಢ್ಯವು ಪೃಥ್ವಿಯ ದಾರ್ಢ್ಯದ ೪/೫ ಇರುವದರಿಂದಲೂ ಅದಕ್ಕೆ ನಮ್ಮ ವಾತಾವರಣದಂಥ ವಾತಾವರಣವಿರುತ್ತದೆಂದು ಅನುಮಾನಿಸಬೇಕಾಗುವದು. ಈ ಗ್ರಹವನ್ನು ದುರ್ಬೀಣಿಯಿಂದ ಪರೀಕ್ಷಿಸಿ ನೋಡಿದರೆ ಅದರ ವಾತಾವರಣದಲ್ಲಿ ಮೋಡಗಳಿದ್ದದ್ದು ಕಂಡುಬರುವದು. ಒಟ್ಟಿನಲ್ಲಿ ಜೀವರಾಶಿಯ ಅಸ್ತಿತ್ವಕ್ಕೆ ಅವಶ್ಯವಾದ ವಾತಾವರಣ, ನೀರು ಮೊದಲಾದವು ಈ ಗ್ರಹದಲ್ಲಿರುವದರಿಂದ ಅಲ್ಲಿ ಜೀವರಾಶಿಯು ಇರಬಹುದೆಂದು ಭಾಸವಾಗುತ್ತದೆ. ಆದರೆ ಷಿಪರೇಲಿಯು ಈ ಗ್ರಹದ ಅಕ್ಷಪ್ರದಕ್ಷಿಣೆಯ ಕಾಲವೂ ವಾರ್ಷಿಕ ಪ್ರದಕ್ಷಿಣೆಯ ಕಾಲವೂ ಅಷ್ಟೇ ಇರುತ್ತದೆಂದು, ಅಂದರೆ ೨೨೫ ದಿವಸವಿದ್ದಿರುತ್ತದೆಂದು ಶೋಧ ಮಾಡಿದ್ದಾನೆ. ಇದರಿಂದ ಶುಕ್ರನಲ್ಲಿ ಹಗಲು ರಾತ್ರಿಗಳು ಸರತಿಯಿಂದ ತುಸು ಅವಧಿಯಿಂದ ಆಗದೆ, ೧೧೨½ ದಿವಸಗಳ ವರೆಗೆ ಸೂರ್ಯನ ಕಡೆಗೆ ತಿರುಗಿದ ಭಾಗದಲ್ಲಿ ಸತತ ಹಗಲೂ, ಉಳಿದ ಭಾಗದಲ್ಲಿ ೧೧೨½ ದಿವಸಗಳವರೆಗೆ ಸತತ ರಾತ್ರಿಯೂ ಇರುವವು. ೧೪ ದಿವಸಗಳವರೆಗೆ ಹಗಲು, ೧೪ ದಿವಸಗಳವರೆಗೆ ರಾತ್ರಿಯಿರುವ ಚಂದ್ರಗೋಲದಲ್ಲಿ ಜೀವರಾಶಿಯು ಇರಲಾರದೆಂದು ಹಿಂದಿನ ಲೇಖದಿಂದ ನಮಗೆ ಗೊತ್ತಾಗಿದೆ. ಅದೇ ಕಾರಣದಿಂದ ಶುಕ್ರನಲ್ಲಿ ಸಹ ಜೀವರಾಶಿಯು ಇರಲಾರದು. ದಿವಸವಿರುವ ಭಾಗದಲ್ಲಿ ನೆಲವು ಅತಿಶಯವಾಗಿ ಕಾಯುವದು. ರಾತ್ರಿಯಿರುವ ಭಾಗದಲ್ಲಿ ನೀರು ಗಡ್ಡೆಗಟ್ಟಿ ಅತಿ ಚಳಿಯಿರುವದು. ಇದರಿಂದ ಶುಕ್ರನ ವಾತಾವರಣದಲ್ಲಿ ಕ್ಷಣಶಃ ಅತಿ ಭಯಂಕರವಾದ ಬಿರುಗಾಳಿಗಳು ಹುಟ್ಟುವದರಿಂದ ಅಲ್ಲಿ ಪ್ರಾಣಿ-ವನಸ್ಪತಿಗಳಿದ್ದದ್ದಾಗಿದ್ದರೆ ಅವುಗಳ ಶರೀರಗಳು ಬಿರುಗಾಳಿಯ ಹೊಡತದಿಂದ ನುಗ್ಗುನುಗ್ಗಾಗಿ ಹರಿದು ಹೋಗುತ್ತಿದ್ದವು.

ಮಂಗಳನ ಅಕ್ಷದ ವಕ್ರತ್ವವು ಸುಮಾರು ಪೃಥ್ವಿಯ ಅಕ್ಷದ ವಕ್ರತ್ವದಷ್ಟೇ ಇರುವದರಿಂದಲೂ ಅದರ ಅಕ್ಷಪ್ರದಕ್ಷಿಣೆಯ ಕಾಲವು ೨೪½ ತಾಸಿನದಿರುವದರಿಂದಲೂ ಅಲ್ಲಿ ಹಗಲು-ರಾತ್ರಿಗಳೂ ಋತುಗಳೂ ಪೃಥ್ವಿಯ ಮೇಲಾಗುವಂತೆ ಕ್ರಮದಿಂದಾಗುತ್ತಿರುವದರಿಂದಲೂ ಈ ಅನುಕೂಲತೆಗಳ ಮೂಲಕ ಅಲ್ಲಿ ಜೀವರಾಶಿಯು ಇರಬಹುದೆಂದು ತರ್ಕಿಸಬೇಕಾಗುತ್ತ

ದೆ. ಇದಲ್ಲದೆ ದುರ್ಬೀಣಿಯ ಸಹಾಯದಿಂದ ಆ ಗೋಲದ ಪ್ರಾಕೃತಿಕ ಸ್ವರೂಪವನ್ನು ಪರೀಕ್ಷಿಸಿದರೆ ಅದರ ಧ್ರುವಪ್ರದೇಶಗಳಲ್ಲಿ ಬಿಳೇ ಪಟ್ಟೆಗಳೂ ಉಳಿದ ಭಾಗದಲ್ಲಿ ಕಪ್ಪು ಹಾಗು ಕಿತ್ತಳೇಬಣ್ಣದ ಹಲವು ಪಟ್ಟೆಗಳೂ ಕಂಡುಬರುವವು. ಕಿತ್ತಳೇಬಣ್ಣವುಳ್ಳ ಪ್ರದೇಶವು ಒಣ ನೆಲವೆಂತಲೂ ಕಪ್ಪುಕಾಣಿಸುವ ಭಾಗವು ಸಮುದ್ರ ಹಾಗು ನೀರಿನ ಕಾಲುವೆಗಳೆಂತಲೂ ಬಿಳೇ ಪಟ್ಟೆಗಳಿರುವ ಧ್ರುವಪ್ರದೇಶದಲ್ಲಿ ಬರ್ಫು ಮುಚ್ಚಿಕೊಂಡಿರುವದೆಂತಲೂ ಪೂರ್ವಕಾಲದ ಜ್ಯೋತಿಷಿಗಳು ಭಾವಿಸಿ, ಮಂಗಳನಲ್ಲಿ ಅನುಕೂಲವಾದ ಹಗಲುರಾತ್ರಿಗಳು ಋತುಗಳು, ಒಣನೆಲ, ಸಮುದ್ರ, ಇವೇ ಮೊದಲಾದವುಗಳಿದ್ದದರಿಂದ ಅತಿ ಪರಿಪೂರ್ಣವಾದ ಶರೀರರಚನೆಯುಳ್ಳ ಮಾನವ ಪ್ರಾಣಿಯ ವಾಸ್ತವ್ಯವು ಅಲ್ಲಿರುವದೆಂದೂ ಮನುಷ್ಯರೇ ದೂರಿನ ಕಾಲುವೆಗಳನ್ನು ಅಗಿದು ಬೇಕಾದ ಕಡೆಗೆ ನೀರು ಒಯ್ದಿರುವರೆಂತಲೂ ಸಿದ್ಧಾಂತ ಮಾಡಿದ್ದರು. ಆದರೆ ಈ ಗ್ರಹದ ಪ್ರಕೃತ್ಯಂಶವು ಪೃಥ್ವಿಯ ಪ್ರಕೃತ್ಯಂಶದ ೧/೯ ಇರುವದರಿಂದ ಇದರ ವಾತಾವರಣಕ್ಕೆ ನೀರಿನ ಉಗಿ ಆಕ್ಸಿಜನ್ ನೈಟ್ರೊಜನ್ ಮೊದಲಾದ ವಾಯುಗಳನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವಿರುವದಿಲ್ಲ. ಮಂಗಳನಲ್ಲಿ ನೀರು ಮೂಲತಃ ಇರುವದೇ ಇಲ್ಲ. ಅದರ ವಾತಾವರಣದಲ್ಲಿರುವ ಒಂದು ತರದ ಅತಿ ಜಡವಾದ ವಾಯುವಿನಿಂದ ಧ್ರುವಪ್ರದೇಶಗಳು ಬರ್ಫಿನಿಂದ ಮುಚ್ಚಿಕೊಂಡಿರುವಂತೆ ಕಾಣುವವು. ಈ ಗ್ರಹವು ಸೂರ್ಯನಿಂದ ದೂರವಿರುವದರಿಂದ ನಮ್ಮ ಪೃಥ್ವಿಗೆ ಬರುವ ಉಷ್ಣತೆಯ ಅರ್ಧಕ್ಕಿಂತ ಕಡಿಮೆ ಉಷ್ಣತೆಯು ಅದರ ಕೆಲಪ್ರಾಂದು ನಿಯಮಿತ ಕ್ಷೇತ್ರದ ಮೇಲೆ ಬೀಳುವದು. ಅಲ್ಲಿರುವ ವಾತಾವರಣವು ಅತಿ ವಿರಲವಾಗಿರುವದರಿಂದ ರಾತ್ರಿಯಲ್ಲಿ ಆ ಎಲ್ಲ ಉಷ್ಣತೆಯು ಹೊರಟು ಹೋಗುವದರಿಂದ ಅತಿ ಚಳಿಯುಂಟಾಗುವದು. ಒಟ್ಟಿನ ಮೇಲೆ ನೋಡಲಾಗಿ ಮಂಗಳನಲ್ಲಿ ನೀರು, ಸಾಕಷ್ಟು ದಾರ್ಢ್ಯವುಳ್ಳ ವಾತಾವರಣ, ಸಮಶೀತೋಷ್ಣತೆ ಮೊದಲಾದ ಮಹತ್ವವುಳ್ಳ ಅನುಕೂಲತೆಗಳಿಲ್ಲದ್ದರಿಂದ ಅಲ್ಲಿ ಜೀವರಾಶಿಯು ಇರಲಾರದೆಂದು ನಿಃಸಂದೇಹವಾಗಿ ಹೇಳಬಹುದು.

ಗುರು, ಶನಿ, ಯುರೆನಸ್ ಹಾಗು ನೆಪಚೂನ್ ಈ ಗ್ರಹಗಳು ಸೂರ್ಯನಿಂದ ಅತಿ ದೂರವಿರುವ ಕಾರಣ ಜೀವರಾಶಿಗೆ ಬೇಕಾಗುವಷ್ಟು ಉಷ್ಣತೆಯು ಸೂರ್ಯನಿಂದ ಅವುಗಳಿಗೆ ದೊರಕುವದಿಲ್ಲ. ಇದಲ್ಲದೆ

ಅವುಗಳ ದಾರ್ಢ್ಯವು ಕಡಿಮೆಯಿರುವದರಿಂದ ಅವುಗಳ ಘಟಕದ್ರವ್ಯಗಳು ಇನ್ನೂ ಘನರೂಪಕ್ಕೆ ಬಂದಿರುವದಿಲ್ಲೆಂಬದು ಸ್ಪಷ್ಟವು. ಶನಿ-ಯುರೆನಸ-ನೆಪ್ಚೂನಗಳ ಗೋಲಗಳಂತೂ ನೀರ ಮೇಲೆ ತೇಲುವಷ್ಟು ಹಗುರಿರುವವು. ಇಂಥ ತಪ್ತಸ್ಥಿತಿಯಲ್ಲಿರುವ ಗ್ರಹಗಳ ಮೇಲೆ ಜೀವರಾಶಿಯು ಇರುವ ಬಗೆ ಹ್ಯಾಗೆ?

R. M. MAHISHI.

ಪತ್ರವ್ಯವಹಾರ.

ಅನುಕರಣ.

ಇತರ ಪ್ರಾಣಿಗಳಿಗೂ ಮನುಷ್ಯನಿಗೂ ಭೇದವೇನು? ಅರ್ಥಾತ್, ಪರಮೇಶ್ವರನು, ಇತರ ಪ್ರಾಣಿಗಳಿಗಿಂತ ಮನುಷ್ಯನಿಗೆ ಏನು ಹೆಚ್ಚು ಕೊಟ್ಟಿರುವನು ಈ ಪ್ರಶ್ನೆಗೆ ಉತ್ತರವನ್ನು ಅನೇಕ ತತ್ವಜ್ಞಾನಿಗಳು ಅನೇಕ ವಿಧವಾಗಿ ಪ್ರಕಟಿಸಿದ್ದಾರೆ. ಒಬ್ಬನು ಅನ್ನುವದೇನಂದರೆ:— "ಎರಡು ಕಾಲುಗಳಮೇಲೆ ತೀರ ಸರಳವಾಗಿ (ನೆಟ್ಟಗೆ) ನಿಂತು ನಡೆಯುವ ಪ್ರಾಣಿಯು ಮನುಷ್ಯನೊಬ್ಬನೇ ಸರಿ! ಇತರ ಯಾವ ಪ್ರಾಣಿಗಳಲ್ಲಿಯೂ ಈ ಗುಣವಿಲ್ಲ." ಮತ್ತೊಬ್ಬನು "ಕಾರಣವಶಾತ್ ನಗುವ ಗುಣವು ಮನುಷ್ಯಪ್ರಾಣಿಗಳಲ್ಲಿ ಮಾತ್ರ ಉಂಟಲ್ಲದೆ ಉಳಿದ ಯಾವ ಪ್ರಾಣಿಗಳಲ್ಲಿಯೂ ಇಲ್ಲ"ವೆಂದು ಪ್ರತಿಪಾದಿಸಿರುತ್ತಾನೆ. ಬೇರೆ ಕೆಲವರು ಹೇಳುವದೇನಂದರೆ:—"ತಮ್ಮ ಅನ್ನವನ್ನು ಬೇಯಿಸಿಕೊಂಡು ತಿನ್ನುವಂಥ ಗುಣವು ಮನುಷ್ಯರಲ್ಲಿಯೇ ವಿನಹ ಇನ್ನಿತರ ಯಾವ ಪ್ರಾಣಿಗಳಲ್ಲಿಯೂ ಇಲ್ಲ."

ಮೇಲ್ಕಂಡ ಈ ಅಭಿಪ್ರಾಯಗಳೆಲ್ಲವೂ ನಿಜವೆಂಬುವದಂತೂ ಸರಿಯೇ! ಆದರೆ ಇನ್ನೊಂದು ಗುರುತರವಾದಗುಣವು ಮನುಷ್ಯರಲ್ಲಿದ್ದು, ಮಿಕ್ಕುಳಿದ ಪ್ರಾಣಿಗಳಲ್ಲಿರುವದಿಲ್ಲ. ಇಷ್ಟೇ ಅಲ್ಲ, ಆ ಗುಣವು ಮನುಷ್ಯರಲ್ಲಿ ಬೆಳೆಯುತ್ತ ನಡೆದದೆ! ಆದರೆ ಇತರ ಪ್ರಾಣಿಗಳಲ್ಲಿ ಎಂದೂ ಅದರ ಸ್ಪರ್ಶ ಸಹ ಆಗುವಂತಿಲ್ಲ!! ಇಂತಹ ಆಶ್ಚರ್ಯಕರವಾದಗುಣವೆಂದರೆ, ಅನುಕರಣಮಾಡುವ ಸಾಮರ್ಥ್ಯವೇ ಸರಿ!!!

ಗ್ರಾಮಗಳಲ್ಲಿ ಬೆಕ್ಕು, ಕುದುರೆ, ಎತ್ತು, ಕುರಿ, ನಾಯಿ, ಗುಬ್ಬಿ, ಕಾಗಿ, ಕೋಳಿ, ಪಾರಿವಾಳ ಮೊದಲಾದ ನಾನಾವಿಧದ ಪ್ರಾಣಿಗಳೂ ಅರಣ್ಯದಲ್ಲಿ ಮೊಲ, ನರಿ, ಚಿಗರೆ, ತೋಳ, ಬೆಳವ, ನವಿಲು, ಕೋಗಿಲೆ ಮೊದಲಾದ ಹಲವು ತರದ ಪ್ರಾಣಿಗಳೂ ಲಕ್ಷಾವಧಿ ವರುಷ ಒಂದಕ್ಕೊಂದು ಸಮೀಪವಾಗಿ ವಾಸಿಸುತ್ತಾದ್ದಾಗ್ಗೂ ಒಂದನ್ನೊಂದು ದಿನಾಲು ನೋಡುತ್ತಿದ್ದಾಗ್ಗೂ ಯಾವದೊಂದು ಪ್ರಾಣಿಯು, ತನ್ನ ಸಮೀಪದಲ್ಲಿದ್ದ ಎರಡನೇ ಮತ್ತೊಂದು ಜಾತಿಯ ಪ್ರಾಣಿಯ ಅನುಕರಣ ಮಾಡಿರುವದೇನು? ಕಾಲಿನಿಂದ ತನ್ನ ಮೋರೆಯನ್ನು ತೊಳೆದುಕೊಳ್ಳುವ ಬೆಕ್ಕನ್ನು ನೋಡಿ, ಕುದುರೆಯು ಅದರಂತೆ ಮಾಡಲಿಕ್ಕೆ ಪ್ರಯತ್ನ ಮಾಡಿರುವದೇನು? ಇದೇ ಮೇರೆಗೆ ಅರಣ್ಯವಾಸಿಗಳಾದ ಪ್ರಾಣಿಗಳು, ಒಂದನ್ನೊಂದು ಅನುಕರಿಸುತ್ತವೇನು? ಇಲ್ಲ! ಇಲ್ಲ! ಅನುಕರಣವು, ಮನುಷ್ಯೇತರ ಪ್ರಾಣಿಗಳ ಸ್ವಪ್ನದಲ್ಲಿ ಕೂಡ ಇಲ್ಲ!! ಇನ್ನು, ಇತ್ತ ಮನುಷ್ಯ ಪ್ರಾಣಿಗಳ ಕಡೆಗೆ ತುಸು ತಿರುಗಿ ನೋಡಿರಿ. ನೀರಿನಲ್ಲಿ ಕಪ್ಪೆ ಮೊದಲಾದ ಜಲಚರ ಪ್ರಾಣಿಗಳು, ಕೈಕಾಲುಗಳನ್ನಾಡಿಸಿ ಈಸುವದನ್ನು ಮನುಷ್ಯನು ಕಂಡು, ಅದರಂತೆ ಅನುಕರಣ ಮಾಡಿ, ನೀರಿನ ಮೇಲೆ ಪ್ರವಾಸ ಮಾಡಲುಪಕ್ರಮಿಸಿದನು! ಅರ್ಥಾತ್ ಈಸಲಿಕ್ಕೂ ಹಡಗಗಳನ್ನು ನಡೆಯಿಸಲಿಕ್ಕೂ ಕಲಿತನು. ಇದೇ ಮೇರೆಗೆ ಹವೆಯಲ್ಲಿ ಪಕ್ಷಿಗಳು ಹಾರಾಡುವದನ್ನು ನೋಡಿ ಅದರ ಅನುಕರಣ ಮಾಡುತ್ತ ಮಾಡುತ್ತ ಅಂತರಿಕ್ಷದಲ್ಲಿ ಸುರಕ್ಷಿತವಾಗಿ ಸಂಚಾರ ಮಾಡುವಂತ್ಹ ವಿಮಾನವನ್ನು ರಚಿಸಿದನು! ಅಹಹ!! ಅನುಕರಣ ಸಾಮರ್ಥ್ಯವು ಎಷ್ಟು ಉತ್ಕ್ರಾಂತಿಜನಕವಾದದ್ದು!!! ಇರಲಿ. ಸಾರಾಂಶ– ದೇವರು ಮನುಷ್ಯ ಪ್ರಾಣಿಯಲ್ಲಿ ಅನುಕರಣ ಸಾಮರ್ಥ್ಯವನ್ನು ಬಲವತ್ತರವಾಗಿಟ್ಟಿದ್ದಾನೆ. ಅರ್ಥಾತ್ ಅದು ಅವನ ಹುಟ್ಟುಗುಣವೇ ಆಗಿರುತ್ತದೆ. ಮನುಷ್ಯನು ಹುಟ್ಟಿದಂದಿನಿಂದಲೇ ಅನುಕರಣ ಮಾಡಲಿಕ್ಕೆ ಪ್ರಾರಂಭಿಸುತ್ತಾನೆ. ಬಾಲಕರು ಕೈಯಲ್ಲಿ ಕೋಲು ಹಿಡಿದುಕೊಂಡು, ಅಜ್ಜನಂತೆ ಬಗ್ಗಿ ನಡೆಯಲಿಕ್ಕೆ ಪ್ರಯತ್ನ ಮಾಡುವದೂ ಬಾಲಕಿಯರು ಗೊಂಬೇ ಲಗ್ನ ಮಾಡುವದೂ ಅತ್ತೆ ಸೊಸೆಯಾಗಿ ಆಡುವದೂ ಇವೇ ಮೊದಲಾದವುಗಳನ್ನು ಪ್ರತಿನಿತ್ಯದಲ್ಲೂ ನೋಡುತ್ತೇವೆ. ಇವೆಲ್ಲವುಗಳಿಂದ ಮನುಷ್ಯನಲ್ಲಿ ಅನುಕರಣ ಸಾಮರ್ಥ್ಯವು, ನೈಸರ್ಗಿಕವಾದದ್ದೆಂಬುವದು ಧಾರಾಳವಾಗಿ ಕಂಡು ಬರುತ್ತಿದೆ.

ಮನುಷ್ಯನು ಈ ಸಾಮರ್ಥ್ಯದ ಉಪಯೋಗವನ್ನು ಹ್ಯಾಗೆ ಮಾಡಿಕೊಳ್ಳುವನೋ ಅದರಂತೆ ಫಲವು ದೊರಕುತ್ತದೆ. ಬೆಂಕಿಯನ್ನು ಅಡಿಗೆ ಮಾಡಲಿಕ್ಕೆ ಉಪಯೋಗಿಸಿಕೊಂಡು, ಪಂಚಪಕ್ವಾನ್ನಗಳನ್ನು ಸಿದ್ಧ ಪಡಿಸಲಿಕ್ಕೆ ಬರುವಂತೆ ಅದೇ ಬೆಂಕಿಯಿಂದ ಮನೆಯನ್ನು ಸುಟ್ಟುಕೊಳ್ಳಲಿಕ್ಕೂ ಬರುತ್ತದೆ! ಅನುಕರಣ ಸಾಮರ್ಥ್ಯದ ಪರಿಣಾಮವಾದರೂ ಹೀಗೆಯೇ ಇದೆ. ಆದುದರಿಂದ ಮನುಷ್ಯನು, ಈ ಅನುಕರಣ ಸಾಮರ್ಥ್ಯದ ದುರುಪಯೋಗವನ್ನು ಮಾಡಿಕೊಂಡು ದುಷ್ಪರಿಣಾಮಗಳಿಗೆ ಗುರಿಯಾದರೆ, ಈ ದೋಷಕ್ಕೆ ಅವನೇ ಹೊಣೆಗಾರನು! ಆದರೆ ಬಾಲಕರ ಅನುಕರಣ ಸಾಮರ್ಥ್ಯದ ದುರುಪಯೋಗವಾಗುತ್ತಿದ್ದಲ್ಲಿ ಮಾತ್ರ ಈ ದೋಷಕ್ಕೆ ಆ ಚಿಕ್ಕ ಮಕ್ಕಳು ಹೊಣೆಗಾರರಾಗದೆ, ಅವರ (ಬಾಲಕರ) ಗುರುಗಳೂ ಹಿರಿಯರೂ ಗುರಿಯಾಗುವರೆಂಬುವದು ಸ್ಪಷ್ಟವದೆ. ಆ ಬಾಲಕರಲ್ಲಿದ್ದ ನೈಸರ್ಗಿಕವಾದ ಅನುಕರಣ ಸಾಮರ್ಥ್ಯವು, ತನಗೆ ದೊರೆತಂಥ ಪರಿಸ್ಥಿತಿಯನ್ನು (ಅದು ಕೆಟ್ಟದೇ ಇರಲಿ, ಚಲೋದೇ ಇರಲಿ.) ಎಡೆಬಿಡದೆ ಅನುಕರಣ ಮಾಡುತ್ತಿರುತ್ತದೆ. ಈ ನೈಸರ್ಗಿಕ ಕಾರ್ಯವನ್ನು ತಡೆಯುವದು ಯಾರಿಂದಲೂ ಆಗದು. ಇದನ್ನು ಯೋಗ್ಯ ಮಾರ್ಗಕ್ಕೆ ಹಚ್ಚುವದು ಮಾತ್ರ ಗುರು ಹಿರಿಯರ ಕೈಯಲ್ಲಿಯುಂಟು.

ಮೇಲಿನ ವಿವರಣೆಯ ಮಥಿತಾರ್ಥವೇನೆಂದರೆ.—ಬಾಲಕನು ಪ್ರೌಢನಾಗುವವರೆಗೆ ಅರ್ಥಾತ್ ಅವನ ನಿರ್ಣಯ ಶಕ್ತಿಯು ಪರಿಪಕ್ವವಾಗುವವರೆಗೆ, ಅವನಲ್ಲಿದ್ದ ಅನುಕರಣ ಸಾಮರ್ಥ್ಯವನ್ನು ಸನ್ಮಾರ್ಗದಲ್ಲಿ ಉಪಯೋಗಿಸುವದು ಗುರುಹಿರಿಯರ ಕರ್ತವ್ಯವುಂಟು. ಪ್ರೌಢವಯಸ್ಕನಾದ ಬಳಿಕ ಮಾತ್ರ, ಮುಂದಿನ ತನ್ನ ಆಯುಷ್ಯಕ್ರಮಣಕ್ಕೆಲ್ಲ ಅವನೇ ಹೊಣೆಗಾರನಾಗುತ್ತಾನೆ.

ಇನ್ನು ನಮ್ಮ ಪಾಠಕಮಹಾಶಯರಾದ ಗುರುಗಳ (ಶಿಕ್ಷಕರ) ಕರ್ತವ್ಯವನ್ನು ಸಂಕ್ಷೇಪವಾಗಿ ಉಲ್ಲೇಖಿಸಿ, ಮುಂದೆ ಸಾಗುವಾ. ವಿದ್ಯಾರ್ಥಿಗಳ ಅನುಕರಣ ಸಾಮರ್ಥ್ಯದ ಸದುಪಯೋಗವಾಗಬೇಕಾದರೆ ಅವರ ಪರಿಸ್ಥಿತಿಯು ಉದಾತ್ತವಾದದ್ದೂ ಪವಿತ್ರವಾದದ್ದೂ ಸನ್ಮಾರ್ಗದರ್ಶಕವಾದದ್ದೂ ಇರಲೇಬೇಕು. ಇಂತಹ ಪರಿಸ್ಥಿತಿಯನ್ನುಂಟು ಮಾಡುವದಕ್ಕೆ ಮಾದರಿಗಾಗಿ ಕೆಲವು ಪ್ರಯತ್ನಗಳನ್ನು ಇಲ್ಲಿ ವಿವರಿಸುತ್ತೇನೆ.

(೧) ಮಹಾಭಾರತ ರಾಮಾಯಣಗಳಲ್ಲಿ ನೀತಿ ಕಥೆಗಳು ಹೇರಳವಾಗಿವೆ. ಅವುಗಳನ್ನು ಸುಲಭರೂಪದಿಂದ, ವರ್ಗದಲ್ಲಿ (ಕ್ಲಾಸಿನಲ್ಲಿ) ಪ್ರಸಂಗಾನುಸಾರವಾಗಿ ವಿದ್ಯಾರ್ಥಿಗಳ ಮುಂದಿಡತಕ್ಕದ್ದು. ಇದೂ ಅಲ್ಲದೆ ಕ್ರಮಿಕ ಪುಸ್ತಕಗಳೊಳಗಿನ ಮಹಾ ಪುರುಷರ ಚರಿತ್ರೆಗಳನ್ನೂ ಇನ್ನಿತರ ಚರಿತ್ರಗ್ರಂಥಗಳನ್ನೂ ಗುರುವು (ಶಿಕ್ಷಕನು) ಸೂಕ್ಷ್ಮ ರೀತಿಯಿಂದ ಪರಿಶೀಲನ ಮಾಡಿ, ಆ ಚರಿತ್ರನಾಯಕರ ದಿಗ್ವಿಜಯದ ಮೂಲ ಕಾರಣಗಳನ್ನು ಕಂಡು ಹಿಡಿದು, ಬಳಿಕ ಅವುಗಳನ್ನು ವಿದ್ಯಾರ್ಥಿಗಳ ಮನಸ್ಸಿನಲ್ಲಿ ನೆಡುವಂತೆ ಹೇಳತಕ್ಕದ್ದು. ಇಷ್ಟೇ ಅಲ್ಲ, ಆ ಮಹನೀಯರ ಪವಿತ್ರ ಆಚರಣೆಯು ವಿದ್ಯಾರ್ಥಿಗಳ ಕೃತಿಯಲ್ಲಿ ಕ್ರಮ ಕ್ರಮದಿಂದಾದರೂ ಬರುವಂತೆ ಮೇಲಿಂದ ಮೇಲೆ ಉಪದೇಶಿಸುತ್ತಿರಬೇಕು.

(೨) ವಿದ್ಯಾರ್ಥಿಗಳ ಜತೆಗಾರರು ಕೆಟ್ಟ ಹುಡುಗರಿರದಂತೆ ಎಚ್ಚರ ಪಡತಕ್ಕದ್ದು.

(೩) ಮಹಾಪುರುಷರ ದರ್ಶನಕ್ಕೆ ಅನುಕೂಲ ಸಮಯವು ಪ್ರಾಪ್ತವಾದರೆ ಆ ಲಾಭವು ವಿದ್ಯಾರ್ಥಿಗಳಿಗೆ ಅವಶ್ಯವಾಗಿ ದೊರಕುವಂತೆ ಏರ್ಪಾಟು ಮಾಡತಕ್ಕದ್ದು.

(೪) ಶಿಕ್ಷಕನ ತನ್ನ ಸ್ವಂತ ಪವಿತ್ರ ಆಚರಣೆಯು ವಿದ್ಯಾರ್ಥಿಗಳಿಗೆ ಆದರ್ಶರೂಪವಾಗಿರತಕ್ಕದ್ದು.

ಇನ್ನು, ಪ್ರೌಢ ಮನುಷ್ಯನು ತನ್ನ ಅನುಕರಣಸಾಮರ್ಥ್ಯದ ಸದುಪಯೋಗವನ್ನು ಹ್ಯಾಗೆ ಮಾಡಿಕೊಳ್ಳಬೇಕೆಂಬದರ ಬಗ್ಗೆ ವಿಚಾರಿಸುವಾ. ಪ್ರತಿಯೊಬ್ಬ ಮನುಷ್ಯನು, ದೇವರನ್ನು ಆದರ್ಶರೂಪವಾಗಿಟ್ಟುಕೊಳ್ಳುವದು ಅರ್ಥಾತ್ ತಾನು ದೇವರಾಗುವದು, ಈ ಲೇಖದ ಮುಖ್ಯೋದ್ದೇಶವಾಗಿರುತ್ತದೆ. ವಾಚಕರೇ! ಈ ವಾಕ್ಯವು ನಿಮ್ಮ ದೃಷ್ಟಿಗೆ ಬಿದ್ದ ಕೂಡಲೆ ನೀವು ಬೆರಗಾಗಿ ನಿಲ್ಲಬಹುದು! ಆದರೆ ಇದರಲ್ಲಿ ಆಶ್ಚರ್ಯಪಡತಕ್ಕಂಥಾದ್ದೇನೂ ಇಲ್ಲೆಂಬುವದು ಮುಂದಿನ ವಿವರಣೆಯಿಂದ ನಿಮಗೆ ತಾನೇ ಕಂಡು ಬರುವದು. ಇರಲಿ.

ದೇವರನ್ನು ಆದರ್ಶರೂಪವಾಗಿಟ್ಟುಕೊಳ್ಳೋಣವೆಂದು ಹೇಳುವ ಮೊದಲು, ಒಂದು ದೃಷ್ಟಾಂತವನ್ನು ಕೊಟ್ಟುಬಿಟ್ಟರೆ ಮುಂದಿನ ವಿವರಣೆಯೆಲ್ಲ ಸುಲಭವಾಗಿ ತಿಳಿಯುವದು. ನಾವು ಧಾರವಾಡದಿಂದ ಕಾಶೀ

ಪಟ್ಟಣಕ್ಕೆ ಹೋಗಲು ನಿಶ್ಚಯಿಸಿಕೊಂಡಿರುತ್ತೇವೆಂದಿಟ್ಟುಕೊಳ್ಳೋಣ. ಆಗ ಬೆಳಗಾವ, ಸಾತಾರಾ, ಪುಣೆ, ಕಲ್ಯಾಣ, ನಾಶೀಕ ಮೊದಲಾದ ಸ್ಥಳಗಳಲ್ಲಿ ವಸ್ತಿ ಮಾಡುತ್ತ ಸಾಗಿ ಕೊನೆಗೆ ಕಾಶೀಪಟ್ಟಣವನ್ನು ಸೇರುವೆವು. ಈ ಮಾರ್ಗಕ್ರಮಣದಂತೆಯೇ ನಮ್ಮ ಆದರ್ಶದ ರಚನೆ ಇರುತ್ತದೆ. ದೇವರನ್ನು ಆದರ್ಶರೂಪವಾಗಿಟ್ಟುಕೊಳ್ಳುವದು ಮುಖ್ಯ ಧ್ಯೇಯವೆಂಬುವದೇನೋ ನಿಜ; ಆದರೆ ಕಾಶಿಗೆ ಹೋಗುವದು ನಮ್ಮ ಮುಖ್ಯೋದ್ದೇಶವಿದ್ದಾಗ್ಗೂ ನಡುನಡುವೆ ವಸ್ತಿಮಾಡುವದು ಹ್ಯಾಗೆ ಅಪರಿಹಾರ್ಯವಾದದ್ದೋ ಹಾಗೆಯೇ ಮಹಾಪುರುಷರನ್ನು ಆದರ್ಶರೂಪವನಾಗಿಟ್ಟುಕೊಳ್ಳುತ್ತ ಸಾಗುವದು ನೈಸರ್ಗಿಕವಾದದ್ದು. ಹೀಗೆ ಮಾಡದ ವಿನಹ ದೇವರನ್ನು (ಮುಖ್ಯಧ್ಯೇಯವನ್ನು) ಆದರ್ಶರೂಪವಾಗಿಟ್ಟುಕೊಳ್ಳಲು ಅರ್ಹನಾಗಲಾರನು! ಇದೇ ತತ್ವವನ್ನು ಇನ್ನೊಂದು ವಿಧವಾಗಿಯೂ ವಿವರಿಸಬಹುದು. ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣಪರಮಾತ್ಮನು ಹೀಗೆ ಹೇಳಿದ್ದಾನೆ—"ಜಗತ್ತಿನೊಳಗೆ ಯಾವ ಯಾವ ಪದಾರ್ಥಗಳಲ್ಲಿ ತೇಜಸ್ಸು (ಸದ್ಗುಣವು) ವಾಸಮಾಡಿರುವದೋ ಆ ಆಸ್ಥಳಗಳಲ್ಲಿ ನನ್ನ ಅಂಶವಿರುತ್ತದೆಂದು ತಿಳಿ." ಆದುದರಿಂದ ನಾವು ಪ್ರತಿಯೊಬ್ಬ ಮಹಾಪುರುಷನ ಸದ್ಗುಣಗಳನ್ನು ಅನುಕರಣಮಾಡಬೇಕಿಷ್ಟೇ ಅಲ್ಲ. ಇರುವೆ, ಜೇಡಹುಳ ಮೊದಲಾದ ಕ್ಷುದ್ರಪ್ರಾಣಿಗಳಲ್ಲಿ ಸಹ ತೋರಿಬರುವ ಉದ್ಯೋಗ ಪ್ರೀತಿ, ದೃಢನಿಶ್ಚಯ ಮುಂತಾದ ಸದ್ಗುಣಗಳನ್ನು (ಅರ್ಥಾತ್ ದೇವತಾಂಶವನ್ನು ಅನುಕರಣಮಾಡಲಿಕ್ಕೇಬೇಕು. ಹೀಗೆ ನಾವು ಪ್ರತಿಯೊಂದು ಪದಾರ್ಥದೊಳಗಿನ ದೇವತಾಂಶವನ್ನು (ಸದ್ಗುಣವನ್ನು) ಸ್ವೀಕರಿಸುತ್ತ ಸಾಗಿದರೆ ನಮ್ಮಲ್ಲಿ ದೇವತಾಂಶವು ಅಧಿಕವಾಗುವದು! ಕೂಡಲೆ ಅಂತಹ ಸರ್ವಗುಣಸಂಪನ್ನವಾದ (ಅಧಿಕ ದೇವತಾಂಶವುಳ್ಳ) ಮಹಾತ್ಮನ ಕಡೆಗೆ ಸಮಸ್ತ ಜನರ ಮನಸ್ಸುಗಳು ವೇಧಿಸಲ್ಪಡುವವು!! ಆಗ ಆ ಮಹಾನುಭಾವನಿಗೆ "ಅವತಾರೀಪುರುಷ" ನೆಂಬ ವಿಶೇಷಣವು ಹಚ್ಚಲ್ಪಡುವದು!!! ರಾಮ, ಕೃಷ್ಣ, ಪರಶುರಾಮ, ಬುದ್ಧ, ಶಂಕರಾಚಾರ್ಯ, ಮಧ್ವಾಚಾರ್ಯ, ಮಹಮ್ಮದ, ಏಸುಕ್ರಿಸ್ತ ಮೊದ

---

(೧) यद्यद्विभूतिमत्सत्वं श्रीमदूर्जितमेववा ॥
तत्तदेवावगच्छत्वं ममतेजोंशसंभवम् ॥ ४१ ॥
(श्री. भ गी अ. १०)

ಲಾದ ಮಹಾಪುರುಷರಿಗೆ ನಾವು ಅವತಾರೀಪುರುಷರೆಂದು ಕರೆಯುತ್ತೇವೆ. ಇದು ಯಥಾಯೋಗ್ಯವೇ ಅದೆ; ಯಾಕಂದರೆ ಆ ಮಹನೀಯರು, ದೇವರನ್ನು ಆದರ್ಶರೂಪವಾಗಿಟ್ಟುಕೊಂಡು ಅವನ ತೇಜೋರಾಶಿಯನ್ನು ತಮ್ಮಲ್ಲಿ ಬರಮಾಡಿಕೊಂಡಿದ್ದರು! ಈ ಒಳಗುಟ್ಟು, ಕೆಲವು ಮೂಢಜನರಿಗೆ ತಿಳಿಯುವದಿಲ್ಲವಾದ್ದರಿಂದ ಇವರು, ಆ ಮಹಾಪುರುಷರಿಗೆ ಅವತಾರೀ ಪುರುಷರೆಂದು ಕರೆಯಲಿಕ್ಕೆ ಹಿಂಜರೆಯುತ್ತಾರೆ. ಎಲೈ ಮೂಢಜನರೇ! ನೀವು ಎನ್ಲಾರ್ಜಮಾಡುವದನ್ನು (ಪ್ರತಿರೂಪಿಸುವದನ್ನು) ಅಥವಾ ನಕಾಶ ತೆಗೆಯುವದನ್ನು ನೋಡಿರುತ್ತೀರೇನು? ನೋಡಿದ್ದರೆ ಇವರ ದೃಷ್ಟಾಂತವನ್ನು ಕೊಟ್ಟು ನಿಮ್ಮ ಅಜ್ಞಾನವನ್ನು ಹೋಗಲಾಡಿಸುವೆನು. ಅದು ಹೇಗಂದರೆ:-ಒಬ್ಬನು ಶಿವಾಜಿಯ ಚಿಕ್ಕ ಫೋಟೋವನ್ನು ಕೈಯಲ್ಲಿ ಹಿಡಿದುಕೊಂಡು ಅದನ್ನು ದೊಡ್ಡದಾಗಿ ಪ್ರತಿರೂಪಿಸಬೇಕೆಂಬ ಆಲೋಚನೆಯಲ್ಲಿದ್ದಾನೆಂದಿಟ್ಟುಕೊಳ್ಳೋಣ. ಆಗ ಅವನು, ಆ ಚಿಕ್ಕ ಫೋಟೋದ ಮೇಲೆ ಸೀಸಕಡ್ಡಿಯಿಂದ ವಿವಿಕ್ಷಿತ ಚೌಕುಮನೆಗಳನ್ನು ಮಾಡಿಕೊಳ್ಳುವನು. ಬಳಿಕ ಬೇರೊಂದು ವಿಸ್ತಾರವಾದ ಕಾಗದವನ್ನು ತಂದು, ಅದರ ಮೇಲೆ ಆ ವಿವಕ್ಷಿತ ಚೌಕುಮನೆಗಳನ್ನು ದೊಡ್ಡ ಪ್ರಮಾಣದಿಂದ ಮಾಡಿಕೊಳ್ಳುವನು. ತದನಂತರ ಮೂಲಫೋಟೋದಲ್ಲಿ ಯಾವ ರೇಖೆಯ ಹತ್ತರ ಯಾವ ಅವಯವವು ಬಂದಿರುವದೋ, ಈ ವಿಸ್ತಾರವಾದ ಕಾಗದದಲ್ಲಿ ಅದೇ ರೇಖೆಯ ಹತ್ತರ ಅದೇ ಅವಯುವವು ಬರುವಂತೆ ತೆಗೆಯುತ್ತ (ಬರೆಯುತ್ತ) ಸಾಗುವನು. ಹೆಚ್ಚು ಮಾತೇಕೆ? ಆ ಸಣ್ಣ ಫೋಟೋದೊಳಗಿದ್ದಂತೆಯೇ ದೊಡ್ಡ ಹಾಳೆಯಮೇಲೆ ಕಣ್ಣೊಳಗೆ ಕಣ್ಣಿಟ್ಟು ಸೂಕ್ಷ್ಮ ರೀತಿಯಿಂದ ಅನುಕರಣ ಮಾಡುತ್ತ ಸಾಗುವನು. ಈ ಕೃತಿಯು ಮುಗಿದಕೂಡಲೇ ಆ ದೊಡ್ಡ ಕಾಗದದಮೇಲೆ ಶಿವಾಜಿಯು ದೃಷ್ಟಿಗೆ ಬೀಳುವನು! ಅಹಹ! ಆ ಚಿಕ್ಕ ಫೋಟೋದೊಳಗಿದ್ದ ಶಿವಾಜಿಯಂತಹ ಮತ್ತೊಬ್ಬ ಶಿವಾಜಿಯು ಈ ದೊಡ್ಡ ಹಾಳೆಯಮೇಲೆ ಹೇಗೆ ಬಂದನು? ಓಹೋ! ತುಸು ಹೊತ್ತಿನಲ್ಲಿ ಒಬ್ಬ ಸಣ್ಣ ಶಿವಾಜಿಯೂ ಒಬ್ಬ ದೊಡ್ಡ ಶಿವಾಜಿಯೂ ಕಾಣಿಸಹತ್ತಿದರಲ್ಲಾ! ಎಲೈ ಮೂಢ ಜನರೇ, ಈ ದೊಡ್ಡ ಕಾಗದದಮೇಲೆ ಅನುಕರಣಮಾಡಿ ತೆಗೆದಂತಹ ಈ ಚಿತ್ರಕ್ಕೆ ನೀವು ಶಿವಾಜಿ ಎಂದು ಕರೆಯಬೇಕಾಯಿತಲ್ಲಾ?; ಯಾಕಂದರೆ, ಆ ಚಿಕ್ಕ ಫೋಟೋದೊಳಗಿದ್ದಂತೆಯೇ ಸಾಕ್ಷಾತ್ ಮೂರ್ತಿಯು,

ಈ ದೊಡ್ಡ ಕಾಗದದ ಮೇಲೆ ಮೂಡಿರುತ್ತದೆ! ಇದೇ ಮೇರೆಗೆ ದೇವರನ್ನು ಮುಂದಿಟ್ಟುಕೊಂಡು, ಅವನ ತೇಜಸ್ಸನ್ನು (ಸದ್ಗುಣಗಳನ್ನು) ಅನುಕರಣ ಮಾಡಿಕೊಂಡಂಥ (ತಮ್ಮ ಹೃದಯದಲ್ಲಿ ಪ್ರತಿರೂಪಿಸಿಕೊಂಡಂಥ) ಮಹನೀಯರನ್ನು ದೇವರೆಂದು ಕರೆಯಲಿಕ್ಕೆ ರವಷ್ಟಾದರೂ ಸಂದೇಹವಿಲ್ಲ. ಆ ಸತ್ಪುರುಷರು ಸಾಕ್ಷಾತ್ ದೇವರೇ ಹೊರ್ತು ಮತ್ತಿನ್ನಾರೂ ಅಲ್ಲ! ಇಂತಹ ಅವತಾರೀ ಪುರುಷರಿಗೆ ಅನಂತ ಪ್ರಣಾಮಗಳಿರಲಿ!!!

ಇದುವರೆಗೂ ವಿವರಿಸಿದ ಅನುಕರಣ ಸಾಮರ್ಥ್ಯದ ಮಹಿಮೆಯು, ನಮ್ಮ ಪ್ರಾಚೀನ ಆರ್ಯತತ್ವಜ್ಞಾನಿಗಳಿಗೆ (ಋಷಿಗಳಿಗೆ) ತುಂಬಾ ತಿಳಿದಿದ್ದಿತು. ಇಷ್ಟೇ ಅಲ್ಲ ಅವರು, ಆ ಸಾಮರ್ಥ್ಯದ ಸದುಪಯೋಗ ಮಾಡಿಕೊಳ್ಳುವ ಮಾರ್ಗವನ್ನೂ ಕಂಡು ಹಿಡಿದಿರುವರು. ಅಂತಹ ಮಾರ್ಗವು ಯಾವುದೆಂದರೆ ಮಹಾಪುರುಷರ ಜಯಂತಿಯೇ ಸರಿ! ರಾಮಜಯಂತಿ, ಹನುಮಜ್ಜಯಂತಿ, ಪರಶುರಾಮಜಯಂತಿ, ನೃಸಿಂಹಜಯಂತಿ, ಕೃಷ್ಣಜಯಂತಿ, ದತ್ತಜಯಂತಿ ಇವೇ ಮೊದಲಾದ ಜಯಂತಿಗಳಲ್ಲಿ ಆ ಆ ಮಹಾಪುರುಷರ ಪುಣ್ಯಶ್ಲೋಕೀ ಚರಿತ್ರೆಗಳನ್ನು ಕೀರ್ತನರೂಪದಿಂದಾಗಲಿ ಪುರಾಣರೂಪದಿಂದಾಗಲಿ ಜನರಮುಂದೆ ಇಡುವರು. ಜನರು ಆ ಅವತಾರೀಪುರುಷರ ಚರಿತ್ರೆಗಳೊಳಗಿನ ತೇಜಸ್ಸನ್ನು (ಸದ್ಗುಣಗಳನ್ನು) ಅನುಕರಣ ಮಾಡುವರು. ಇದೇ ಮಹಾಪುರುಷರ ಜಯಂತಿಯ ಒಳಗುಟ್ಟು! ವಾಚಕರೇ! ಸಾಂಪ್ರತಕಾಲದಲ್ಲಿ ಈ ವಿಚಾರದ ಕಡೆಗೆ ಯಾರಾದರೂ ಗಮನಿಸುತ್ತಾರೇನು? ಇಲ್ಲ! ಇಲ್ಲ! ಜನರು ಪ್ರತಿವರ್ಷ ಮಹಾಪುರುಷರ ಅನೇಕ ಜಯಂತಿಗಳನ್ನು ಮಾಡುತ್ತಿರುತ್ತಾರೆ; ಆದರೆ ಆ ಆ ಜಯಂತಿಗಳ ಪವಿತ್ರ ದಿವಸಗಳಲ್ಲಿ ಅವರು ಮಾಡುವ ಕೃತ್ಯಗಳನ್ನು ನೋಡಿದರೆ, ಜಯಂತಿಯ ಮೂಲ ಉದ್ದೇಶವನ್ನು ಮರೆತುಬಿಟ್ಟಂತೆ ತೋರುತ್ತದೆ. ಉದಾಹರಣಾರ್ಥವಾಗಿ ರಾಮಜಯಂತಿಯನ್ನಿಟ್ಟುಕೊಳ್ಳೋಣ. ಆ ರಾಮನವಮಿಯ ದಿವಸದಲ್ಲಿ ರಾಮಚಂದ್ರನ ದೇವಾಲಯಕ್ಕೆ ಹೋಗಿ ನಮಸ್ಕಾರ ಹಾಕುವದೂ ಕಾಯಿ ಒಡಿಸುವದೂ ರಥೋತ್ಸವವಾಗುತ್ತಿದ್ದರೆ ರಥ ಎಳೆಯುವದೂ ಇಷ್ಟೇ ತಮ್ಮ ಇತಿಕರ್ತವ್ಯತೆಯೆಂದು ತಿಳಿಯುತ್ತಾರೆ. ರಾಮಚಂದ್ರನ ಚರಿತ್ರೆಯನ್ನು ಕೇಳಿ ಅವನು ಹಾಕಿ ಕೊಟ್ಟ ಪವಿತ್ರ ನಡಾವಳಿಯನ್ನು ಅನುಕರಣ ಮಾಡಬೇಕೆಂಬ ಬುದ್ಧಿಯು ಯಾರಲ್ಲಿಯೂ

ತೋರುವದಿಲ್ಲ. ನಾವು ರಾಮಚಂದ್ರನ ಪವಿತ್ರ ಆಚರಣೆಯನ್ನು ಅನುಕರಣ ಮಾಡದೆ, ಕೇವಲ ಅವನಿಗೆ ಒಂದು ಕಾಯಿ ಬಿಟ್ಟು ಇಪ್ಪತ್ತು ಕಾಯಿಗಳನ್ನು ಒಡಿಸಿದರೂ ೨|೩ ಮೈಲಿನವರೆಗೆ ಅವನ ರಥವನ್ನೆಳೆದರೂ ಆ ಜಗಚ್ಚಾಲಕನು (ರಾಮಚಂದ್ರನು) ನಮ್ಮ ಕಡೆಗೆ ಕೃಪಾದೃಷ್ಟಿಯಿಂದ ಇಣಕಿ ಸಹ ನೋಡಲಾರನು! ಅರ್ಥಾತ್ ಎಳ್ಳಷ್ಟಾದರೂ ಪುಣ್ಯವು ದೊರಕಲಾರದು! ಯಾವನು ರಾಮಚಂದ್ರನ ಪವಿತ್ರ ಆಚರಣೆಯನ್ನು ತನ್ನ ಆಚರಣೆಯಲ್ಲಿ ತರುವನೋ ಅವನೇ ನಿಜವಾದ ರಾಮಭಕ್ತನು!!! ಕೋಟ್ಯಾನು ಕೋಟಿ ರಾಮನಾಮಗಳನ್ನು ಕೇವಲ ಜಪಿಸುತ್ತ ಕುಳಿತುಕೊಂಡಾಕ್ಷಣಕ್ಕೆ ಅವನು ರಾಮಭಕ್ತನಾಗಲಾರನು! ಇದು ಪೂರ್ಣ ಜ್ಞಾಪಕದಲ್ಲಿರಲಿ.

ಇದುವರೆಗೆ ಆಗಿ ಹೋದ ಮಹಾಪುರುಷರೆಲ್ಲರೂ ದೇವರನ್ನಾಗಲಿ ಮಹಾಪುರುಷರನ್ನಾಗಲಿ ಆದರ್ಶವಾಗಿಟ್ಟುಕೊಂಡು ತಮ್ಮ ಯೋಗ್ಯತೆಯನ್ನು ಬೆಳೆಯಿಸಿಕೊಂಡಿದ್ದಾರೆ. ಇಂತಹ ಉದಾಹರಣೆಗಳು ಪುರಾಣ ಇತಿಹಾಸಗಳಲ್ಲಿ ವೆಗ್ಗಳವಾಗಿ ದೊರಕುವವು! ಪ್ರತಿಯೊಬ್ಬ ಮನುಷ್ಯನು ತನ್ನಲ್ಲಿದ್ದ ದೋಷಗಳನ್ನು (ತಾಮಸವೃತ್ತಿಯನ್ನು) ತೆಗೆದು ಹಾಕುತ್ತಲೂ ಮಹಾಪುರುಷರ ಪವಿತ್ರ ಆಚರಣೆಯನ್ನು ಅನುಕರಣ ಮಾಡುತ್ತಲೂ ಸಾಗಿದರೆ ತನಗೆ ತಿಳಿಯದಂತೆ ತನ್ನ ಆಚರಣೆಯು ಉದಾತ್ತವಾದದ್ದಾಗಿರುತ್ತದೆ! "नरकरणीकरेतो नरकानारायण होजाय" ಎಂಬ ಸಾಧುರಾಜ ಕಬೀರನ ವಚನವಾದರೂ ಇದೇ ಅರ್ಥವನ್ನೇ ಹೇಳುತ್ತದೆ. ನರಕಾ ನಾರಾಯಣನಾಗುವದು ಸುಲಭಸಾಧ್ಯವಲ್ಲದಿದ್ದರೂ ಕಷ್ಟಸಾಧ್ಯವಿರುತ್ತದೆಂಬ ಮಾತನ್ನು ಯಾರೂ ಮರೆಯಕೂಡದು.

ನಾರಾಯಣ ಶ್ರೀನಿವಾಸ ರಾಜಪುರೋಹಿತ.

ಉಪ್ಪಿನ ಉಪಯೋಗ.

ಕಡಿಮೆ ಬೆಲೆಯುಳ್ಳ, ನಿತ್ಯದ ವ್ಯವಹಾರದಲ್ಲಿ ಉಪಯೋಗವಾಗುವ ಪದಾರ್ಥಗಳ ಮಹತ್ವವು ಬಹಳ ಮಾಡಿ ಜನರಿಗೆ ಗೊತ್ತಾಗುವದಿಲ್ಲ. ಇಂಥ ಪದಾರ್ಥಗಳಲ್ಲಿಯೇ ಉಪ್ಪು ಇದೊಂದು ಮಹತ್ವದ ಪದಾರ್ಥವಾ

ಗಿದೆ. ಇದರ ಔಷಧೀಯ ಉಪಯೋಗವು ಬಹು ಜನರಿಗೆ ಗೊತ್ತಿಲ್ಲದ್ದರಿಂದ ವ್ಯರ್ಥವಾಗಿ ಸಣ್ಣ ಪುಟ್ಟ ಬೇನೆಗಳ ಸಲುವಾಗಿ ವೈದ್ಯರ ಬಳಿಗೆ ಹೋಗಬೇಕಾಗುತ್ತದೆ. ಕಾರಣ ಸ್ವಾನುಭವದಿಂದ ಗೊತ್ತಾದ ಉಪ್ಪಿನ ಕೆಲವು ಔಷಧೀಯ ಉಪಯೋಗಗಳನ್ನು ಶಾಲಾಪತ್ರಿಕದ ವಾಚಕರಿಗಾಗಿ ಬರೆದು ಕಳುಸಿದ್ದೇನೆ:—

೧. ತ್ವಚೆಯವಿಕಾರ:—ಖಜ್ಜಿ, ಗಜಕರ್ಣದ ಆರಂಭ, ಗಾದಿಗಳೇಳೋಣ, ಸಣ್ಣ ಸಣ್ಣ ಪಕ್ಕೆಗಳು (ಗುಳ್ಳೆಗಳು) ಏಳೋಣ ಮುಂತಾದ ವಿಕಾರಗಳ ಮೇಲೆ ಉಪ್ಪಿನ ನೀರು (ಒಂದು ಭಾಗ ಉಪ್ಪು, ಇಪ್ಪತ್ತು ಭಾಗ ನೀರು) ವಿಕಾರವಶವಾದ ಭಾಗದ ಮೇಲೆ ಒಳಿತಾಗಿ ತಿಕ್ಕಬೇಕು; ಅಂದರೆ ತೀವ್ರವಾಗಿ ಗುಣವಾಗುವದು.

೨. ಬದ್ಧಕೋಷ್ಠ:—ಪಂಚಪಾತ್ರೆ ತುಂಬ ತಣ್ಣೀರಿನಲ್ಲಿ ಒಂದು ಚಮಚೆ ತುಂಬ ಉಪ್ಪು ಹಾಕಿ, ಚನ್ನಾಗಿ ಅಲ್ಲಾಡಿಸಿ, ದಿನಾಲು ಪ್ರಾತಃಕಾಲಕ್ಕೆ ಒಮ್ಮೆ ಮಾತ್ರ ತೆಗೆದುಕೊಳ್ಳಬೇಕು. ಇದರಂತೆ ೧೫।೨೦ ದಿವಸಗಳ ವರೆಗೆ ತಕ್ಕೊಂಡರೆ ಬದ್ಧಕೋಷ್ಠವು ಇಲ್ಲದಂತಾಗುವದು.

೩. ಚೇಳು:—ತುಸು ನೀರಿನಲ್ಲಿ ಸ್ವಲ್ಪ ಉಪ್ಪು ಹಾಕಿ, ಅಲ್ಲಾಡಿಸಿ, ಅದರ ಎರಡೆರಡು ಹನಿಗಳನ್ನು ಕಣ್ಣೊಳಗೆ ಹಾಕಬೇಕು; ಅಂದರೆ ಚೇಳು ತೀವ್ರವಾಗಿ ಇಳಿಯುತ್ತದೆ. ಕೆಲವರು ಈ ನೀರಿನ ಹನಿಗಳನ್ನು ಕಿವಿಗಳಲ್ಲಿ ಹಾಕುತ್ತಾರೆ.

೪. ನೆಗಡಿ:—ಯಾವಕಾಲಕ್ಕೆ ನೆಗಡಿಯಾಗಿ, ಮೂಗಿನೊಳಗಿಂದ ನೀರು ಬರುತ್ತವೆಯೋ, ಮೂಗಿನಸೆಳ್ಳೆಗಳು ಕಟ್ಟಾಗಿ, ಶ್ವಾಸೋಚ್ಛ್ವಾಸಕ್ಕೆ ಪ್ರತಿಬಂಧವಾಗುತ್ತದೆಯೋ, ತಲೆಯು ಭಾರವಾಗಿ ಗಂಟಲು ಉಬ್ಬಿದಂತೆ ಭಾಸವಾಗುತ್ತದೆಯೋ ಅಂಥ ವೇಳೆಯಲ್ಲಿ, ಒಂದು ಸಣ್ಣ ಚಮಚೆಯಷ್ಟು ಉಪ್ಪನ್ನು ಅಚ್ಛೀರು ನೀರಿನಲ್ಲಿ ಹಾಕಿ, ಅಲ್ಲಾಡಿಸಿ ಆ ನೀರಿನಿಂದ ಮೂಗು ಚನ್ನಾಗಿ ತೊಳಕೊಳ್ಳಬೇಕು; ಬಾಯಿ ಮುಕ್ಕಳಿಸಬೇಕು; ಆ ನೀರನ್ನು ಅಂಗೈಯಲ್ಲಿ ತಕ್ಕೊಂಡು ಮೂಸಿನೋಡಬೇಕು; ಅಂದರೆ ನೆಗಡಿಯು ಸ್ವಲ್ಪಾವಕಾಶದಲ್ಲಿಲ್ಲದಂತಾಗುತ್ತದೆ.

೫. ಮೂಲವ್ಯಾಧಿ:—ಮೊಳಿಕೆ ಏಳುವಂಥ ಮೂಲವ್ಯಾಧಿಯಮೇಲೆ, ಉಪ್ಪಿನಂಥ ಯೋಗ್ಯವಾದ ಔಷಧವು ಬೇರೆ ಯಾವದೂ ಇಲ್ಲ. ಮೂಲ

ವ್ಯಾಧಿಯು ಹುಟ್ಟುತ್ತಲೇ ಉಪ್ಪಿನ ನೀರಿನಿಂದ (ಒಂದು ಭಾಗ ಉಪ್ಪು, ನಾಲ್ಕು ಭಾಗ ನೀರು) ಗುದದ್ವಾರವನ್ನು ಚನ್ನಾಗಿ ತೊಳೆಯಬೇಕು; ಇಲ್ಲವೆ ಅದರಲ್ಲಿ ಇಂಥ ನೀರಿನಿಂದ ಜೀಕಳಿಯನ್ನು ಹೊಡೆಯಬೇಕು; ಅಂದರೆ ತತ್ಕಾಲಕ್ಕೆ ಗುಣವಾಗುವದು.

೬. ನೇತ್ರವಿಕಾರ:—ಕಣ್ಣಿಗೆ ಬಾವು ಬರೋಣ, ನೀರು ಹರಿಯೋಣ, ಚುಚ್ಚೋಣ, ಪೆಚ್ಚು ಹಾಕೋಣ ಮುಂತಾದ ವಿಕಾರಗಳು ಉಪ್ಪಿನ ನೀರಿನಿಂದ (ಉಪ್ಪು ಒಂದು ಚಮಚೆ, ಒಂದು ಶೇರು ನೀರು) ಕಣ್ಣುಗಳನ್ನು ಮೇಲಿಂದ ಮೇಲೆ ತೊಳೆದಲ್ಲಿ ಬೇನೆಯು ವಾಸಿಯಾಗುವದು.

೭. ವಿಷ (ನಂಜು):—ಎಲ್ಲ ಪ್ರಕಾರದ ವಿಷಗಳು, ಅಂದರೆ ಸೋಮಲ, ನೈಟ್ರೇಟ ಆಫ್ ಸಿಲ್ವರ ಮುಂತಾದ ವಿಷಗಳ ಉತಾರಿನ ಮೇಲೆ, ಎರಡು ಚಮಚೆ ಉಪ್ಪು, ಸ್ವಲ್ಪ ಬಿಸಿ ನೀರಿನಲ್ಲಿ ಹಾಕಿ, ತುಸು ತುಸು ಕಾಲಾವಧಿಯಿಂದ ಚನ್ನಾಗಿ ವಾಂತಿಯಾಗುವ ವರೆಗೆ ಕುಡಿಸುತ್ತ ಹೋಗಬೇಕು; ಅಂದರೆ ತೀವ್ರವಾಗಿ ಉತಾರವಾಗುವದು.

ತಮ್ಮ ವಿಧೇಯ
ತಾ|| ೭-೧೧-೧೯೨೯ ಇಸ್ವಿ. } ಕಲ್ಲೋ ಗಣೇಶ ವಿಜಾಪೂರ ಅಸಿಸ್ಟಂಟ
ಮಾಸ್ತರ ಶಾಳಾ—ಮುರಗೋಡ

ರಾ|| ಸಾ|| ಶಾಲಾಪತ್ರಿಕೆಯ ಸಂಪಾದಕ ಮಹಾಶಯರ ಸನ್ನಿಧಿಗೆ—

ಸವಿನಯ ವಿನಂತಿ ಕೆಳಗಿನ ಸಂಗತಿಗೆ ತಮ್ಮ ಪತ್ರಿಕೆಯಲ್ಲಿ ಸ್ಥಳ ದೊರೆಯುವದೆಂದು ಆಶಿಸುವೆನು:—

"ವ್ಯವಸಾಯ ಬಂಧುಗಳಿಗೆ ವಿನಂತಿಯು"

(೧) ಹುಡುಗರ ಕೆಲವೊಂದು ಇಯತ್ತೆಯ ಅಭ್ಯಾಸವು ಪೂರ್ಣವಾದ ಬಳಿಕ, ಅವರನ್ನು ಮೇಲಿನ ಇಯತ್ತೆಗೆ ಹಾಕುವದು ಸರ್ವಮಾನ್ಯವಾದದ್ದು. (೨) ಯಾವದಾದರೊಂದು ಇಯತ್ತೆಯ ಅಭ್ಯಾಸವು ಪೂರ್ಣವಾಗದಿದ್ದರೂ, ಮುಂದಿನ ವಿಷಯ (ಇಯತ್ತೆಯ)ಗಳನ್ನು ತಿಳಿದುಕೊಳ್ಳುವಷ್ಟು ಬುದ್ಧಿ ಸಾಮರ್ಥ್ಯವುಳ್ಳ ಹುಡುಗರನ್ನಾದರೂ ಮೇಲಿನ ಇಯತ್ತೆಗೆ ಹಾಕಬಹುದು. ಇಯತ್ತೆಗಳನ್ನು ಬದಲಾಯಿಸುವಾಗ ಈ ನಿಯಮಗಳ ಕಡೆಗೆ ದುರ್ಲಕ್ಷ ಮಾಡುವ ಶಿಕ್ಷಕರು ದೊಡ್ಡ ತಪ್ಪು ಮಾಡುತ್ತಾರೆಂದು ನಿರ್ಭಾ

ಥವಾಗಿ ಹೇಳಬಹುದು. ಅಯೋಗ್ಯರಾದ ಹುಡುಗರನ್ನು ಮೇಲಿನ ಇಯತ್ತೆಗೆ ಹಾಕುವದರಿಂದ, ಅವರಿಗೆ ಆ ಇಯತ್ತೆಯಲ್ಲಿ ನಡೆಯುವ ವಿಷಯಗಳು ಎಷ್ಟು ಮಾತ್ರವೂ ತಿಳಿಯುವದಿಲ್ಲ. ಇಷ್ಟೇ ಅಲ್ಲ, ಅವರು ಹಿಂದೆ ಕಲಿತ ವಿಷಯಗಳನ್ನು ಸಹ, ಕ್ರಮಶಃ ಮರೆತು ಬಿಡುವರು. ಹೀಗಾಗಿ ಅವರಿಗೆ ಶಾಲೆಯ ಮಹತ್ವವೂ ಉಪಯೋಗವೂ ತಿಳಿಯದಂತಾಗಿ, ಶಾಲೆಯನ್ನು ತಪ್ಪಿಸಹತ್ತುವರು. ಅವರನ್ನು ಹಾದಿಗೆ ಹಚ್ಚುವದಕ್ಕಾಗಿ ಅವರ ಗುರು ಹಿರಿಯರು ಮಾಡುವ ಪ್ರಯತ್ನಗಳೆಲ್ಲ ನಿಷ್ಫಲವಾಗಿ, ಕೇವಲ ಶಾಲೆಯನ್ನು ತ್ಯಾಜ್ಯ ಮಾಡುವ ಪ್ರಸಂಗವೇ ಬಂದೊದಗುವದು. ಹುಟ್ಟಾ ಶಾಲೆಗೆ ಬಾರದ ಹುಡುಗರು ಹೊಲಮನೆಯ ಕೆಲಸವನ್ನಾದರೂ ಚನ್ನಾಗಿ ಮಾಡಲಿಕ್ಕೆ ಕಲಿತು, ಸಾಧಾರಣ ತರದ ಪ್ರಾಪಂಚಿಕರಾಗುವದುಂಟು. ಆದರೆ ಅರ್ಧಮರ್ಧ ಶಿಕ್ಷಣವನ್ನು ಹೊಂದಿ ಶಾಲೆಯನ್ನು ಬಿಟ್ಟ ಹುಡುಗರಿಗೆ ಯಾವ ಕೆಲಸವೂ ರುಚಿಸದೆ ಅವರು ಕೇವಲ ಉಡಾಳರಾಗಿ ತಿರ.ಗಾಡ ಹತ್ತಿ ಯಾವ ಕೆಲಸಕ್ಕೂ ಬಾರದೆ ಕೆಟ್ಟು ಹೋಗುವರು. ಹೀಗಾಗುವದರಿಂದ ಶಿಕ್ಷಕರ ಪಾಲಿಗೆ ಮಹತ್ಪಾಪವು ಬರುವದೆಂದು, ಮೇಲೆಯೇ ವ್ಯಕ್ತವಾಗುವದು! ಇಷ್ಟೇ ಅಲ್ಲ, ಅಯೋಗ್ಯರಾದ ಹುಡುಗರನ್ನು ಮೇಲಿನ ಇಯತ್ತೆಗೆ ಹಾಕುವ ಶಿಕ್ಷಕರು ಸ್ವತಃ ತೊಂದರೆಯಲ್ಲಿ ಬೀಳುವರಲ್ಲದೆ, ಅಕಸ್ಮಾತ್ ತಮಗೆ ವರ್ಗವಾಗಿ ಹೋದರೆ ತಮ್ಮ ಸ್ಥಳದಲ್ಲಿ ಬರುವ ಶಿಕ್ಷಕರನ್ನು ದೊಡ್ಡ ತೊಂದರೆಯಲ್ಲಿ ಮುಳುಗಿಸಿ ಬಿಡುವರು. ತಪ್ಪು ಮಾಡುವರು ಒಬ್ಬರು, ಅದರಿಂದಾಗುವ ತೊಂದರೆಗೆ ಗುರಿಯಾಗುವರು ಮತ್ತೊಬ್ಬರು! ಇಂಥ ಸ್ಥಳದಲ್ಲಿ ಹೊಸದಾಗಿ ಬರುವ ಶಿಕ್ಷಕರು ಬೇಕಾದಷ್ಟು ಜಾಣರೂ ಅನುಭವಿಕರೂ ಇದ್ದಾಗ್ಯೂ, ಅವರ ಕೆಲಸವು ಸಮಾಧಾನಕಾರಕವಾಗಲಾರದು. ಆನಂದದಾಯಕವಾದದ್ದೆಂದು ಹೇಳಲ್ಪಡುವ ಶಿಕ್ಷಣ ವ್ಯವಸಾಯವು, ಇಂಥವರ ಪಾಲಿಗೆ ಕೇವಲ ತ್ರಾಸದಾಯಕವಾದದ್ದಾಗುವದೆಂದರೆ ತಪ್ಪಾಗಲಿಕ್ಕಿಲ್ಲ. ಶಿಕ್ಷಕ ಜನರು ಈ ತಪ್ಪನ್ನು ಬುದ್ಧಿಪೂರ್ವಕವಾಗಿ ಮಾಡದೆ, ಬಹುಶಃ ಹುಡುಗರ ಪಾಲಕರ ಆಗ್ರಹದಿಂದ ಮಾಡುತ್ತಿದ್ದಾರೆ. ಎಲ್ಲ ಶಿಕ್ಷಕರು ಈ ತಪ್ಪನ್ನು ಮಾಡದಿದ್ದರೂ, ಬಹುಜನ ಶಿಕ್ಷಕರು ಈ ತಪ್ಪನ್ನು ಮಾಡುವಲ್ಲಿ ಹಿಂಜರಿಯುವದಿಲ್ಲ. ತಮ್ಮ ಕೆಲಸವು ಸಮಾಧಾನಕಾರಕವಾದದ್ದಾಗಬೇಕು; ತಮ್ಮಿಂದ ತಮ್ಮ ವ್ಯವಸಾಯ

ಶಾಲಾಪತ್ರಿಕೆ.

ಪದ್ಯಂ

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀ ಪತ್ರಮಂ ಮುದ್ರಿಸಿ ||
ನಯದಿಂದಿತ್ತಪೆವೋದುವರ್ಗೆ ಸುಗುಣಂದೋರಲ್ಕೆ ಕೈಕೊಂಬುದೈ
ದಯೆಯಿಂ ದೋಷವತಿದ್ದವೇಳ್ವುದು ಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ||೧||

ಪುಸ್ತಕ ೪೬. } ಮಾರ್ಚ-೧೯೧೦. { ಸಂಚಿಕೆ ೩.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಧೂಮಕೇತು ಅಥವಾ ಬಾಲಚಿಕ್ಕೆ

ತೇಜೋನಿಧಿಯಾದ ಸವಿತೃವು ಅಸ್ತಾಚಲಶಿಖರವನ್ನಿಳಿದು ಹೋದಮೇಲೆ ವಿಶಾಲವಾದ ಆಕಾಶಮಂಡಲದಲ್ಲಿ ಅನಂತರತ್ನಗಳು ಹೊಳೆಯಹತ್ತುವವು. ಅವುಗಳನ್ನು ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಿಸಲು, ಅವುಗಳಲ್ಲಿ ಕೆಲವು ಗ್ರಹೋಪಗ್ರಹಗಳಿರುವವೆಂತಲೂ, ಕೆಲವು ನಕ್ಷತ್ರಗಳೂ ತಾರಕಾಪುಂಜಗಳೂ ಇರುವವೆಂತಲೂ ತಿಳಿಯುವದು. ಈ ನಾಲ್ಕು ಪ್ರಕಾರದ ತೇಜೋಗೋಲಗಳ ಹೊರತು, ಇವುಗಳಿಂದ ತೀರ ಭಿನ್ನವಾಗಿಯೂ ವಿಲಕ್ಷಣವಾಗಿಯೂ ಆಶ್ಚರ್ಯಕರವಾಗಿಯೂ ಕಾಣಿಸುವ ಮತ್ತೊಂದು ಆಗಂತುಕ ತೇಜವು ಈ ವಿಸ್ತಾರವಾದ ನಭೋಮಂಡಲದಲ್ಲಿ ಎಂದಾದರೂ ಎಲ್ಲಾದರೂ ಒಮ್ಮೊಮ್ಮೆ ಹೊಳೆಯಹತ್ತುವದು. ಈ ಆಗಂತುಕ ತೇಜವು ಮೂರು ಬಗೆಯಿಂದ ದೃಷ್ಟಿಗೋಚರವಾಗುವದು; ಒಮ್ಮೊಮ್ಮೆ ಕೇವಲ ಒಂದು ಬಗೆಯ ಪ್ರಕಾಶವು ಮಾತ್ರ ಕಾಣುವದು; ಒಮ್ಮೊಮ್ಮೆ ಆ ಪ್ರಕಾಶವೂ ಅದರ ಸುತ್ತುಮುತ್ತು ಗೋಲಾಕಾರವಾದ ಅಭ್ರಮಯ ತೇಜಸ್ಸೂ ತೋರುವವು; ಒಮ್ಮೊಮ್ಮೆ ಆ ಪ್ರಕಾಶವೂ, ಅದರ ಸುತ್ತಲಿನ ಅಭ್ರಮಯವಾದ ತೇಜೋವಲಯವೂ ಕಾಣುವದಲ್ಲದೆ, ಅದೇ ತೇಜದೊಳಗಿಂದ ಕಾರಂಜಿಯಂತೆ ಉದ್ದವಾಗಿಯೂ ವಿಸ್ತಾರವಾಗಿಯೂ ಹಬ್ಬಿದ ತೇಜವು ದೃಷ್ಟಿಗೋಚರವಾಗುವದು. ಪ್ರಕಾಶಮಯವಾದ ಈ

ಕಾರಂಜಿಯು ಒಮ್ಮೊಮ್ಮೆ ತಲೆಯೊಳಗಿಂದ ಹೊರಟ ಜಡೆಯೋಪಾದಿಯಲ್ಲಿ ಕಂಗೊಳಿಸುವದು. ಬರಿಗಣ್ಣಿನಿಂದ ನೋಡುವವರಿಗೆ ವಾಡಿಕೆಯಾಗಿ ಈ ಮೂರು ಪ್ರಕಾರಗಳಲ್ಲಿ ೩ನೇ ಪ್ರಕಾರವು ಮಾತ್ರ ಕಾಣುವದು. ಯಾವ ಆಕಾರದ್ದೇ ಆಗಲಿ, ಇಂಥದೊಂದು ಪ್ರಚಂಡವಾದ ತೇಜವು ಆಕಾಶದೊಳಗಿನ ವಿಶಾಲವಾದ ಪೊಳ್ಳಿನಲ್ಲಿ ಹೊಳೆಯ ಹತ್ತಲಾಗಿ ಅದಕ್ಕೆ ಧೂಮಕೇತು ಅಥವಾ ಬಾಲಚಿಕ್ಕೆ ಉದಯವಾಗಿರುತ್ತದೆ, ಎಂದು ಅನ್ನುತ್ತೇವೆ. ಇದಕ್ಕೆ ಚಂಡಿಕೆಯ ನಕ್ಷತ್ರವೆಂತಲೂ ಅನ್ನುವದು. ಧೂಮಕೇತು (ಹೊಗೆಯಂಥ ನಿಶಾನಿಯುಳ್ಳದ್ದು), ಬಾಲಚಿಕ್ಕೆ (ಬಾಲವುಳ್ಳಚಿಕ್ಕೆ), ಚಂಡಿಕೆಯ ನಕ್ಷತ್ರ ಎಂಬ ಹೆಸರುಗಳು ಬೀಳಲಿಕ್ಕೆ ಅವುಗಳ ಆಕಾರಸಾದೃಶ್ಯವೇ ಕಾರಣವೆಂಬದನ್ನು ಹೇಳಲವಶ್ಯವಿಲ್ಲ. ಈ ಆಗಂತುಕ ತೇಜವು ಒಂದು ತರದ ಪ್ರಕಾಶ ಮತ್ತು ಅದರ ಸುತ್ತು ಒಂದು ತೇಜೋವಲಯ ಇವುಗಳಿಂದ ಆಗಿರುತ್ತದೆಂದು ಮೇಲೆ ಹೇಳಿದ್ದೇವೆ. ಇವೆರಡೂ ಕೂಡಿ ಧೂಮಕೇತುವಿನ ಅಗ್ರಭಾಗವಾಗುತ್ತದೆ. ಇದಕ್ಕೆ ಪಾಶ್ಚಾತ್ಯ ಜ್ಯೋತಿರ್ವಿದರು ಧೂಮಕೇತುವಿನ ತಲೆ ಎಂಬ ಹೆಸರನ್ನು ಕೊಟ್ಟಿದ್ದಾರೆ. ಪ್ರಚಂಡವಾದ ಧೂಮಕೇತುವಿಗೆ ಬಾಲವು ಅಥವಾ ಚಂಡಿಕೆಯು ಇದ್ದೇ ಇರುತ್ತದೆ. ಬರುವ ಮೇ ತಿಂಗಳಲ್ಲಿ ಇಂಥದೇ ಒಂದು ಪ್ರಚಂಡ ಧೂಮಕೇತುವು ಕಾಣಿಸಹತ್ತುವದು. ಆದಕಾರಣ ಧೂಮಕೇತುವು ಯಾತರಿಂದ ಆಗಿರುತ್ತದೆ? ಅಂದರೆ, ಅದರ ಘಟಕಗಳು ಯಾವವು? ಅದಕ್ಕೆ ಯಾವ ತರದ ಗತಿಯು ಇರುವದು? ಮತ್ತು ಅದು ಯಾವ ಯಾವ ಕಾಲಕ್ಕೆ ಮೂಡುವದು? ಈ ವಿಷಯವಾಗಿ ಇಲ್ಲಿ ಕೆಲವು ಸಂಗತಿಗಳನ್ನು ಬರೆಯುವೆವು:—

ಮೊದಲಿನ ಎರಡು ಪ್ರಕಾರದ ಧೂಮಕೇತುಗಳು ಬರಿಗಣ್ಣಿಗೆ ಕಾಣುವದಿಲ್ಲೆಂದು ಹಿಂದೆ ಹೇಳಿದ್ದೇವೆ. ಮೂರನೇ ಪ್ರಕಾರದ ಧೂಮಕೇತುವು ಪೃಥ್ವಿಯ ಸಮೀಪಕ್ಕೆ ಬಂದ ಕೂಡಲೆ ಅದರ ವಿಲಕ್ಷಣವಾದಂಥ ಅದ್ಭುತವಾದಂಥ ಭವ್ಯವಾದಂಥ ನೋಟವು ಸರ್ವಸಾಧಾರಣ ಜನರ ಲಕ್ಷವನ್ನು ಸಹ ಎಳೆದುಕೊಳ್ಳುವದು. ಯಾವದೊಂದು ಪ್ರಚಂಡ ಧೂಮಕೇತುವನ್ನು ಎಲ್ಲಕ್ಕೂ ಮೊದಲು ಅದು ಬಹುದೂರವಿದ್ದಾಗ ದುರ್ಬಿಣಿಯ ಸಹಾಯದಿಂದ ನೋಡಿದರೆ, ಅದು ಒಂದು ಸ್ವಚ್ಛವಾದ ಮೋಡದಂತೆ ಕಾಣುವದು. ಕೆಲದಿವಸಗಳ ನಂತರ ಅದು ಸಮೀ

ಪಕ್ಕೆ ಬಂದ ಬಂದ ಹಾಗೆ ಅದು ಮೊದಲಿಗಿಂತ ಹೆಚ್ಚು ಪ್ರಕಾಶಮಾನವಾಗಿ ಕಂಗೊಳಿಸುವದು. ಆಗ ಅದರ ಬಾಲವು ಕಾಣಿಸುವದು. ಸೂರ್ಯನಿಂದ ಧೂಮಕೇತುವಿನ ವರೆಗೆ ಸರಳರೇಖೆಯನ್ನು ತೆಗೆದು ಅದನ್ನು ಹಾಗೇ ಮುಂದಕ್ಕೆ ಬೆಳಿಸಲು, ಆ ರೇಖೆಯಲ್ಲಿ ಧೂಮಕೇತುವಿನ ಬಾಲವು ಮೊದಲು ದೃಷ್ಟಿಗೋಚರವಾಗುವದು. ಕೆಲ ದಿವಸಗಳ ನಂತರ ಆ ಬಾಲವು ಬೆಳೆದು ಅತಿ ದೊಡ್ಡದಾಗುವದು. ಮತ್ತು ಆ ಧೂಮಕೇತುವಿನ ತಲೆಯೂ ನಿಚ್ಚಳವಾಗಿ ಕಾಣುವ ಮೋಡದಂತೆ ಕಾಣಿಸಹತ್ತುವದು; ಹಾಗೂ ಅದರ ತಲೆಯ ಮಧ್ಯಭಾಗದಲ್ಲಿ ಒಂದು ನಕ್ಷತ್ರವು ಹೊಳೆಯಹತ್ತುವದು. ಈ ನಕ್ಷತ್ರಕ್ಕೆ ಆ ಧೂಮಕೇತುವಿನ ಕೇಂದ್ರ ವೆನ್ನಬಹುದು. ಮುಂದೆ ಆ ಧೂಮಕೇತುವು ಹೆಚ್ಚು ಹೆಚ್ಚು ಸೂರ್ಯನ ಸಮೀಪಕ್ಕೆ ಬಂದು ಸೂರ್ಯನನ್ನು ಸುತ್ತುವರಿದು ಹೋಗುವದು. ಅದರಿಂದ ಅದು ಕೆಲದಿವಸ ಸೂರ್ಯೋದಯದ ಪೂರ್ವದಲ್ಲಿಯೂ ಕೆಲದಿವಸ ಸೂರ್ಯಾಸ್ತದ ತರುವಾಯದಲ್ಲಿಯೂ ದೃಶ್ಯವಾಗುವದು. 'ಧೂಮಕೇತುವು ಸೂರ್ಯನ ಸಮೀಪಕ್ಕೆ ಬಂದ ಬಂದ ಹಾಗೆ ಅದರ ತಲೆಯು ಸಣ್ಣದಾಗುತ್ತ ಹೋಗುವದು; ಮತ್ತು ಅದರ ಬಾಲವು ಬೆಳೆಯುತ್ತ ಹೋಗುವದು. ಧೂಮಕೇತುವಿನ ಕೇಂದ್ರ, ತಲೆ, ಚಂಡಿಕೆ ಈ ಮೂರು ಭಾಗಗಳು ನಿಚ್ಚಳವಾಗಿ ಹೊಳೆಯಹತ್ತಿದವೆಂದರೆ ಆಗ ಅದನ್ನು ಬರಿಗಣ್ಣಿನಿಂದ ನೋಡಬಹುದು.

ಧೂಮಕೇತುಗಳು ಆಕಾಶದ ಬೇಕಾದ ಭಾಗದಲ್ಲಿ ದೃಶ್ಯವಾಗುತ್ತವೆ. ಮತ್ತು ಅವು ಇಂಥ ಋತುವಿನಲ್ಲಿ ಅಥವಾ ಇಂಥ ದಿವಸದಲ್ಲಿ ಹಗಲು, ಇಲ್ಲವೆ ರಾತ್ರಿ, ಇಷ್ಟೇ ಹೊತ್ತಿಗೆ ದೃಶ್ಯವಾಗುತ್ತವೆಂಬ ನಿಯಮವಿಲ್ಲ. ಅವುಗಳ ಆಕಾರವೂ ದೃಶ್ಯಸ್ವರೂಪವೂ ಅಮರ್ಯಾದಿತವಾಗಿರುತ್ತವೆ. ಸೂರ್ಯನು ಕ್ಷಿತಿಜದ ಯಾವ ಮಗ್ಗಲು ಇರುವನೋ ಅದರ ವಿರುದ್ಧ ಮಗ್ಗಲು ಆ ಧೂಮಕೇತುವಿನ ಚಂಡಿಕೆಯು ಇರುವದು ಮಾತ್ರ ನಿಶ್ಚಯವು; ಆದರೆ, ಆ ಚಂಡಿಕೆಯು ಕ್ಷಿತಿಜಕ್ಕೆ ಇಂತಿಷ್ಟೇ ಕೋನ ಮಾಡುವದೆಂಬ ನಿಯಮವಿಲ್ಲ.

ನಮ್ಮ ಸೂರ್ಯಮಾಲೆಯೊಳಗಿನ ಗ್ರಹಗಳು ಸೂರ್ಯನ ಸುತ್ತಲು ತಿರುಗುವ ಮಾರ್ಗಕ್ಕೆ ಕ್ರಾಂತಿವೃತ್ತವೆಂಬ ಹೆಸರು. ಆ ಕ್ರಾಂತಿವೃತ್ತದೊಳಗಿಂದ ಪ್ರತಿಯೊಂದು ಗ್ರಹವು ದೀರ್ಘವರ್ತುಲಾಕೃತಿಯುಳ್ಳ ತನ್ನ

ಕಕ್ಷೆಯಲ್ಲಿ ಸೂರ್ಯನ ಸುತ್ತಲು ತಿರುಗುತ್ತದೆ. ಗ್ರಹಗಳ ಕಕ್ಷೆಗಳು ಒಂದನ್ನೊಂದು ಛೇದಿಸದೆ ಒಂದರ ಹೊರಗೆ ಮತ್ತೊಂದು ಇರುತ್ತವೆ. ಸೂರ್ಯಮಾಲೆಯ ಎಂಟು ಗ್ರಹಗಳಿಗೆ ಎಂಟು ಕಕ್ಷೆಗಳು ಬೇರೆ ಬೇರೆ ಇರುತ್ತವೆ. ಪೃಥ್ವಿಯಮೇಲೆ ಕಾಣುವ ಪ್ರಚಂಡವಾದ ಧೂಮಕೇತುಗಳೆಲ್ಲ ಬಹುತರವಾಗಿ ನಮ್ಮ ಸೂರ್ಯನ ಸುತ್ತಲು ತಿರುಗುತ್ತಿರುತ್ತವೆ. ಆದರೆ ಅವುಗಳ ಕಕ್ಷೆಯ ಮೇರೆಯು ಮಾತ್ರ ವರುಣ (ನೆಪಚೂನ) ಗ್ರಹದ ಕಕ್ಷೆಯ ಆಚೆಗೆ ಬಹು ದೂರದವರೆಗೆ ಹಬ್ಬಿರುತ್ತದೆ. ಸೂರ್ಯನ ಸುತ್ತಲಿನ ಈ ವಿಸ್ತಾರವಾದ ಪ್ರದೇಶದಲ್ಲಿ ಸಂಚರಿಸುವ ಧೂಮಕೇತುಗಳು ಭೂಮಿಯ ಮೇಲಿನ ಜನರಿಗೆ ನಿಯಮಿತ ಕಾಲಕ್ಕೊಮ್ಮೆ ಕಾಣುತ್ತವೆ. ಆದದರಿಂದ ತಚ್ಛಾಸ್ತ್ರಜ್ಞರು ಇವುಗಳಿಗೆ **ನಿಯತಕಾಲಿಕ** ಧೂಮಕೇತುಗಳೆಂದು ಅನ್ನುವರು. ಈ ಧೂಮಕೇತುಗಳು ನಮ್ಮ ಸೂರ್ಯನ ಆಕರ್ಷಣ ಶಕ್ತಿಗೆ ಒಳಪಟ್ಟಿರುವದರಿಂದ ಇವುಗಳ ಅತಿದೀರ್ಘ ವರ್ತುಲಾಕೃತಿಯಾದ ಕಕ್ಷೆಯ ಒಂದು ಕೇಂದ್ರವು ಸೂರ್ಯನು; ಆದರೆ ಎರಡನೆಯ ಕೇಂದ್ರವು ನೆಪಚೂನ ಗ್ರಹದ ಕಕ್ಷೆಯ ಹೊರಮಗ್ಗಲು ಎಷ್ಟು ಯೋಜನ ದೂರದಲ್ಲಿರುವದೆಂಬದನ್ನು ಹೇಳುವದು ಅಶಕ್ಯವು. ಕೆಲಕೆಲವು ಧೂಮಕೇತುಗಳ ಎರಡನೆಯ ಕೇಂದ್ರವು ಮಾತ್ರ ವರುಣ, ಪ್ರಜಾಪತಿ (ಯುರೆನಸ್), ಇಲ್ಲವೆ ಶನಿ ಇವುಗಳ ಕಕ್ಷೆಯ ಒಳಮಗ್ಗಲು ಇರುವದು. ಗ್ರಹಗಳ ಕಕ್ಷೆಗಳಂತೆ ಈ ಧೂಮಕೇತುಗಳ ಕಕ್ಷೆಗಳು ಒಂದರಹೊರಗೊಂದು ಇರುವದಿಲ್ಲ. ಇವು ಗ್ರಹಗಳ ಕಕ್ಷೆಗಳನ್ನು ಛೇದಿಸಿ ಹೋಗುತ್ತವೆ.

ಕೆಲವು ನಿಯತಕಾಲಿಕ, ಅಂದರೆ ನಿಯಮಿತ ಕಾಲಕ್ಕೊಮ್ಮೆ ದೃಶ್ಯವಾಗತಕ್ಕ (ಈ ಕಾಲವು ಒಂದುವೇಳೆ ಅನಂತ ವರ್ಷಗಳದಿರಬಹುದು) ಧೂಮಕೇತುಗಳು ಒಮ್ಮೊಮ್ಮೆ ಸೂರ್ಯನ ಸನ್ನಿಧಿಯನ್ನು ಬಿಟ್ಟು, ಅನಂತವಾದ ವಿಶ್ವದಲ್ಲಿ ಬಹುದೂರದ ವರೆಗೆ ಸಂಚರಿಸುತ್ತ ಹೋಗುವವು. ಇಂಥ ಧೂಮಕೇತುಗಳ ಕಕ್ಷೆಯ ಒಂದು ಕೇಂದ್ರದಲ್ಲಿ ಸೂರ್ಯನೂ ಮತ್ತೊಂದು ಕೇಂದ್ರದಲ್ಲಿ ಬೇರೊಂದು ನಕ್ಷತ್ರವೂ ಇರುವವು. ಈ ಮೇರೆಗೆ ಸೂರ್ಯನಿಂದ ಬಹು ದೂರದಲ್ಲಿ ತಿರುಗಾಡುವಂಥ ಮತ್ತು ಸೂರ್ಯನ ಹತ್ತಿರವೇ ಸಂಚರಿಸುವಂಥ ಎಷ್ಟೋ ನಿಯತಕಾಲಿಕ ಧೂಮಕೇತುಗಳು

ಗೊತ್ತು ಹಚ್ಚಲ್ಪಟ್ಟಿರುತ್ತವೆ. ಅವು ಪ್ರಾಚೀನ ಕಾಲದಲ್ಲಿ ಯಾವ ಯಾವ ಕಾಲಕ್ಕೆ ಕಾಣಿಸಿದವೆಂಬ ಬಗ್ಗೆಯೂ ಶೋಧಗಳು ಮಾಡಲ್ಪಟ್ಟಿರುವವು. ಆ ಶೋಧಗಳಿಂದ ಅವುಗಳ ಇತಿಹಾಸವು ಉಪಲಬ್ಧವಾಗಿರುವದು. ಕೆಲವು ಮುಖ್ಯವಾದ ನಿಯತಕಾಲಿಕ ಧೂಮಕೇತುಗಳ ವಿಷಯಕ್ಕೆ ಗೊತ್ತಾದ ಸಂಗತಿಗಳನ್ನು ಕೆಳಗೆ ಕೊಟ್ಟಿರುತ್ತದೆ. ಈ ಧೂಮಕೇತುಗಳಿಗೆ ಅವುಗಳನ್ನು ಗೊತ್ತುಹಚ್ಚಿದವರ ಹೆಸರುಗಳೇ ಕೊಡಲ್ಪಟ್ಟಿರುತ್ತವೆ:—

ಮುಖ್ಯವಾದ ಧೂಮಕೇತುಗಳು.

ಧೂಮಕೇತುಗಳ ಹೆಸರುಗಳು.	ಸೂರ್ಯನ ಸುತ್ತಲು ಪ್ರದಕ್ಷಿಣಿ ಹಾಕಲಿಕ್ಕೆ ಹತ್ತುವ ವರ್ಷಗಳು	ಸೂರ್ಯನ ಅತಿ ಸಮೀಪಕ್ಕೆ ಬಂದಾಗ್ಗೆ ಸೂರ್ಯನಿಂದ ಅಂತರವು.*	ಸೂರ್ಯನಿಂದ ಅತಿ ದೂರದಲ್ಲಿದ್ದಾಗ ಅಂತರವು.*	ಇಂದಿನವರೆಗೆ ಎಷ್ಟು ಸಾರೆ ದೃಶ್ಯವಾಯಿತು
೧ ಎನ್ಕೆ	೩.೩	೦.೩೪	೪.೧	೨೯
೨ ಟೆಂಪಲ್	೫.೨೮	೧.೩೯	೪.೬೮	೪
೩ ವಿನೇಕಿ	೫.೮೩	೦.೯೨	೫.೫೫	೩
೪ ಬೀಲಾ	೬.೬೯	೦.೮೮	೬.೨೨	೬
೫ ವೂಲ್ಫ	೬.೮೪	೧.೬೦	೫.೬೧	೩
೬ ಹೋಲ್ಮ್ಸ್	೬.೮೭	೨.೧೩	೫.೧೦	೨
೭ ಫೇ	೭.೫೭	೧.೬೪	೫.೯೭	೮
೮ ಬ್ರೂರ್ಕಸ್	೭.೧೦	೧.೯೬	೫.೪೩	೨
೯ ಆಲಬರ್ಸ	೭೨.೬೫	೧.೨೦	೩೩.೬೨	೨
೧೦ ಹಾಲೇ	೭೬.೦೮	೦.೬೯	೩೫.೨೨	೨೩

* ಈ ಅಂತರಗಳು ಪೃಥ್ವಿಗೂ ಸೂರ್ಯನಿಗೂ ಇರುವ ಅಂತರವು ಒಂದು ಎಂದು ಕಲ್ಪಿಸಿ ಅದಕ್ಕೆ ಪ್ರಮಾಣವಾಗಿ ತೆಗೆದಂಥವುಗಳಿರುತ್ತವೆ.

ವಾಚಕರಿಗೆ ಧೂಮಕೇತುಗಳ ಸಾಧಾರಣ ಕಲ್ಪನೆಯಾಗಬೇಕೆಂದು ಮೇಲಿನ ಯಾದಿಯು ಕೊಡಲ್ಪಟ್ಟಿರುವದು. ಬೀಲಾ ಎಂಬ ಹೆಸರಿನ ಧೂಮಕೇತುವು ಇ. ಸ. ೧೮೪೬ ನೇ ಇಸವಿಯಲ್ಲಿ ಇಬ್ಭಾಗವಾದಂತೆ ಕಾಣಿಸಿತು. ಇ. ಸ. ೧೮೫೨ ರಲ್ಲಿಯೂ ಅದರ ಎರಡು ಭಾಗಗಳು ಕಾಣಿಸಿದವು. ಮುಂದೆ ಇ. ಸ. ೧೮೬೨ ನೇ ವರ್ಷ ಮದ್ರಾಸದ ವೇಧಶಾಲೆಯ ಮುಖ್ಯಾಧ್ಯಾಪಕರಾದ ಮಿ. ಪೊಗಸನ್ ಇವರು ಆ ಧೂಮಕೇತುವನ್ನು ನೋಡಿದರು. ತರುವಾಯ ಅದು ಇಂದಿನವರೆಗೆ ಯಾರಿಗೂ ದೃಷ್ಟಿಗೋಚರವಾಗಿಲ್ಲ. ಎನ್ಕೆ ಎಂಬ ಧೂಮಕೇತುವು ಸನ್ನ ೧೮೩೮ ನೇ ವರ್ಷ ಕಾಣಿಸಿದಾಗ ಬುಧನ ಆಕರ್ಷಣದ ಪರಿಣಾಮವು ಅದರ ಮೇಲೆ ಆಗುವಷ್ಟು ಬುಧನ ಸಮೀಪದಲ್ಲಿ ಬಂದಿತ್ತು. ಅದರಿಂದ ಜ್ಯೋತಿಷಶಾಸ್ತ್ರಜ್ಞರಿಗೆ ಬುಧನ ತೂಕವನ್ನು ನಿರ್ಣಯಿಸಲಿಕ್ಕೆ ಅನುಕೂಲವಾಯಿತು. ಬುಧನ ತೂಕವು ಪೃಥ್ವಿಯ ತೂಕದ ೧/೪ ಇರುತ್ತದೆ; ಅಂದರೆ, ೧೪ ಬುಧಗಳನ್ನು ತಕ್ಕಡಿಯ ಒಂದು ಪರಡಿಯಲ್ಲಿಯೂ ಪೃಥ್ವಿಯನ್ನು ಮತ್ತೊಂದು ಪರಡಿಯಲ್ಲಿಯೂ ಹಾಕಿ ತೂಗಿದರೆ ಅವುಗಳ ತೂಕವು ಸರಿಯಾಗುತ್ತದೆ. ಈ ಪ್ರಮಾಣವು ಎನ್ಕೆ ಎಂಬ ಧೂಮಕೇತುವಿನ ಸಹಾಯದಿಂದ ಹೊರಟಿತು. ಇದರಿಂದ ಆಕಾಶಸ್ಥವಾದ ಅನೇಕ ಪದಾರ್ಥಗಳು ವ್ಯರ್ಥವಾದವುಗಳೂ, ನಿರುಪಯುಕ್ತವಾದವುಗಳೂ ಇರುವವೆಂದು ಯಾರೂ ಹೇಳಲಾರರು. ಹೋಲ್ಮ್ಸ್ ಎಂಬ ಧೂಮಕೇತುವು ಸನ್ನ ೧೮೯೨ ನೇ ವರ್ಷದ ನವಂಬರ ತಿಂಗಳಲ್ಲಿ ಕಾಣಿಸಿತು. ಅದು ಜಾನೇವಾರೀ ತಿಂಗಳ ವರೆಗೆ ಬೆಳೆದು ದೊಡ್ಡವಾಗಿ ೧೮೯೩ ನೇ ವರ್ಷದ ಎಪ್ರೀಲ ತಿಂಗಳಲ್ಲಿ ಕಾಣದಂತಾಯಿತು. ಫೇ ಎಂಬ ಧೂಮಕೇತುವು ಸನ್ನ ೧೯೧೧ ನೇ ಇಸವಿಯ ವಸಂತ ಋತುವಿನಲ್ಲಿ ಕಾಣುವದು. ಬ್ರೂಕ್ಸ ಧೂಮಕೇತುವು ೧೯೫೫ನೇ ವರ್ಷದ ವಸಂತ ಋತುವಿನಲ್ಲಿ ಕಾಣಬಹುದು. ಆಲಬರ್ಸ ಎಂಬ ಧೂಮಕೇತುವು ಸನ್ನ ೧೯೬೦ ನೇ ವರ್ಷ ವಸಂತಋತುವಿನಲ್ಲಿ ಕಾಣುವದು. ಹ್ಯಾಲೇ ಎಂಬ ಧೂಮಕೇತುವು ಹಿಂದಕ್ಕೆ ಇ. ಸನ್ ೧೮೩೫ ನೇ ವರ್ಷ ದೃಶ್ಯವಾಗಿತ್ತು. ಅದೇ ಈ ವರ್ಷ ಬೇಸಿಗೆಯಲ್ಲಿ ಮೇ ತಿಂಗಳ ಸುಮಾರಿಗೆ ದೃಷ್ಟಿಗೋಚರವಾಗತಕ್ಕದ್ದಿರುವದು.

ಧೂಮಕೇತುವಿನ ಕಕ್ಷೆಗಳು ನಾನಾವಿಧವಾಗಿರುವವು. ಕೆಲವು ದೀರ್ಘವರ್ತುಲಾಕಾರವಾಗಿಯೂ, ಬೇರೆ ಕೆಲವು ಅತಿ ದೀರ್ಘವರ್ತುಲಾಕಾರ

ಗಿಯೂ ಇರುವವು. ದೀರ್ಘವರ್ತುಲಾಕಾರವಾದ ಕಕ್ಷೆಗಳುಳ್ಳ ಧೂಮಕೇತು ಗಳು ನಮ್ಮ ಸೂರ್ಯಮಾಲೆಯಿಂದ ಬಹು ದೂರದವರೆಗೆ ಹೋಗುವದಿಲ್ಲ; ಮತ್ತು ಅತಿದೀರ್ಘವರ್ತುಲಾಕೃತಿ ಕಕ್ಷೆಗಳುಳ್ಳ ಧೂಮಕೇತುಗಳಾದರೂ ನಿಯತಕಾಲಿಕ ಧೂಮಕೇತುಗಳಾಗಿದ್ದು, ಅವು ಸಂಚಾರ ಮಾಡುವ ಪ್ರದೇಶವು ಸಾಧಾರಣವಾಗಿ ನಮ್ಮ ಸೂರ್ಯನ ಹತ್ತರದ ಯಾವದೊಂದು ನಕ್ಷತ್ರದ ವರೆಗೆ ಇರುವದು. ಈ ಎರಡನೆಯ ಪ್ರಕಾರದ ಕಕ್ಷೆಗಳುಳ್ಳ ಧೂಮಕೇತುಗಳು ಮೇಲೆ ಹೇಳಿದಂತೆ ಬೇರೊಂದು ನಕ್ಷತ್ರಕ್ಕೆ ಸುತ್ತು ಹಾಕಿಕೊಂಡು ಸೂರ್ಯನ ಕಡೆಗೆ ಬರುವಾಗ ದಾರಿಯಲ್ಲಿ ಅವುಗಳಿಗೆ ವರುಣ, ಪ್ರಜಾಪತಿ, ಗುರು ಈ ಪ್ರಚಂಡಗ್ರಹಗಳ ಬಾಧೆಯಾಗಿ, ಅವುಗಳ ಪ್ರಬಲವಾದ ಆಕರ್ಷಣದಿಂದ ಆ ಧೂಮಕೇತುಗಳ ಅತಿ ದೀರ್ಘವರ್ತುಲಾಕೃತಿಯುಳ್ಳ ಕಕ್ಷೆಗಳು ದೀರ್ಘವರ್ತುಲಾಕೃತಿಯುಳ್ಳವಾಗುವವು; ಆನಂತರ ಅವು ದೂರದಲ್ಲಿರುವ ಬೇರೊಂದು ನಕ್ಷತ್ರದವರೆಗೆ ತಿರುಗುತ್ತಾ ಹೋಗುವ ಕ್ರಮವನ್ನು ಬಿಟ್ಟು ಬಿಡುವವು.

ಕೆಲವು ಧೂಮಕೇತುಗಳ ಕಕ್ಷೆಗಳು ಅನ್ವಸ್ತ (ಪ್ಯಾರಾಬೋಲಾ) ಆಕಾರದವೂ ಬೇರೆ ಕೆಲವು ಅಪಾಸ್ತ (ಹೈಪರಬೋಲಾ) ಆಕಾರದವೂ ಇರುವವು. ಕಾರಂಜಿಯೊಳಗಿನ ನೀರು ಒಳ್ಳೇ ಎತ್ತರದಿಂದ ಮೇಲಕ್ಕೆ ಪುಟಿದು ತಿರುಗಿ ಭೂಮಿಗೆ ಬೀಳುವಾಗ ಯಾವ ಆಕೃತಿಯನ್ನು ಹೊಂದುವದೋ ಅದಕ್ಕೆ ಅನ್ವಸ್ತ ಆಕಾರ ವೆನ್ನುತ್ತಾರೆ. ಗತಿಶಾಸ್ತ್ರದಲ್ಲಿ ದೀರ್ಘವರ್ತುಲಾಕೃತಿಗತಿಗೆ ಹತ್ತುವ ನಿಯಮಗಳೇ ಅನ್ವಸ್ತ ಹಾಗು ಅಪಾಸ್ತ ಗತಿಗಳಿಗೂ ಹತ್ತುವವು. ಆದರೆ ಅಭ್ಯಂತರವೇನಂದರೆ, ಅನ್ವಸ್ತ ಹಾಗು ಅಪಾಸ್ತ ಕಕ್ಷೆಗಳಲ್ಲಿ ತಿರುಗುವ ಖಸ್ಥ ಪದಾರ್ಥಗಳು ನಮ್ಮ ಸೂರ್ಯನನ್ನು ಒಮ್ಮೆ ಸುತ್ತು ಹಾಕಿಕೊಂಡು ಹೋದವೆಂದರೆ, ಅವು ಅಂತರಿಕ್ಷದಲ್ಲಿ ಬಹು ದೂರದವರೆಗೆ ಹೋಗುತ್ತವೆ. ಒಮ್ಮೊಮ್ಮೆ ಅವು ಪುನಃ ನಮ್ಮ ಸೂರ್ಯನ ದರ್ಶನವನ್ನು ಸಹ ತೆಗೆದುಕೊಳ್ಳುವದಿಲ್ಲ. ಬೇರೆ ನಕ್ಷತ್ರಗಳ ಸುತ್ತಲು ಅನ್ವಸ್ತ ಹಾಗು ಅಪಾಸ್ತ ಕಕ್ಷೆಗಳ ಮಾರ್ಗಗಳಿಂದ ತಿರುಗುವ ಎಷ್ಟೋ ಧೂಮಕೇತುಗಳು ಎಷ್ಟೋ ಸಾರೆ ನಮ್ಮ ಸೂರ್ಯನ ಬಳಿಗೆ ಅತಿಥಿಗಳಂತೆ ಬಂದಾಗ್ಗೆ ಅವುಗಳೊಳಗಿನ ಕೆಲವುಗಳನ್ನು ಗುರು, ಶನಿ ಈ ಗ್ರಹಗಳು ತಮ್ಮ ಆಕರ್ಷಣ ಶಕ್ತಿಯಿಂದ ಜಗ್ಗಿ ಹಿಡಿದು, ಪುನಃ ಅಂತರಿಕ್ಷ

ದಲ್ಲಿ ಸಂಚಾರ ಮಾಡಲು ಹೋಗಗೊಡುವದಿಲ್ಲ. ಅನಂತರ ಇಂಥ ಧೂಮ ಕೇತುಗಳು ನಿಯತಕಾಲಿಕ ಧೂಮಕೇತುಗಳಾಗಿ ನಮ್ಮ ಸೂರ್ಯಮಾಲೆಯ ಅವಯವಗಳಾಗುವವು. ಗುರು, ಶನಿ ಈ ಗ್ರಹಗಳು ಸ್ವೈರಗತಿಯ ಕೆಲವು ಧೂಮಕೇತುಗಳನ್ನು ನಿಯತಕಾಲಿಕ ಧೂಮಕೇತುಗಳನ್ನಾಗಿ ಮಾಡುವ ಕಾರ್ಯವು ಅವ್ಯಾಹತವಾಗಿ ನಡೆದಿರುವದರಿಂದ ಇಂಥ ಧೂಮ ಕೇತುಗಳ ಸಂಖ್ಯೆಯು ದಿನದಿನಕ್ಕೆ ಹೆಚ್ಚಾಗುತ್ತ ಹೋಗತಕ್ಕದ್ದೇ. ಈ ಧೂಮಕೇತುಗಳನ್ನು ಕುರಿತು ವಿಚಾರ ಮಾಡಲು, ಆಕಾಶದೊಳಗಿನ ಅನಂತವಾದ ನಿರ್ವಾತ ಪ್ರದೇಶದ ಬೇರೆ ಬೇರೆ ಭಾಗದ ಸ್ಥಿತಿರೀತಿಯನ್ನು ನಮಗೆ ತಿಳಿಸುವದಕ್ಕಾಗಿಯೇ ದೇವರು ಇವುಗಳನ್ನು ನಿರ್ಮಾಣ ಮಾಡಿರಬಹುದೆಂಬ ಕಲ್ಪನೆಯು ನಮ್ಮ ಮನಸ್ಸಿನಲ್ಲಿ ಬರುತ್ತದೆ. ಧೂಮಕೇತುಗಳು ಆಕಾಶದೊಳಗಿನ ಪರಮಾವಧಿ ಅಂತರದಿಂದ ಪ್ರವಾಸ ಮಾಡುತ್ತ ಬರುವಾಗ್ಗೆ ಮಾರ್ಗದಲ್ಲಿ ಅತಿಶಯವಾದ ಚಳಿಯಿಂದ ಗಡಗಡ ನಡುಗುತ್ತಿರಬಹುದೆಂಬಂತೆ ತೋರುತ್ತದೆ. ಯಾಕಂದರೆ, ಆಕಾಶದ ನಿರ್ವಾತ ಪ್ರದೇಶದಲ್ಲಿ ಎಷ್ಟು ಚಳಿಯು ಇರುತ್ತದೆಂಬದನ್ನು ತರ್ಕಿಸುವದು ಸಹ ಅಸಾಧ್ಯವೇ ಸರಿ. ಈ ಪರಿಸ್ಥಿತಿಯಲ್ಲಿ ಆ ಧೂಮಕೇತುಗಳು ಬಹಳ ಆಕುಂಚನವನ್ನು ಹೊಂದುವವು; ಮತ್ತು ನಮ್ಮ ಸೂರ್ಯನ ಸಮೀಪಕ್ಕೆ ಬಂದಬಳಿಕ ಅವುಗಳಲ್ಲಿ ಚೈತನ್ಯವು ಉತ್ಪನ್ನವಾಗಿ, ಕೈಕಾಲು ಚಾಚಿ ವಿಸ್ತಾರಹೊಂದುವವು. ಸೂರ್ಯನ ಸಾನ್ನಿಧ್ಯದಿಂದ ಧೂಮಕೇತುಗಳು ಈ ಪ್ರಕಾರದ ಸ್ಥಿತಿಯನ್ನು ಹೊಂದುತ್ತಿರಲು, ಎಲ್ಲಕ್ಕು ಮೊದಲು ಅವುಗಳ ತಲೆಯೊಳಗಿಂದ ಬಹಳ ತೇಜಸ್ವಿಯಾದ ಧೂಮ್ರಮಯ ಪದಾರ್ಥವು ಬಹಳ ಶಕ್ತಿಯಿಂದ ಸೂರ್ಯನ ಕಡೆಗೆ ಹೋಗಲು ಯತ್ನಿಸುವದು. ಆಗ ಸೂರ್ಯನು ಆ ಪದಾರ್ಥವನ್ನು ಅಷ್ಟೇ ಶಕ್ತಿಯಿಂದ ವಿರುದ್ಧ ದಿಕ್ಕಿನಿಂದ ಒತ್ತುವನು. ಅದರಿಂದ ಧೂಮಕೇತುವಿನ ಯಾವ ಮಗ್ಗಲು ಸೂರ್ಯನಿರುವನೋ ಅದರ ವಿರುದ್ಧ ಮಗ್ಗಲು, ಆ ಧೂಮಕೇತುವಿನ ಚಂಡಿಕೆಯು ಆಕಾಶ ಮಾರ್ಗದಲ್ಲಿ ವಿಸ್ತಾರವಾಗಿ ಹಬ್ಬಿದ್ದು ನಮ್ಮ ದೃಷ್ಟಿಗೆ ಬೀಳುವದು. ಎಷ್ಟೋ ಧೂಮಕೇತುಗಳಿಗೆ ಹಲವು ಬಾಲಗಳು ಇರುತ್ತವೆ. ಕೆಲವುಗಳ ತಲೆಯೊಳಗಿಂದ ಒಂದು ಬಾಲವೂ, ಒಂದು ಸರಳರೇಖಾಕೃತಿಯಾದ ಕಾರಂಜಿಯೂ ಹೊರಡುವವು.

ಇಲ್ಲಿಯವರೆಗೆ ಧೂಮಕೇತು ಅಂದರೇನು? ಧೂಮಕೇತುಗಳ ಅವಯವಗಳು ಯಾವವು? ಅವು ತಿರುಗುವ ಮಾರ್ಗಗಳು ಹ್ಯಾಗಿರುವವು? ಧೂಮಕೇತುಗಳು ಯಾವಾಗ್ಗೆ ಕಾಣಿಸುವವು? ಈ ಸಂಗತಿಗಳ ವಿವೇಚನವು ಮಾಡಲ್ಪಟ್ಟಿತು. ಇನ್ನು, ಧೂಮಕೇತುಗಳು ಯಾತರಿಂದ ಆಗಿರುತ್ತವೆ? ಅಂದರೆ, ಅವುಗಳ ಘಟಕಗಳು ಯಾವವು? ಎಂಬ ಬಗ್ಗೆ ಬೇರೆ ಬೇರೆ ಜ್ಯೋತಿಷ್ಯಕಾರರ ಅನೇಕ ಮತಗಳಲ್ಲಿ ಕೆಲವುಗಳನ್ನು ಇಲ್ಲಿ ಸಂಕ್ಷೇಪವಾಗಿ ಹೇಳುತ್ತೇವೆ:—

ಜಗದುತ್ಪತ್ತಿಯ ಕಾಲದಲ್ಲಿ ಉಂಟಾದ ತೇಜೋಮೇಘಗಳ ರೂಪಾಂತರಗಳೇ ಈ ಧೂಮಕೇತುಗಳೆಂದು ಎಷ್ಟೋ ಜನರ ತಿಳುವಳಿಕೆಯುಂಟು. ಧೂಮಕೇತುಗಳು ಆಕಾಶದಲ್ಲಿ ಸಂಚರಿಸುವಾಗ ತಮ್ಮ ಶರೀರದ ಎಷ್ಟೋ ಭಾಗವನ್ನು ಕಳಕೊಳ್ಳುವವು; ಅಥವಾ, ಘನರೂಪ ಹೊಂದಿ ಉಡುಗಿ ಸೂರ್ಯಗಳಾಗುವವು. ಸೂರ್ಯಗಳಾದನಂತರ ಅವುಗಳ ಉಷ್ಣತೆ ಕಡಿಮೆಯಾಗಿ ಗ್ರಹಗಳೂ ಉಪಗ್ರಹಗಳೂ ಸಿದ್ಧವಾಗುವವು. ಈ ಮೇರೆಗೆ ಜಗದುತ್ಪತ್ತಿಯ ಪರಂಪರೆಯು ಇರುವದು. ಆಕಾಶದಲ್ಲಿ ಕಾಣುವಂಥ ಅನೇಕ ತಾರಕಾರೂಪವುಳ್ಳ ಸೂರ್ಯಗಳು ಘನೀಭೂತವಾದ ಧೂಮಕೇತುಗಳ ದೃಶ್ಯಸ್ವರೂಪಗಳೆಂದು ಹೇಳಬಹುದು. ಈ ಸೂರ್ಯಗಳು ಆಕಾಶದೊಳಗಿನ ಒಂದು ಗೊತ್ತಾದ ಮಾರ್ಗದಿಂದ ತಿರುಗುವವು. ಈ ಮಾರ್ಗವು ಧೂಮಕೇತುಗಳ ಮಾರ್ಗಗಳಿಗಿಂತ ಎಷ್ಟೋ ನಿಯಮಿತವಾಗಿರುವದು. ನಮ್ಮ ಸೂರ್ಯನಿಂದ ಕೆಲವು ದ್ರವ್ಯಗಳು ಹೊರಟು, ಒಂದು ಸೇಕಂದಿಗೆ ೩೮೨ ಮೈಲು ವೇಗದಿಂದ ಹೊರಗೆ ಹೋಗಹತ್ತಿದರೆ, ಅವು ಪುನಃ ಎಂದೂ ಸೂರ್ಯನ ಆಕರ್ಷಣಕ್ಕೆ ಒಳಗಾಗದೆ, ಅತ್ತಿತ್ತ ತಿರುಗಾಡುವ ಧೂಮಕೇತುಗಳೇ ಆಗುವವು.

ಯಾವದೊಂದು ಪದಾರ್ಥವು ಸ್ವಪ್ರಕಾಶವುಳ್ಳದ್ದಿದ್ದರೆ, ಅದರೊಳಗಿಂದ ಹೊರಬೀಳುವ ಕಿರಣಗಳು ಪರಾವರ್ತನವಾಗಿ- ಧ್ರುವಾಭಿಸರಣ (polarization) ಹೊಂದುವದಿಲ್ಲವೆಂದು ದರ್ಶನಾನುಶಾಸನಶಾಸ್ತ್ರದ ಒಂದು ಸಿದ್ಧಾಂತವಿರುತ್ತದೆ. ಈ ನಿಯಮದ ಸಹಾಯದಿಂದ ಶಾಸ್ತ್ರಜ್ಞರು ಧೂಮಕೇತುಗಳು ಸ್ವಪ್ರಕಾಶಕಗಳಲ್ಲೆಂತಲೂ, ಚಂದ್ರನಂತೆ ಪರಪ್ರಕಾಶಕಪದಾರ್ಥಗಳೆಂತಲೂ, ಅವುಗಳ ಮೇಲಿನ ಪ್ರಕಾಶವು ಬೇರೊಂದು ಸ್ವಪ್ರಕಾಶಕ

ಜ್ಯೋತಿಯ, ಅಂದರೆ ಸೂರ್ಯನ ಪರಾವರ್ತನವೆಂತಲೂ ನಿರ್ಣಯಿಸಿದ್ದಾರೆ. ಆದರೆ ಯಾವದೊಂದು ಸ್ವಪ್ರಕಾಶಕ ಪದಾರ್ಥದ ಕಿರಣಗಳ ಪರಾವರ್ತನವು ಪರಪ್ರಕಾಶವುಳ್ಳ ಪದಾರ್ಥದ ಮೇಲೆ ಆಗಬೇಕಾದರೆ, ಆ ಪರಪ್ರಕಾಶಕ ಪದಾರ್ಥವು ಮೂರ್ತದ್ರವ್ಯವುಳ್ಳದ್ದಾಗಿರಬೇಕು. ಆದದರಿಂದ ಧೂಮಕೇತುಗಳು ಮೂರ್ತದ್ರವ್ಯಾತ್ಮಕಗಳೆಂದು ಇತ್ತಲಾಗಿ ಪ್ರಚಲಿತವಾದ ಮತವಿರುತ್ತದೆ. ಧೂಮಕೇತುವಿನ ಚಂಡಿಕೆಯೊಳಗಿಂದ ಆಚೇಕಡೆಯ ನಕ್ಷತ್ರಗಳು ಕಾಣುವಷ್ಟು ಆ ಚಂಡಿಕೆಯು ವಿರಲವಿದ್ದಾಗ್ಯೂ ಅದರ ಘಟಕ ದ್ರವ್ಯಗಳೊಳಗಿನ ಅತಿ ವಿರಳವಾದ ಕಣಕ್ಕೆ ಕೂಡಾ ಮಹತ್ವವು, ಅಥವಾ ಭಾರವು ಮೂಲತಃ ಇಲ್ಲೆಂದು ಹೇಳಲಾಗದು.

ವರ್ಣಲೇಖಕ (Spectroscope) ಯಂತ್ರದ ಸಹಾಯದಿಂದ ಧೂಮಕೇತುವಿನ ಕೇಂದ್ರದ ವರ್ಣಲೇಖವನ್ನು ತಕ್ಕೊಂಡರೆ ಆ ವರ್ಣಲೇಖವು ಒಂದು ತೇಜಸ್ವಿಯಾದ ಪಟ್ಟೆಯಾಗಿ ಕಂಡು ಬರುತ್ತದೆ. ಧೂಮಕೇತುವಿನ ಆವರಣದ ವರ್ಣಲೇಖವು ಕೇಂದ್ರದ ವರ್ಣಲೇಖಕ್ಕಿಂತಲೂ ಕಡಿಮೆ ತೇಜಸ್ವಿಯಾಗಿರುತ್ತದೆ. ಧೂಮಕೇತುವಿನ ವರ್ಣಲೇಖಗಳನ್ನು ಬಹಳ ಸೂಕ್ಷ್ಮ ರೀತಿಯಿಂದ ಪರೀಕ್ಷಿಸಿದರೆ ಅದರ ಶರೀರವು ಹೈಡ್ರೋಜನ್ ಮತ್ತು ಕಾರ್ಬನ್(ಇದ್ದಲಿ)ಇವೆರಡು ಪದಾರ್ಥಗಳುಳ್ಳದ್ದಿರುತ್ತದೆಂದು ತಿಳದು ಬರುತ್ತದೆ. ಧೂಮಕೇತುವಿಗೆ ಮೂರುಬಾಲಗಳಿದ್ದಾಗ ಅವುಗಳಲ್ಲಿ ಸರಳರೇಷಾಕೃತಿಯುಳ್ಳ ಬಾಲವನ್ನು ಪರೀಕ್ಷಿಸಿದರೆ, ಅದು ಬಹುಶಃ ಹೈಡ್ರೋಜನವಾಯುಮಯವಾಗಿರುತ್ತದೆ. ಬಾಲವು ಸ್ವಲ್ಪಡೊಂಕಾಗಿದ್ದರೆ ಹೈಡ್ರೋ-ಕಾರ್ಬನವುಳ್ಳದ್ದಾಗಿರುತ್ತದೆ. ಬಹಳೇ ವಕ್ರವಾಗಿ ಕಂಸಾಕಾರವಾಗಿದ್ದರೆ ಅದರಲ್ಲಿ ಕಬ್ಬಿಣವೂ ಮ್ಯಾಂಗನೀಜ ಧಾತುವೂ ಇರುತ್ತವೆ.

ಪೃಥ್ವಿಯ ಮೇಲೆ ಕೆಲಕೆಲವು ಸಾರೆ ಆಕಾಶದೊಳಗಿಂದ ಕಲ್ಲುಗಳು ಬೀಳುವವಷ್ಟೆ. ಆಕಾಶದಲ್ಲಿ ಇಂಥ ಪದಾರ್ಥಗಳು ಗುಂಪುಗುಂಪಾಗಿ ಭ್ರಮಣ ಮಾಡುತ್ತಿರುತ್ತವೆ. ಇಂಥ ಗುಂಪುಗಳಿಗೆ ಅಶನಿಸಮೂಹಗಳೆಂದು ಅನ್ನುತ್ತಾರೆ. ಈ ಅಶನಿಸಮೂಹಗಳು ಆಕಾಶದಲ್ಲಿ ಯಾವ ಮಾರ್ಗದಿಂದ ಭ್ರಮಣ ಮಾಡುವವೋ ಆ ಮಾರ್ಗದಿಂದಲೇ ಧೂಮಕೇತುಗಳೂ ಸಂಚಾರ ಮಾಡುವವು. ಈ ಕಾರಣದಿಂದ ಅಶನಿಸಮೂಹಗ

ಳಿಗೂ ಧೂಮಕೇತುಗಳಿಗೂ ಸಂಬಂಧವಿರಬಹುದೆಂದು ಜ್ಯೋತಿಷರು ತರ್ಕಿಸುವರು. ಅಶನಿಗಳಲ್ಲಿ ಕೆಲವು ಪೃಥ್ವಿಯ ಮೇಲೆ ಬೀಳುವವು. ಇಂಥ ಕಲ್ಲುಗಳನ್ನು ರಸಾಯನ ರೀತಿಯಿಂದ ಪೃಥಕ್ಕರಣ ಮಾಡ ಲಾಗಿ, ಅವುಗಳಲ್ಲಿ ಹೈಡ್ರೋಜನ್, ಕಾರ್ಬನ್ ಇವೆರಡು ಪದಾರ್ಥಗಳೇ ಇದ್ದದ್ದು ಕಂಡು ಬರುತ್ತದೆ. ಆದಕಾರಣ ಧೂಮಕೇತುಗಳಾದರೂ ಇವೆರಡು ಪದಾರ್ಥಗಳಿಂದಲೇ ಉಂಟಾಗಿರುತ್ತವೆಂದು ಊಹಿಸಲಿಕ್ಕೆ ಅಡ್ಡಿ ತೋರುವದಿಲ್ಲ.

ಕಳೆದ ಜೂನ ಜುಲೈ ತಿಂಗಳಲ್ಲಿ ಒಂದು ಧೂಮಕೇತುವು ದೃಶ್ಯವಾ ಗಿತ್ತು. ಈ ಧೂಮಕೇತುವಿನಿಂದ ನಮ್ಮ ಚಂದ್ರನಿಗೆ ವಿದ್ಯುತ್ತು ದೊರೆ ಯಿತೆಂತಲೂ, ಅದರಿಂದ ಮೃತಚಂದ್ರಗೋಲದಲ್ಲಿ ಸ್ವಲ್ಪ ಚೈತನ್ಯ ಉಂಟಾ ಯಿತೆಂತಲೂ, ಚಂದ್ರನ ವಾತಾವರಣವು ಜಾಗೃತವಾಗಿ, ಆದರಲ್ಲಿ ನಮ್ಮ ಪೃಥ್ವಿಯ ವಾತಾವರಣದಲ್ಲಿರುವಂತೆ ವಕ್ರೀಭವನ ಪರಾವರ್ತನ ಗುಣ ಗಳು ಉಂಟಾದವೆಂತಲೂ ಅಮೇರಿಕದ ಜ್ಯೋತಿಷಿಗಳ ಮತವಿರುತ್ತದೆ. ಧೂಮಕೇತುವಿನಿಂದ ಚಂದ್ರನಿಗೆ ವಿದ್ಯುತ್ತಿನ ಸಂಪಾದನೆಯಾದದ್ದೇ ನಿಜ ವಾದರೆ, ಧೂಮಕೇತುವೆಂಬದೊಂದು ವಿದ್ಯುತ್ತಿನ ದೊಡ್ಡ ಸಂಗ್ರಹವಾ ಗಿದ್ದು, ತನಗೆ ಬೆಟ್ಟಿಯಾದವರಿಗೆ ಆ ಸಂಗ್ರಹದೊಳಗಿಂದ ಅಲ್ಪಸ್ವಲ್ಪ ಪ್ರಸಾದವನ್ನು ಕೊಡುತ್ತ ಹೋಗುತ್ತದೆಂದು ಹೇಳಬಹುದು. ಹಾಗಾದರೆ ಈ ವರ್ಷ ಹ್ಯಾಲೆ ಎಂಬ ಧೂಮಕೇತುವು ಪೃಥ್ವಿಯ ಸನ್ನಿಧಿಗೆ ಬಂದಾಗ ನಮ್ಮ ಪೃಥ್ವಿಗೂ ಅಲ್ಪಸ್ವಲ್ಪ ವಿದ್ಯುತ್ಪ್ರಸಾದವು ದೊರೆತು, ಆದರ ಪರಿ ಣಾಮವು ಪೃಥ್ವಿಯ ವಾತಾವರಣದಲ್ಲಿ ಉಂಟಾಗಿ, ಈ ವರ್ಷ ಹೆಚ್ಚು ಮಳೆಯಾದರೂ ಆಗಬಹುದು. ಇತರ ಬಸ್ಥ ದೇಹಗಳ ಪರಿಣಾಮವು ನಮ್ಮ ಪೃಥ್ವಿಯ ಮೇಲೆ ಆಗುತ್ತದೆಂಬ ಸಂಗತಿಯನ್ನು ಹೊಸದಾಗಿ ಹೇಳ ಬೇಕಾಗಿಲ್ಲ. ಕಳೆದ ಸಪ್ಟಂಬರ ತಿಂಗಳ ೨೩ ನೆಯ ತಾರೀಖಿನ ದಿವಸ ಮಂಗಳನು ಪೃಥ್ವಿಯ ತೀರ ಸಮೀಪಕ್ಕೆ ಬರಲು, ಬಹಳಮಳೆಯಾಯಿತು; ಆಸ್ಟ್ರೇಲಿಯದಲ್ಲಿ “ಆರೋರಾ ಬೋರಿಯಾಲಿಸ್” ಎಂಬ ದಕ್ಷಿಣಧ್ರುವ ತೇಜವು ಕಾಣಿಸಲಾರಂಭಿಸಿತು; ಹಾಗೂ ಪೃಥ್ವಿಯಲ್ಲಿ ಎಲ್ಲ ಕಡೆಯಲ್ಲಿ ಲೋಹಚುಂಬಕದ ಜಾಗೃತಿಯ ಪರಿಣಾಮವು ಗೋಚರವಾಯಿತು; ಈ ನಮ್ಮ ಹಿಂದುಸ್ತಾನದಲ್ಲಂತು ಒಂದು ದಿನ ಆರು ತಾಸುಗಳ ವರೆಗೆ ತಾರಾ

ಯಂತ್ರಗಳು ಸೆಟೆಕೊಂಡು ಕೂತಂತೆ ತಮ್ಮ ಕೆಲಸವನ್ನೇ ಮಾಡುವದನ್ನು ಬಿಟ್ಟುಬಿಟ್ಟವು!!!

ಕಳೆದ ಜನವರಿ ೧೭ನೆಯ ತಾರೀಖಿನ ದಿವಸ ಜೋಹಾನೆಸ್‌ಬರ್ಗ, ಕೇಂಬ್ರಿಜ್, ಜಿಬ್ರಾಲ್ಟರ ಈ ಸ್ಥಳಗಳಲ್ಲಿ ಸಾಯಂಕಾಲಕ್ಕೆ ಒಂದು ಧೂಮಕೇತುವು ದೃಷ್ಟಿಗೋಚರವಾಯಿತು. ಅದನ್ನು ೨೦ನೇ ಜನವರಿ ದಿವಸ ಸುಯೇಜದ ಕಾಲುವೆಯೊಳಗಿಂದ ಹೋಗುವ ಹಡಗದವರು ನೋಡಿದರು. ಈ ಧೂಮಕೇತುವಿನ ವಿಷಯದಲ್ಲಿ ವರ್ತಿಸಿದ ಒಂದು ಚಮತ್ಕಾರವಾದ ಸಂಗತಿಯೇನಂದರೆ, ಇದನ್ನು ಮೊದಲು ನೋಡಿದವರು ಪಶ್ಚಿಮದಿಕ್ಕಿಗೆ ಶುಕ್ರನಕೆಳಗೆ ಸಾಯಂಕಾಲದಲ್ಲಿ ಒಂದು ದೊಡ್ಡ (ಗ್ರೇಟ)ಧೂಮಕೇತುವು ಕಾಣಿಸಲಾರಂಭಿಸಿದೆ, ಎಂದು ತಂತಿಯಿಂದ ಕಳಿಸಿದ ಸುದ್ದಿಯಲ್ಲಿ "ಗ್ರೇಟ" ಎಂಬ ಶಬ್ದಕ್ಕೆ ಬದಲಾಗಿ "ಡ್ರೇಕ" ಎಂಬ ಶಬ್ದವು ತಪ್ಪಿ ಬಿದ್ದದರಿಂದ ಈ ಧೂಮಕೇತುವಿಗೆ "ಡ್ರೇಕ" ಎಂದು ಹೆಸರು ಉಂಟಾಗಿದೆ! ಈ ಧೂಮಕೇತುವನ್ನು ಈ ದೇಶದಲ್ಲಿಯೂ ಹಲವರು ನೋಡಿದವರುಂಟು. ಇದರ ನಕ್ಷತ್ರವು ಸೂರ್ಯ-ಶುಕ್ರರ ಸರಿಯಾಗಿ ನಡುವೆ, ಪಶ್ಚಿಮ ಕ್ಷಿತಿಜದಿಂದ ೧೫ ಅಂಶ ಅಂತರದ ಮೇಲೆ ಕಾಣಿಸುತ್ತಿತ್ತು; ಮತ್ತು ಅದರ ಬಾಲವು ಸೂರ್ಯನ ವಿರುದ್ಧ ದಿಕ್ಕಿಗೆ ಸ್ವಲ್ಪ ಉತ್ತರ ದಿಕ್ಕಿಗೆ ಒಲೆದಿತ್ತು. ಜನವರಿ ೨೧ನೆಯ ತಾರೀಖಿನ ದಿವಸ ಆ ಬಾಲವು ೭ ಅಂಶ, ಅಂದರೆ ಸುಮಾರು ೧೪ ಪೂರ್ಣ ಚಂದ್ರಗಳು ವ್ಯಾಪಿಸುವಷ್ಟು ಸ್ಥಳವನ್ನು ವ್ಯಾಪಿಸಿತು. ಇದರ ನಕ್ಷತ್ರದ ವ್ಯಾಸವು ಪೃಥ್ವಿಯ ವ್ಯಾಸದ ಮೂರುಮಡಿಯಾಗಿತ್ತು. ಇದು ಪಶ್ಚಿಮದಿಂದ ಪೂರ್ವಕ್ಕೆ ಅನ್ವಸ್ತಮಾರ್ಗವಾಗಿ ಹೋಗುತ್ತಿದ್ದದರಿಂದ ನಮ್ಮ ಸೂರ್ಯಮಾಲೆಯನ್ನು ಬಿಟ್ಟು ಹೋಗುವ ಸಿದ್ಧತೆಯಲ್ಲಿತ್ತು. ಇದು ಸೂರ್ಯನಿಗೆ ತೀರ ಸಮೀಪವಾಗಿ, ಅಂದರೆ ೨೦ ಲಕ್ಷ ಮೈಲು ಮಾತ್ರ ದೂರದಲ್ಲಿ ಹೋಗುತ್ತಿದ್ದದರಿಂದ ಬಹಳ ತೇಜವುಳ್ಳದ್ದಾಗಿ ಕಾಣಿಸುತ್ತಿತ್ತು. ಅದರ ಘಟಕಗಳಲ್ಲಿ "ಸೋಡಿಯಮ್" ಧಾತುವು ಇತ್ತೆಂದು ಅಮೇರಿಕದ ಜ್ಯೋತಿಷಿಗಳ ಅಭಿಪ್ರಾಯವಿರುತ್ತದೆ. ಸೂರ್ಯನಿಗೆ ತೀರ ಸಮೀಪವಾಗಿ ಹಾಯ್ದು ಹೋಗುವ ಧೂಮಕೇತುಗಳಲ್ಲಿ ಸೋಡಿಯಮ್ ಧಾತುವಿರುತ್ತದೆಂದು ನಿಯಮ ಉಂಟು. ಸನ್ ೧೮೮೨ನೇ ಇಸವಿಯಲ್ಲಿ ಕಾಣಿಸಿದ ಧೂಮಕೇತುವಿನಲ್ಲಿಯೂ ಸೋಡಿಯಮ್ ಧಾತುವಿತ್ತು.

ಇನ್ನು, ಧೂಮಕೇತುಗಳ ವಿಷಯದಲ್ಲಿ ನಮ್ಮ ಪ್ರಾಚೀನ ಗ್ರಂಥಗಳೊಳಗಿನ ಕೆಲವು ಸಂಗತಿಗಳನ್ನು ಹೇಳುತ್ತೇವೆ:—ಪಂಚಸಿದ್ಧಾಂತಿಕೆಯ ಕರ್ತನಾದ ವರಾಹಮಿಹಿರನೂ, ಅವನ ಬೃಹತ್ಸಂಹಿತೆಯೆಂಬ ಗ್ರಂಥದ ಟೀಕಾಕಾರನಾದ ಭಟೋತ್ಪಲನೆಂಬವನೂ ತಮ್ಮ ಗ್ರಂಥಗಳಲ್ಲಿ ಬಹಳಕಡೆಯಲ್ಲಿ ಧೂಮಕೇತುಗಳನ್ನು ಉಲ್ಲೇಖಿಸಿದ್ದಾರೆ. ವರಾಹಮಿಹಿರನು ಹೇಳುವದೇನಂದರೆ—"ನೂರಾಒಂದು ಧೂಮಕೇತುಗಳುಂಟೆಂದು ಕೆಲವರು ಋಷಿಗಳು ಹೇಳುವರು; ಒಂದುಸಾವಿರ ಧೂಮಕೇತುಗಳುಂಟೆಂದು ಕೆಲವರು ಹೇಳುವರು; ಸಾವಿರ ಧೂಮಕೇತುಗಳಲ್ಲಿ ಕೆಲವು ಸೂರ್ಯನಿಂದ ಹುಟ್ಟಿರುವವು; ಕೆಲವು ಚಂದ್ರಪುತ್ರಗಳಾಗಿರುವವು; ಮತ್ತು ಕೆಲವು ಬುಧ ಮೊದಲಾದ ಪಂಚಗ್ರಹಗಳಿಂದಲೂ ರಾಹು, ಪೃಥ್ವಿ, ಮೃತ್ಯು, ಬ್ರಹ್ಮಾ, ಅಗ್ನಿ, ವಾಯು, ಪ್ರಜಾಪತಿ, ವರುಣ ಇವುಗಳಿಂದಲೂ, ಕೆಲವು ಅಂತರಿಕ್ಷದಲ್ಲಿ ಬೇರೆ ಬೇರೆ ದಿಕ್ಕುಗಳಿಂದಲೂ ಹುಟ್ಟದವುಗಳು ಇರುತ್ತವೆ." ಸಾಂಪ್ರತದ ಪಾಶ್ಚಿಮಾತ್ಯ ಜೋತಿಷಗ್ರಂಥಗಳಲ್ಲಿ ವರ್ಣಿಸಲ್ಪಟ್ಟಂಥ ನಾನಾತರದ ಧೂಮಕೇತುಗಳಂಥ ಧೂಮಕೇತುಗಳಲ್ಲದೆ ಇನ್ನೂ ಹಲವು ತರದ ಧೂಮಕೇತುಗಳನ್ನು ವರಾಹಮಿಹಿರನು ವರ್ಣಿಸಿದ್ದಾನೆ. ಅವುಗಳಲ್ಲಿ ಒಂದು ಕೇತುವಿನ ವರ್ಣನೆಯು ಈ ಪ್ರಕಾರ ಇರುತ್ತದೆ:—"ಚಲಕೇತುವು ಮೊದಲು ಪಶ್ಚಿಮಕ್ಕೆ ತೋರಿಬರುತ್ತದೆ. ಅದರ ಚಂಡಿಕೆಯು ದಕ್ಷಿಣಕ್ಕೆ ಒಲೆದಿರುವದು; ಅದು ಒಂದು ಅಂಗುಲದಷ್ಟು ಎತ್ತರವಾಗಿರುವದು. ಮುಂದೆ ಈ ಧೂಮಕೇತುವು ಉತ್ತರಕ್ಕೆ ಸಾಗಿದ ಹಾಗೆ ಹೆಚ್ಚು ಹೆಚ್ಚು ದೊಡ್ಡದಾಗಿ ಕಾಣಿಸುವದು. ಸಪ್ತರ್ಷಿಗಳು, ಧ್ರುವ, ಅಭಿಜಿತ್ ಇವುಗಳನ್ನು ಮುಟ್ಟಿ, ಈ ಧೂಮಕೇತುವು ಹಿಂದಿರುಗುವದು; ಹಾಗೂ ಆಕಾಶವನ್ನು ಅರ್ಧ ಕ್ರಮಿಸಿ, ದಕ್ಷಿಣದಿಕ್ಕಿಗೆ ಅದೃಶ್ಯವಾಗುವದು. ಬೃಹತ್ಸಂಹಿತೆಯ ಟೀಕಾಕಾರನಾದ ಭಟೋತ್ಪಲನು ಬೃಹತ್ಸಂಹಿತೆಯ ೧೧ನೆಯ ಅಧ್ಯಾಯದ ಟೀಕೆಯಲ್ಲಿ ಪರಾಶರ ಮುಂತಾದವರ ಅನೇಕ ವಚನಗಳನ್ನು ಕೊಟ್ಟಿದ್ದಾನೆ. ಅವುಗಳಲ್ಲಿ ಕೆಲವುಗಳ ಅರ್ಥವನ್ನು ಇಲ್ಲಿ ಕೊಡುತ್ತೇವೆ:— ಪೈತಾಮಹಕೇತುವು ೫೦೦ ವರ್ಷ ಸಂಚಾರಮಾಡಿ, ಅಂದರೆ ೫೦೦ ವರ್ಷಕ್ಕೊಮ್ಮೆ ಕಾಣಿಸುವದು. ಉದ್ದಾಲ

೮ಕ ಶ್ವೇತಕೇತುವು ೧೧೧೦ ವರ್ಷ ಪ್ರವಾಸಮಾಡಿ ದೃಷ್ಟಿಗೋಚರವಾಗುವದು. ಶೂಲಾಗ್ರದಂಥ ಚಂಡಿಕೆಯುಳ್ಳ ಕಾಶ್ಯಪವೆಂಬ ಶ್ವೇತಕೇತುವು ೧೫೦೦ ವರ್ಷ ಸಂಚರಿಸಿ, ಪದ್ಮಕೇತುವೆಂಬ ಧೂಮಕೇತುವು ಬಂದುಹೋದ ನಂತರ ಪೂರ್ವದಿಕ್ಕಿಗೆ ಉದಯಿಸುವದು. ಅದರ ಚಂಡಿಕೆಯು ಅರ್ಧಪ್ರದಕ್ಷಿಣಾಕಾರವಾಗಿರುವದು. ಅದು ಬ್ರಾಹ್ಮನಕ್ಷತ್ರ, ಧ್ರುವ, ಬ್ರಹ್ಮರಾಶಿ, ಸಪ್ತರ್ಷಿ ಇವುಗಳನ್ನು ಸ್ಪರ್ಶಮಾಡಿ, ಆಕಾಶದ ೩ ಭಾಗವನ್ನು ಆಕ್ರಮಿಸಿ ಅಪಸವ್ಯ ಮಾರ್ಗದಿಂದ ಹಿಂದಕ್ಕೆ ಸರಿದು ಅಸ್ತಂಗತವಾಗುವದು. ಅಗ್ನಿಪುತ್ರ-ರಶ್ಮಿಕೇತು-ವೆಂಬದು ೧೦೦ ವರ್ಷ ಪ್ರವಾಸಮಾಡಿ ಆವ ಕೇತುವು ಬಂದು ಹೋದ ತರುವಾಯ ಕೃತ್ತಿಕಾ ನಕ್ಷತ್ರದಲ್ಲಿ ಉದಯಿಸುವದು." ಸಹಸ್ರಧೂಮಕೇತುಗಳಲ್ಲಿ ಕೆಲವು ಬುಧ ಮೊದಲಾದ ಗ್ರಹಗಳಿಂದಲೂ, ಪೃಥ್ವಿ ಸೂರ್ಯ ಇವುಗಳಿಂದಲೂ ಹುಟ್ಟಿರುವವೆಂದು ಮೇಲೆ ಹೇಳಿದ್ದು ಲಕ್ಷ್ಯದಲ್ಲಿಡತಕ್ಕ ಸಂಗತಿಯಾಗಿರುತ್ತದೆ. ಯಾಕಂದರೆ, ಸಾಂಪ್ರತಕ್ಕೆ ಪಾಶ್ಚಾತ್ಯ ಜ್ಯೋತಿರ್ವಿದರಲ್ಲಿ ಪ್ರಸಿದ್ಧ ಜ್ಯೋತಿಷಿಯಾದ ಪ್ರಾಕ್ಟರನ ಅಭಿಪ್ರಾಯವಾದರೂ ಹೀಗೇ ಇರುತ್ತದೆ.

ಕ್ರಿಸ್ತಶಕದ ಪ್ರಾರಂಭದಿಂದ ಈ ವರೆಗೆ ಬರಿಗಣ್ಣಿನಿಂದ ಸುಮಾರು ೫೦೦ ಧೂಮಕೇತುಗಳು ಕಾಣಿಸಿದ ಬಗ್ಗೆ ಪಾಶ್ಚಾತ್ಯ ಜ್ಯೋತಿಷಿಗಳ ಗ್ರಂಥಗಳಲ್ಲಿ ಉಲ್ಲೇಖಗಳಿವೆ. ಅಂದರೆ, ಸರಾಸರಿಮಾನದಿಂದ ಪ್ರತಿ ಒಂದು ಶತಮಾನದಲ್ಲಿ ೨೭ ಧೂಮಕೇತುಗಳು ದೃಷ್ಟಿಗೆ ಬಿದ್ದಂತಾಯಿತು. ೩ನೇ, ೬ನೇಶತಮಾನಗಳಲ್ಲಿ ೪೦ಕ್ಕಿಂತ ಹೆಚ್ಚು ಧೂಮಕೇತುಗಳು ಕಾಣಿಸಿದವು; ೫ನೇ ೮ನೇ, ೧೭ನೇ ಶತಮಾನಗಳಲ್ಲಿ ೧೬ಕ್ಕಿಂತ ಹೆಚ್ಚು ಕಾಣಿಸಲಿಲ್ಲ. ಇವಲ್ಲದೆ ದುರ್ಬಿಣಿಯು ಪ್ರಚಾರದಲ್ಲಿ ಬಂದಂದಿನಿಂದ ದುರ್ಬಿಣಿಯ ಸಹಾಯದಿಂದ ಸುಮಾರು ೨೫೦ ಕೇತುಗಳು ಈವರೆಗೆ ಕಂಡು ಹಿಡಿಯಲ್ಪಟ್ಟವೆ. ಪ್ರತಿ ವರ್ಷ ಬಹುಶಃ ೭।೮ ಹೊಸ ಧೂಮಕೇತುಗಳು ದೃಷ್ಟಿಗೋಚರವಾಗುವವು.

ನಮ್ಮ ಋಷಿಗಳು ಹೇಳಿದ ೧ ಸಾವಿರ ಧೂಮಕೇತುಗಳು ಕ್ರಿಸ್ತಶಕದ ಪೂರ್ವದಲ್ಲಿ ಕಂಡಂಥವುಗಳು. ಅನಂತರ ೧೯೦೦ ವರ್ಷಗಳಲ್ಲಿ ೫೦೦ ಧೂಮಕೇತುಗಳು ದೃಷ್ಟಿಗೋಚರವಾದದ್ದರಮೇಲಿಂದ ವಿಚಾರಮಾಡಿ ನೋಡಲಾಗಿ, ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟ

ಕೇತುಗಳು ಕ್ರಿಸ್ತಶಕದ ಪೂರ್ವದಲ್ಲಿ ಕನಿಷ್ಟಪಕ್ಷಕ್ಕೆ ೩೭೦೦ ವರ್ಷಗಳಲ್ಲಿ ದೃಗ್ಗೋಚರವಾದಂಥವುಗಳಿರಬೇಕೆಂದು ಊಹಿಸಬೇಕಾಗುತ್ತದೆ. ಪಾಶ್ಚಾತ್ಯ ಜ್ಯೋತಿಷಗ್ರಂಥಗಳಲ್ಲಿ ಹೇಳಲ್ಪಟ್ಟ ಧೂಮಕೇತುಗಳು ಕಾಣಿಸಿದ ಆ ಆ ವರ್ಷಗಳಲ್ಲಿ ಏನಾದರೊಂದು ಅಲೌಕಿಕ ಸಂಗತಿಯು ವರ್ತಿಸಿದ್ದಾಗಿ ಕಂಡುಬರುತ್ತದೆ. ಕ್ರಿಸ್ತಶಕದಮುಂಚೆ ೪೩ನೇ ವರ್ಷ ಒಂದು ಧೂಮಕೇತುವು ದೃಶ್ಯವಾಯಿತು. ಅದೇ ವರ್ಷ ರೋಮನ್ ಜನರ ಮುಖ್ಯಸ್ಥನಾದ ಜ್ಯುಲಿಯಸ್ ಸೀಝರನೆಂಬ ಲೋಕೋತ್ತರ ಮನುಷ್ಯನ ಕೊಲೆಯಾದ್ದರಿಂದ ಅವನ ಆತ್ಮವೇ ಸ್ವರ್ಗಕ್ಕೆ ಧೂಮಕೇತುವಿನ ರೂಪದಿಂದ ಹೋಗುತ್ತದೆಂದು ಜನರು ಎಣಿಸಿದರು. ಕ್ರಿ. ಶಕದ ೭೯ನೇ ವರ್ಷ ನಮ್ಮ ದೇಶದ ಶಾಲಿವಾಹನಶಕವು ಪ್ರಾರಂಭವಾಯಿತಷ್ಟೆ. ಆ ವರ್ಷವೂ ಒಂದು ಧೂಮಕೇತುವು ಕಾಣಿಸಿತು. ಕ್ರಿ. ಶಕದ ೬೩೨ನೇ ವರ್ಷ ಮಹಮ್ಮದ ಪೈಗಂಬರರು ನಿವರ್ತಿಸಿದಾಗ ಒಂದು ಧೂಮಕೇತುವು ಉದಯಿಸಿತ್ತು. ಸನ್ ೧೦೬೬ ಇಸ್ವಿಯಲ್ಲಿ ಕಾಣಿಸಿದ ಧೂಮಕೇತುವು ಇಂಗ್ಲಂಡವನ್ನು ಗೆದ್ದ ಉಯಿಲ್ಯಮ್ ಅರಸನಿಗೆ ಅನುಕೂಲವಾಗಿದ್ದರೂ ಇಂಗ್ಲಂಡಕ್ಕೆ ಪ್ರತಿಕೂಲವಾಗಿತ್ತು. ಕಾನ್ಸಟಂಟಿನೋಪಲದಲ್ಲಿದ್ದ ರೋಮನ್ ರಾಜ್ಯವನ್ನು ಮುಸಲಮಾನರು ನಾಶಮಾಡಿದ ಸುಮಾರಕ್ಕೆ, ಅಂದರೆ ಸನ್ ೧೪೫೬ರಲ್ಲಿ ಹ್ಯಾಲೆ ಎಂಬ ಧೂಮಕೇತುವು ದೃಗ್ಗೋಚರವಾಯಿತು. ಆ ಧೂಮಕೇತುವಿನಿಂದ ಸೂಚಿಸಲ್ಪಟ್ಟ ಅರಿಷ್ಟನಿವಾರಣೆಗೋಸ್ಕರ ಆಗಿನ ಪೋಪನೆಂಬ ಕ್ರೈಸ್ತ ಧರ್ಮದ ಗುರುವು ದೇಶದೊಳಗಿನ ಯಾವತ್ತು ದೇವಾಲಯಗಳಲ್ಲಿ ಪ್ರಾರ್ಥನೆಗಳನ್ನು ಏರ್ಪಡಿಸಿದನು. ಆದರೂ ಮುಂದೆ ಸ್ವಲ್ಪ ದಿವಸಗಳಲ್ಲಿ ಆದ ಯುದ್ಧದಲ್ಲಿ ಸಾವಿರಾರು ಜನರು ಸಾಯುವದು ತಪ್ಪಲಿಲ್ಲ. ಸನ್ ೧೬೬೪ ಮತ್ತು ೧೬೬೬ನೇ ವರ್ಷಗಳಲ್ಲಿ ಕಾಣಿಸಿದ ಧೂಮಕೇತುಗಳು ಇಂಗ್ಲಂಡಕ್ಕೆ ಪ್ಲೇಗವನ್ನೂ ಅಗ್ನಿಪ್ರಳಯವನ್ನೂ ಬರಮಾಡಿದವೆಂದು ಎಣಿಸಲ್ಪಡುವದು. ನಮ್ಮ ಹಿಂದುಸ್ಥಾನದಲ್ಲಿ ಸನ್ ೧೮೫೬ನೇ ವರ್ಷದ ಬಂಡಾಯದ ಕಾಲದಲ್ಲಿ ಒಂದು ಭವ್ಯವಾದ ಧೂಮಕೇತುವು ಕಾಣಿಸುತ್ತಿತೆಂದು ಅದನ್ನು ಕಣ್ಣಮುಟ್ಟ ನೋಡಿದವರು ಈಗಲೂ ಹೇಳುತ್ತಾರೆ. ಈ ಧೂಮಕೇತುವು ಮತ್ತೆ ೩೦೦೦ ವರ್ಷಗಳನಂತರ ಕಾಣಿಸುವದು. ಇತ್ತಲಾಗಿ ೧೮೮೨ ಇಸ್ವಿಯಲ್ಲಿ ಕಾಣಿಸಿದ ಪ್ರಚಂ

ಷವಾದ ಧೂಮಕೇತುವು ನಿಯತಕಾಲಿಕವಾದದ್ದಲ್ಲ. ಇಂಥ ಭವ್ಯವಾದ ಮೂರ್ತಿಯು ಪುನಃ ಯಾವಾಗ ಕಾಣಿಸುವದೆಂಬ ಬಗ್ಗೆ ನಿಯಮವನ್ನು ಹೇಳಲಸಾಧ್ಯವು.

ನಿಯತಕಾಲಿಕವಾದ ದೊಡ್ಡ ಧೂಮಕೇತುಗಳಲ್ಲಿ ಹ್ಯಾಲೆ ಎಂಬ ಧೂಮಕೇತುವು ಈಗ ೬--೭ ತಿಂಗಳಿಂದ ದುರ್ಬಿಣಿಯೊಳಗಿಂದ ಕಾಣಿಸಲಾರಂಭಿಸಿದೆ. ಈ ಧೂಮಕೇತುವು ಬರುವ ಮೇ ತಿಂಗಳ ಮಧ್ಯದ ಸುಮಾರಕ್ಕೆ ಬರಿಗಣ್ಣಿಗೆ ಕಾಣಿಸುವದು. ಆದಕಾರಣ ಅದರ ಸಂಕ್ಷಿಪ್ತವಾದ ಇತಿಹಾಸವನ್ನು ಹೇಳಿ ಈ ಲೇಖವನ್ನು ಮುಗಿಸುವೆವು. ದೊಡ್ಡದೊಡ್ಡ ಗ್ರಹಗಳು ಧೂಮಕೇತುಗಳನ್ನು ಆಕರ್ಷಿಸಿ, ಅವುಗಳ ವೇಗವನ್ನು ಕಡಿಮೆಮಾಡುತ್ತವೆಂಬ ಬಗ್ಗೆ ಹ್ಯಾಲೆ ಧೂಮಕೇತುವು ಸ್ಪಷ್ಟವಾದ ಉದಾಹರಣೆಯಾಗಿರುತ್ತದೆ. ಈ ಧೂಮಕೇತುವು ಇ. ಸನ್ ೪೫೧ರಲ್ಲಿ ಜುಲೈ ೩ನೇ ತಾರೀಖಿಗೆ ಕಾಣಿಸಿತು, ೭೬೦ ರಲ್ಲಿ ಜೂನ ೧೧ನೇ ತಾರೀಖಿಗೆ ಕಾಣಿಸಿತು, ೧೩೭೮ರಲ್ಲಿ ನವಂಬರ ೮ನೇ ತಾರೀಖಿಗೆ, ೧೪೫೬ ರಲ್ಲಿ ಜೂನ ೯ನೇ ತಾರೀಖಿಗೆ, ೧೫೩೧ ರಲ್ಲಿ ಅಗಸ್ಟ ೨೪ನೇ ತಾರೀಖಿಗೆ, ೧೬೦೭ ರಲ್ಲಿ ಅಕ್ಟಂಬರ ೨೬ನೇ ತಾರೀಖಿಗೆ, ೧೬೮೨ ರಲ್ಲಿ ಸಪ್ಟಂಬರ ೧೪ನೇ ತಾರೀಖಿಗೆ, ೧೭೫೯ ರಲ್ಲಿ ಮಾರ್ಚ ೧೨ನೇ ತಾರೀಖಿಗೆ, ಹಾಗೂ ೧೮೩೫ ರಲ್ಲಿ ನವಂಬರ ೧೫ನೇ ತಾರೀಖಿಗೆ ಕಾಣಿಸಿತು. ಸನ್ ೪೫೧ ಇಸವಿಗಿಂತ ಪೂರ್ವದಲ್ಲಿ ಈ ಧೂಮಕೇತುವು ಯಾವ ಯಾವ ವರ್ಷಗಳಲ್ಲಿ ಯಾವ ತಾರೀಖುಗಳಲ್ಲಿ ಕಂಗೊಳಿಸಿತೆಂಬದನ್ನು ಚೀನ ದೇಶದ ಜ್ಯೋತಿಷಿಗಳು ನಮೂದಿಸಿ ಇಟ್ಟಿರುವರು. ಅವರ ಲೇಖಗಳಲ್ಲಿ ಕ್ರಿ. ಶಕದ ಪೂರ್ವದಲ್ಲಿ ೨೪೦ನೇ ವರ್ಷ ಈ ಧೂಮಕೇತುವಿನ ಬಗ್ಗೆ ಮೊದಲನೆ ಉಲ್ಲೇಖವಿರುತ್ತದೆ. ಸನ್ ೧೮೩೫ ರಲ್ಲಿ ಈ ಧೂಮಕೇತುವು ವಾಡಿಕೆಯಂತೆ ಮೊದಲು ಧೂಮ್ರಮಯವಾದ ಹುಂಡಗಿನ ಕಳೆಯಂತೆ ಕಾಣಿಸಲಾರಂಭಿಸಿತು. ಆ ಮೇಲೆ ಬರಬರುತ್ತಾ ಅದರ ತಲೆಯೊಳಗಿಂದ ಕಾರಂಜಿಯಂಥ ಚಂಡಿಕೆಯು ಹೊರಟು, ಅದು ದಿನದಿನಕ್ಕೆ ಮತ್ತಿಷ್ಟು ವಿಸ್ತಾರವಾಗುತ್ತ ನಡೆಯಿತು. ಕಾರಂಜಿಯು ನೀರು ಕೆಲಹೊತ್ತು ಮೇಲೆ ಪುಟಿಯಲಾಗಿ, ಪೃಥ್ವಿಯ ಆಕರ್ಷಣದಿಂದ ಆ ನೀರೆಲ್ಲ ಭೂಮಿಯ ಕಡೆಗೆ ಎಳೆಯಲ್ಪಡುವಂತೆ ಈ

ಧೂಮಕೇತುವಿನ ಕೇಂದ್ರದೊಳಗಿಂದ ಉತ್ಸಾರಕಪ್ರೇರಣೆಯಿಂದ ಕೆಲ ವೊಂದು ದ್ರವ್ಯವು ಅತಿ ವೇಗದಿಂದ ಹೊರಹೊರಟು, ಅದರ ಚಂಡಿಕೆಯು ಉದ್ದವಾಗಿ ಬೆಳೆಯುತ್ತ ಸಾಗಿತು. ಆದರೆ ಸೂರ್ಯನ ಅತಿ ಸಾನ್ನಿಧ್ಯಕ್ಕೆ ಬಂದ ಕೂಡಲೆ ಅದರ ಚಂಡಿಕೆಯ ಉದ್ದವು ಕಡಿಮೆಯಾಗುತ್ತ ೨೧ ನೇ ಜನವರಿಗೆ ಎಲ್ಲ ಚಂಡಿಕೆಯು ಅಡಗಿ ಧೂಮಕೇತುವಿನ ನಕ್ಷತ್ರವು ಮಾತ್ರ ಉಳಿಯಿತು. ದಿನದಿನಕ್ಕೆ ಈ ನಕ್ಷತ್ರದ ಸ್ಥಳವು ಬದಲಾಗುತ್ತ ಹೋಗದೆ ಇದ್ದರೆ ಅದಕ್ಕೂ ನಿಜವಾದ ನಕ್ಷತ್ರಕ್ಕೂ ವ್ಯತ್ಯಾಸವೇ ಕಂಡುಬರುತ್ತಿದ್ದಿಲ್ಲ. ಆದರೆ ಕೆಲದಿವಸದಲ್ಲಿ ಆ ಧೂಮಕೇತುವಿನ ನಕ್ಷತ್ರದೊಳಗಿಂದ ಚಂಡಿಕೆಯು ಮತ್ತೆ ಹೊರಟು ವೇಗದಿಂದ ಬೆಳೆಯಲಾರಂಭಿಸಿತು. ಕಟ್ಟಕಡೆಗೆ ಧೂಮಕೇತುವಿನ ಯಾವತ್ತು ಭಾಗವೂ ಅಸ್ಪಷ್ಟವಾಗುತ್ತ ಅದೃಶ್ಯವಾಯಿತು. ಈ ಧೂಮಕೇತುವೇ ಈ ವರ್ಷದ ಎಪ್ರೀಲ ತಿಂಗಳ ಮಧ್ಯದ ಸುಮಾರಕ್ಕೆ ಸೂರ್ಯನ ತೀರ ಸಮೀಪಕ್ಕೆ ಬರುವದೆಂದು ಗ್ರೀನೀಚದ ವೇಧಶಾಲೆಯಿಂದ ಪ್ರಕಟಿಸಲ್ಪಟ್ಟದೆ. ಕಳೆದ ಸಪ್ಟಂಬರ ೧೭ನೇ ತಾರೀಖಿನಿಂದ ಜ್ಯೋತಿಷಿಗಳು ಅದರ ಫೋಟೋಗ್ರಾಫ(ಪ್ರಕಾಶಲೇಖ) ಗಳನ್ನು ತಕ್ಕೊಳ್ಳಲಿಕ್ಕೆ ಪ್ರಾರಂಭಿಸಿದರು. ಆಗ ಅದರ ಕ್ರಾಂತಿಯು ೬ ಅಂಶ, ೧೭ ಕಲೆಗಳು, ಮತ್ತು ೫೩-೬೭ ವಿಕಲೆಗಳು ಇತ್ತು; ಶರವು ಉತ್ತರಕ್ಕೆ ೧೭ ಅಂಶ, ೧೨ ಕಲೆಗಳು ಮತ್ತು ೭ ವಿಕಲೆಗಳು ಇತ್ತು. ಈ ಎಪ್ರೀಲ ತಿಂಗಳ ಕೊನೆಗೆ ಈ ಧೂಮಕೇತುವು ಬೆಳಗಿನಲ್ಲಿ ಪೂರ್ವಕ್ಕೆ ಕಾಣಿಸಲಾರಂಭಿಸುವದು; ಮತ್ತು ಮೇ ತಿಂಗಳ ಮಧ್ಯದನಂತರ ಸಾಯಂಕಾಲದಲ್ಲಿ ಪಶ್ಚಿಮಕ್ಕೆ ವೃಷಭ ಮಿಥುನ ರಾಶಿಗಳ ಹತ್ತರ ಸೂರ್ಯಾಸ್ತದನಂತರ ಒಂದೆರಡು ತಾಸು ಅತಿ ಸ್ಪಷ್ಟವಾಗಿ ಕಾಣಿಸುವದೆಂದು ತೋರುತ್ತದೆ. ಮೇ ತಿಂಗಳ ಕೊನೆಗೆ ಮೇಲೆ ವರ್ಣಿಸಿದಂಥ ಅದರ ಭವ್ಯವಾದ ನೋಟವು ಕಂಗೊಳಿಸುವದು. ಈ ಸಾರೆ ಭೂಮಧ್ಯರೇಷೆಯ ಉತ್ತರಕ್ಕಿದ್ದ ದೇಶಗಳಲ್ಲಿ ಕಾಣಿಸುವದಕ್ಕಿಂತ ದಕ್ಷಿಣಕ್ಕಿದ್ದ ದೇಶಗಳಲ್ಲಿ ಈ ಧೂಮ-ಕೇತುವು ಹೆಚ್ಚು ಚನ್ನಾಗಿ ಕಾಣಬಹುದೆಂದು ಅಂದಾಜು ಇರುತ್ತದೆ. ಮಾರ್ಚ (೧೯೧೦) ತಿಂಗಳ ಪ್ರಾರಂಭದಲ್ಲಿ ಅದು ೯ನೇ ಪ್ರತಿಯ ನಕ್ಷತ್ರದಷ್ಟು ಸಣ್ಣದಾಗಿ ಕಾಣಿಸುತ್ತಿತ್ತು. ಪೃಥ್ವಿಯು ತನ್ನ ಕಕ್ಷೆಯಲ್ಲಿ ಅಕ್ಟೋಬರ ೧೫ನೇ ತಾರೀಖಿಗೆ ಯಾವ ಸ್ಥಳದಲ್ಲಿರುವದೋ ಆ ಸ್ಥಳದಲ್ಲಿ ಹ್ಯಾಲೀ

ಧೂಮಕೇತುವು ಎಪ್ರೇಲ ೧ನೇ ತಾರೀಖಿಗೆ ಬರುವದು. ಎಪ್ರೇಲ ೨೦ನೇ ತಾರೀಖಿಗೆ ತನ್ನ ಕಕ್ಷೆಯ ಅತಿ ನೀಚಸ್ಥಾನಕ್ಕೆ (ಅಂದರೆ ಸೂರ್ಯನ ಅತಿ ಸಮೀಪಕ್ಕೆ) ಬರುವದು. ಮೇ ತಿಂಗಳ ೧೦ನೇ ತಾರೀಖಿಗೆ ಅದು ನಮ್ಮ ಪೃಥ್ವಿಯ ಅತಿ ಸಮೀಪಕ್ಕೆ ಬರುವದು. ಆಗ ಸೂರ್ಯನು ಕೃತ್ತಿಕಾ ನಕ್ಷತ್ರದಲ್ಲಿರುವನು. ಮೇ ತಿಂಗಳ ೧೮ನೇ ಅಥವಾ ೧೯ನೇ ತಾರೀಖಿಗೆ ಅದು ಸೂರ್ಯನನ್ನು ಅಧಿಕ್ರಮಿಸುವದು, ಅಂದರೆ ಸೂರ್ಯನ ಆಚೇ ಕಡೆಯಿಂದ ಹಾಯುವದು. ಮೇ ತಿಂಗಳ ೧೮ನೇ ತಾರೀಖಿನ ದಿವಸ ಅದರ ಬಾಲದಲ್ಲಿ ಪೃಥ್ವಿಯು ಬರುವದು. ಧೂಮಕೇತುವಿನ ಬಾಲದ ಕಣಗಳು ಅತಿ ವಿರಳವಾಗಿರುವದರಿಂದ ಭೂಮಿಯ ಮೇಲೆ ವಾಸಿಸುವವರಿಗೆ ಅದರಿಂದ ಏನೂ ಅಪಾಯವಾಗುವ ಸಂಭವವಿಲ್ಲವೆಂದು ಆಕ್ಸಫರ್ಡ ಕಾಲೇಜದ ಪ್ರೊಫೆಸರ್ ಟರ್ನರರೆಂಬವರು ಹೇಳುತ್ತಾರೆ. ಪೃಥ್ವಿಯು ತನ್ನ ಕಕ್ಷೆಯಲ್ಲಿ ಎಪ್ರೇಲ ೧೫ನೇ ತಾರೀಖಿಗೆ ಯಾವ ಸ್ಥಳದಲ್ಲಿರುವದೋ ಆ ಸ್ಥಳದಲ್ಲಿ ಹ್ಯಾಲೇ ಧೂಮಕೇತುವು ಜೂನ ೧೫ನೇ ತಾರೀಖಿಗೆ ಬರುವದು. ಆಗ ಸೂರ್ಯನು ಮೃಗನಕ್ಷತ್ರದಲ್ಲಿರುವನು. ಎಪ್ರೇಲ ೧ನೇ ತಾರೀಖಿಗೆ ಈ ಧೂಮಕೇತುವು ಮೀನರಾಶಿಯ ಮಧ್ಯದಲ್ಲಿ ಉಚ್ಚೈಃಶ್ರವಾ (Pegasus) ಎಂಬ ತಾರಕಾಪುಂಜದೊಳಗಿನ ಉತ್ತರಾಭಾದ್ರಪದದ ನಕ್ಷತ್ರಗಳೊಳಗಿನ ದಕ್ಷಿಣ ನಕ್ಷತ್ರದ ಸ್ವಲ್ಪ ಎಡಗಡೆಗೆ, ಉತ್ತರಾಭಾದ್ರಪದದ ಎರಡೂ ನಕ್ಷತ್ರಗಳನ್ನು ಜೋಡಿಸುವ ರೇಷೆಯನ್ನು ದಕ್ಷಿಣಕ್ಕೆ ಆ ರೇಷೆಯ ಅರ್ಧದಷ್ಟು ಬೆಳಿಸಿದರೆ, ಆ ಬೆಳಿಸಿದ ರೇಷೆಯ ತುದಿಯಲ್ಲಿರುವನು. ಆ ಕಾಲದಲ್ಲಿ ಸೂರ್ಯನು ರೇವತಿ ನಕ್ಷತ್ರದಲ್ಲಿರುವನು.

ಧೂಮಕೇತುಗಳಾದರೂ ಗುರುತ್ವಾಕರ್ಷಣದ ಯಾವತ್ತು ನಿಯಮಗಳಿಗೆ ಸಂಪೂರ್ಣವಾಗಿ ಒಳಪಟ್ಟಿರುವವೇ ಹೊರತು, ಅವುಗಳು ಸ್ವೈರಗತಿಯುಳ್ಳವಾಗಿರುವದಿಲ್ಲ. ಪ್ರಾಚೀನಕಾಲದಲ್ಲಿ ಜ್ಯೋತಿಷಶಾಸ್ತ್ರವು ಈಗಿನಷ್ಟು ಪ್ರಗಲ್ಭ ದೆಶೆಯನ್ನು ಹೊಂದದೆ ಇದ್ದ ಕಾರಣ, ಜನರಿಗೆ ಧೂಮಕೇತುಗಳು ಬಹಳ ಭಯವನ್ನು ಉಂಟು ಮಾಡುತ್ತಿದ್ದವು; ಮತ್ತು ಆಗ ಧರ್ಮಮೂಢರು ಧೂಮಕೇತುಗಳು ಜಗತ್ತಿನ ವಿನಾಶಕಾಲವನ್ನು ಸೂಚಿಸುವಂಥ ಪೂರ್ವಚಿಹ್ನಗಳು ಅಥವಾ ನಿಶಾನಿಗಳೆಂದು ಭಾವಿಸಿ ಕಾತರಗೊಳ್ಳುತ್ತಿದ್ದರು. ಬಹಳವ್ಯಾಕೆ? ಆಗ ಯಾರಾದರೂ ಧೂಮಕೇತುವಿನ

ಕೆಸರನ್ನು ಎತ್ತಿದ ಕೂಡಲೆ ಎಷ್ಟೋ ಜನರ ಎದೆಯೊಡೆದು ನೀರಾಗುತ್ತಿತ್ತು. ಆದರೆ ಈಗ ಧೂಮಕೇತುಗಳಿಂದ ನಾವು ಭಯಪಡುವದಕ್ಕೆ ಎಷ್ಟುಮಾತ್ರವೂ ಕಾರಣವಿರುವದಿಲ್ಲೆಂದು ಶಾಸ್ತ್ರದಿಂದಲೂ ನಿರೀಕ್ಷಣದಿಂದಲೂ ನಿರ್ಬಾಧವಾಗಿ ಸಿದ್ಧವಾಗಿರುತ್ತದೆ. ಇಷ್ಟೇ ಅಲ್ಲ; ಈಗಿನ ಕಾಲದಲ್ಲಿ ಧೂಮಕೇತುಗಳ ಆಗಮನವು ಬಹಳ ಆನಂದದಾಯಕವೂ ಹೆಚ್ಚಿನ ಜ್ಞಾನಪ್ರಾಪ್ತಿಯ ದುರ್ಲಭವಾದ ಸಾಧನವೂ ಇರುತ್ತದೆಂದು ಬಲ್ಲವರು ಎಣಿಸುತ್ತಾರೆ. ಆದಕಾರಣ, ಸಧ್ಯದಲ್ಲಿ ನಮ್ಮ ದೃಷ್ಟಿಪಥವನ್ನೈದುವ ಹ್ಯಾಲೆ ಧೂಮಕೇತುವಿನಿಂದ ನಾವು ಭಯಭೀತರಾಗದೆ, ಮತ್ತು ಧರ್ಮಲಂಡರೂ ಆಗದೆ ಅದನ್ನು ಶಾಂತ ಚಿತ್ತದಿಂದ ನಿರೀಕ್ಷಿಸುವ ಸಿದ್ಧತೆಯನ್ನು ಈಗಿನಿಂದ ಮಾಡುವಾ.

ಮಾನವಶರೀರದ ಉಷ್ಣಮಾನವು.

ಸಸ್ತನಪ್ರಾಣಿಗಳೂ ಪಕ್ಷಿಗಳೂ ಉಷ್ಣರಕ್ತಾಭಿಸರಣವುಳ್ಳ ಪ್ರಾಣಿಗಳಿರುವದರಿಂದ ಅವುಗಳ ಶರೀರಗಳಲ್ಲಿ ಕೆಲವೊಂದು ನಿಯಮಿತ ಉಷ್ಣಮಾನವು ಇದ್ದೇ ಇರಬೇಕಾಗುತ್ತದೆ. ಮನುಷ್ಯನು ಸಸ್ತನಪ್ರಾಣಿಯಿರುವ ಕಾರಣ ಸಶಕ್ತ ಮನುಷ್ಯನ ಕಂಕುಳದಲ್ಲಿ ಉಷ್ಣಮಾಪಕ ಯಂತ್ರವನ್ನಿಟ್ಟು ನೋಡಿದರೆ, ಅದು ಫಾರೆನ್‌ಹೀಟದ ೯೮.೬ ಅಂಶ ಉಷ್ಣತೆಯನ್ನು ತೋರಿಸುತ್ತದೆಂದು ಕಂಡುಬರುವದು. ರಕ್ತವಾಹಿನಿಗಳ ಉಷ್ಣಮಾನವು ಇದಕ್ಕಿಂತ ೨ ಅಂಶ ಹೆಚ್ಚು ಇರುವದು. ಮನುಷ್ಯನ ಪರಿಸ್ಥಿತಿಯಲ್ಲಿ ವಿಶೇಷ ಹೆಚ್ಚು ಕಡಿಮೆಯಾಗದಿದ್ದರೆ ಅವನು ಬದುಕಿರುವ ಮಟ್ಟಿಗೂ ಅವನ ಶರೀರದ ಉಷ್ಣಮಾನದಲ್ಲಿ ವಿಶೇಷ ಹೆಚ್ಚುಕಡಿಮೆಯಾಗುವದಿಲ್ಲ. ಇದರಿಂದ ಮಾನವಶರೀರದಲ್ಲಿ ಉಷ್ಣತೆಯು ನಿರಂತರ ಹುಟ್ಟುತ್ತಿರುತ್ತದೆಂಬದು ಸ್ಪಷ್ಟವಾದದ್ದು.

ಪ್ರಾಣಿಗಳು ಮುಖ್ಯವಾಗಿ ಸೇಂದ್ರಿಯ (Organic) ಪದಾರ್ಥಗಳನ್ನು ತಮ್ಮ ಆಹಾರವಾಗಿ ಉಪಯೋಗಿಸಿಕೊಳ್ಳುತ್ತವೆ. ಈ ಪದಾರ್ಥಗಳು ಶರೀರದೊಳಗಿನ ಕೆಲವೊಂದು ವಿಶೇಷ ಭಾಗಕ್ಕೆ ಹೋಗಲು, ಅಲ್ಲಿ ಅವುಗಳ ಪೃಥಕ್ಕರಣವಾಗಿ ಅವುಗಳೊಳಗಿನ ಮೂಲತತ್ವಗಳು ಬೇರೆಬೇರೆಯಾಗುವವು. ಈ ಮೂಲತತ್ವಗಳು ಪುನಃ ಶ್ವಾಸದಿಂದ ಹೆಗೆದು

ಕೊಂಡ ಹವೆಯೊಳಗಿನ ಆಕ್ಸಿಜನದೊಡನೆ ರಸಾಯನವ್ಯಾಪಾರದಿಂದ ಕೆಲವು ನಿಯಮಿತ ಪ್ರಮಾಣಗಳಿಂದ ಸಂಯೋಗವಾಗಲು, ಮಜ್ಜಾಮಾಂಸಾದಿಗಳನ್ನುಂಟುಮಾಡುವ ನಿರ್ಮಾಣಸಾಮಗ್ರಿಗಳಾದ ಧಾತುದ್ರವ್ಯಗಳು ಹುಟ್ಟುವವು. ಅವುಗಳಿಂದ ಶರೀರದ ಸವಕಳಿಯು ಪೂರೈಸಲ್ಪಡುವದಲ್ಲದೆ, ರಸಾಯನ ವ್ಯಾಪಾರದಿಂದ ಹುಟ್ಟುವ ಉಷ್ಣತೆಯಿಂದ ಶರೀರವು ಬೆಚ್ಚಗಾಗಲು ಬೇಕಾಗಿರುವದು.

ಮೇಲಿನ ವಿವರಣದಿಂದ ಮನುಷ್ಯ ಪ್ರಾಣಿಯು ಶರೀರದಲ್ಲಿ ಪೃಥಕ್ಕರಣ ಹಾಗು ಏಕೀಕರಣ ಎಂಬೆರಡು ಕಾರ್ಯಗಳು ಎಡೆಬಿಡದೆ ನಡೆದಿರುತ್ತವೆಂಬುದು ನಮಗೆ ಗೊತ್ತಾಗುವದು. ಮೂಲತತ್ವಗಳ ಏಕೀಕರಣದಿಂದ ಸಂಯುಕ್ತಪದಾರ್ಥಗಳುಂಟಾಗುವಾಗ ಉಷ್ಣತೆಯೆಂಬ ಶಕ್ತಿಯು ಅವುಗಳಲ್ಲಿ ಗರ್ಭಿತವಾಗುವದು, ಅಂದರೆ ಅದಕ್ಕೆ ಭವಿಷ್ಯತ್ಕಾರ್ಯ ನಿರ್ವಾಹಕ ಶಕ್ತಿಯ (Potential Energy) ರೂಪ ಬರುವದು. ಇಂಥ ಸಂಯುಕ್ತ ಪದಾರ್ಥಗಳ ಪೃಥಕ್ಕರಣವಾಗುವಾಗ ಹಾಗು ಅವುಗಳ ಘಟಕಗಳಾದ ಮೂಲತತ್ವಗಳು ಆಕ್ಸಿಜನದೊಡನೆ ರಸಾಯನ ರೀತಿಯಿಂದ ಸಂಯೋಗವಾಗುವಾಗ ಅವುಗಳಲ್ಲಿ ಗರ್ಭಿತವಾಗಿರುವ ಉಷ್ಣತೆಗೆ ಕರ್ತೃತ್ವಶಕ್ತಿಯ (Kinetic Energy) ರೂಪವುಂಟಾಗಿ ಆ ಶಕ್ತಿಯಿಂದ ಶ್ವಾಸೋಚ್ಛ್ವಾಸ, ರಕ್ತಾಶಯದ ವ್ಯಾಪಾರ, ಅಂಗಚೇಷ್ಟೆ ಮೊದಲಾದ ಅನೈಚ್ಛಿಕ ವ್ಯಾಪಾರಗಳೂ, ನಡಿಯೋಣ, ನುಡಿಯೋಣ, ಕೆಲಸಮಾಡೋಣ ಇವೇ ಮೊದಲಾದ ಐಚ್ಛಿಕವ್ಯಾಪಾರಗಳೂ ಜರುಗಿಸಲ್ಪಡುವವು. ಆಹಾರಪದಾರ್ಥಗಳ ಘಟಕಗಳು ಮಾನವ ಶರೀರದಲ್ಲಿ ಜೀರ್ಣವಾಗಿ ಮಜ್ಜಾಮಾಂಸಾದಿಗಳು ಹುಟ್ಟುವಾಗ ಅವುಗಳಲ್ಲಿ ಉಷ್ಣತೆಯು ಸಂಚಿತವಾಗುವದು. ಈ ಮಜ್ಜಾಮಾಂಸಾದಿಗಳು ಶರೀರದ ಐಚ್ಛಿಕ ಅನೈಚ್ಛಿಕವ್ಯಾಪಾರಗಳ ಮೂಲಕ ಸವಕಳಿಹೊಂದುವಾಗಲೂ, ಅವುಗಳ ಘಟಕಗಳು ಆಕ್ಸಿಜನದೊಡನೆ ಪುನಃ ಬೇರೆ ರೀತಿಯಿಂದ ಸಂಯೋಗ ಹೊಂದುವಾಗಲೂ ಉಂಟಾಗುವ ಜ್ವಲನಕ್ರಿಯೆ (Oxidation) ಯಿಂದ, ಅಂಗಾರಾಮ್ಲವಾಯು, ನೀರು, ಮೂತ್ರ ಮೊದಲಾದ ಪದಾರ್ಥಗಳು ಹುಟ್ಟಿ, ಶ್ವಾಸಕೋಶ, ತ್ವಚೆಯಲ್ಲಿರುವ ರೋಮರಂಧ್ರಗಳು, ಹಾಗು ಮೂತ್ರ ಪಿಂಡ, ಇವುಗಳ ದ್ವಾರದಿಂದ ಮಲರೂಪದಿಂದ ಹೊರಬೀಳುವವು. ಈ ವ್ಯಾಪಾರವು ನಡೆದಾಗ ಗರ್ಭಿತವಾದ ಉಷ್ಣತೆಗೆ

ಅನುಭೂತೋಷ್ಣತೆಯ ರೂಪ ಬರುವದು. ಹೀಗೆ ಶರೀರದ ವಿಶಿಷ್ಟ ಭಾಗಗಳಲ್ಲಿ ಹುಟ್ಟುವ ಉಷ್ಣತೆಯು ಒಂದೇ ಕಡೆಯಲ್ಲಿ ಉಳಿಯದೆ, ರಕ್ತಾಭಿಸರಣದ ಮೂಲಕ ಶರೀರದ ಎಲ್ಲ ಭಾಗಗಳಿಗೂ ಹಂಚಲ್ಪಡುವ ಕಾರಣ ಅವರ ಪ್ರಖರತೆಯು ಕಡಿಮೆಯಾಗಿ ಎಲ್ಲ ಶರೀರದ ಉಷ್ಣಮಾನವು ಒಂದೇ ಆಗುವದು.

ಕಲ್ಲಿದ್ದಲಿ, ಕಟ್ಟಿಗೆ ಮೊದಲಾದ ಪದಾರ್ಥಗಳಲ್ಲಿ ಉಷ್ಣತೆಯೆಂಬ ಶಕ್ತಿಯು ಅಡಗಿಕೊಂಡಿರುವದು. ಈ ಪದಾರ್ಥಗಳನ್ನು ಸುಟ್ಟರೆ ಅವುಗಳ ಘಟಕಗಳಾದ ಕಾರ್ಬೋನ್ ಹಾಗು ಹೈಡ್ರೋಜನ್ ಇವುಗಳು ಬೇರೆಯಾಗಿ ಆಕ್ಸಿಜನದೊಡನೆ ಪ್ರತ್ಯೇಕವಾಗಿ ಸಂಯೋಗ ಹೊಂದಲು, ಅಂಗಾರಾಮ್ಲ ವಾಯು ಹಾಗು ನೀರು ಹುಟ್ಟುವವು. ಈ ವ್ಯಾಪಾರಗಳು ನಡೆದಿರುವಾಗ ಉಷ್ಣತೆಯು ಕರ್ತೃತ್ವ ಶಕ್ತಿಯುಳ್ಳದ್ದಾಗಿ ಉಗಬಂಡಿ ಮೊದಲಾದ ಯಂತ್ರಗಳನ್ನು ನಡಿಸಹತ್ತುವದು. ಒಂದು ಗ್ರ್ಯಾಮು (೧೫ ಗ್ರೇನು) ಭಾರವುಳ್ಳ ನೀರನ್ನು ಸೆಂಟಿಗ್ರೇಡದ ಶೂನ್ಯಾಂಶದಿಂದ ಒಂದು ಅಂಶ ಉಷ್ಣಮಾನವುಳ್ಳದ್ದಾಗಿ ಮಾಡಲಿಕ್ಕೆ ಬೇಕಾಗುವ ಉಷ್ಣತೆಗೆ ಒಂದು ಉಷ್ಣಪರಿಮಾಣ (Caloric) ಎಂಬ ಸಂಜ್ಞೆಯು. ಒಂದು ಗ್ರ್ಯಾಮುಭಾರವುಳ್ಳ ಬೇರೆ ಬೇರೆ ಪದಾರ್ಥಗಳ ಜ್ವಲನದಿಂದ ಹುಟ್ಟುವ ಉಷ್ಣತೆಯ ಪರಿಮಾಣಗಳನ್ನು ಕೆಳಗೆ ಕೊಟ್ಟಿದ್ದೇವೆ:—

ಪದಾರ್ಥ ದಹೆಸರು	ಜ್ವಲನದಿಂದ ಹುಟ್ಟುವ ಉಷ್ಣಮಾನಗಳು.
ಹೈಡ್ರೋಜನ್	೩೪೬೦
ಕಾರ್ಬೋನ್	೮ ೦೦
ಸಣ	೯೦೦೦
ಪಿಷ್ಟ	೪೦೦೦
ಸಾರಜನಕ ಪದಾರ್ಥಗಳು (ಗೋಧಿ, ಜೋಳ)	೫೦೦೦
ಮೂತ್ರಾಮ್ಲ (Urea)	೨೨೦೬

ಪ್ರಾಣಿಗಳ ಶರೀರದಲ್ಲಿ ಕ್ಷಣಶಃ ಹುಟ್ಟುವ ಉಷ್ಣತೆಯೂ ಬೆವರುವಿಕೆ (ಬಾಷ್ಪಭವನ), ವಹನ, ಕೇಂದ್ರೋದ್ಗಮ ಪ್ರಸರಣ ಮೊದಲಾದ ವ್ಯಾಪಾರಗಳಿಂದಾಗುವ ಉಷ್ಣತೆಯ ವ್ಯಯವೂ ಅಷ್ಟೇ ಇರುವವು. ಶರೀ

ರದಲ್ಲಿ ಹುಟ್ಟುವ ಉಷ್ಣತೆಯು ಹೊರಗೆ ಹೊರಟು ಹೋಗದಿದ್ದರೆ ಅದರ ಉಷ್ಣಮಾನವು ಪ್ರತಿತಾಸಿಗೆ ೨ ಅಂಶದಂತೆ ಹೆಚ್ಚುತ್ತ ಹೋಗುವದು. ಆದರೆ ಶರೀರದಲ್ಲಿ ಹುಟ್ಟುವ ಉಷ್ಣತೆಯು ಒಂದೇ ಕಡೆಯಲ್ಲಿ ಉಳಿಯದೆ ಎಲ್ಲ ಕಡೆಗೆ ಹರಡಿಕೊಳ್ಳುವದರಿಂದಲೂ ಅದರ ಎಷ್ಟೋ ಭಾಗವು ಹೊರಗೆ ಹೊರಟು ಹೋಗುವದರಿಂದಲೂ ಶರೀರದ ಉಷ್ಣಮಾನದಲ್ಲಿ ಹೆಚ್ಚು ಕಡಿಮೆಯಾಗುವದಿಲ್ಲ. ಶರೀರದಲ್ಲಿ ಹುಟ್ಟುವ ೧೦೦ ಉಷ್ಣಪರಿಮಾಣ (Caloric)ಗಳಲ್ಲಿ ೬ ಉಷ್ಣಪರಿಮಾಣಗಳು ಶರೀರದ ವ್ಯಾಪಾರಗಳನ್ನು ಮಾಡುವದರಲ್ಲಿಯೂ, ೬೫ ಬೆವರುವಿಕೆ ವಹನ, ಕೇಂದ್ರೋದ್ಗಮ ಪ್ರಸರಣಗಳ ವ್ಯಾಪಾರಗಳ ಮೂಲಕ ವಾತಾವರಣಕ್ಕೂ, ಉಳಿದ ೧೮ ಪರಿಮಾಣಗಳಲ್ಲಿ ೧೫ ಫುಪ್ಫುಸ ಹಾಗು ೩ ಗುದದ್ವಾರದಿಂದಲೂ ಹೊರಟು ಹೋಗುತ್ತವೆಂದು ಹೆಮ್ಮಹೋಲ್ಟ್ಝನು ಪ್ರಯೋಗಗಳಿಂದ ಗೊತ್ತುಪಡಿಸಿದ್ದಾನೆ.

ಸಾಮಾನ್ಯವಾಗಿ ಮಾನವ ಶರೀರದ ಉಷ್ಣಮಾನವು ೯೮.೬ ಇದ್ದಾಗ್ಯೂ, ಯಕೃತ್ತು, ಮಿದುಳು, ಹಾಗು ಸ್ನಾಯುಗಳ ಉಷ್ಣಮಾನವು ೧೦೦ ಅಂಶವಿರುವದು; ತ್ವಚೆಯ ಉಷ್ಣಮಾನವು ೯೫|೯೬ ಅಂಶವಿರುವದು. ಹುಡುಗರ ಶರೀರದ ಉಷ್ಣಮಾನವು ೯೯.೪ ಅಂಶವಿರುವದು. ಶ್ರಮದ ಕೆಲಸ ಮಾಡಿದರೆ ಶರೀರದ ಉಷ್ಣಮಾನವು ಏರಹತ್ತಿ, ರಕ್ತಾಭಿಸರಣವು ಕಸುವಿನಿಂದ ನಡೆಯುವ ಕಾರಣ ತ್ವಚೆಯ ಕೆಳಗಡೆಗಿರುವ ರಕ್ತನಾಳಗಳು ಉಬ್ಬಿಕೊಳ್ಳುವವು. ಇದರಿಂದ ಮೈ ಕಾದಂತೆ ಆಗಿ, ಸೆಕೆ ಎನಿಸಹತ್ತುವದು. ಈ ರಕ್ತನಾಳಗಳಲ್ಲಿರುವ ರಕ್ತದ ಪ್ರವಾಹವು ಕಡಿಮೆಯಾದ ಕೂಡಲೆ ಅವು ಆಕುಂಚಿತವಾಗುತ್ತವೆ. ಅದರಿಂದ ನಮಗೆ ಚಳಿಯೆನಿಸ ಹತ್ತುವದು. ಅಂದರೆ, ನಮಗ ಸೆಕೆ ಇಲ್ಲವೆ ಚಳಿಯೆನಿಸುವದು ತ್ವಚೆಯ ಒಳಪದರಿನಲ್ಲಿರುವ ರಕ್ತನಾಳಗಳಲ್ಲಿ ಹರಿಯುವ ರಕ್ತದ ಹೆಚ್ಚು ಇಲ್ಲವೆ ಕಡಿಮೆ ಪ್ರಮಾಣವನ್ನು ಅವಲಂಬಿಸಿರುವದು. ಆದಕಾರಣ, ನಮಗೆ ಸೆಕೆ ಹಾಗು ಚಳಿಯೆನಿಸುವ ಪ್ರಮಾಣದ ಮೇಲಿಂದ ಇಡೀ ಶರೀರದ ಉಷ್ಣಮಾನವು ಇಷ್ಟೇ ಇರುವದೆಂದು ಹೇಳಲಿಕ್ಕೆ ಬರುವದಿಲ್ಲ. ಇದಕ್ಕಾಗಿ ಪ್ರಾಣಿಗಳ ಶರೀರದ ಉಷ್ಣಮಾನವನ್ನು ಅಳೆಯುವದಕ್ಕೆ ಉಷ್ಣಮಾಪಕಯಂತ್ರಗಳಲ್ಲಿ ಸೆಂಟಿಗ್ರೇಡ, ಫಾರೆನ್‌ಹೀಟ ಹಾಗು ರೂಮರ ಎಂಬ ಮೂರು ಪ್ರಕಾರಗಳಿದ್ದಾಗ್ಯೂ ಶಾಸ್ತ್ರಜ್ಞರು

ಪ್ರಾಣಿಶರೀರ ಹಾಗು ಹವೆಯ ಉಷ್ಣಮಾನವನ್ನು ಅಳೆಯುವದರಲ್ಲಿ ಫಾರೆನ್‌ಹೀಟ ಯಂತ್ರವನ್ನೇ ಉಪಯೋಗಿಸುವದುಂಟು. ಅದರಲ್ಲಿಯೂ ಕೂಡ ಮನುಷ್ಯ ಮೊದಲಾದ ಮೇಲ್ತರದ ಪ್ರಾಣಿಗಳ ಶರೀರದ ಉಷ್ಣಮಾನವನ್ನು ತಿಳಿಯುವದರಲ್ಲಿ ಫಾರೆನ್‌ಹೀಟ ಯಂತ್ರದ ಒಂದು ವಿಶೇಷ ಪ್ರಕಾರವಾದ ಕ್ಲಿನಿಕಲ್ ಥರ್ಮಾಮಿಟರ ಎಂಬ ಯಂತ್ರವನ್ನು ಉಪಯೋಗಿಸುವದುಂಟು.

ಅದರ ಚಿತ್ರವನ್ನು ಎಡಗಡೆಗೆ ತೋರಿಸಿದ್ದೇವೆ. ಅದರಲ್ಲಿ ಪಾರಜತುಂಬಿದ ಬುರಡಿಯ ಮೇಲಿರುವ ಕೊಳವಿಯಮೇಲೆ ೯೫° ರಿಂದ ೧೧೦ ಅಂಶ ತೋರಿಸುವ ಗೆರೆಗಳನ್ನು ಮಾತ್ರ ಕೊರೆದಿರುವರು. ಇದರ ಕಾರಣವೇನಂದರೆ, ಮನುಷ್ಯನ ಮೈಯೊಳಗಿನ ಉಷ್ಣತೆಯ ಮಾನವು ೯೫° ಅಂಶಗಳಿಗಿಂತ ಕಡಿಮೆಯಾದರೆ, ಇಲ್ಲವೆ ೧೧೦ ಅಂಶಗಳಿಗಿಂತ ಹೆಚ್ಚಾದರೆ ಜೀವವು ಉಳಿಯುವ ಸಂಭವವಿರುವದಿಲ್ಲ. ಆದ್ದರಿಂದ ಸಜೀವಮನುಷ್ಯನ ಶರೀರದ ಉಷ್ಣಮಾನವನ್ನು ಅಳೆಯುವದಕ್ಕೆ ೯೫ ರಿಂದ ೧೧೦ ಅಂಶಗಳ ವರೆಗೆ ಅಂಶಗಳನ್ನು ತೋರಿಸುವ ಅಂಕೆಗಳುಳ್ಳ ಉಷ್ಣಮಾಪಕ ಯಂತ್ರವು ಸಾಕು. ೯೭° ಹಾಗು ೯೯° ಅಂಶಗಳ ನಡುವಿನ ಸುಮಾರಿನಲ್ಲಿ ಒಂದು ಬಾಣದಂಥ ಗುರುತು ಇರುವದು. ಅದು "ಸ್ವಾಭಾವಿಕ ಉಷ್ಣತೆಯ" ಗುರುತು. ಆರೋಗ್ಯವುಳ್ಳ ಮನುಷ್ಯನ ಕಂಕುಳದಲ್ಲಿ ಈ ಯಂತ್ರವನ್ನಿಟ್ಟರೆ ಪಾರಜದ ಕಂಬದ ತುದಿಯು ಈ ಗುರತಿನ ವರೆಗೆ ಏರಿ ನಿಲ್ಲುವದು. ರೋಗಿಯ ಕಂಕುಳದಲ್ಲಿಟ್ಟ ಯಂತ್ರದೊಳಗಿನ ಪಾರಜವು ೧೦೧·೬ ಅಂಶಗಳ ವರೆಗೆ ಏರಿ ನಿಂತರೆ ೩ ಅಂಶ(೧೦೧·೬°–೯೮·೬°) ಉಷ್ಣಮಾನವು ಹೆಚ್ಚಾದಂತಾಯಿತು. ಅಂದರೆ, ರೋಗಿಗೆ ಜ್ವರಬಂದಂತಾಯಿತು. ಸೂಕ್ಷ್ಮ ಅಳತೆಯ ಸಲುವಾಗಿ ಒಂದು ಅಂಶವನ್ನು ತೋರಿಸುವ ಸ್ಥಳದಲ್ಲಿ ೧೦ ಸಮಭಾಗಗಳನ್ನು ಮಾಡಿರುವರು. ಪಾರಜದಿಂದ ತುಂಬಿದ ಬುರಡಿಯ ಮೇಲ್ಗಡೆಯ ಭಾಗವನ್ನು ಹಿಚಿಕಿ ಅದರಲ್ಲಿರುವ ಛಿದ್ರವನ್ನು ಸಣ್ಣಬಾಯುಳ್ಳದ್ದಾಗಿ ಮಾಡಿರುವದರಿಂದ ಪಾರಜವು ಬಹು ಪ್ರಯಾಸದಿಂದ ಅದರಲ್ಲಿ ಏರುವದು. ಕಂಕುಳದಿಂದ ಯಂತ್ರವನ್ನು ತೆಗೆದು ಹಿಡಿದ

ಕೂಡಲೆ ಹವೆಯು ತಂಪಿನಿಂದ ಬುರಡಿಯೊಳಗಿನ ಪಾರಜವು ಆಕುಂಚನ ಹೊಂದುವದು. ಅದರಿಂದ ಸಿಂಚಿಕಿದ ಭಾಗದ ಮೇಲಿರುವ ಪಾರಜದ ಕಂಬಕ್ಕೂ ಬುರಡಿಯೊಳಗಿನ ಪಾರಜಕ್ಕೂ ಇರುವ ಸಾಕ್ಷಾತ್ ಸಂಬಂಧವು ಕಡಿಯುವದರಿಂದ ಪಾರಜದ ಕಂಬವು ಕೆಳಗಿಳಿಯದೆ ಇದ್ದಲ್ಲಿಯೇ ಉಳಿಯುವದು. ಕಾರಣ, ಕಂಕುಳದಿಂದ ತೆಗೆದ ಎಷ್ಟೋ ಹೊತ್ತಿನ ಮೇಲಾದರೂ ಆ ಯಂತ್ರವು ತೋರಿಸುವ ಉಷ್ಣಮಾನವನ್ನು ಓದಿಕೊಳ್ಳಬಹುದು. ಪುನಃ ಅದನ್ನು ಉಪಯೋಗಿಸುವಾಗ ಯಂತ್ರವನ್ನು ಕಸುವಿನಿಂದ ಅಗಳಾಡಿಸಿದರೆ ಪಾರಜದ ಕಂಬವು ಕೆಳಗಿಳಿದು ಬುರಡಿಯೊಳಗಿನ ಪಾರಜಕ್ಕೆ ಕೂಡಿಕೊಳ್ಳುವದು.

ಉಷ್ಣತೆಯು ಎಲ್ಲಿ ಹುಟ್ಟುತ್ತದೆ? ಸಜೀವಮನುಷ್ಯನು ತೆಗೆದುಕೊಂಡ ಆಹಾರದ ಪದಾರ್ಥಗಳು ಪಚನವಾದ ಕೂಡಲೆ ದುಗ್ಧರಸವೆಂಬ ಪೋಷಕಪದಾರ್ಥವು ಸಿದ್ಧವಾಗುವದು. ಅದು ರಕ್ತವಾಹಿನಿಗಳಲ್ಲಿ ಸೇರಿಕೊಂಡು ಶರೀರದ ಎಲ್ಲ ಭಾಗಗಳಿಗೆ ಹೋಗಿ ಮುಟ್ಟಲು ಅಲ್ಲಿ ಎಡೆಬಿಡದೆ ನಡೆದಿರುವ ರಸಾಯನ ವ್ಯಾಪಾರಗಳ ಮೂಲಕ ಜೀವನರಸ (Protoplasm) ದಿಂದ ತುಂಬಿದ ಕೋಶಗಳು ಹುಟ್ಟುವವು. ಆ ಕೋಶಗಳಿಂದ ಮಜ್ಜಾಮಾಂಸಾದಿಗಳೂ ನರಗಳೂ ಉಂಟಾಗುವ ಕೋಶಜಾಲಗಳು (Tissues) ಹುಟ್ಟಿ, ಶರೀರದ ಸವಕಳಿಯನ್ನು ಪೂರೈಸಿ ಕೊಡುವವು. ಶರೀರದ ಐಚ್ಛಿಕ ಅನೈಚ್ಛಿಕ ವ್ಯಾಪಾರಗಳಿಂದ ಈ ಕೋಶಜಾಲಗಳು ಲಯವಾಗ ಹತ್ತಿ, ಅವುಗಳ ಘಟಕಗಳು ಆಕ್ಸಿಜನದೊಡನೆ ಸಂಯೋಗವಾಗುವಾಗ ಉಷ್ಣತೆ ಹಾಗು ಅಂಗಾರಾಮ್ಲವಾಯು, ನೀರು, ಮೂತ್ರ ಇವೇ ಮೊದಲಾದವು ಹುಟ್ಟುವವು. ವಿಶೇಷವಾಗಿ, ಸ್ನಾಯುಗಳಲ್ಲಿಯೂ, ಯಕೃತ್ತು, ಲಾಲಾಗ್ರಂಥಿ ಮೊದಲಾದ ಗ್ರಂಥಿಗಳಲ್ಲಿಯೂ ನರಗಳಮಂಡಲದ ಕೇಂದ್ರಗಳಲ್ಲಿಯೂ (Nervous Centres) ಉಷ್ಣತೆಯು ಹುಟ್ಟುವದು. ಮನುಷ್ಯನು ಕೆಲಸ ಮಾಡುವಾಗ ಸ್ನಾಯುನಿರ್ಮಾಣಕದ್ರವ್ಯಗಳ ವ್ಯಯವು ಹೆಚ್ಚಾಗುವದರಿಂದ ಹೆಚ್ಚು ಉಷ್ಣತೆಯು ಹುಟ್ಟುವಾಗ, ಅಂಗಾರಾಮ್ಲವಾಯುವೂ ನೀರೂ ಹೆಚ್ಚಾಗಿ ಹುಟ್ಟುವ ಕಾರಣ, ಅವುಗಳನ್ನು ಹೊರಗೆ ಹಾಕುವದಕ್ಕೋಸ್ಕರ ಶ್ವಾಸೋಚ್ಛ್ವಾಸದ ವ್ಯಾಪಾರವೂ ಬೆವರುವಿಕೆಯೂ ಹೆಚ್ಚಾಗುತ್ತ ಅವನಿಗೆ ಸೆಕೆಸೆಕೆ ಎನಿಸಹತ್ತುವದು. ಮನುಷ್ಯನು ಕೆಲಸ ಮಾಡದೆ ಇರುವ ಸಮ

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ. ಧಾರವಾಡ.

ಮೊದಲ್ಲಿ ಸಹ ಅನೈಚ್ಛಿಕ ವ್ಯಾಪಾರಗಳು ನಡೆದಿರುವದರಿಂದ ಸ್ನಾಯುಗಳ ವ್ಯಯವು ಮಂದವಾಗಿ ನಡೆದಿರುತ್ತದೆ. ಆ ಕಾರಣ, ಆಸಮಯದಲ್ಲಿ ಉಷ್ಣತೆಯು ಸಾವಕಾಶವಾಗಿ ಹುಟ್ಟುವದರಿಂದ ಅದರ ತೀಕ್ಷ್ಣತೆಯು ನಮ್ಮ ಅನುಭವಕ್ಕೆ ಬರುವದಿಲ್ಲ. ಯಕೃತ್ತು, ಲಾಲಾಗ್ರಂಥಿ ಮೊದಲಾದವುಗಳಲ್ಲಿ ಪಚನಕ್ರಿಯೆಗೆ ಸಾಧನವಾದ ಪಿತ್ತರಸ, ಜೊಲ್ಲು ಮೊದಲಾದ ದ್ರವ್ಯಗಳನ್ನು ಸಿದ್ಧ ಪಡಿಸುವ ಕಾರ್ಯವು ಎಡೆಬಿಡದೆ ನಡೆದಿರುತ್ತದೆ. ಯಕೃತ್ತನ್ನು ಪ್ರವೇಶಿಸುವಾಗ ರಕ್ತದ ಪ್ರವಾಹಕ್ಕಿರುವ ಉಷ್ಣಮಾನಕ್ಕಿಂತ ಅದು ಯಕೃತ್ತಿನಿಂದ ಹೊರಬೀಳುವಾಗ ಹೆಚ್ಚಿರುವದು. ಮಾನಸಿಕಶ್ರಮ ಮಾಡುವಾಗ ಮಿದುಳಿನ ವ್ಯಾಪಾರವು ಶೀಘ್ರವಾಗಿ ನಡೆಯಹತ್ತುವದು. ಅದರಿಂದುಂಟಾಗುವ ಸವಕಳಿಯನ್ನು ಪೂರೈಸುವದಕ್ಕಾಗಿ ರಕ್ತದ ಪ್ರವಾಹವು ಹೆಚ್ಚು ಪ್ರಮಾಣದಿಂದ ಮಿದುಳನ್ನು ಪ್ರವೇಶಿಸುವದು. ಈ ತರದ ರಕ್ತಾಭಿಸರಣವು ಹೆಚ್ಚು ವೇಳೆಯ ವರೆಗೆ ನಡೆದರೆ ಮಾನಸಿಕಶ್ರಮ ಮಾಡುವವನಿಗೆ ತಲೆಸೂಲಿ ಏಳುವದುಂಟು.

ರಕ್ತಾಭಿಸರಣದ ಸಮಯದಲ್ಲಿ ರಕ್ತನಾಳಗಳಲ್ಲಾಗುವ ಪ್ರವಾಹದ ಘರ್ಷಣದಿಂದಲೂ ಶರೀರದಲ್ಲಿ ಹುಟ್ಟುವ ವಿದ್ಯುತ್ಪ್ರವಾಹಗಳಿಂದಲೂ ತುಸುಮಟ್ಟಿಗೆ ಉಷ್ಣತೆಯು ಹುಟ್ಟುವದು.

ಶರೀರದ ಉಷ್ಣತೆಯ ವ್ಯಯವು ಹ್ಯಾಗಾಗುತ್ತದೆ? ಸಾಧಾರಣವಾಗಿ ನಮ್ಮಸುತ್ತಲಿರುವ ಹವೆಯ ಉಷ್ಣಮಾನವು ನಮ್ಮಶರೀರದ ಉಷ್ಣಮಾನಕ್ಕಿಂತ ಕಡಿಮೆ ಇರುವದರಿಂದ ಶರೀರದಲ್ಲಿ ಹುಟ್ಟಿದ ಉಷ್ಣತೆಯು, ವಹನ (Conduction) ಹಾಗು ಕೇಂದ್ರೋತ್ಸರ್ಗವು ಪ್ರಸರಣ (Radiation) ಗಳಿಂದಲೂ* ಬೆವರುವಿಕೆಯೆಂಬ ಬಾಷ್ಪೀಭವನದಿಂದಲೂ ಹವೆಗೆ ಹೊರಟುಹೋಗುತ್ತದೆ. ಒಟ್ಟಿನಮೇಲೆ ನೋಡಿದರೆ ಉಷ್ಣತೆಯು ಆದಾಯವೂ ವ್ಯಯವೂ ಯಾವಾಗಲು ಅಷ್ಟೇ ಇರುವವು.

ಉಷ್ಣಕಟಿಬಂಧದಲ್ಲಿರುವ ಪ್ರದೇಶಗಳ ಹವೆಯ ಉಷ್ಣಮಾನವು ೯೮.೬ ಅಂಶಗಳಿಗಿಂತ ಹೆಚ್ಚಿರುವದರಿಂದ ವಹನ- ಕೇಂದ್ರೋತ್ಸರ್ಗವು-

---

* ಮನುಷ್ಯ ಶರೀರವು ಸದಾ ಬೆವರುತ್ತಿರುವದು. ಕೆಲವು ವೇಳೆ ಬೆವರುವಿಕೆಯು ವ್ಯಕ್ತವಾಗುವದು. ಉಳಿದ ವೇಳೆಯಲ್ಲಿ ಅವ್ಯಕ್ತವಿರುವದು.

ಪ್ರಸರಣಗಳಿಂದ ಬಹಳ ಉಷ್ಣತೆಯು ಶರೀರದಿಂದ ಹೊರಟು ಹೋಗುವದಿಲ್ಲ. ಅದರಿಂದ ಬೆವರುವಿಕೆಯು ಹೆಚ್ಚಾಗಿ ಉಷ್ಣತೆಯನ್ನು ಹೊರಗೆ ಹಾಕುತ್ತದೆ. ಎಲ್ಲ ಪ್ರವಾಹಿಗಳಿಗಿಂತ ನೀರು ಉಗಿಯಾಗುವಾಗ ಹೆಚ್ಚು ಉಷ್ಣತೆಯನ್ನು ನುಂಗಿಕೊಳ್ಳುತ್ತದೆ. ಒಂದು ಗ್ರ್ಯಾಮ್ ನೀರು ಉಗಿಯಾಗುವಾಗ ೫೩೬ ಉಷ್ಣಪರಿಮಾಣಗಳನ್ನು (Calories) ನುಂಗಿಕೊಳ್ಳುತ್ತದೆ. ಅಂದರೆ, ಅಷ್ಟು ಉಷ್ಣತೆಯು ಅನನುಭೂತೋಷ್ಣತೆಯಾಗುವದು. ಶ್ರಮವು ಹೆಚ್ಚಾದರೆ ಬೆವರುವಿಕೆಯು ಹೆಚ್ಚಾಗುವದಲ್ಲದೆ ಶ್ವಾಸೋಚ್ಛ್ವಾಸವು ಸಹ ಹೆಚ್ಚಾಗುವದು. ಶ್ವಾಸದಲ್ಲಿ ತೆಗೆದುಕೊಂಡ ಹವೆಯು ಶ್ವಾಸಕೋಶಗಳಲ್ಲಿ ಬೆಚ್ಚಗಾಗಿ ಉಚ್ಛ್ವಾಸದಿಂದ ಹೊರಗೆ ಹೊರಟು ಹೋಗುವದು. ಇದಾದರೂ ಶರೀರದೊಳಗಿನ ಉಷ್ಣತೆಯನ್ನು ಹೊರಗೆ ಹಾಕುವ ಒಂದು ಸಾಧನವು. ಹವೆಯ ಉಷ್ಣಮಾನವು ಶರೀರದ ಉಷ್ಣಮಾನಕ್ಕಿಂತ ಬಹಳ ಕಡಿಮೆಯಿದ್ದರೆ ಶರೀರದೊಳಗಿನ ಉಷ್ಣತೆಯು ವಹನ-ಕೇಂದ್ರೋದ್ಗಮ-ಪ್ರಸರಣಗಳಿಂದ ಬಹುಬೇಗ ಹೊರಟುಹೋಗುವದು. ಇದನ್ನು ತಪ್ಪಿಸುವದಕ್ಕಾಗಿ ಉಣ್ಣೆಯ ವಸ್ತ್ರಗಳನ್ನು ಉಡುಪಿನಂತೆ ಉಪಯೋಗಿಸಬೇಕಾಗುವದು.

ಮೇಲಿನ ವಿವರಣದಿಂದ ಶರೀರದಲ್ಲಿ ಹುಟ್ಟುವ ಉಷ್ಣತೆಯ ದೊಡ್ಡ ಭಾಗವು ತ್ವಚೆಯಲ್ಲಿರುವ ಸ್ವೇದಗ್ರಂಥಿಗಳ ವ್ಯಾಪಾರಗಳಿಂದ ಹೊರಗೆ ಹಾಕಲ್ಪಡುವದೆಂಬದು ಸ್ಪಷ್ಟವು. ಈ ಸ್ವೇದಗ್ರಂಥಿಗಳಿಗೆ ತಕ್ಕ ಚಾಲನೆಯನ್ನು ಕೊಡುವ ಕೆಲವು ನರಗಳ ಕೇಂದ್ರಗಳು (Nervous Centre) ಶರೀರದ ಆಯಾ ಭಾಗಗಳಲ್ಲಿರುವವು. ಹವೆಯ ಉಷ್ಣಮಾನದಲ್ಲಿ ಹೆಚ್ಚುಕಡಿಮೆಯಾದಂತೆ ಈ ಕೇಂದ್ರಗಳು ಸ್ವೇದಗಂಥಿಗಳಿಗೆ ತಕ್ಕ ಪ್ರಮಾಣದಿಂದ ಪ್ರೋತ್ಸಾಹವನ್ನು ಕೊಡುವವು. ಹವೆಯ ಉಷ್ಣಮಾನವು ಹೆಚ್ಚಾದರೆ ಹೆಚ್ಚು ರಕ್ತವು ತ್ವಚೆಯ ಒಳಪದರಿನಲ್ಲಿ ಸೇರಿ ರಕ್ತನಾಳಗಳನ್ನು ಉಬ್ಬಿಸುವದು. ಅದರಿಂದ ನರಗಳ ಕೇಂದ್ರಗಳು ಸ್ವೇದಗ್ರಂಥಿಗಳಿಂದ ಹೆಚ್ಚು ಕೆಲಸ ಮಾಡಿಸಹತ್ತಲು ಮೈ ಬೆವರುವದು. ಇದರ ವಿಪರೀತ ಕ್ರಮವು ಹವೆಯ ಉಷ್ಣಮಾನವು ಕಡಿಮೆಯಾದಾಗ ಕಂಡು ಬರುವದು.

R. M. Mahishi.

ಶಾಲಾಪತ್ರಕ.

ಪುಸ್ತಕ ೪೬. | ಏಪ್ರಿಲ-೧೯೧೦. | ಸಂಚಿಕೆ ೪

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಈ ಭಾಗದ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದಲ್ಲಿ, ಕಾಲೇಜದ ಹಾಗೂ ಅದಕ್ಕೆ ಹೊಂದಿರುವ ಪ್ರ್ಯಾಕ್ಟಿಸಿಂಗಸ್ಕೂಲಿನ ವಿದ್ಯಾರ್ಥಿನಿಯರ ಷಾಣ್ಮಾಸಿಕ ಪರೀಕ್ಷೆಯು ಮುಗಿದ ಬಳಿಕ, ಇವೆರಡೂ ಸಂಸ್ಥೆಗಳ ವಿದ್ಯಾರ್ಥಿನಿಯರಿಂದ ಮಾಡಲ್ಪಟ್ಟ ಕೆಲಸಗಳನ್ನು ಜನರಿಗೆ ತೋರಿಸಬೇಕೆಂಬ ಇಚ್ಛೆಯಿಂದ ಕಾಲೇಜದ ಲೇಡೀ ಸುಪರಿಂಟೆಂಡೆಂಟರಾದ ಮಿಸ್ ನ್ಯೂಲಂಡ ದೊರೆಸಾನಿಯವರು, ಪ್ರ್ಯಾ. ಸ್ಕೂಲ ವಿದ್ಯಾರ್ಥಿನಿಯರ ಪಾಲಕರನ್ನೂ ಊರೊಳಗಿನ ಪ್ರಮುಖ ಗೃಹಸ್ಥರನ್ನೂ ಕರಿಸಿ, ಇದೇ ತಿಂಗಳ ೧೪ನೇ ತಾರೀಖಿನ ದಿವಸ ತಮ್ಮ ಕಾಲೇಜದಲ್ಲಿ ಒಂದು ಸಭೆಯನ್ನು ನೆರಿಸಿದರು. ಈ ಸಭೆಗೆ ಮೆ|| ಎ|| ಇ|| ಸಾ|| ದಕ್ಷಿಣಭಾಗ ಇವರು ಅಧ್ಯಕ್ಷರಾಗಿದ್ದರು. ನೇಮಿಸಿದ ಕಾಲಕ್ಕೆ ಬಂದ ಗೃಹಸ್ಥರನ್ನು ಲೇಡೀಸುಪರಿಂಟೆಂಡೆಂಟರವರು ಬರ ಮಾಡಿಕೊಂಡು, ಮೊದಲು ಪ್ರ್ಯಾಕ್ಟಿಸಿಂಗಸ್ಕೂಲಿಗೆ ಕರೆದುಕೊಂಡು ಹೋಗಿ, ಅಲ್ಲಿ ಪ್ರತಿಯೊಂದು ಕೋಣೆಯಲ್ಲಿ ಚಂದವಾಗಿ ಮಂಡಿಸಿದ್ದ ಆ ಆ ವರ್ಗದ ವಿದಾರ್ಥಿನಿಯರ ಕೈಕೆಲಸ, ಅಂದರೆ ಹೊಲಿಗೆ, ಕಸೂತಿ, ಹೆಣಿಕೆ, ಮಣ್ಣಿನ ಮತ್ತು ಕಾಗದದ ಮಾದರಿಗಳು,ಡ್ರಾಯಿಂಗ, ಕುಂಚದ ಕೆಲಸ, ಕಾಪಿ, ನಕಾಶಗಳು, ಅರ್ಥ ಬರೆದ ಪುಸ್ತಕಗಳು ಮುಂತಾದವುಗಳನ್ನು ತೋರಿಸಿದರು. ಬಳಿಕ ಜನರೆಲ್ಲರು ಕಾಲೇಜಕ್ಕೆ ಬಂದರು. ಅಲ್ಲಿ ಅವರು ಕಾಲೇಜದ ವಿದ್ಯಾರ್ಥಿನಿಯರ ಯಾವತ್ತು ಕೆಲಸವನ್ನು ನೋಡಿದ ಬಳಿಕ, ಕಾಲೇಜದ ನಡುವಿನ ಹಾಲಿನಲ್ಲಿ ಸಭೆಯ ಕೆಲಸವು ನಡೆಯಿತು. ಆನರೆಬಲ್ ರಾವಬಹಾದ್ದೂರ ದೊಡ್ಡ ಶ್ರೀನಿವಾಸರಾಯರ ಸೂಚನೆಯ ಮೇರೆಗೆ ಮೆ|| ಎ|| ಸಾಹೇಬರವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ ಬಳಿಕ, ಮೊದಲು ಕೆಲವು ವಿದ್ಯಾರ್ಥಿನಿಯರು ಕೂಡಿ ದೇವರ ಪ್ರಾರ್ಥನೆಯನ್ನು ಮಾಡಿದರು. ಆ ಮೇಲೆ ಮೂರನೇ ಇಯತ್ತೆಯ ವಿದ್ಯಾರ್ಥಿನಿಯರು ಅತ್ತೆಯ ಮನೆಗೆ ಹೋಗುವ ಮಗಳನ್ನು ಕುರಿತು ತಾಯಿಯು ಉಪದೇಶ ಮಾಡಿದ್ದನ್ನು ಪ್ರಯೋಗ ಮಾಡಿ ತೋರಿಸಿದರು. ಬಳಿಕ ಕಾಲೇಜದ ಹೆಡ್

ಮಾಸ್ತರರಾದ ಮಿ. ಕಡಡಿಯವರು ಲೇಡೀ ಸುಪರಿಂಟೆಂಡೆಂಟರವರ ತರ್ಫೆನಿಂದ ಕೆಳಗೆ ಬರೆದ ಆಶಯವುಳ್ಳ ರಿಪೋರ್ಟನ್ನು ಓದಿದರು:-

" ಅಧ್ಯಕ್ಷರೆ, ಮಹನೀಯರಾದ ಮಿಕ್ಕ ಸಭಿಕರೆ, ತಾವೆಲ್ಲರು ನಮ್ಮ ವಿನಂತಿಯನ್ನು ಗೌರವಿಸಿ ಸಭೆಯನ್ನಲಂಕರಿಸಿದ್ದಕ್ಕಾಗಿ ನಮಗೆ ತುಂಬಾ ಸಂತೋಷವಾಗುತ್ತದೆ. ಸ್ತ್ರೀಶಿಕ್ಷಣವು ಪ್ರಯೋಜನಕರವೂ ಸುಖಕರವೂ ಆಗಿ ಅಭಿವೃದ್ಧಿಯನ್ನು ಹೊಂದುವದಕ್ಕೆ ಏನು ಮಾಡಬೇಕು! ವಿಶೇಷವಾಗಿ ಈ ಕಾಲೇಜವೂ ಇದಕ್ಕೆ ಹೊಂದಿರುವ ಪ್ರ್ಯಾಕ್ಟಿಸಿಂಗಸ್ಕೂಲೂ ಊರ್ಜಿತಾವಸ್ಥೆಯನ್ನು ಹ್ಯಾಗೆ ಪಡೆಯುವವು! ಈ ಸಂಗತಿಗಳಿಗೆ ಜನರ ಸಹಾನುಭೂತಿಯು ದೊರೆಯುವ ಬಗೆ ಎಂತು? ಈ ಮುಂತಾದ ಸಂಗತಿಗಳನ್ನು ಕುರಿತು ತಮ್ಮೊಡನೆ ಆಪ್ತಾಲೋಚನೆಯನ್ನು ಮಾಡಬೇಕೆಂಬದೇ ಈವೊತ್ತಿನ ಸಭೆಯ ಪ್ರಧಾನ ಉದ್ದೇಶವಿರುತ್ತದೆ.

ಹೋದ ತಿಂಗಳಲ್ಲಿ ಪ್ರ್ಯಾಕ್ಟಿಸಿಂಗಸ್ಕೂಲಿನ ವಿದ್ಯಾರ್ಥಿನಿಯರ ತಾಯಂದಿರನ್ನು ಕರಿಸಿದ್ದೆವು. ಅವರೆದುರಿಗೆ ಅವರವರ ಮಕ್ಕಳು ತಯಾರ ಮಾಡಿದ ಕೆಲಸವನ್ನು ಇಟ್ಟು, ಈ ಶಾಲೆಯಲ್ಲಿ ನಡೆಯುವ ಶಿಕ್ಷಣ ಕ್ರಮವನ್ನು ತೋರಿಸಿದೆವು. ಆದರೆ ಇಷ್ಟರಿಂದ ಕಾರ್ಯಸಿದ್ಧಿಯಾಗದೆಂದು ಈ ಸಾರೆ, ವಿದ್ಯಾರ್ಥಿನಿಯರ ತಂದೆಗಳನ್ನೂ ಮಿಕ್ಕ ಸಭ್ಯ ಗೃಹಸ್ಥರನ್ನೂ ಕರಿಸಿ, ಈ ಶಿಕ್ಷಣಾಲಯದಲ್ಲಿ ನಡೆಯುವ ಕೆಲಸವನ್ನು ತೋರಿಸಬೇಕೆಂದೂ, ಆ ಕೆಲಸಗಳಲ್ಲಿ ಏನಾದರೂ ಕುಂದುಕೊರತೆಗಳಿದ್ದರೆ ಸುಧಾರಿಸಬೇಕೆಂದೂ, ಅನುಭವಿಕರಾದ ತಮ್ಮಿಂದ ಹೊಸದಾಗಿ ಸೂಚಿಸಲ್ಪಟ್ಟ ಸೂಚನೆಗಳನ್ನು ಪರ್ಯಾಲೋಚಿಸಿ, ಸಾಧ್ಯವಾದ ಮಟ್ಟಿಗೆ ಅವುಗಳನ್ನು ಬಳಿಕೆಯಲ್ಲಿ ತರಬೇಕೆಂದೂ ಸಂಕಲ್ಪಿಸಿರುವೆವು.

ಸದ್ಯಕ್ಕೆ ತಮ್ಮೆದುರಿನಲ್ಲಿ ಬಿನ್ ಇಯತ್ತೆಯಿಂದ ಐದನೇ ಇಯತ್ತೆಯವರೆಗಿನ ಪ್ರ್ಯಾಕ್ಟಿಸಿಂಗಸ್ಕೂಲ ವಿದ್ಯಾರ್ಥಿನಿಯರು ಮಾಡಿದ ಕೆಲಸಗಳನ್ನು ಇಟ್ಟಿದ್ದೇವೆ. ಹಾಗೂ ಕಾಲೇಜದ ವಿದ್ಯಾರ್ಥಿನಿಯರಿಂದ ತಯಾರ ಮಾಡಲ್ಪಟ್ಟ ಕೈಕೆಲಸಗಳಾದರೂ ನಿಮ್ಮ ದೃಷ್ಟಿಗೆ ಬಿದ್ದಿರುವವು. ಹೊಲಿಗೆಯ ಶಿಕ್ಷಣದಿಂದ ಪ್ರಪಂಚಕ್ಕೆ ಎಷ್ಟು ಉಪಯೋಗವಾಗುವದೆಂಬದೂ, ಚಿತ್ರಕಲಾಶಿಕ್ಷಣದಿಂದ ಹುಡುಗರ ಕಣ್ಣು ಕೈಗಳಿಗೆ ಎಷ್ಟು ಸುಶಿಕ್ಷಣವು ಸಿಗುವದೆಂಬದೂ ತಮ್ಮ ಲಕ್ಷ್ಯದಲ್ಲಿ ಬಂದಿರಬಹುದು. ಶಿಕ್ಷಕಿಯರೂ, ವಿದ್ಯಾರ್ಥಿಶಿಕ್ಷಕಿಯರೂ ವಿಷಯಗಳನ್ನು ಯಾವ ಬಗೆಯಿಂದ ಕಲಿಸುತ್ತಾರೆಂಬ

ಡೂ ತಮಗೆ ಮನವರಿಕೆಯಾಗಿರಬಹುದು. ಕಾಲೇಜದವರಿಗೂ, ಪ್ರಾಥ್ಮಿ ಸ್ಕೂಲಿನ ಮೇಲಿನ ಇಯತ್ತೆಯ ಹುಡುಗರಿಗೂ ವಾರಕ್ಕೊಂದಾವರ್ತಿ ಭೌತಿಕ ಶಾಸ್ತ್ರದ ಒಂದು ಪಾಠವು ಸಪ್ರಯೋಗವಾಗಿ ಕಲಿಸಲ್ಪಡುತ್ತದೆ. ಇದರಿಂದ ಹೆಣ್ಣುಮಕ್ಕಳಲ್ಲಿರುವ ಮಿಥ್ಯಾಜ್ಞಾನವೆಂಬ ಪಿಶಾಚವು ಓಡಿ ಹೋಗಲಿಕ್ಕೆ ಅನುಕೂಲವಾಗುವದು. ಇದೇ ಮೇರೆಗೆ ವಾರಕ್ಕೊಂದು ಬಾರೆ ಚಿಕ್ಕಚಿಕ್ಕ ವಿಷಯಗಳನ್ನು ಕುರಿತು ನಿಬಂಧಗಳನ್ನು ಬರೆಯಿಸಿ ಸಭೆಯಲ್ಲಿ ಓದಿಸಿ, ಬಳಿಕ ಅವುಗಳನ್ನು ಚರ್ಚಿಸಲಿಕ್ಕೆ ಹಚ್ಚುವೆವು. ಇದರಿಂದ ಅವರ ಮಾತಿನಲ್ಲಿ ಸುಧಾರಣೆಯುಂಟಾಗುವದಲ್ಲದೆ, ವಿಷಯಜ್ಞಾನವಾಗಿ ವಿದ್ಯಾರ್ಥಿನಿಯರಲ್ಲಿ ಬಹುಶ್ರುತತ್ವವು ಉಂಟಾಗುವದು. ಇನ್ನು ಮೇಲೆ ಕಾಲೇಜದಲ್ಲಿ, ಕಾಲೇಜದ ವಿದ್ಯಾರ್ಥಿನಿಯರಿಂದ ಇಲ್ಲವೆ ಪ್ರೌಢಶಿಕ್ಷಕಿಯರಿಂದ ರಾಮಾಯಣ, ಭಾರತ ಮುಂತಾದ ಪ್ರಾಚೀನ ಗ್ರಂಥಗಳಲ್ಲಿಯ ಪ್ರಸಿದ್ಧರಾದ ಸ್ತ್ರೀಪುರುಷರ ಚರಿತ್ರಗಳನ್ನು ಓದಿಸಿ, ವಿವರಿಸಹಚ್ಚಿ, ಅವರಲ್ಲಿ ಉದಾತ್ತವಿಚಾರಗಳನ್ನೂ ನೀತಿತತ್ವಗಳನ್ನೂ ನೆಲೆಗೊಳಿಸಬೇಕೆಂದು ಯೋಚಿಸಿದ್ದೇವೆ. ಸದ್ಯಕ್ಕೆ ಅವರು ಈ ಗ್ರಂಥಗಳನ್ನು ಕಾಲೇಜದ ಲೈಬ್ರರಿಯೊಳಗಿಂದ ಒಯ್ದು ತಮ್ಮತಮ್ಮಷ್ಟಕ್ಕೆ ಓದಿಕೊಳ್ಳುತ್ತಾರೆ. ಇನ್ನು, ಇದಕ್ಕೆ ಒಂದು ವಿಶೇಷ ಪ್ರಕಾರದ ವ್ಯವಸ್ಥಿತಸ್ವರೂಪವನ್ನು ಕೊಡಬೇಕೆಂದು ಹವಣಿಸುತ್ತೇವೆ. ಚಿಕ್ಕಮಕ್ಕಳಿಗೆ ಬೇಸರವಾಗದಂತೆ ಬೇಗನೆ ಓದಬರಿಯಲಿಕ್ಕೆ ಕಲಿಸಬೇಕೆಂದು ಯತ್ನನಡಿಸಿದ್ದೇವೆ. ಪುಸ್ತಕದೊಳಗಿನ ವಿಷಯಗಳನ್ನು ಆದಷ್ಟು ವ್ಯವಹಾರಕ್ಕೆ ಹೊಂದಿಸಿ ಕಲಿಸಬಯಿಸಿ, ಕೈಲಾದ ಮಟ್ಟಿಗೆ ಪ್ರತ್ಯಕ್ಷ ವಸ್ತುಗಳಿಂದಲೂ, ಪ್ರಯೋಗಗಳಿಂದಲೂ ವಿಷಯವಿವರಣೆಯನ್ನು ಸಾಗಿಸುತ್ತೇವೆ. ಹುಡುಗರನ್ನು ಕರಕೊಂಡುಬರುವದೂ ಕಳಿಸುವದೂ ಸರಿಯಾಗಿ ಸಾಗುವದು. ಹುಡುಗರು ಮಧ್ಯಾಹ್ನದ ಸೂಟಿಯಲ್ಲಿ ತಂದ ಉಪಹಾರವನ್ನು ಬೇರೆಬೇರೆ ಕುಳಿತು ತಿನ್ನಲಿಕ್ಕೆ ವ್ಯವಸ್ಥೆಯನ್ನು ಮಾಡಿರುತ್ತದೆ. ಜಾತಿಧರ್ಮಗಳಿಗನುಸರಿಸಿ ನೀರು ಸಿಗುವಂತೆ ಮಾಡಿರುವದು. ಆ ನೀರು ಕಾಸು ಸೋಸಿ ಇಡಿಸಿರುತ್ತೇವೆ. ಹುಡುಗರ ಮೋರೆಯನ್ನೂ ಕಾಲುಗಳನ್ನೂ ತೊಳಸೋಣ, ಹೇಳಲು ಹಾಕೋಣ ಮುಂತಾದವುಗಳು ಇಲ್ಲಿ ನಡೆಯುವವು. ಮುಖ್ಯವಾಗಿ ವಿದ್ಯಾರ್ಥಿನಿಯರ ಬುದ್ಧಿಯೂ, ಆರೋಗ್ಯವೂ, ನೀತಿಯೂ ಬೆಳೆದು ಅವರು ಉತ್ತಮರಾದ ನಾಗರಿಕರ ತಾಯಂದಿರಾಗ

ಬೇಕೆಂಬ ಉದ್ದೇಶವನ್ನು ಮುಂದಿಟ್ಟುಕೊಂಡು ನಮ್ಮ ಶಿಕ್ಷಣವನ್ನು ಸಾಗಿಸುತ್ತೇವೆ.

ಇನ್ನು ಸಭಿಕರಾದ ತಮ್ಮಿಂದ ನಾವು ಬಯಸತಕ್ಕ ಸಂಗತಿಗಳ್ಯಾವವೆಂಬದನ್ನು ವಿವರಿಸುವೆವು.

ಈ ದೇಶದ ಜನರ ಮನಸ್ಸಿನಲ್ಲಿ ಸ್ತ್ರೀಶಿಕ್ಷಣದ ಮಹತ್ವವು ಇನ್ನು ಚನ್ನಾಗಿ ಬಿಂಬಿಸಿರುವದಿಲ್ಲ. ಅದರಿಂದ ಅವರು ತಮ್ಮ ಮಕ್ಕಳನ್ನು ನಿತ್ಯ ವೇಳೆಗೆ ಸರಿಯಾಗಿ ಸಾಲೆಗೆ ಕಳಿಸುವದಿಲ್ಲ. ಇದರಿಂದ ಅಭ್ಯಾಸಕ್ಕೆ ಎಷ್ಟು ತೊಂದರೆಯಾಗುತ್ತದೆಂಬದನ್ನು ತಾವೆಲ್ಲರೂ ಧ್ಯಾನದಲ್ಲಿ ತರಬೇಕು. ಹೀಗೆ ಸಾಲೆಗೆ ಬಾರದ ವಿದ್ಯಾರ್ಥಿನಿಯರ ವಿಷಯಜ್ಞಾನವು ಅಸಂದಿಗ್ಧವಾದದ್ದೂ ಪೂರ್ಣವಾದದ್ದೂ ಆಗಲಾರದು. ಇಂಥ ವಿದ್ಯಾರ್ಥಿನಿಯರು ೩-೪ ವರ್ಷ ಸಾಲೆಗೆ ಬಂದರೂ ಏನು ಪ್ರಯೋಜನವಾಗದೆ, ಸಾಲೆಯ ಹೆಸರು ಮಾತ್ರ ಕೊಡುವ ಸಂಭವವದೆ. ಆದ್ದರಿಂದ ತಾವೆಲ್ಲರೂ ಹೀಗೆ ಮಾಡದೆ, ನಿಕೃಷ್ಟಪಕ್ಷಕ್ಕೆ ೪-೫ ವರ್ಷವಾದರೂ ತಮ್ಮ ಮಕ್ಕಳನ್ನು ಸಾಲೆಗೆ ತಪ್ಪದೆ ಹೊತ್ತಿಗೆ ಸರಿಯಾಗಿ ಕಳಿಸಿದರೆ, ಶಾಲಾಶಿಕ್ಷಣದ ಸುಪರಿಣಾಮವು ತಮಗೆ ಮನವರಿಕೆಯಾಗುವದು. ಈ ಸಂಗತಿಯನ್ನು ತಾವು ವಿಚಾರಿಸುವದಲ್ಲದೆ, ತಮ್ಮ ಸ್ನೇಹಿತರಿಗೂ ತಿಳಿಸಿ, ಈ ಸಂಸ್ಥೆಯನ್ನು ಊರ್ಜಿತಗೊಳಿಸಿ, ನಿಮ್ಮ ಮಕ್ಕಳ ಕಲ್ಯಾಣವನ್ನು ಸಹ ಸಾಧಿಸಿಕೊಳ್ಳಬೇಕೆಂದು ಅಪೇಕ್ಷಿಸುತ್ತೇವೆ. ಹಿಂದೂ ಜನರಲ್ಲಿ ಚಿಕ್ಕ ಹೆಣ್ಣುಮಕ್ಕಳು ಕೂಡ ಮನೆಯಲ್ಲಿ ಕೂಸನ್ನೆತ್ತಿಕೊಳ್ಳೋಣ, ಚಿಕ್ಕಪುಟ್ಟ ಮನೆಗೆಲಸಗಳನ್ನು ಮಾಡಿ ಗೃಹಕೃತ್ಯದಲ್ಲಿ ತಾಯಂದಿರಿಗೆ ನೆರವಾಗೋಣ, ಮುಂತಾದ ಕಾರ್ಯಗಳನ್ನು ಮಾಡಬೇಕಾಗುತ್ತದೆಂಬದನ್ನು ನಾವು ಬಲ್ಲೆವು. ನಮ್ಮ ಸಾಲೆಯು ೧೧॥ ಗಂಟೆಯಿಂದ ೫ ರ ವರೆಗೆ ನಡೆಯುವದು. ಆದ್ದರಿಂದ ಮುಂಜಾವಿನಲ್ಲಿ ಮನೆಗೆಲಸಗಳನ್ನು ಮಾಡಿಸಿಕೊಂಡು ಮಧ್ಯಾಹ್ನದ ೪॥ ತಾಸುಗಳನ್ನು ಉಳಿಸಿಕೊಂಡು ತಮ್ಮ ಮಕ್ಕಳನ್ನು ಸಾಲೆಗೆ ಕಳಿಸಲಿಕ್ಕೆ ಏನೂ ಅಡ್ಡಿಯುಂಟಾಗಲಾರದೆಂದು ನಾವು ನಂಬುತ್ತೇವೆ. ಇಷ್ಟು ವೇಳೆಯು ನಮಗೆ ಸಾಕು. ನಾವು ಹೆಣ್ಣುಮಕ್ಕಳಿಗೆ ಗೃಹಪಾಠಗಳನ್ನು ಕೊಡುವದಿಲ್ಲ. ಹುಡುಗರನ್ನು ನಿತ್ಯ ವೇಳೆಗೆ ಸಾಲೆಗೆ ಕಳಿಸುವ ಪಾಲಕರಿಗೆ, ನಮ್ಮ ಮಗಳಿಗೆ ಏನು ಕಲಿಸಿದ್ದೀರಿ, ಎಂದು ಕೇಳಲಿಕ್ಕೆ ಬಾಧ್ಯತೆಯುಂಟಾಗುತ್ತದೆ. ಹೀಗೆ ಬಹುಜನರು ನಮ್ಮನ್ನು ಕೇಳುವ ದಿವಸ

ವು ನಮ್ಮ ಆಯುಷ್ಯದೊಳಗಿನ ಸುದಿವಸವೆಂದು ನಮ್ಮ ತಿಳುವಳಿಕೆಯುಂಟು. ಮುಖ್ಯವಾಗಿ ತಾವು ಇವೆಲ್ಲ ಮಾತುಗಳನ್ನು ಮನಸ್ಸಿಗೆ ತಂದುಕೊಂಡು ನಮ್ಮೀ ಕಾರ್ಯಕ್ಕೆ ಸಹಾಯಮಾಡಬೇಕೆಂದು ಬಿನ್ನವಿಸುತ್ತೇವೆ. ತಾವೆಲ್ಲರೂ ನನ್ನ ಆಮಂತ್ರಣವನ್ನು ಗೌರವಿಸಿ ಶ್ರಮಬಟ್ಟು ಸಭೆಯನ್ನಲಂಕರಿಸಿದ್ದಕ್ಕಾಗಿ ನಾನು ತಮ್ಮೆಲ್ಲರಿಗೆ ಆಭಾರಿಯಾಗಿದ್ದೇನೆ." ರಿಪೋರ್ಟು ಓದುವದಾದ ಬಳಿಕ ಆನರೆಬಲ್ ರಾವಬಾಹದ್ದೂರ ರೊದ್ದ ರಾಯರು ಪ್ರಾಕ್ಟಿಸಿಂಗಸ್ಕೂಲಿನಲ್ಲಿಯೂ ಕಾಲೇಜದಲ್ಲಿಯೂ ಮೆ॥ ಲೇಡೀ ಸುಪರಿಂಟೆಂಟರವರು ಮಾಡಿದ ಮತ್ತು ಮಾಡುತ್ತಿರುವ ಸುಧಾರಣೆಗಳ ಬಗ್ಗೆ ಎಲ್ಲರಿಗೂ ಆದ ಸಂತೋಷವನ್ನೂ ಅವುಗಳ ಬಗ್ಗೆ ಎಲ್ಲವರ ಮನಸ್ಸಿಲ್ಲುಂಟಾದ ಕೃತಜ್ಞತಾಭಾವವನ್ನೂ ವ್ಯಕ್ತಪಡಿಸಿದರು. ಆಮೇಲೆ ಅಧ್ಯಕ್ಷರು ಸಮಯೋಚಿತವಾದ ಭಾಷಣವನ್ನು ಮಾಡಿದರು. ಬಳಿಕ ಸಭೆಗೆ ಬಂದ ಜನರನ್ನು ತಾಂಬೂಲ-ಪರಿಮಳದ್ರವ್ಯಗಳಿಂದ ಸತ್ಕರಿಸಿದನಂತರ ವಿದ್ಯಾರ್ಥಿನಿಯರಿಗೆ ಮಿಠಾಯಿ ಹಂಚಲ್ಪಟ್ಟು ಸಭಾಕಾರ್ಯವು ಸಮಾಪ್ತವಾಯಿತು.

ಹ್ಯಾಲೇ ಧೂಮಕೇತುವೂ ಪೃಥ್ವಿಯೂ.

ಕಳೆದ ಸಂಚಿಕೆಯಲ್ಲಿ ಸಾಮಾನ್ಯವಾಗಿ ಧೂಮಕೇತುಗಳ ವಿಷಯದಲ್ಲಿಯೂ ವಿಶೇಷವಾಗಿ ಈಗ ದಿನಾಲು ಬೆಳಿಗ್ಗೆ ಪೂರ್ವ ದಿಕ್ಕಿನಲ್ಲಿ ಕಾಣಿಸುತ್ತಿರುವ ಹ್ಯಾಲೆ ಧೂಮಕೇತುವಿನ ವಿಷಯದಲ್ಲಿಯೂ ವಿಸ್ತಾರವಾಗಿ ಬರೆದಿದ್ದೇವಷ್ಟೆ. ಪೃಥ್ವಿಯು ಈ ಧೂಮಕೇತುವಿನ ಬಾಲದೊಳಗಿಂದ ಬರುವ ಮೇ ತಿಂಗಳ ಮಧ್ಯದಲ್ಲಿ ಹಾಯುವದರಿಂದ ಪೃಥ್ವಿಯಲ್ಲಿ ವಾಸಿಸುವವರಿಗೆ ಅದರಿಂದ ಏನಾದರೂ ಅಪಘಾತವಾಗುವದೋ ಹ್ಯಾಗೆ ಎಂಬದನ್ನು ತಿಳಕೊಳ್ಳುವದಕ್ಕಾಗಿ ಒಬ್ಬ ಗೃಹಸ್ಥನು ಇಂಗ್ಲಂಡದಲ್ಲಿ ಈಗ ಪ್ರಸಿದ್ಧ ಜ್ಯೋತಿರ್ವಿದರಾಗಿದ್ದ ಸರ್ ರಾಬರ್ಟ ಬಾಲ್ ಎಂಬವರಿಗೆ ಬರೆದು ಕೇಳಿದ್ದರಿಂದ ಅವರು ಆ ಗೃಹಸ್ಥನಿಗೆ ಕೊಟ್ಟ ಉತ್ತರದ ನಕಲನ್ನು ಲಂಡನ್ ಟಾಯಿಮ್ಸ ಪತ್ರಕ್ಕೆ ಕಳಿಸಿರುವರು. ಶಾಲಾಪತ್ರಿಕದ ವಾಚಕರಿಗೋಸ್ಕರ ಆ ಪತ್ರವನ್ನು ಇಲ್ಲಿ ಕನ್ನಡಿಸುತ್ತೇವೆ:—

"ಅತ್ಯಾವೇಶದಿಂದ ಮುಂದುವರಿಯುತ್ತಿರುವ ಗಂಡಕಮೃಗವು ಜೇಡಹುಳದ ಬಲೆಗೆ ಅಂಜಲಾರದು; ಅದರಂತೆಯೇ ಧೂಮಕೇತುವಿನ ಹಾದಾಟಕ್ಕೆ ಪೃಥ್ವಿಗೆ ಅಂಜಲಿಕ್ಕೆ ಕಾರಣವಿಲ್ಲ. ಸನ್ ೧೮೬೧ ನೇ ಇಸವಿಯಲ್ಲಿ ನಾವು ಒಂದು ಧೂಮಕೇತುವಿನ ಬಾಲದೊಳಗಿಂದ ಹಾಯ್ದು ಹೋದೆವು.

ಆದರೆ ಆ ಕಾಲಕ್ಕೆ ಅದು ಯಾರಿಗೂ ತಿಳಿಯಲೂ ಇಲ್ಲ. ಪ್ರತಿವರ್ಷ ಕನಿಷ್ಟಪಕ್ಷಕ್ಕೆ ಐದು ಧೂಮಕೇತುಗಳು ನಮ್ಮ ಪೃಥ್ವಿಗೆ ಭೆಟ್ಟಿಯಾಗುತ್ತಿದ್ದರೂ ಪೃಥ್ವಿಯ ಮೇಲೆ ಪ್ರಾಣಿಗಳ ಜೀವನವು ಲಕ್ಷಾವಧಿ ವರ್ಷ ಅಬಾಧಿತವಾಗಿ ನಡೆದಿರುತ್ತದೆ. ಧೂಮಕೇತುಗಳಿಂದ ಪೃಥ್ವಿಗೆ ಏನಾದರೂ ಅಪಾಯವಾಗುವಂತೆ ಇದ್ದರೆ, ಈ ಮೊದಲು ಎಷ್ಟೋ ಕಾಲದ ಹಿಂದೆ ಆಗಬಹುದಾಗಿತ್ತು; ಮತ್ತು ಹಾಗಾಗಿದ್ದ ಪಕ್ಷದಲ್ಲಿ ನೀವೂ ನಾವೂ ಧೂಮಕೇತುಗಳ ವಿಷಯವಾಗಿಯಾಗಲಿ ಬೇರೆ ಯಾವ ವಿಷಯಗಳ ಬಗ್ಗೆಯಾಗಲಿ ಚರ್ಚಿಸುವ ಸಂದರ್ಭವೇ ಈ ಹೊತ್ತಿಗೆ ಉಳಿಯುತ್ತಿರಲಿಲ್ಲ. ನನ್ನ ಅಜಮಾಸಿನಂತೆ ನಾವು ಬಹುಶಃ ಮೇ ತಿಂಗಳ ೧೩ನೇ ತಾರೀಖಿಗೆ ಹ್ಯಾಲೇ ಧೂಮಕೇತುವಿನ ಬಾಲದಲ್ಲಿರುವೆವು. ಸಮಗ್ರ ಧೂಮಕೇತುವನ್ನು ಹಿಚುಕಿ ಕೈಯಲ್ಲಿ ಹಿಡಿಯುವ ಪಾಕೀಟಿನಲ್ಲಿ ಹಾಕಬಹುದೆಂದು ಒಂದು ಕಡೆಯಲ್ಲಿ ಸರ್ ಜಾನ್ ಹರ್ಷೆಲ್‌ರವರು ಹೇಳಿದಂತೆ ನನ್ನ ತಿಳುವಳಿಕೆ ಇದೆ."

ಜಪಾನದಲ್ಲಿ ಇತ್ತಲಾಗಿ "ಇಂಟರನಾಶನಲ್ ಪ್ರೆಸ್ ಅಸೋಸಿಯೇಶನ್" ಎಂಬ ಹೆಸರುಳ್ಳ ಬೇರೆ ಬೇರೆ ದೇಶಗಳ ವರ್ತಮಾನಕರ್ತರ ಸಂಘವು ಸ್ಥಾಪಿಸಲ್ಪಟ್ಟಿರುತ್ತದೆ. ಈ ಸಂಸ್ಥೆಯ ಮೊದಲನೆಯ ಜನರಲ್ ಸಭೆಯು ಕೂಡಿದಾಗ್ಗೆ ಪ್ರಸಿದ್ಧವಾದ ಲಂಡನ್ ಟಾಯಿಮ್ಸದ ಚೀನ ದೇಶದೊಳಗಿನ ಸುದ್ದಿಗಾರರಾದ ಮಿ. ಚಿರೋಲ್ ಎಂಬುವರು ವರ್ತಮಾನಪತ್ರಕಾರರ ಜವಾಬುದಾರಿಯನ್ನು ಕುರಿತು ಭಾಷಣ ಮಾಡಿದರು. ಅದರ ಮುಖ್ಯ ಭಾಗವನ್ನು ನಮ್ಮ ವಾಚಕರಿಗೋಸ್ಕರ ಕೆಳಗೆ ಕೊಟ್ಟಿರುತ್ತೇವೆ:—

"ವರ್ತಮಾನಪತ್ರಗಳನ್ನು ನಡಿಸುವದೆಂದರೆ ಒಂದು ಪ್ರಕಾರದ ಸಾಹಸದ ವ್ಯಾಪಾರ ಮಾಡುವಂತೆ ಇರುತ್ತದೆಂದು ಎಷ್ಟೋ ಪತ್ರಕಾರರು ತಿಳಿಯುತ್ತಾರೆ. ಬೇರೆ ಬೇರೆ ವ್ಯಾಪಾರಸ್ಥರು ತಮ್ಮ ತಮ್ಮ ವಸ್ತುಗಳ ಮಾರಾಟ ಮಾಡುತ್ತಿರುವಂತೆ ವರ್ತಮಾನಪತ್ರಕಾರರಾದರೂ ಒಂದು ಪ್ರಕಾರದ ಪದಾರ್ಥವನ್ನು ಮಾರಾಟ ಮಾಡುತ್ತಿರುತ್ತಾರೆ. ಪೇಟೆಯಲ್ಲಿ ಮಾರಬಹುದಾದ ಅರಿವೆಯನ್ನು ನೇಯುವದು ಜೇಡನ ಉದ್ಯೋಗವಾಗಿದೆ; ಮಾರ್ಕೇಟಿನಲ್ಲಿ (ಗುಜ್ಜರಿಯಲ್ಲಿ) ಬೇಡಿಕೆಯಿರುವ ಕಾಯಿಪಲ್ಲೆಗಳನ್ನು ಸಿದ್ಧಪಡಿಸುವದು ತೋಟಿಗನ ಕೆಲಸವಾಗಿದೆ; ಅದರಂತೆ ತಮ್ಮ ಪತ್ರಗಳು ಹೆಚ್ಚು ವೆಚ್ಚವಾಗಲಿಕ್ಕೆ ಅವಶ್ಯವಾದಂಥ ಲೇಖಗಳನ್ನು ಬರೆಯುವದು

ಪತ್ರಿಕಾರರ ಕೆಲಸವಾಗಿರುತ್ತದೆ, ಎಂದು ಎಷ್ಟೋ ಜನರು ಎಣಿಸುವದು. ಜನರ ಅಭಿರುಚಿಯನ್ನರಿತು ತಕ್ಕ ಲೇಖಗಳನ್ನು ಬರೆಯುವದಷ್ಟೇ ಪತ್ರಿಕಾರರ ಕೆಲಸವಿರುವದೆಂತಲೂ, ಜನರ ಅಭಿರುಚಿಯು ಕೆಟ್ಟದ್ದರೆ, ಅದರ ದೋಷವು ಜನರ ಕಡೆಗೆ ಇರುವದರಿಂದ ಪತ್ರಿಕಾರರು ಅದನ್ನು ಕಟ್ಟಿಕೊಂಡು ಮಾಡುವದೇನೆಂತಲೂ, ಶಿಕ್ಷಣಸಂಪಾದನಕ್ಕಿಂತ ವಿನೋದ-ಮನೋರಂಜನಗಳ ಕಡೆಗೆ ಜನರ ಚಿತ್ತವೃತ್ತಿಯಿರಲು, ವ್ಯಕ್ತಿವಿಷಯಕವಾದ ನಿಂದೆಯನ್ನು ಕೇಳುವದಕ್ಕೆ ಅವರು ಆತುರ ಪಡುತ್ತಿರಲು, ತಮ್ಮ ಜವಾಬುದಾರಿಯನ್ನರಿಯದ ಲೇಖಕರು ಉಪ್ಪು ಕಾರ ಹಚ್ಚಿ ಬರೆದಂಥ ಕಮ್ಮಗಾದಂಥ ಚಳವಳಿಯನ್ನುಂಟುಮಾಡುವಂಥ ಸುಳ್ಳು ಸುದ್ದಿಗಳನ್ನೂ, ವ್ಯಕ್ತಿವಿಷಯಕವಾದ ನಿಂದೆಯ ಲೇಖಗಳನ್ನೂ ಬರೆಯುವದೇ ಪತ್ರಿಕಾರರ ಕರ್ತವ್ಯವೆಂತಲೂ ಎಷ್ಟೋ ಪತ್ರಿಕಾರರು ಗ್ರಹಿಸುವರು. ಘಾತಕವಾದ ಈ ಕಲ್ಪನೆಯ ಪೈರು ಈ ದೇಶದಲ್ಲಿಯೇ ಚನ್ನಾಗಿ ಬೆಳೆದಿರುವದೆಂತಲ್ಲ; ಈ ದುಷ್ಟಕಲ್ಪನೆಯು ಪಾಶ್ಚಾತ್ಯ ದೇಶಗಳಲ್ಲಿಯೂ ಹಬ್ಬಿರುತ್ತದೆ. ಆದರೆ, ಇದು ಪತ್ರಿಕಾರರ ಕೆಲಸದ ಹಾಗೂ ಅವರ ಜವಾಬುದಾರಿಯ ಸಂಬಂಧದ ನಿಜವಾದ ಶ್ರೇಷ ಕಲ್ಪನೆಯಲ್ಲ. ಈ ದುಷ್ಟ ಕಲ್ಪನೆಯ ವರ್ಚಸ್ಸು ತಮ್ಮ ದೇಶದಲ್ಲಿರುವ ವರ್ತಮಾನಪತ್ರಿಕಾರರ ಮನಸ್ಸಿನ ಮೇಲೆ ಬೀಳದಂತೆಯೂ ಇಂಥ ನಿಕೃಷ್ಟ ಮನೋವೃತ್ತಿಯ ಪ್ರೇರಣೆಯಿಂದ ವರ್ತಮಾನ ಪತ್ರಗಳು ಅಸ್ತಿತ್ವದಲ್ಲಿ ಬಾರದಂತೆಯೂ ದೇಶದ ಹಿತಚಿಂತಕರು ಎಚ್ಚರ ಪಡಲಿಕ್ಕೆ ಬೇಕು. ಇನ್ನು, ವರ್ತಮಾನಪತ್ರಗಳನ್ನು ಹೊರಡಿಸುವವರು ತಮ್ಮ ಪತ್ರಗಳ ಸಾಂಪತ್ತಿಕಸ್ಥಿತಿಯನ್ನು ದುರ್ಲಕ್ಷಿಸಬೇಕೆಂತಲ್ಲ. ತಿರುಗಿ ಕೇಳಿದರೆ, ಪತ್ರಿಕಾರರು ತಮ್ಮ ಕರ್ತವ್ಯವನ್ನು ಉತ್ತಮ ರೀತಿಯಿಂದ ಜರುಗಿಸಿ, ತಮ್ಮ ಕಾರ್ಯದಲ್ಲಿ ಯಶಸ್ಸು ಪಡೆಯಬೇಕಾದರೆ ಅವರ ಪತ್ರಗಳ ಸಾಂಪತ್ತಿಕಸ್ಥಿತಿಯು ಉತ್ತಮವಾಗಿರುವದು ಅವಶ್ಯವಿರುತ್ತದೆ. ಆದರೆ, ದ್ರವ್ಯಾರ್ಜನವು ಪತ್ರಿಕಾರರ ಕರ್ತವ್ಯವನ್ನು ಜರುಗಿಸುವ ಸಾಧನವಾಗಿರುತ್ತದೆಯೇ ಹೊರತು, ಅವರ ಕರ್ತವ್ಯಸರ್ವಸ್ವವಲ್ಲವೆಂಬದನ್ನು ಅವರು ಲಕ್ಷದಲ್ಲಿಡಬೇಕು.

ವರ್ತಮಾನಪತ್ರಗಳೆಂದರೆ ಲೌಕಿಕಶಿಕ್ಷಣಕ್ಕೆ ಸಾಧನೀಭೂತವಾಗಿರುವ ಒಂದು ಪ್ರಕಾರದ ಶಕ್ತಿಯೆಂದು ತಿಳಿಯತಕ್ಕದ್ದು. ತರುಣವರ್ಗವು ರಾಷ್ಟ್ರದ ಆಧಾರಸ್ತಂಭವಾಗಿರುವದರಿಂದ ಅದರ ಶಿಕ್ಷಣಕ್ಕೆ ಎಲ್ಲ

ಸುಧಾರಿಸಿದ ರಾಷ್ಟ್ರಗಳಲ್ಲಿ ಬಹಳ ಮಹತ್ವವನ್ನು ಕೊಡುತ್ತಾರೆ. ರಾಷ್ಟ್ರದೊಳಗಿನ ಪ್ರೌಢರ ವಿಚಾರಕ್ಕೆ ತಕ್ಕ ಹಾದಿಯನ್ನು ತೋರಿಸುವದೂ, ರಾಷ್ಟ್ರದ ಘಟಕರೆಂಬ ಸಂಬಂಧದಿಂದ ಅವರ ಮೇಲಿರುವ ಜವಾಬುದಾರಿಯನ್ನು ಅವರ ಮನಸ್ಸಿನಲ್ಲಿ ಜಾಗ್ರತಗೊಳಿಸುವೆದೂ ಪತ್ರಿಕಾರರ ಕೆಲಸವಾಗಿರುತ್ತದೆ. ಪತ್ರಕಾರರು ಮಾಡಬೇಕಾಗಿರುವ ಈ ಒಂದು ಪ್ರಕಾರದ ಲೋಕಶಿಕ್ಷಣದ ಕಾರ್ಯದ ಮಹತ್ವವು, ತರುಣವರ್ಗದ ಶಿಕ್ಷಣದ ಮಹತ್ವಕ್ಕಿಂತ ಯಾವ ಪ್ರಕಾರದಿಂದಲೂ ಕಡಿಮೆಯಾಗಿರುವದಿಲ್ಲ. ಕೆಲವೊಂದು ಶಿಕ್ಷಣಸಂಸ್ಥೆಯೊಳಗಿನ ಅಭ್ಯಾಸಕ್ರಮವು ಉತ್ಕೃಷ್ಟವಾಗಿರುತ್ತದೆಂತಲೂ, ಶಿಕ್ಷಕರೂ ಪ್ರೊಫೆಸರರೂ ವಿದ್ವಾಂಸರಿದ್ದಾರೆಂತಲೂ ಶಿಕ್ಷಣೋಪಯೋಗದ ಉಪಕರಣಗಳು ಶಾಸ್ತ್ರೀಯಪದ್ಧತಿಯ ಒರೆಗೆ ಹತ್ತುವಂತೆ ಇರುತ್ತವೆಂತಲೂ ಕಲ್ಪಿಸುವ. ಇಷ್ಟೆಲ್ಲ ಇದ್ದು, ಆ ಶಿಕ್ಷಣಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಶೀಲವನ್ನುಂಟು ಮಾಡುವ ವ್ಯವಸ್ಥೆಯನ್ನು ಮಾಡಿರದಿದ್ದರೆ, ಉತ್ತಮರಾದ ನಾಗರಿಕರನ್ನುಂಟುಮಾಡುವ ಶಿಕ್ಷಣದ ಉದ್ದೇಶವು ಕೊನೆಗಾಣಲಾರದು; ಮತ್ತು ರಾಷ್ಟ್ರದ ದೊಡ್ಡಸ್ತನದ ಅಸ್ತಿವಾರಕ್ಕೆ ಆಧಾರವಾದ ಆತ್ಮಸಂಯಮನ, ಸ್ವಾರ್ಥತ್ಯಾಗ, ತೇಜಸ್ಸು, ಸತ್ಯನಿಷ್ಠೆ, ಧೈರ್ಯ, ಹಿಡಿದ ಕೆಲಸವನ್ನು ಸಮಾಧಾನದಿಂದ ಒಂದೇಸವನೆ ಸಾಗಿಸುವಂಥ ಕಾರ್ಯನಿಷ್ಠತೆ ಇವೇ ಮೊದಲಾದ ಗುಣಗಳ ವಿಕಾಸವು ತರುಣವರ್ಗದಲ್ಲಿ ಆಗಲಾರದು. ತರುಣವರ್ಗದ ಶಿಕ್ಷಣದ ಪರಿಪೂರ್ತಿಯೂ ಸಾರ್ಥಕತೆಯೂ ಆಗಬೇಕಾದರೆ, ಆವರ್ಗಕ್ಕೆ ಚಾರಿತ್ರ್ಯದ ಜೋಡನ್ನುಂಟು ಮಾಡಿಕೊಡಬೇಕು. ಇದರಂತೆಯೇ ಪತ್ರಕಾರರು ಸುದ್ದಿಗಳನ್ನು ತಿಳಿಸುವದರ ಸಂಗಡಲೇ ರಾಷ್ಟ್ರದ ಶೀಲವನ್ನುಂಟುಮಾಡುವ ಕಾರ್ಯವನ್ನು ಸಾಗಿಸತಕ್ಕದ್ದು. ಬಿಸಿಬಿಸಿಯ ಬೇಕಾದಷ್ಟು ಸುದ್ದಿಗಳನ್ನು ಹೊತ್ತುಹೊತ್ತಿಗೆ ತಿಳಿಸುವದರಿಂದಲೂ, ಉತ್ತಮ ಲೇಖಕರನ್ನು ಸಂಪಾದಿಸುವದರಿಂದಲೂ, ಮುದ್ರಣ, ಕಾಗದ ಇವುಗಳಲ್ಲಿ ಕೊರತೆ ಉಳಿಯದಂತೆ ನೋಡಿಕೊಳ್ಳುವದರಿಂದಲೂ ಪತ್ರಕಾರರ ಕರ್ತವ್ಯವು ಪೂರ್ಣವಾಗುವದೆಂದು ತಿಳಿಯಲಾಗದು. ಹಾಗೆ ತಿಳಿಯುವವರಿಗೆ ಪತ್ರಕಾರರ ಶ್ರೇಷ್ಠವಾದ ಕರ್ತವ್ಯದ ಗುರುತೇ ಆಗಿರುವದಿಲ್ಲೆಂದು ಹೇಳಬೇಕಾಗುವದು. ಪ್ರತ್ಯಕ್ಷ ಉದಾಹರಣದಿಂದಲೂ, ಉಪದೇಶದಿಂದಲೂ ರಾಷ್ಟ್ರದ ಉತ್ತಮವಾದ ಶೀಲವನ್ನುಂಟುಮಾಡುವ ಜವಾಬುದಾರಿಯು ಪತ್ರಕಾರರದಿರುತ್ತದೆ."

ಐತಿಹಾಸಿಕ ನಿಬಂಧಗಳು.

೧. ರೋಹಿಲರ ಯುದ್ಧವು (೧೭೭೪).

ಹಿಂದುಸ್ತಾನದ ಗವರ್ನರ ಜನರಲ್ಲರೆಂಬ ಶ್ರೇಷ್ಠಾಧಿಕಾರಿಗಳ ಮಾಲೆಯಲ್ಲಿ ಮೊದಲಾದವನೂ ಮೇಲಾದವನೂ ಆದ ವಾರನ್‌ಹೇಸ್ಟಿಂಗ್ಸನ ಆಳಿಕೆಯಲ್ಲಿ ವರ್ತಿಸಿದ ಅನೇಕ ಮಹತ್ವದ ಸಂಗತಿಗಳಲ್ಲಿ, ಇವನು ರೋಹಿಲರಕೂಡ ಯುದ್ಧಕ್ಕೆ ನಿಂತು ಅವರನ್ನು ನಾಮಶೇಷ ಮಾಡಿದ ಕಾರ್ಯವು ಅನ್ಯಾಯವಾದದ್ದೆಂದು ವಿದ್ಯಾರ್ಥಿಗಳಿಗೋಸ್ಕರ ರಚಿಸಿದ ಇತಿಹಾಸಗಳಲ್ಲಿ ನಾವು ಓದುವದುಂಟು. ಇಂಗ್ಲಂಡದಲ್ಲಿದ್ದ ಈಸ್ಟ ಇಂಡಿಯಾ ಕಂಪನಿಯ ಡಿರೆಕ್ಟರರೆಂಬ ಇವನ ಯಜಮಾನರು ಹಣದಾಶೆಗೆ ಬಿದ್ದು, "ಹಣ ಕಳಿಸು, ಹಣ ಕಳಿಸು" ಎಂದು ಇವನನ್ನು ಒತ್ತಾಯಪಡಿಸಿದ್ದರಿಂದ, ಅವರ ಆಗ್ರಹದ ಬೇಡಿಕೆಯನ್ನು ಹಾಗೂ ಹೀಗೂ ಪೂರೈಸುವದಕ್ಕೋಸ್ಕರ ಇವನು ನ್ಯಾಯಪಥವನ್ನು ತೊರೆದು ನಿರಪರಾಧಿಗಳಾದ ರೋಹಿಲರ ಕೂಡ ಕದನವೆಸಗಿದನೆಂದೂ, ಬೇರೆ ಯಾವ ಅರ್ಥವನ್ನು ಸಾಧಿಸಿಕೊಳ್ಳುವದು ಇವನ ಉದ್ದೇಶವಿದ್ದಿಲ್ಲೆಂದೂ ಈ ಇತಿಹಾಸಗಳನ್ನು ಓದುವವರ ಗ್ರಹಿಕೆಯಾಗುವದು ಸ್ವಾಭಾವಿಕವಾದದ್ದು. ವಾರನ್ ಹೇಸ್ಟಿಂಗ್ಸನ ಮಹತ್ವದ ಆಳಿಕೆಯಲ್ಲಾದ ಅನೇಕ ಮುಖ್ಯ ಸಂಗತಿಗಳಲ್ಲಿ ಕೆಲವು ದೋಷಯುಕ್ತವಾದವುಗಳೆಂದು ನಾವು ಒಪ್ಪಿಕೊಂಡಾಗ್ಯೂ, ಆ ದೋಷದ ಪ್ರಮಾಣದ ಬಗ್ಗೆ ವಿಚಾರಿಸದಿರುವದು ಇತಿಹಾಸದ ವಿದ್ಯಾರ್ಥಿಯ ದೃಷ್ಟಿಯಿಂದ ಅನ್ಯಾಯದ್ದಾಗಿರುವದೆಂಬದನ್ನು ಲಕ್ಷದಲ್ಲಿಡತಕ್ಕದ್ದು. ಈ ಪ್ರತಿಭಾಶಾಲಿಯು ಆಳಿಹೋಗಿ ಈಗ ನೂರು ವರ್ಷಗಳ ಮೇಲೆ ಆಗಿಹೋಗಿರುವವು. ಆದ್ದರಿಂದ ಅವನು ವ್ಯಕ್ತಪಡಿಸಿದ ವಿಶಾಲಬುದ್ಧಿಯನ್ನು ಪಕ್ಷಪಾತವಿಲ್ಲದೆ ವಿಚಾರಿಸಲಿಕ್ಕೆ ತಕ್ಕಷ್ಟು ಅವಕಾಶವೂ ಬೇಕಾದಷ್ಟು ಆಧಾರಗಳೂ ನಮಗೆ ದೊರೆದಿರುತ್ತವೆ. ಹಿಂದುಸ್ತಾನದ ಮೊದಲನೆಯ ಗವರ್ನರ ಜನರಲ್ಲನಿಗೆ ಆಗಿನ ವಿಲಕ್ಷಣ ಪರಿಸ್ಥಿತಿಯಿಂದುಂಟಾದ ಅನೇಕ ಪ್ರತಿಬಂಧಗಳನ್ನು ನಾವು ಲಕ್ಷಕ್ಕೆ ತರಬೇಕು. ಸಣ್ಣ ಪುಟ್ಟ ಕೆಲಸಗಳಲ್ಲಿ ಸಹ ಮೊದಲಿಡುವ ಕಾರ್ಯವು ಬಹಳ ಗಡಚಾದದ್ದಷ್ಟೇ. ಹಿಂದುಸ್ತಾನದ ವಿಸ್ತಾರವಾದ ಪ್ರದೇಶದಲ್ಲಿ ಕ್ಲೈವನ ಪ್ರತಿಭಾಬಲದಿಂದಲೂ ಶೌರ್ಯದಿಂದಲೂ ಸಿದ್ಧವಾಗಿದ್ದ ಸುಸ್ಥಳದಲ್ಲಿ ಸಾಮ್ರಾಜ್ಯಸ್ಥಾಪನೆಯ ಕಟ್ಟಡವನ್ನು ಪ್ರಾರಂಭ

ಸುವ ಕಾರ್ಯವು ಎಷ್ಟು ಕಠಿಣವಾದದ್ದು! ನಾಲ್ಕಾರು ಸಾವಿರ ಮೈಲು
ದೂರದಿಂದ ಬಂದು, ಪರಿಚಯವಿಲ್ಲದ ಅನೇಕ ಸಣ್ಣ ದೊಡ್ಡ ರಾಜರ ಕೂಡ
ಮುತ್ಸದ್ದಿತನದಿಂದ ನಡಕೊಂಡು, ತಮ್ಮ ಅಮಲನ್ನು ಅವರಲ್ಲಿ ನೆಲೆಗೊಳಿ
ಸುವ ಕಾರ್ಯದಲ್ಲಿ ಮೊದಲಿನ ಪ್ರತಿಯೊಂದು ಸಣ್ಣ ಪುಟ್ಟ ಕೆಲಸಕ್ಕೂ
ವಿಶೇಷ ಮಹತ್ವವಿರುವದೆಂಬದನ್ನು ಹೇಳುವ ಕಾರಣವಿಲ್ಲ. ಇಂಥ
ಸಮಯದಲ್ಲಿ ರಾಜಕರಣವು ಬಹು ಪ್ರಯಾಸದ ಕಾರ್ಯವು. ಇವೆಲ್ಲ
ಸಂಗತಿಗಳನ್ನು ಲಕ್ಷದಲ್ಲಿಟ್ಟುಕೊಂಡು, ರೋಹಿಲರ ಯುದ್ಧದ ಕಾರಣಗಳ
ನ್ನೂ ಅದರ ಪರಿಣಾಮಗಳನ್ನೂ ಪರೀಕ್ಷಿಸಿ, ಇದರಲ್ಲಿ ವಾರನ್‌ಹೇಸ್ಟಿಂಗ್ಸ
ನು ವ್ಯಕ್ತಪಡಿಸಿದ ಜಾಣತನವನ್ನು ವಾಚಕರ ಮುಂದಿಟ್ಟು, ನ್ಯಾಯಾನ್ಯಾ
ಯದ-ಪ್ರಮಾಣದ ಬಗ್ಗೆ ಸ್ವಂತ ಅಭಿಪ್ರಾಯಗಳನ್ನು ಮಾಡಿಕೊಳ್ಳುವ
ಕೆಲಸವನ್ನು ವಾಚಕರಿಗೆ ಒಪ್ಪಿಸುವದೇ ಪ್ರಸ್ತುತ ಲೇಖದ ಉದ್ದೇಶವಿರು
ವದು.

ವಾರನ್ ಹೇಸ್ಟಿಂಗ್ಸನು ಬಂಗಾಲದ ಗವರ್ನರನ ಅಧಿಕಾರವನ್ನು
ಕೈಕೊಂಡ ಸುಮಾರಿಗೆ ಇದ್ದ ಹಿಂದುಸ್ತಾನದ ರಾಜಕೀಯ ಸ್ಥಿತಿಯನ್ನು
ಮೊದಲು ವಿಚಾರಿಸುವ. ಆಗ ಇಂಗ್ಲಿಷರು ಹಿಂದುಸ್ತಾನದಲ್ಲಿದ್ದ ತಮ್ಮ
ಸ್ವಾಸ್ಥ್ಯಗಳನ್ನು ಮೂರು ಇಲಾಖೆಗಳಾಗಿ ವಿಭಾಗಿಸಿದ್ದರು. ಇವುಗಳಲ್ಲಿ
ಮುಂಬಯಿ-ಮದ್ರಾಸಗಳು ಹೆಸರಿಗೆ ಮಾತ್ರ ಇಲಾಖೆಗಳೆನಿಸುತ್ತಿ
ದ್ದವು. ಈ ಪ್ರದೇಶಗಳಲ್ಲಿ ಇಂಗ್ಲಿಷರ ವರ್ಚಸ್ಸು ತಕ್ಕಮಟ್ಟಿಗೆ ನೆಲೆ
ಗೊಂಡಿದ್ದರೂ ಇವರ ಸ್ವಂತ ಅಧಿಕಾರಕ್ಕೆ ಅಧೀನವಾದ ಸೀಮೆಗಳು
ಹೇಳುವಷ್ಟು ಇದ್ದಿಲ್ಲ. ಮದ್ರಾಸದಲ್ಲಿ ಒಂದೆರಡು ಕೋಟೆಗಳೂ ಒಂದೆ
ರಡು ಬಂದರಗಳೂ ಇವರ ವಶದಲ್ಲಿದ್ದವು. ಹಲಕೆಲವು ಸ್ಥಳಗಳಲ್ಲಿ ಮಾತ್ರ
ಇವರು ವಖಾರುಗಳನ್ನಿಟ್ಟುಕೊಂಡು ವ್ಯಾಪಾರವನ್ನು ಮಾಡುತ್ತಿದ್ದರು.
ಮುಂಬಯಿಯ ಸ್ಥಿತಿಯಾದರೂ ಇದೇ ಪ್ರಕಾರದ್ದಿತ್ತು. ಬಂಗಾಲದಲ್ಲಿ
ಮಾತ್ರ ಹೊಸದಾಗಿ (೧೭೬೫), ಬಂಗಾಲ ಬಿಹಾರ ಓಡಿಸಾ ಪ್ರಾಂತಗಳ
ದಿವಾಣೀ ಅಧಿಕಾರವು ಇವರಿಗೆ ದೊರೆತದ್ದರಿಂದ ವಿಸ್ತೀರ್ಣವಾದ ಸೀಮೆ
ಯು ಇವರ ಕೈಸೇರಿತ್ತು. ಗಂಗಾನದಿಯ ಮುಖದ ಪ್ರದೇಶವು ಇವರದಾ
ಗಿತ್ತು. ಆ ಭಾಗದಲ್ಲಿ ಇವರ ಹಡಗುಪಡೆಯಿದ್ದದರಿಂದ ಅದು ಭದ್ರವಾ
ಗಿತ್ತು. ಬುದ್ಧಿಶಾಲಿಯಾದ ಕ್ಲೈವನು ೧೭೬೫ರಲ್ಲಿ ಶಹಾ ಆಲಮನಿಂದ

ದಿವಾಣಿಯನ್ನು ಪಡೆದಾಗ ಅಯೋಧ್ಯೆಯ ವಜೀರನಾದ ಸುಜಾ ಉದ್ದೌಲನ ಕೂಡ ಸಂಧಿಯನ್ನು ಮಾಡಿ ತಮ್ಮ ವಾಯುವ್ಯದ ಸರಹದ್ದಿನ ಪ್ರಾಂತವನ್ನು ಬಲಪಡಿಸಿಕೊಂಡಿದ್ದನು. ಹೆಸರಿಗೆ ಮಾತ್ರ ಬಾದಶಹನಾದ ಶಹಾಅಲಮನು ಇವರ ಅಂಕಿತದಲ್ಲಿದ್ದನು. ಇವರ ಸೀಮೆಗೆ ಹತ್ತಿದ್ದ ಕೋರಾ ಅಲಹಾಬಾದ ಪ್ರಾಂತಗಳಿಗೆ ಹೆಸರಿಗೆ ಮಾತ್ರ ಬಾದಶಹನು ಒಡೆಯನಾಗಿದ್ದನು. ಅಯೋಧ್ಯೆಯ ಪ್ರಾಂತವನ್ನು ಆ ಕಾಲದಲ್ಲಿ ಉತ್ತರದಲ್ಲಿದ್ದ ಮುಸಲ್ಮಾನ ನವಾಬರಲ್ಲಿ ಅತಿ ಬಲಾಢ್ಯನಾದ ಸುಜಾಉದ್ದೌಲನು ಆಳುತ್ತಿದ್ದನು. ಕ್ಲೈವನು ೧೭೬೫ ರಲ್ಲಿ ತನ್ನ ಸಂಕಟ ಸಮಯದಲ್ಲಿ (ಆಗ ಇವನು ಇಂಗ್ಲಿಷರ ಸೆರೆಯಾಳಾಗಿದ್ದನು.) ತೋರಿಸಿದ ಔದಾರ್ಯದಿಂದ ಇವನು ಇಂಗ್ಲಿಷರ ಪರಮಮಿತ್ರನಾಗಿದ್ದನು. ಇವರ ಸೀಮೆಯ ವಾಯುವ್ಯ ಸರಹದ್ದಿನ ಮೇಲೆ ಗಟ್ಟಿಗನಾದ ಸ್ನೇಹಿತನಿದ್ದದರಿಂದ ಇವರಿಗೆ ಆ ಭಾಗದಲ್ಲಿ ತೊಂದರೆಯುಂಟಾಗುವ ಅಂಜಿಕೆಯಿದ್ದಿಲ್ಲ. ಇದಲ್ಲದೆ ಸೈನ್ಯಕ್ಕೋಸ್ಕರ ಶಹಾಅಲಮನೂ ಸುಜಾಉದ್ದೌಲನೂ ಮುಖ್ಯವಾಗಿ ಇಂಗ್ಲಿಷರನ್ನೇ ಅವಲಂಬಿಸಿದ್ದರು. ಸುಜಾ ಉದ್ದೌಲನ ಪ್ರಾಂತಕ್ಕೆ ಹತ್ತಿದಂತೆ ಅಫಗಾಣರಾದ ರೋಹಿಲರ ಚಿಕ್ಕ ಸೀಮೆಯಿತ್ತು. ಅದರಾಚೆಗೆ ದಿಲ್ಲಿಯ ಸುತ್ತಲು ಮುಸಲ್ಮಾನರ ಸಣ್ಣ ಪುಟ್ಟ ಸಂಸ್ಥಾನಗಳಿದ್ದವು. ಇತ್ತ ದಕ್ಷಿಣ ಹಿಂದುಸ್ಥಾನದಲ್ಲಿ ಇಂಗ್ಲಿಷರ ಅಧಿಕಾರವು ಇನ್ನೂ ಸ್ಥಿರಗೊಂಡಿದ್ದಿಲ್ಲವೆಂದು ಮೇಲೆ ಹೇಳಿದ್ದೇವೆ. ಅಲ್ಲಿದ್ದ ಸಂಸ್ಥಾನಿಕರಲ್ಲಿ ಹೈದರಾಬಾದದ ನಿಜಾಮನೂ ಮೈಸೂರಿನ ಹೈದರಅಲ್ಲಿಯೂ ಹೆಸರಾಗಿದ್ದರು. ಹೈದರನಂತೂ ೧೭೬೯ ರಲ್ಲಿ ಇಂಗ್ಲಿಷರು ಒಪ್ಪಂದದಂತೆ ತನ್ನನ್ನು ಮಹಾರಾಷ್ಟ್ರರ ಹಾವಳಿಯಿಂದ ತಪ್ಪಿಸಲಿಲ್ಲವೆಂಬುದನ್ನು ಮನಸಿನಲ್ಲಿ ಹಿಡಿದು ಅನುಕೂಲವಾದ ಸಮಯವನ್ನು ನಿರೀಕ್ಷಿಸುತ್ತ ಇದ್ದನು. ಹೊತ್ತು ಬಂದಂತೆ ಗಟ್ಟಿಗರನ್ನು ಕೂಡಿಕೊಳ್ಳುವ ಸಣ್ಣ ಪುಟ್ಟ ಸಂಸ್ಥಾನಿಕರು ದಕ್ಷಿಣ ಹಿಂದುಸ್ಥಾನದಲ್ಲಿಯೂ ಅಲ್ಲಲ್ಲಿ ಇದ್ದರು.

ಹಿಂದುಸ್ಥಾನದ ಮಧ್ಯಭಾಗವನ್ನೂ ಪಶ್ಚಿಮಭಾಗವನ್ನೂ ಮಹಾರಾಷ್ಟ್ರರು ಆಕ್ರಮಿಸಿದ್ದರು. ಇವರ ಬಗ್ಗೆ ಇಲ್ಲಿ ವಿಸ್ತಾರವಾಗಿ ಬರೆಯಬೇಕಾಗಿದೆ. ಹೇಸ್ಟಿಂಗ್ಸನು ಗವ್ಹರ್ನರನ ಅಧಿಕಾರವನ್ನು ವಹಿಸಿದ ಸಮಯದಲ್ಲಿ ಸುಮಾರು ನೂರು ವರ್ಷಗಳ ಹಿಂದಿನಿಂದ ಬಲಿಯುತ್ತಿದ್ದ ಮಹಾರಾಷ್ಟ್ರರ ಬಲವು ಉತ್ತರದಲ್ಲಿ ಸತಲಜ ಹೊಳೆಯಿಂದ ದಕ್ಷಿಣದಲ್ಲಿ ಕನ್ಯಾ

ಕಾವೇರಿಯ ಭೂಶಿರದ ವರೆಗೆ ಹಬ್ಬಿದ್ದ ಪ್ರಾಂತಗಳನ್ನು ಆಳುತ್ತಿದ್ದ ಪ್ರತಿಯೊಬ್ಬ ರಾಜಪುತ್ರನನ್ನೂ ಸಂಸ್ಥಾನಿಕನನ್ನೂ ನಡುಗಿಸುತ್ತಿತ್ತು. ೧೭೬೧ರಲ್ಲಿ ಪಾಣಿಪತದಲ್ಲಿ ಒದಗಿದ ಕಡುಸೋಲಿನಿಂದ ಇವರು ಪಂಜಾಬವನ್ನು ಮಾತ್ರ ಬಿಟ್ಟು ಹಿಂಜರಿದಿದ್ದರು. ಆದರೂ ಪಶ್ಚಿಮ ಹಿಂದುಸ್ತಾನದಲ್ಲಿ ಇವರು ಪ್ರಬಲರಾಗುತ್ತ ನಡೆದಿದ್ದರು. ಸಣ್ಣಪುಟ್ಟ ಸಂಸ್ಥಾನಗಳಂತೂ ಇವರ ಹಾವಳಿಗಳಿಂದ ಹಣ್ಣಾಗಿದ್ದವು. ರಜಪೂತಸ್ತಾನ ಹಾಗು ಮಧ್ಯಹಿಂದುಸ್ತಾನವನ್ನು ಇವರು ಸಮಯ ಸಾಧಿಸಿದಂತೆ ಕೊಳ್ಳೆಯಿಡುತ್ತಿದ್ದರು. ಬೇಕಾದಷ್ಟು ಬಿಡುಗಡೆಯ ಹಣವನ್ನು ಬಲಾತ್ಕಾರದಿಂದ ಅಪಹರಿಸಿ ಅಲ್ಲಿಯ ಜನರನ್ನು ನುಗ್ಗು ಮಾಡುತ್ತಿದ್ದರು. ಗಂಗಾ-ಯಮುನೆಗಳ ಮಧ್ಯದಲ್ಲಿ ಹರವಾಗಿ ಹಬ್ಬಿದ ಫಲಮಯವಾದ ಭೂಮಿಗಳ ಮೇಲೆ ಪ್ರತಿವರ್ಷ ತಪ್ಪದೆ ದಂಡೆತ್ತಿ ಹೋಗುತ್ತಿದ್ದರು. ದಿಲ್ಲಿ-ಆಗ್ರಾ-ಅಹಮ್ಮದಾಬಾದಗಳ ಸುತ್ತಲಿದ್ದ ಸಣ್ಣಪುಟ್ಟ ಮುಸಲ್ಮಾನ ಸಂಸ್ಥಾನಿಕರೂ, ರೋಹಿಲಖಂಡದ ಅರಸನೂ ಅಯೋಧ್ಯದ ಅರಸನೂ ಸಹ ಇವರ ವರ್ಷಾನುವರ್ಷದ ಭೆಟ್ಟಿಗೆ ಬೇಸತ್ತಿದ್ದರು. ಮಹಾರಾಷ್ಟ್ರರ ಪಡೆಗಳೆಲ್ಲ ಮುಖ್ಯವಾಗಿ ಕೊಳ್ಳೆಯಿಂದಲೇ ಜೀವಿಸುತ್ತಿದ್ದವು. ಈ ಸೇನೆಗಳ ನಾಯಕರು ಅಕ್ಷರಜ್ಞರಲ್ಲದ ಹುಂಬರಿದ್ದರೆಂದರೂ ತಪ್ಪಾಗಲಿಕ್ಕಿಲ್ಲ. ಜನರನ್ನು ಸುಲಿಯುವದೂ, ಕೊಡಲಾರದಷ್ಟು ಕಪ್ಪವನ್ನು ಎತ್ತುವದೂ, ಸಿಕ್ಕಷ್ಟು ಪ್ರಾಂತಗಳನ್ನು ಹಿಡಿದುಕೊಳ್ಳುವದೂ ತಮ್ಮ ಕರ್ತವ್ಯವೆಂದು ಇವರು ಬಗೆಯುತ್ತಿದ್ದರು. ಆದಾಗ್ಯೂ ಇವರು ಗೆದ್ದ ಪ್ರಾಂತಗಳ ಮುಲಕೀ ವ್ಯವಸ್ಥೆಯನ್ನೆಲ್ಲ ಬ್ರಾಹ್ಮಣರು ನೋಡಿಕೊಳ್ಳುತ್ತಿದ್ದರು. ಆ ಕಾಲದಲ್ಲಿ ಹಿಂದುಸ್ತಾನದಲ್ಲಿದ್ದ ಅಧಿಕಾರಸ್ಥರಲ್ಲೆಲ್ಲ ಇವರೇ ಮೇಲಾದ ಬುದ್ಧಿಶಾಲಿಗಳಿದ್ದರು. ಇದಲ್ಲದೆ ಮಹಾರಾಷ್ಟ್ರರ ಯುದ್ಧಕ್ರಮವು ವಿಲಕ್ಷಣವಾದದ್ದೂ ಜಾಣತನದ್ದೂ ಇತ್ತು. ಇವರು ದೊಡ್ಡ ಯುದ್ಧಗಳನ್ನಾಡುವ ಭರಕ್ಕೆ ಬೀಳುತ್ತಿದ್ದಿಲ್ಲ. ಇವರ ನಾಯಕರು ಚಪಲರಾದ ರಾವುತರ ಕೆಲವು ತಂಡಗಳೊಡನೆ ಒಂದು ಪ್ರಾಂತವನ್ನು ಸುಳಿವು ಹತ್ತಗೊಡದೆ ಒಳಹೊಕ್ಕು ತಮ್ಮ ಎದುರಾಳುಗಳನ್ನು ಸಿಕ್ಕ ಸಿಕ್ಕಂತೆ ಹಣಿದು ಹಣ್ಣು ಮಾಡಿ, ತಾವು ತಿರುಗಿ ತಮ್ಮ ದೇಶದ ಕಡೆಗೆ ಹೋಗುವವರಿದ್ದರೆ ಅವರಿಂದ ಕಡು ಕಪ್ಪವನ್ನು ಎತ್ತುತ್ತಿದ್ದರು. ಇಲ್ಲದಿದ್ದರೆ ಆ ಪ್ರಾಂತವನ್ನು ಆಕ್ರಮಿಸಿ ಅಲ್ಲಿ ತಮ್ಮ ಜುಲುಮೆಯ ಠಾಂಡಾ

ಯ ಪದ್ಧತಿಯನ್ನು ಏರ್ಪಡಿಸಿ ಅಲ್ಲಿ ನೆಲೆಗೊಳ್ಳುತ್ತಿದ್ದರು. ಈ ತಂತ್ರವು ಸಾಮಾನ್ಯವಾದದ್ದಲ್ಲ. ಯುದ್ಧದ ವೇಷವನ್ನು ಹಾಕುವ ಈ ಜಾಣತನವೂ ಒಂದು ಪ್ರದೇಶದ ದ್ರವ್ಯವನ್ನು ನಿಯಮಿತವಾಗಿ ಅಪಹರಿಸುವ ಸಾಮರ್ಥ್ಯವೂ ಸುದೈವದಿಂದ ಇವರ ಸೇನಾನಾಯಕರಲ್ಲಿಯೂ ಬ್ರಾಹ್ಮಣ ಅಧಿಕಾರಸ್ಥರಲ್ಲಿಯೂ ಕೂಡಿದ್ದರಿಂದ, ಇವರಿಗೆ ಸದಾಸಂಚಾರದಲ್ಲಿದ್ದ ದೊಡ್ಡ ದೊಡ್ಡ ಸೇನೆಗಳನ್ನು ಯಾವಾಗಲೂ ಸನ್ನದ್ಧವಿಡಲು ತೊಂದರೆಯಾಗುತ್ತಿದ್ದಿಲ್ಲ. ಮಹಾರಾಷ್ಟ್ರರ ಸೇನೆಗಳ ಸುಳಿವನ್ನು ಕೇಳಿದ ಕೂಡಲೆ ಇತರ ದೇಶೀಯ ಅರಸರ ಪ್ರಜೆಗಳು ಬೆದರಿ ಬಾಯ್ಬಿಡುತ್ತಿದ್ದರು. ಹೈದರಾಬಾದದ ನಿಜಾಮನು ವಿಶಾಲವಾದ ಸೀಮೆಯ ಒಡೆಯನಾಗಿದ್ದರೂ ಇವರಿಗೆ ಎದುರಾಗಲಿಕ್ಕೆ ಹಿಂದೆ ಮುಂದೆ ನೋಡುತ್ತಿದ್ದನು. ಮೈಸೂರಿನಲ್ಲಿ ಹೆಸರಾಗಿದ್ದ ಹೈದರಅಲ್ಲಿಯು ಇವರ ವಿಲಕ್ಷಣ ಯುದ್ಧಕ್ರಮವನ್ನು ಚೆನ್ನಾಗಿ ಅರಿತವನಾಗಿದ್ದರೂ ಇವರ ಚಾಪಲ್ಯವನ್ನು ಕಂಡು ಮುಂದುಗಾಣದವನಾಗುತ್ತಿದ್ದನು. ಮೊಗಲ ಸಾಮ್ರಾಜ್ಯವು ಅಳಿದ ನಂತರ ಉತ್ತರ ಹಿಂದುಸ್ತಾನದಲ್ಲಿ ಸಿಕ್ಕಷ್ಟು ಸೀಮೆಗಳನ್ನು ಹಿಡಿದುಕೊಂಡು ನೆಲೆಗೊಂಡ ಎದೆಗಾರರಿಗೆ ಮಹಾರಾಷ್ಟ್ರರ ಹಾವಳಿಗಳಿಂದ ಅವುಗಳನ್ನು ದಕ್ಕಿಸಿಕೊಳ್ಳುವದು ಆಗಲಿಲ್ಲ. ಮಹಾರಾಷ್ಟ್ರರು ಇಂಗ್ಲಿಷರಿಗೆ ಇನ್ನೂ ರಣರಂಗದಲ್ಲಿ ಎದುರಾಗುವ ಪ್ರಸಂಗವು ಮಾತ್ರ ಒದಗಿದ್ದಿಲ್ಲ. ಆದರೂ ಹಿಂದುಸ್ತಾನದಲ್ಲಿ ಹೊಸದಾಗಿ ಸಾರ್ವಭೌಮಾಧಿಪತ್ಯಕ್ಕೋಸ್ಕರ ಒದಗುವ ಯುದ್ಧದಲ್ಲಿ ಮಹಾರಾಷ್ಟ್ರರೇ ಇಂಗ್ಲಿಷರ ಪ್ರಬಲಪ್ರತಿಪಕ್ಷಿಗಳಾಗುವಂತೆ ತೋರುತ್ತಿತ್ತು. ಮುಂದೆ ಎಷ್ಟೋ ವರ್ಷಗಳಾದ ಮೇಲೆ ೧೮೪೫ ರಲ್ಲಿ ಶೀಕರು ಸತಲಜ ಹೊಳೆಯನ್ನು ತಾವಾಗಿ ದಾಟಿ ಬರುವವರೆಗೆ ಉತ್ತರಹಿಂದುಸ್ತಾನದಲ್ಲಿ ಇಂಗ್ಲಿಷರ ಹಬ್ಬುವಿಕೆಯನ್ನು ತಡೆಯಲಿಕ್ಕೆ ಮಹಾರಾಷ್ಟ್ರರ ಹೊರ್ತು ಇತರ ಯಾವ ದೇಶೀಯ ಅರಸರೂ ಹೇಳುವಂಥ ಪ್ರಯತ್ನಗಳನ್ನು ಮಾಡಲಿಲ್ಲೆಂಬುದು ಈಗ ಇತಿಹಾಸಪ್ರಸಿದ್ಧವಾದ ಮಾತಾಗಿದೆ. ಇದೊಂದು ಇಂಗ್ಲಿಷರ ಸುದೈವವೆಂಬುದನ್ನು ಮರೆಯಲಾಗದು.

ಆ ಕಾಲದ ಹಿಂದುಸ್ತಾನದ ರಾಜಕೀಯ ಸ್ಥಿತಿಯಲ್ಲಿ ಇಂಗ್ಲಿಷರಿಗೆ ಅನುಕೂಲವಾದ ಮತ್ತೊಂದು ಸಂಗತಿಯಿತ್ತು. ಪೂರ್ವದಲ್ಲಿ ಇಂಗ್ಲಿಷರು ಸಾಮ್ರಾಜ್ಯವನ್ನು ಸ್ಥಾಪಿಸುವ ಕಾರ್ಯದಲ್ಲಿ ಅನೇಕ ಜನಾಂಗಗಳ

ಸೆಂಗಡ ಕಾದಾಡಬೇಕಾಯಿತು. ಮೊದಲಿನ ಸುಮಾರು ೧೫೦ ವರ್ಷಗಳ ವರೆಗೆ (೧೬೦೦–೧೭೫೦) ಇವರು ಯುರೋಪೀಯರಾದ ಪೋರ್ತುಗೀಜ, ಡಚ್ಚ ಹಾಗೂ ಫ್ರೆಂಚರ ಕೂಡ ಹೋರಾಡಬೇಕಾಯಿತು. ಮುಂದಿನ ನೂರು ವರ್ಷಗಳಲ್ಲಿ ಇವರು ಈ ದೇಶದ ಅನೇಕ ಅರಸರ ಕೂಡ ಕಾದಾಡಿದರು. ಇಂಗ್ಲಿಷರು ಈ ದೇಶದಲ್ಲಿ ತಮಗೆ ಸಮಾನರಾದವರ ಕೂಡ ಮೊದಲು ಯುದ್ಧಕ್ಕೆ ನಿಂತ ಸಮಯದಲ್ಲಿ, ಅಂದರೆ ನಾವು ಸದ್ಯಕ್ಕೆ ವಿವರಿಸುತ್ತಿರುವ ಸಮಯದಲ್ಲಿ, ಇವರಿಗೆ ಯುರೋಪೀಯ ಪ್ರತಿಸ್ಪರ್ಧಿಗಳು ಇನ್ನೂ ಉಳಿದಿದ್ದರೆ ಹಿಂದುಸ್ತಾನದ ಇತಿಹಾಸದಲ್ಲಿ ಏನಾದರೂ ಮಹತ್ವದ ವ್ಯತ್ಯಾಸವಾಗುತ್ತಿತ್ತೆನ್ನಲು ಸಂದೇಹವಿಲ್ಲ. ಮೈಸೂರಿನ ಎರಡನೆಯ ಯುದ್ಧವು ನಡೆದಾಗ್ಗೆ ಫ್ರೆಂಚರು ಹೈದರನಿಗೆ ನೆರವಾಗಲಿಕ್ಕೆ ಸಿದ್ಧರಾದದ್ದರಿಂದ ಹೇಸ್ಟಿಂಗ್ಸನಿಗೆ ಬಹಳ ತೊಂದರೆಯಾಯಿತು. ಅಂತೂ ಈ ಸಮಯದಲ್ಲಿ ಹಿಂದುಸ್ತಾನದ ರಾಜಕೀಯ ಸ್ಥಿತಿಯಲ್ಲಿ ಇಂಗ್ಲಿಷರಿಗೆ ಪ್ರಬಲರಾದ ಯುರೋಪೀಯ ಪ್ರತಿಸ್ಪರ್ಧಿಗಳು ಉಳಿಯದಿದ್ದದ್ದು ಇವರ ಸುದೈವವೆನ್ನಬಹುದು.

ಇರಲಿ, ಬಂಗಾಲದ ವಾಯವ್ಯಕ್ಕಿದ್ದ ಪ್ರಾಂತಗಳ ಮೇಲೆ ಮಹಾರಾಷ್ಟ್ರರು ಪ್ರತಿವರ್ಷ ದಾಳಿ ಮಾಡುತ್ತಿದ್ದರೆಂದು ಹೇಳಿರುವೆವಷ್ಟೇ. ಕ್ಲೈವನು ೧೭೬೫ ರಲ್ಲಿ ಶಹಾಅಲಮನಿಗೆ ಕೊಡಲಿಕ್ಕೆ ಒಪ್ಪಿಕೊಂಡ ೨೬ ಲಕ್ಷ ಕಂದಾಯವನ್ನು ಉಂಡುಕೊಂಡು, ಶಹಾಅಲಮನು ಅಲಹಾಬಾದದಲ್ಲಿದ್ದನು. ದಿಲ್ಲಿಯ ಬಾದಶಹನಿಗೆ ಲವಲೇಶವಾದರೂ ಅಧಿಕಾರವಿಲ್ಲದೆ ಬರಿದಾದ ಹೆಸರೊಂದು ಮಾತ್ರ ಉಳಿದದ್ದರಿಂದ ಅವನು ಬಲಶಾಲಿಗಳ ಅಂಕಿತದಲ್ಲಿ ಉಪಜೀವನ ಮಾಡಿಕೊಂಡಿದ್ದು, ಕಂಡ ಕಂಡ ಕಸವುಳ್ಳವರಿಗೆ ಮೊರೆ ಹೋಗಿ ತನ್ನ ರಾಜ್ಯವನ್ನು ಸಂಪಾದಿಸಲಿಕ್ಕೆ ಯತ್ನಿಸುವದು ಸೋಜಿಗವಾದದ್ದಲ್ಲ. ೧೭೭೧ ರಲ್ಲಿ ಇವನು ಮರಳಿ ತನ್ನನ್ನು ಗಾದಿಯ ಮೇಲೆ ಕೂಡಿಸಿರೆಂದು ಮಹಾರಾಷ್ಟ್ರರನ್ನು ಬೇಡಿಕೊಂಡನು. ಮಹಾರಾಷ್ಟ್ರರು ಮರಳಿ ಇವನನ್ನು ಸಿಂಹಾಸನದ ಮೇಲೆ ಕೂಡಿಸಿ, ಇವನ ಹೆಸರಿನಿಂದ ತಮಗೆ ಬೇಕಾದ ಪ್ರಾಂತಗಳನ್ನು ಹಿಡಿದುಕೊಳ್ಳಲಾರಂಭಿಸಿದರು. ಉತ್ತರ ಹಿಂದುಸ್ತಾನದಲ್ಲಿದ್ದ ಸಣ್ಣ ಮುಸಲ್ಮಾನ ಸಂಸ್ಥಾನಿಕರೆಲ್ಲ ಇವರ ಅಧೀನರಾಗುತ್ತಿದ್ದರು. ೧೭೬೫ ರಲ್ಲಿ ಬಾದಶಹನು ಇಂಗ್ಲಿಷರಿಗೆ ದಿವಾಣಿಯ ಅಧಿಕಾರದ

ನ್ನು ಕೊಟ್ಟಾಗ ಇವರು ಕೋರಾ, ಅಲಹಾಬಾದ ಪ್ರಾಂತಗಳನ್ನು ಅವನಿಗೆ ಒಪ್ಪಿಸಿದ್ದರು. ಅವುಗಳನ್ನಾಕ್ರಮಿಸಲು ಬಾದಶಹನು ತಮಗೆ ಅಜ್ಞಾಪಿಸಿರುವನೆಂದೂ, ಇಂಗ್ಲಿಷರು ಅವುಗಳನ್ನು ಬಿಟ್ಟುಬಿಡಬೇಕೆಂದೂ ಮಹಾರಾಷ್ಟ್ರರು ಹೇಳಲಾರಂಭಿಸಿದರು. ಇದನ್ನು ಕೇಳಿ ಕಲಕತ್ತೆಯ ಸರಕಾರದವರು ಚಿಂತೆಯಲ್ಲಿ ಬಿದ್ದರು. ಯಾಕೆಂದರೆ ಇವೆರಡು ಪ್ರಾಂತಗಳು ಬಂಗಾಲ ಹಾಗು ಅಯೋಧ್ಯ ಪ್ರಾಂತಗಳ ಮಧ್ಯದಲ್ಲಿದ್ದದರಿಂದ ಮಹಾರಾಷ್ಟ್ರರು ಇವುಗಳನ್ನು ಆಕ್ರಮಿಸಿದರೆ, ತಮ್ಮ ಹಾಗೂ ತಮ್ಮ ಸ್ನೇಹಿತನಾದ ಅಯೋಧ್ಯದ ವಜೀರನ ಪ್ರಾಂತಗಳ ಕ್ಷೇಮಕ್ಕೆ ಬಾಧೆ ತಟ್ಟುವದು ನಿಶ್ಚಯವಾಗಿತ್ತು.

ರೋಹಿಲಖಂಡವು ಅಯೋಧ್ಯದ ವಜೀರನ ಸೀಮೆಯ ಸರಹದ್ದಿನ ಪ್ರಾಂತವಾಗಿತ್ತು. ವಜೀರನ ಪ್ರಾಂತದ ದಕ್ಷಿಣ ಮೇರೆಯಲ್ಲಿ ಗಂಗಾನದಿಯು ಹರಿಯುತ್ತಿದ್ದದರಿಂದ ಆ ಭಾಗವು ಸ್ವಾಭಾವಿಕವಾಗಿಯೇ ಸುರಕ್ಷಿತವಾಗಿತ್ತು. ಮಹಾರಾಷ್ಟ್ರರು ರೋಹಿಲಖಂಡದೊಳಗಿಂದ ಹಾಯ್ದು ತನ್ನ ಸೀಮೆಯನ್ನು ಸುಲಭವಾಗಿ ಸೇರಬಹುದೆಂಬದನ್ನು ಸುಜಾಉದ್ದೌಲನು ಅರಿತಿದ್ದನು. ೧೭೭೧ರಲ್ಲಿ ಮಹಾರಾಷ್ಟ್ರರು ವಾಡಿಕೆಯಂತೆ ರೋಹಿಲಖಂಡದ ಮೇಲೆ ದಂಡೆತ್ತಿ ಹೋಗಿದ್ದರು. ೧೭೭೨ರಲ್ಲಿ ಅವರು ಮತ್ತೆ ಬರುವರೆಂಬುವದರಲ್ಲಿ ಸಂದೇಹವಿದ್ದಿಲ್ಲ. ಆದ್ದರಿಂದ ರೋಹಿಲರ ಅರಸನಾದ ಹಫೀಜ ರಹಿಮತ್‌ಖಾನನು ಮಹಾರಾಷ್ಟ್ರರನ್ನು ಹಿಮ್ಮೆಟ್ಟಿಸುವದರಲ್ಲಿ ತನಗೆ ನೆರವಾಗಬೇಕೆಂದು ಅಯೋಧ್ಯದ ವಜೀರನನ್ನು ಬೇಡಿಕೊಂಡನು. ೧೭೭೭ರಲ್ಲಿ ಅಯೋಧ್ಯದ ವಜೀರನಾದರೂ ತನ್ನ ಸೀಮೆಯ ಕ್ಷೇಮವನ್ನು ಅನುಲಕ್ಷಿಸಿ ರೋಹಿಲರಿಗೆ ನೆರವಾಗಲಿಕ್ಕೆ ಒಪ್ಪಿಕೊಂಡನು. ಸುಜಾಉದ್ದೌಲನು ಮುಖ್ಯವಾಗಿ ಇಂಗ್ಲಿಷರ ದಂಡನ್ನೇ ಅವಲಂಬಿಸಿದ್ದನೆಂದು ಹಿಂದೆ ಹೇಳಿದ್ದೇವೆ. ಮಹಾರಾಷ್ಟ್ರರ ಶಕೆಯು ಇಂಗ್ಲಿಷರಿಗೂ ತಗಲಿದ್ದರಿಂದ ಅವರೂ ಈ ಒಪ್ಪಂದವನ್ನು ಕೋರುತ್ತಿದ್ದರು. ಆದ್ದರಿಂದ ವಜೀರನಿಗೂ ರೋಹಿಲರಿಗೂ ಸಂಧಿಯಾದರೆ ವಜೀರನ ಪಕ್ಷವನ್ನು ಹಿಡಿದು ಮಾತನಾಡಬೇಕೆಂದು ಹೇಳಿ, ಕಲಕತ್ತೆಯ ಸರಕಾರದವರು ಸರ್ ರಾಬರ್ಟ ಬೇಕರನೆಂಬವನೊಡನೆ ಬಂದು ಪಡೆಯನ್ನು ಕಳುಹಿದರು. ವಜೀರನು ಮಹಾರಾಷ್ಟ್ರರನ್ನು ರೋಹಿಲಖಂಡದಿಂದ ಹಿಮ್ಮೆಟ್ಟಿಸಬೇಕೆಂ

ನೂ, ಈ ಕಾರ್ಯಕ್ಕೋಸ್ಕರ ರೋಹಿಲರು ವಜೀರನಿಗೆ ಇಂತಿಷ್ಟು ಹಣವನ್ನು ಕೊಡಬೇಕೆಂದೂ ಗೊತ್ತಾಗಿ, ಇವರಿಬ್ಬರಿಗೂ ಒಪ್ಪಂದವಾಯಿತು. ಈ ಒಪ್ಪಂದಕ್ಕೆ ಇಂಗ್ಲಿಷರ ದಳಪತಿಯು ರುಜು ಹಾಕಿದನು. ಆದರೆ ಒಪ್ಪಂದದ ಭಾರವನ್ನು ಮಾತ್ರ ಅವನು ವಹಿಸಲಿಲ್ಲ. ಇಷ್ಟರಲ್ಲಿ ಮಳೆಗಾಲ ಪ್ರಾರಂಭವಾದ್ದರಿಂದ ರೋಹಿಲಖಂಡಕ್ಕಭಿಮುಖವಾಗಿ ಬರುತ್ತಿದ್ದ ಮಹಾರಾಷ್ಟ್ರರು ಮರಳಿ ತಮ್ಮ ಪಾಳ್ಯಕ್ಕೆ ಹೊರಟು ಹೋದರು. ಆ ವರ್ಷ ಯುದ್ಧವು ನಡೆಯಲಿಲ್ಲ. ಆದರೆ ೧೭೭೩ ರ ಆರಂಭದಲ್ಲಿ ಅವರು ಮತ್ತೆ ರೋಹಿಲಖಂಡದ ಹಾದಿಯನ್ನು ಹಿಡಿದರು. ಆಗ ರೋಹಿಲರ ದಳವೂ ವಜೀರನ ಸೈನ್ಯವೂ ಇಂಗ್ಲಿಷರ ಪಡೆಯೂ ಕೂಡಿ ಮಹಾರಾಷ್ಟ್ರರನ್ನು ಹಿಮ್ಮೆಟ್ಟಿಸಿದವು. ವಜೀರನು ಒಪ್ಪಂದದ ಮೇರೆಗೆ ರೋಹಿಲರಿಗೆ ಹಣವನ್ನು ಬೇಡಿದನು. ಆದರೆ ಹಫೀಜ ರಹಮತ್‌ಖಾನನು ಸರಲವಾದ ಉತ್ತರವನ್ನು ಕೊಡಲಿಲ್ಲ. ರೋಹಿಲರ ರಾಜ್ಯವನ್ನು ಅಪಹರಿಸಬೇಕೆಂದು ವಜೀರನು ಬಹಳ ದಿವಸದಿಂದ ಕಾಯ್ದುಕೊಂಡು ಕೂತಿದ್ದಂತೆ ತೋರುತ್ತದೆ. ರೋಹಿಲರು ಮಹಾರಾಷ್ಟ್ರರ ಕೂಡ ಒಳಸಂಚು ಮಾಡಿ ತನ್ನ ರಾಜ್ಯದ ಮೇಲೆ ಬೀಳಬೇಕೆಂದು ನಡಿಸಿರುವರೆಂತಲೂ ವಜೀರನು ಸಂಶಯಪಟ್ಟಿರಬಹುದು. ಅಂತೂ ಇಷ್ಟಕಾರ್ಯಕ್ಕೆ ಕೈಹಾಕಲು ವಜೀರನಿಗೆ ಪ್ರಸಂಗವು ಒದಗಿದ್ದರಿಂದ ಅವನು ವಾರನ್‌ಹೇಸ್ಟಿಂಗ್ಸನ ಸಹಾಯವನ್ನು ಬೇಡಬೇಕಾಯಿತು.

ಹೇಸ್ಟಿಂಗ್ಸನು ಬಂಗಾಲದ ಗವ್ಹರ್ನರನಾಗಿ ಒಂದು ವರ್ಷ ಮಾತ್ರವಾಗಿತ್ತು. ಅವನ ಬುದ್ಧಿಯು ದುಹೇರೀ ಕಾರಭಾರ ಪದ್ಧತಿಯ ದೋಷಗಳನ್ನು ದೂರೀಕರಿಸುವ ಸುಧಾರಣೆಗಳನ್ನು ಮಾಡುವದರಲ್ಲಿ ತೊಡಗಿತ್ತು. ಇನ್ನೂ ರಾಜಕರಣದ ಪ್ರಶ್ನೆಗಳಿಗೆ ಅವನು ವಿಶೇಷ ಲಕ್ಷ್ಯಗೊಟ್ಟಿದ್ದಿಲ್ಲ. ಕಂಪನಿಯ ಡಿರೆಕ್ಟರರ ಹಣದಾಶೆಯನ್ನು ತೃಪ್ತಿಪಡಿಸುವದಕ್ಕೋಸ್ಕರ ಅವನು ಬಹು ಶ್ರಮಪಡುತ್ತಿದ್ದನು. ಮಹಾರಾಷ್ಟ್ರರು ನಿರಂಕುಶರಾಗಿ ಹಿಂದುಸ್ತಾನದಲ್ಲೆಲ್ಲ ಹಬ್ಬುವದು ತಮ್ಮ ಕ್ಷೇಮಕ್ಕೆ ಪ್ರತಿಕೂಲವಾದದ್ದೆಂಬದನ್ನು ಅವನು ಅರಿತಿದ್ದನು. ಇದಲ್ಲದೆ ಮೊಗಲ ಸಾಮ್ರಾಜ್ಯವು ಅಳಿದು ಹೋದನಂತರ ಉಂಟಾದ ಸಂಸ್ಥಾನಿಕರೆಲ್ಲ ಸುಳ್ಳು, ಮೋಸ, ಒಳಸಂಚುಗಳಲ್ಲಿ ನುರಿತವರಿದ್ದರು. ಮೈಮರೆತು ಅವರನ್ನು ನಂಬುವವರಲ್ಲಿ ಹೇಸ್ಟಿಂ

ಗ್ಸನಿರಲಿಲ್ಲ. ರೋಹಿಲರು ಮಹಾರಾಷ್ಟ್ರರನ್ನೊಡಗೂಡಿ ತನ್ನ ಮೈಮೇಲೆ ಬೀಳಬಹುದೆಂದು ವಜೀರನು ಸಂಶಯಪಡುತ್ತಿದ್ದನು. ಈ ಮೇರೆಗೆ ಸಂಶಯಗ್ರಸ್ತನಾಗಲಿಕ್ಕೆ ಇವನಿಗೆ ಬಲವಾದ ಕಾರಣಗಳಿದ್ದವು. ಮಹಾರಾಷ್ಟ್ರರೂ ವಜೀರನೂ ಕೂಡಿ ರೋಹಿಲರ ಪ್ರಾಂತದ ಮೇಲೆ ಬಿದ್ದು ಅವರನ್ನು ನಿರ್ಮೂಲವಮಾಡಿ ಅವರ ಪ್ರಾಂತವನ್ನು ವಿಭಾಗಿಸಿಕೊಳ್ಳಬೇಕೆಂದು ಮಹಾರಾಷ್ಟ್ರರು ಸುಜಾ ಉದ್ದೌಲನ ಕೂಡ ಒಳಸಂಚು ನಡಿಸಿದ್ದರು. ಆದರೆ ಅಯೋಧ್ಯೆಯ ವಜೀರನು ಬುದ್ಧಿವಂತನಿದ್ದನೆಂದು ತೋರುತ್ತದೆ. ಕೊಳ್ಳೆಗಾರರನ್ನು ಕೂಡಿಕೊಂಡು ನೆರೆಯವನ ಮನೆಗೆ ಕೊಳ್ಳೆಯನ್ನಿಟ್ಟರೆ, ಕೊಳ್ಳೆಗಾರರನ್ನೇ ತನ್ನ ನೆರೆಹೊರೆಗೆ ಕರತಂದಂತಾಗುವದೆಂಬದನ್ನು ಅವನು ಲಕ್ಷಕ್ಕೆ ತಂದನು. ಇನ್ನು, ಇಂಗ್ಲಿಷರನ್ನು ಕೂಡಿಕೊಂಡರೆ ತನಗೆ ಸ್ಥಿರವಾದ ಹಾಗೂ ನಿಶ್ಚಯವಾದ ಸಹಾಯವು ದೊರೆಯುವದೆಂದು ಇವನಿಗೆ ಗೊತ್ತಿತ್ತು. ಯಾಕಂದರೆ, ಇಂಗ್ಲಿಷರ ಸೇನೆಯು ಒಮ್ಮೆ ಯುದ್ಧಕ್ಕೆ ನಿಂತರೆ ಜಯಪಡೆಯದೆ ಎಂದೂ ಹಿಂದಿರುಗಿದ್ದಿಲ್ಲ. ಇಂಗ್ಲಿಷರಾದರೂ ಮಹಾರಾಷ್ಟ್ರರ ಹಾವಳಿಯಿಂದ ಸುರಕ್ಷಿತರಾಗಬೇಕೆಂದು ಹವಣಿಸುವದರಿಂದ ತನಗೆ ಈ ಸಮಯದಲ್ಲಿ ನೆರವಾಗಬಹುದೆಂದು ಇವನಿಗೆ ತೋರಿತು. ವಾರನ್ ಹೇಸ್ಟಿಂಗ್ಸನು ದುಡ್ಡಿನ ಅಡಚಣಿಯಲ್ಲಿದ್ದನೆಂಬದೂ ಇವನಿಗ ಗೊತ್ತಿತ್ತು. ೧೭೭೦ ರಲ್ಲಿ ಬಂಗಾಲದಲ್ಲಿ ಬಿದ್ದ ಭಯಂಕರ ಬರದ ಪರಿಣಾಮಗಳು ಇನ್ನೂ ಅಡಗಿದ್ದಿಲ್ಲ. ಆದರಿಂದ ಇವನು ೧೭೭೩ ರಲ್ಲಿ ಬನಾರಸ ಪಟ್ಟಣಕ್ಕೆ ಸ್ವತಃ ಹೋಗಿ, ವಾರನ್ ಹೇಸ್ಟಿಂಗ್ಸನಿಗೆ ಭೆಟ್ಟಿಯಾಗಿ, ರೋಹಿಲರ ನಾಯಕನು ೧೭೭೨ ರಲ್ಲಿ ಮಾಡಿಕೊಂಡ ಒಪ್ಪಂದವನ್ನು ಅನುಸರಿಸಿ ನಡೆಯಲಿಲ್ಲವಾದ್ದರಿಂದ ಅವನ ಸಂಗಡ ಯುದ್ಧಮಾಡುವದು ತಕ್ಕದ್ದಿಂದೂ, ಈ ಯುದ್ಧದಲ್ಲಿ ಹೇಸ್ಟಿಂಗ್ಸನು ತನಗೆ ಸೇನೆಯನ್ನು ಕೊಟ್ಟು ಸಹಾಯಮಾಡಿದರೆ, ಸೇನೆಯ ಖರ್ಚಲ್ಲದೆ ೪೦ ಲಕ್ಷ ರೂಪಾಯಿಗಳನ್ನು ಸಲ್ಲಿಸುವೆನೆಂದೂ ಹೇಳಿಕೊಂಡನು. ಹೇಸ್ಟಿಂಗ್ಸನು ಕೂಡಲೆ ಏನೂ ಉತ್ತರವನ್ನು ಕೊಡಲಿಲ್ಲ. ಆದರೆ ಮಹಾರಾಷ್ಟ್ರರ ಸಂಗಡ ಇಂಗ್ಲಿಷರು ಒಮ್ಮಿಲ್ಲೊಮ್ಮೆ ಶಕ್ತಿಪರೀಕ್ಷೆಯನ್ನು ಮಾಡಬೇಕಾಗುವದೆಂಬದನ್ನು ಅವನು ಲಕ್ಷಕ್ಕೆ ತಂದನು; ಮತ್ತು ಸುಜಾಉದ್ದೌಲನ ಹಣವನ್ನೂ ಅವನು ಮರೆಯಲಿಲ್ಲ. ಆದರೂ ಪ್ರತ್ಯಕ್ಷವಾಗಿ ತಮ್ಮನ್ನು ತಡವದಿದ್ದ ರೋಹಿಲರ ನಿರ್ಮೂಲನಕ್ಕೋಸ್ಕರ ಸೇನೆಯನ್ನು ಸಹಾಯಕ್ಕಾಗಿ ಕಳುಹಿ

ನರೆ ತನ್ನ ನಿರ್ಮಲ ಕೀರ್ತಿಗೆ ಅನ್ಯಾಯದ ಕಲಂಕವು ತಟ್ಟುವದೆಂದು ಅವನು ಸ್ವಲ್ಪ ಚಿಂತಿಸಿದನು. ಆದರೂ ತನ್ನ ಯಜಮಾನರು ತನಗೆ ಒಪ್ಪಿಸಿದ ಸ್ವಾಸ್ಥ್ಯಗಳ ನಿರಂತರವಾದ ಕ್ಷೇಮವನ್ನು ಕೋರುವದೇ ತನ್ನ ಅಧ್ಯಕ್ಷ ರ್ತವ್ಯವೆಂದು ವಿಚಾರಾನಂತರ ಬಗೆದು ಅವನು ಸುಜಾಉದ್ದೌಲನ ಮಾತಿಗೆ ಒಪ್ಪಿಕೊಂಡನು. ಈ ಬಗ್ಗೆ ಅವನು ತನ್ನ ಸಭೆಯವರಿಗೆ ಬರೆದದ್ದು—"ಈ ಸ್ವಾಸ್ಥ್ಯದಿಂದ ನಮ್ಮ ಸ್ನೇಹಿತನಿಗೆ ಗಂಗಾನದಿಯಿಂದ ಸುರಕ್ಷಿಸಲ್ಪಟ್ಟ ಒಂದು ರಾಜ್ಯವು ಉಂಟಾಗುವದು. ಪರಚಕ್ರದ ಅಂಜಿಕೆಯು ಅವನಿಗೂ ನಮಗೂ ಹಾರಿಹೋಗುವದು. ಅವನಿಗೆ ಬಹಳ ಹಣಬರುವದು. ನಮಗೂ ಅದರಲ್ಲಿ ಪಾಲು ದೊರೆಯುವದು. ಅವನಿಗೂ ನಮ್ಮ ಬೆಂಬಲ ದೊರೆದಂತಾಗುವದು. ಅವನ ಬಲವಾದರೂ ವಿಪರೀತವಾಗಿ ಬೆಳೆಯಲಾರದು. ಅವನ ಪ್ರಾಂತದ ಸರಹದ್ದಿನ ಭಾಗವು ಮಹಾರಾಷ್ಟ್ರರ ಸೀಮೆಗಳಿಗೆ ಹೆಚ್ಚು ಸಮೀಪಿಸಿದಂತಾಗುವದರಿಂದ, ನೆರವಿಲ್ಲದೆ ಅವನು ಮಹಾರಾಷ್ಟ್ರರಕೂಡ ಯುದ್ಧಕ್ಕೆ ನಿಲ್ಲಲಾರನು. ಆದ್ದರಿಂದ ಅವನು ನಮ್ಮನ್ನು ಅವಲಂಬಿಸಿಯೇ ಇರಬೇಕಾಗುವದು. ಈ ಮೇರೆಗೆ ನಮ್ಮಿಬ್ಬರ ಸ್ನೇಹವು ಬಲಿಯುವದು."

ಈ ಒಪ್ಪಂದದ ಮೇರೆಗೆ ಇಂಗ್ಲಿಷರ ಸೇನೆಯೂ ವಜೀರನ ಪಡೆಯೂ ೧೭೭೪ರಲ್ಲಿ ರೋಹಿಲರ ಕೂಡ ಯುದ್ಧಕ್ಕೆ ಸಾಗಿದವು. ರೋಹಿಲರು ಕಡುಕಲಿತನದಿಂದ ಕಾದಿದರು. ಸುಜಾಉದ್ದೌಲನ ಪಡೆಯವರು ದೂರಿಂದ ಕದನವನ್ನು ನೋಡುತ್ತಿದ್ದರು. ಯುದ್ಧಕಲೆಯಲ್ಲಿ ಕುಶಲರಾದ ಇಂಗ್ಲಿಷರ ಪಡೆಯೊಡನೆ ರೋಹಿಲರು ಎಷ್ಟುಹೊತ್ತು ಕಾದುವರು! ಕಡೆಗೆ ಅವರು ಸೋತರು. ಹಫೀಜ ರಹಿಮತಖಾನನೂ ಅವನ ಮೂವರು ಮಕ್ಕಳೂ ಯುದ್ಧಮಾಡುತ್ತ ಶೌರ್ಯದಿಂದ ಮಡಿದರು. ಯುದ್ಧವು ಮುಗಿಯುವ ಸಮಯದಲ್ಲಿ ದೂರದಿಂದ ನೋಡುತ್ತಿದ್ದ ಸುಜಾಉದ್ದೌಲನ ಸೈನ್ಯದವರು ಕೊಳ್ಳೆಯಿಡಲಾರಂಭಿಸಿದರು. ರೋಹಿಲಖಂಡವು ವಜೀರನ ರಾಜ್ಯಕ್ಕೆ ಸೇರಿತು.

ಕಂಪನಿಯ ಸರಕಾರದವರ ಕ್ಷೇಮದ ದೃಷ್ಟಿಯಿಂದ ನೋಡಿದರೆ ಈ ಯುದ್ಧದ ಪರಿಣಾಮವು ಬಹಳ ಹಿತಕರವಾದದ್ದಾಯಿತೆನ್ನಬಹುದು. ಹಿಂದುಸ್ತಾನದ ವಾಯುವ್ಯದ ಮಾರ್ಗದಿಂದ ಬಂದ ದಾಳಿಗಾರರು ಇಲ್ಲಿಯ ಶಾಂತತೆಯನ್ನು ಅನೇಕಸಾರಿ ಭಂಗಿಸಿದ್ದಾರೆ, ಈ ಯುದ್ಧದಿಂದ ಬಂಗಾಲದ ವಾಯುವ್ಯದ ಸರಹದ್ದಿನ ಬಾಗಿಲಿಗೆ ಬಲಾಢ್ಯನೂ ಶೂರನೂ ಆದ

ಕಂಪನಿಯ ಸ್ನೇಹಿತನು ಕಾವಲಾದನು. ಮಹಾರಾಷ್ಟ್ರರ ಅಂಜಿಕೆಯು ಇಲ್ಲದಂತಾಯಿತು. ಮುಂದಿನ ಕೆಲವು ವರ್ಷಗಳ ಇತಿಹಾಸವನ್ನು ಪರೀಕ್ಷಿಸಿ ನೋಡಿದರೂ ಹೇಸ್ಟಿಂಗ್ಸನ ಜಾಣತನವು ಸೂಚಿತವಾಗುವದು. ೧೯ ನೇ ಶತಮಾನದ ಆದಿಯಲ್ಲಿ ಇಂಗ್ಲಿಷರು ತಾವಾಗಿ ಮುಂದೆ ಸಾಗುವವರೆಗೆ ಇವರಿಗೆ ವಾಯವ್ಯದ ಕಡೆಗೆ ತೊಂದರೆಗಳುಂಟಾಗಲಿಲ್ಲ. ವಾರನ್ ಹೇಸ್ಟಿಂಗ್ಸನು ಗವರ್ನರ ಜನರಲ್ಲನಾದ ಮೇಲೆ ಮಹಾರಾಷ್ಟ್ರರ ಕೂಡ ಕದನವನ್ನೆಸಗಬೇಕಾಯಿತು. ಹೈದರನೂ ಯುದ್ಧವನ್ನು ಹೂಡಿದನು. ಇವೆರಡು ಕಡುತರವಾದ ಕಾಳಗಗಳಿಗೆ ಹೇಸ್ಟಿಂಗ್ಸನು ಬಂಗಾಲದಿಂದ ಹಣವನ್ನೂ ಜನರನ್ನೂ ಪೂರೈಸಿದನು. ಇದೇ ಸಮಯದಲ್ಲಿ ಉತ್ತರ ಹಿಂದುಸ್ತಾನದಲ್ಲಿ ಏನಾದರೂ ಗದ್ದಲವೆದ್ದಿದ್ದರೆ, ಕಂಪನಿಯವರ ಸ್ವಾರ್ಥಗಳಿಗೆ ಬಾಧೆ ತಟ್ಟುತ್ತಿತ್ತು. ಬಂಗಾಲವು ಸುರಕ್ಷಿತವಿದ್ದುದರಿಂದಲೇ ಇವೆರಡೂ ಯುದ್ಧಗಳನ್ನು ಬಹು ಪ್ರಯಾಸದಿಂದಲೂ ಖರ್ಚಿನಿಂದಲೂ ಕಾದಿ, ಕಡೆಗೆ ಒಂದು ಹೆಜ್ಜೆ ಭೂಮಿಯನ್ನಾದರೂ ಕಳೆದುಕೊಳ್ಳದೆ, ಹೇಸ್ಟಿಂಗ್ಸನು ಕಂಪನಿಯವರ ರಾಜ್ಯಕ್ಕೆ ಕಡೆಗಾಲವು ಬಂದಂಥ ಸಮಯದಲ್ಲಿ ಅದನ್ನು ಬಹು ಜಾಣ್ಮೆಯಿಂದ ಕಾಪಾಡಿ ಪ್ರತಿಭಾಶಾಲಿಯೂ, ಸ್ವಾಮಿನಿಷ್ಠನೂ, ದೇಶಭಕ್ತನೂ ಎಂದು ಹೆಸರಾಗಿಹೋದನು.

V. N. MAGDAL.

ಪತ್ರವ್ಯವಹಾರ.

ಶ್ರೀಯುತ ಕನ್ನಡ ಶಾಲಾಪತ್ರಿಕಕರ್ತರ ಸನ್ನಿಧಿಗೆ ಅಭಿವಂದನೆಗಳು:—ಪೂಜ್ಯರೇ, ಕೆಳಗಿನ ನಾಲ್ಕು ಸಾಲುಗಳಿಗೆ ತಮ್ಮ ಪತ್ರಿಕೆಯಲ್ಲಿ ಸ್ಥಳವನ್ನೀಯಬೇಕೆಂದು ಬೇಡಿಕೊಳ್ಳುತ್ತೇನೆ:—

ಈ ಊರಿಗೆ ತಾರೀಖು ೧೮-೨-೧೦ ನೆಯ ದಿವಸ ಕೊಲ್ಹಾಪುರ ಸಂಸ್ಥಾನ ಕಾಣಗಿ ದೇಸಾಯರಾದ ಶ್ರೀಮಂತ ಬಾಳಾಸಾಹೇಬ ಅಣ್ಣಾ ಹಾಗೂ ಹಂದಿಗನೂರ ಮಾಮಲೆ ದೇಸಾಯರಾದ ಶ್ರೀಮಂತ ದೊಡ್ಡಮರಿಗೆಪ್ಪ ಅಣ್ಣಾ ಇವರು ಬಂದಿದ್ದರು. ಇದು ನಮ್ಮ ಶಾಲೆಯ ಮುಖ್ಯಾಧ್ಯಾಪಕರಿಗೆ ತಿಳಿದ ಕೂಡಲೆ ಅವರು ಹೋಗಿ ಶಾಲೆಗೆ ಬರುವದಕ್ಕಾಗಿ ಅವರಿಗೆ ವಿನಂತಿ ಮಾಡಿಕೊಂಡರು. ಅದನ್ನು ಮನ್ನಿಸಿ ಅವರು ಶಾಲೆಗೆ ಬಂದು, ವಿದ್ಯಾರ್ಥಿ

ಗಳನ್ನು ಚನ್ನಾಗಿ ಪರೀಕ್ಷಿಸಿ, ಸಂತುಷ್ಟರಾದರು. ತರುವಾಯ ಪ್ರತಿ ಒಬ್ಬರು ಹತ್ತು, ಹತ್ತು ರೂಪಾಯಿಗಳನ್ನು ಈ ಶಾಲೆಯ ಉಪಯೋಗಕ್ಕಾಗಿ ಕೊಟ್ಟು, ಶಾಲೆಯನ್ನು ಸಂತೋಷ ಪಡಿಸಿದರು. ಇದು ಮಹನೀಯರಾದ ಉಭಯ ಶ್ರೀಮಂತರಿಗೆ ಅತ್ಯಂತ ಭೂಷಣವೆಂಬದನ್ನು ಬೇರೆ ಹೇಳುವ ಕಾರಣವಿಲ್ಲ. ವಿದ್ಯಾಭಿಮಾನಿಗಳಾದ ಈ ಶ್ರೀಮಂತರಿಗೆ ಅಧಿಕವಾದ ಶ್ರೇಯಸ್ಸನ್ನುಂಟುಮಾಡಲೆಂದು ದೇವರನ್ನು ಪ್ರಾರ್ಥಿಸುತ್ತೇನೆ.

ನೆಗಳೂರ. ಕನ್ನಡಶಾಲಾ.	ತಮ್ಮ ವಿಧೇಯ
	ವೀ. ಲ. ಪೂಜಾರ (ನೆಯ)
ತಾ. ೧. ೩. ೧೯೧೦.	ಉಪಶಿಕ್ಷಕ. ಶಾಳಾ ನೆಗಳೂರ.

ರಾವಸಾಹೇಬ ಕನ್ನಡ ಶಾಲಾಪತ್ರಕರ್ತರ ಸನ್ನಿಧಾನಕ್ಕೆ:—

ಶಿರಸಾಷ್ಟಾಂಗ ನಮಸ್ಕಾರ ವಿ. ವಿ. ತಮ್ಮ ಕರಕಮಲದಿಂದುದ್ಭವಿಸುವ ಸುಂದರವಾದ ಮಾಸಪತ್ರಿಕೆಯಲ್ಲಿ ಕೆಳಗಿನ ನಾಲ್ಕು ಪಂಕ್ತಿಗಳಿಗೆ ಇಂಬುಕೊಡುವಿರೆಂದು ಆಶಿಸುತ್ತೇನೆ:—

ಈ ನಮ್ಮ ಕನ್ನಡ ಶಾಲೆಗೆ ತಾರೀಖು ೨೨-೨-೧೦ ಇಸವಿಯ ದಿವಸ ಶಿರಹಟ್ಟಿ ಸಂಸ್ಥಾನದ ಶ್ರೀಮನ್ನಿರಂಜನ ಹೊಸೂರ ಫಕೀರಮರಿದೇವರು ಗ್ರಾಮಸ್ಥ ಪ್ರಮುಖ ಸಭ್ಯಗೃಹಸ್ಥರೊಂದಿಗೆ ಬಂದು, ಎಲ್ಲ ವರ್ಗಗಳನ್ನು ಮನಬಂದ ಒಂದೊಂದೇ ವಿಷಯದಲ್ಲಿ ಪರೀಕ್ಷಿಸಿದರು. ಅಣ್ಣ ಮಾಸ್ತರರು ಬಾಲಕರ ಕಡೆಯಿಂದ ಡ್ರಿಲ್, ಮಲಖಂಬ, ಹಾರಿ ಮುಂತಾದ ಅಂಗಸಾಧನಗಳನ್ನು ಮಾಡಿಸಿ ತೋರಿಸಿದರು. ಕೆಲವು ವಿದ್ಯಾರ್ಥಿಗಳು ಮೇಳನವಾಗಿ ಸುಸ್ವರದಿಂದ ಪದಗಳನ್ನು ಹಾಡಿದರು. ಇವುಗಳನ್ನೆಲ್ಲ ನೋಡಿ ಸದರೀಯವರು ತುಂಬಾ ಸಂತೋಷವುಳ್ಳವರಾಗಿ, ಶಾಲೆಯ ಸುಸ್ಥಿತಿಯ ಬಗ್ಗೆಯೂ, ಶಿಕ್ಷಕೋಪಶಿಕ್ಷಕರ ಕರ್ತವ್ಯತತ್ಪರತೆಯ ಬಗ್ಗೆಯೂ ವ್ಹಿಜಿಟರ್ ಬುಕ್ಕಿನಲ್ಲಿ ತಮ್ಮ ಮತವನ್ನು ವ್ಯಕ್ತಪಡಿಸಿ, ತಾಲೀಮಿನ ಸಾಮಾನುಗಳನ್ನು ಮಾಡಿಸುವ ಬಗ್ಗೆ ೧೫ ರೂಪಾಯಿಗಳನ್ನು ಉಚಿತವಾಗಿ ಕೊಟ್ಟರು; ಎಲ್ಲ ವಿದ್ಯಾರ್ಥಿಗಳಿಗೆ ಮಿಠಾಯಿ ಹಂಚಲ್ಪಟ್ಟಿತು. ಬಳಿಕ ಸಭೆಯಲ್ಲಿ ತಾಂಬೂಲ ಕೊಡೋಣವಾಗಿ ಸಭೆಯು ವಿಸರ್ಜನವಾಯಿತು. ಮತ್ತು ಹೆಣ್ಣುಮಕ್ಕಳ ಶಾಲೆಯಲ್ಲಿ ಬಾಲಕಿಯರ ವಾಚನ, ಕವಿತೆ, ಮಣಿ

ಶಾಲಾಪತ್ರಕ.

ಪದ್ಯಂ

ಪ್ರಿಯವಿದ್ಯಾಗುರುವರ್ಗರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀ ಪತ್ರಮಂ ಮುದ್ರಿಸಿ ||
ನಯದಿಂದಿತ್ತಪೆವೋದುವರ್ಗೆ ಸುಗುಣಂಗಳ್ ರಕ್ಷೆಕೈಕೊಂಬುದೈ
ದಯೆಯಿಂ ದೋಷಮತಿದ್ದವೇಳ್ವುದು ಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ||೧||

ಪುಸ್ತಕ ೪೬ } ಮೇ ೧೯೧೦. { ಸಂಚಿಕೆ ೫.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ನೀತಿಶಿಕ್ಷಣವೂ ಧರ್ಮಶಿಕ್ಷಣವೂ.

ಮುಂಬಯಿಯಲ್ಲಿ ಶಿಕ್ಷಕ ಜನರ ಸಭೆಯೊಂದಿರುತ್ತದೆ. ಈ ಸಭೆಯ ವಾರ್ಷಿಕ ಸಮ್ಮೇಲನವು ಕಳೆದ ತಿಂಗಳ ೬ ನೇ ೭ ನೇ ತಾರೀಖುಗಳಲ್ಲಿ ಮುಂಬಯಿಯ ಎಲ್‌ಫಿನ್‌ಸ್ಟನ್ ಹಾಯಸ್ಕೂಲಿನಲ್ಲಿ ನೆರವೇರಿತು. ಸಮ್ಮೇಲನದ ಮೊದಲನೆಯ ದಿವಸದ ಚರ್ಚೆಯ ವಿಷಯವು "ನೈತಿಕ ಮತ್ತು ಧಾರ್ಮಿಕಶಿಕ್ಷಣ" ವಾಗಿತ್ತು. ಈ ಸಭೆಗೆ ಮುಂಬಯಿಇಲಾಖೆಯ ಗವ್ಹರ್ನರರಾದ ನಾಮದಾರ ಸರ್ ಜಾರ್ಜ ಕ್ಲಾರ್ಕರವರು ಅಧ್ಯಕ್ಷರಾಗಿದ್ದರು. ಈ ಸಭೆಯನ್ನು ನಾಮದಾರ ಗವ್ಹರ್ನರಸಾಹೇಬರಲ್ಲದೆ, ಈಗಿನ ಡಾಯರೆಕ್ಟರಸಾಹೇಬರಾದ ನಾಮದಾರ ಶಾರ್ಪದೊರೆಗಳವರೂ, ಶಿಕ್ಷಣದಲ್ಲಿ ಆಸ್ಥೆಯುಳ್ಳ ನಮ್ಮ ಇಲಾಖೆಯೊಳಗಿನ ಪ್ರಮುಖರಾದ ಎಷ್ಟೋ ಗೃಹಸ್ಥರೂ ಅಲಂಕರಿಸಿದ್ದರು. ಈ ಸಭೆಯಲ್ಲಾದ ನಾಮದಾರ ಗವ್ಹರ್ನರಸಾಹೇಬರವರ ಭಾಷಣವು ಬಹಳ ಮಹತ್ವವುಳ್ಳದ್ದೂ ವಿಚಾರ ಮಾಡತಕ್ಕಂಥಾದ್ದೂ ಇರುವದರಿಂದ ಅದರ ಆಶಯವನ್ನು ನಮ್ಮ ವಾಚಕರಿಗೋಸ್ಕರ ಇದರಡಿಯಲ್ಲಿ ಕೊಡುತ್ತೇವೆ. ಅವರು ಅಂದದ್ದೇನಂದರೆ:—

"ಹಿಂದುಸ್ತಾನದೊಳಗಿನ ಸಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಧಾರ್ಮಿಕ ಅಥವಾ ನೈತಿಕ ಶಿಕ್ಷಣವನ್ನು ಕೊಡುವ ಸಂಬಂಧದ ಪ್ರಶ್ನವನ್ನು ಈ ವರೆಗೆ ಎಷ್ಟೋ ಲೇಖಕರೂ ವಕ್ತಾರರೂ ಬಹಳ ಸಾರೆ ಚರ್ಚಿಸುತ್ತ ಬಂದಿರುವರು. ಆದಾಗ್ಯೂ ಈ ಪ್ರಶ್ನಕ್ಕೆ ಇನ್ನೂ ವ್ಯಾವಹಾರಿಕ ಸ್ವರೂಪವು ಬಂದಿರುವದಿಲ್ಲ. ಸದ್ಯಕ್ಕೆ ಈ ಪ್ರಶ್ನವು ಭೂಮಂಡಲವನ್ನೆಲ್ಲ ವ್ಯಾಪಿಸಿ

ರುವರು; ಮತ್ತು ಯಾವತ್ತು ದೇಶಗಳ ಜನರು ಈ ವಿಷಯವನ್ನು ಕುರಿತು ಏಕಾಗ್ರತೆಯಿಂದ ವಿಚಾರಮಾಡತೊಡಗಿರುವರು.

ಇತ್ತಲಾಗಿ ಸನ್ ೧೯೦೮ ಇಸವಿಯಲ್ಲಿ ಲಂಡನ ಪಟ್ಟಣದಲ್ಲಿ "ಫಸ್ಟ್ ಇಂಟರನ್ಯಾಶನಲ್ ಮೊರಲ್ ಎಜ್ಯುಕೇಶನ್ ಕಾಂಗ್ರೆಸ್" ಅಂದರೆ, ಬೇರೆ ಬೇರೆ ದೇಶಗಳ ನೈತಿಕಶಿಕ್ಷಣಸಂಬಂಧದ ಮೊದಲನೆಯ ಪರಿಷತ್ತು ಕೂಡಿತ್ತು. ಆ ಸಭೆಗೆ ಬೇರೆ ಬೇರೆ ೨೧ ರಾಷ್ಟ್ರದವರು ತಮ್ಮ ಪ್ರತಿನಿಧಿಗಳನ್ನು ಕಳಿಸಿದ್ದರು. ಆ ಸಭೆಯ ವೃತ್ತಾಂತವನ್ನು ಓದಿ ನೋಡಿದರೆ, ಪ್ರಚಲಿತವಾದ ಬೌದ್ಧಿಕಶಿಕ್ಷಣದ ಪದ್ಧತಿಯಲ್ಲಿ ನೈತಿಕಶಿಕ್ಷಣವು ಸೇರದೆ ಇದ್ದದರಿಂದ ಶಿಕ್ಷಣಕ್ರಮದಲ್ಲಿ ಬಹುದೊಡ್ಡ ದೋಷವು ಉಳಿದಿರುತ್ತದೆಂಬ ಸಂಗತಿಯೂ, ಆ ದೋಷವನ್ನು ತೆಗೆದುಹಾಕುವದಕ್ಕಾಗಿ ತಕ್ಕ ಉಪಾಯವನ್ನು ಯೋಜಿಸುವದು ಅತ್ಯಂತ ಆವಶ್ಯಕವಿರುವದೆಂಬ ಸಂಗತಿಯೂ, ಎಲ್ಲ ಜನರ ಮನಸ್ಸಿನಲ್ಲಿಯೂ ನಟ್ಟಂತೆ ಕಂಡುಬರುತ್ತದೆ. ಲಂಡನದಲ್ಲಿ ನೆರೆದ ಸಭೆಯಲ್ಲಿ ಯುರೋಪದ ಬಹುತರ ಎಲ್ಲ ದೇಶಗಳ ಹಾಗೂ ಅಮೇರಿಕಾ, ಚೀನ, ಜಪಾನ, ಮೊದಲಾದ ಬೇರೆ ಬೇರೆ ದೇಶಗಳ ಬೇರೆ ಬೇರೆ ಆಚಾರ-ವಿಚಾರಗಳುಳ್ಳ ಪ್ರತಿನಿಧಿಗಳಿದ್ದಾಗ್ಯೂ ಈ ವಿಷಯದ ಎಷ್ಟೋ ಮುಖ್ಯ ಮುಖ್ಯ ಮಾತುಗಳ ಸಂಬಂಧದಿಂದ ಅವರೆಲ್ಲರಲ್ಲಿ ಮತೈಕ್ಯವಿತ್ತು. ಶಾಲೆಗಳಲ್ಲಿ ನೈತಿಕಶಿಕ್ಷಣವನ್ನು ಕೊಡಬೇಕೆಂದು ಪ್ರತಿಪಾದಿಸುವ ಪಕ್ಷದವರ ಅಭಿಪ್ರಾಯವು ಈಗ ಬಹುತರ ಯಾವತ್ತು ಪಾಶ್ಚಾತ್ಯ ದೇಶಗಳಲ್ಲಿ ನೆಲೆಗೊಂಡು, ಬರಬರುತ್ತಾ ಬಲವತ್ತರವಾಗುತ್ತಿರುವದು. ಹಾಗೂ ಇದು ಸ್ವಲ್ಪ ದಿವಸಗಳಲ್ಲಿಯೇ ಪರಿಣತಸ್ವರೂಪವನ್ನು ನಿಶ್ಚಯವಾಗಿ ಹೊಂದಬಹುದೆಂಬಂತೆ ತೋರುತ್ತದೆ. ಆ ದೇಶಗಳಲ್ಲಿ ಎಷ್ಟೋ ತೊಂದರೆಗಳಿದ್ದಾಗ್ಯೂ ಈ ಪ್ರಶ್ನವು ಬೇಗನೆ ಬಿಡಿಸಲ್ಪಡುವದೆಂದು ಆಶಿಸುವದಕ್ಕೆ ಬಲವಾದ ಕಾರಣ ಉಂಟು. ಅದರಂತೆಯೇ ಈ ದೇಶದಲ್ಲಾದರೂ ಈ ವಿಷಯದಲ್ಲಿ ಬರಿಯ ಚರ್ಚೆಗಿಂತ ಮುಂದಿನ ಹೆಜ್ಜೆಯನ್ನು ಇಡತಕ್ಕದ್ದೆಂದು ಈ ದೇಶದ ನಿಜವಾದ ಹಿತವನ್ನು ಬಯಸುವವರ ಮನಸಿನಲ್ಲಿ ಬಾರದೆ ಇರಲಾರದು. ಈ ಹೊತ್ತು ನೆರೆದ ಸಮ್ಮೇಲನವು ಬಹು ದಿವಸದಿಂದ ನೆರೆಯಬೇಕೆಂದು ನಾನು ಅಪೇಕ್ಷಿಸುತ್ತಾ ಇದ್ದೆನು. ಈ ಸಭೆಯಲ್ಲಿ ಈ ಸಂಬಂಧದ ಕೆಲವು ತತ್ವಗಳಾದರೂ ನಿರ್ಣಯಿಸಲ್ಪಡುವವೆಂದು ನನಗೆ

ನಂಬಿಗೆಯುಂಟು. ಈ ಸಂದರ್ಭದಲ್ಲಿ ಬರುವ ನಿಜವಾದ ತೊಂದರೆಗಳು, ದಿನಾಲು ವಿದ್ಯಾರ್ಥಿಗಳ ನಿಕಟಸಂಬಂಧವಿದ್ದ ಈ ದೇಶದ ಶಿಕ್ಷಕರಿಗೇ ಚನ್ನಾಗಿ ಗೊತ್ತಾಗುವವು. ಅದರಿಂದಲೇ, ಸರಕಾರದವರು ಈ ಸಂಬಂಧದಿಂದ ತಾವು ಮಾಡತಕ್ಕ ಕೆಲಸಗಳಲ್ಲಿ ಶಿಕ್ಷಕರ ಸಹಾಯವನ್ನು ಅಪೇಕ್ಷಿಸುತ್ತಾರೆ. ಈ ಹೊತ್ತಿನ ಸಮ್ಮೇಲನದಲ್ಲಿ ಈ ಪ್ರಶ್ನದ ವಿಷಯವಾಗಿ ಚರ್ಚೆಯು ಆಗಿ, ಈ ವಿಷಯದಲ್ಲಿ ಯಾವ ಸಂಗತಿಗಳು ಶಕ್ಯವಿರುವವು? ಯಾವ ಸಂಗತಿಗಳು ಅಶಕ್ಯವಿರುವವು? ಇವುಗಳ ನಿರ್ಣಯವಾಗಬಹುದೆಂದು ನಾನು ತಿಳಿಯುತ್ತೇನೆ. ಸದ್ಯಕ್ಕೆ ಈ ದೇಶದಲ್ಲಿ ನಾಲ್ಕೂ ಕಡೆಗೆ ಕಂಡು ಬರುವ ಅಸ್ವಸ್ಥತೆಯು ಈಗಿನಂಥ ಸ್ವರೂಪವನ್ನು ಹೊಂದೀತೆಂದು ಯಾರ ದೂರ ದೃಷ್ಟಿಗೂ ಮೊದಲೇ ಹೊಳೆಯದಿದ್ದಾಗ್ಯೂ, ಅದು ಇಂಥ ಸ್ವರೂಪವನ್ನುಹೊಂದದೆ ಗತ್ಯಂತರವೇ ಇದ್ದಿಲ್ಲವೆಂಬದೂ ಸುಲಭವಾಗಿ ಮನವರಿಕೆಯಾಗುವಂತಿದೆ. ಯಾಕಂದರೆ, ಅತಿಪ್ರಾಚೀನ ಕಾಲದಿಂದ ನಡೆದು ಬಂದಿದ್ದ ಆಚಾರ-ವಿಚಾರಗಳು ಪೂರಾ ಮೈಯ್ಯುಂಡಿದ್ದಂಥ ಈ ದೇಶದಲ್ಲಿ ಪಾಶ್ಚಿಮಾತ್ಯ ಜ್ಞಾನಭಾಂಡಾರವೂ ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿಯೂ ಒಮ್ಮೇಲೆ ಉಪಕ್ರಮಿಸಲ್ಪಟ್ಟು, ಅವ್ಯಾಹತವಾಗಿ ಬೆಳೆಯಿಸಲ್ಪಟ್ಟವು. ಅನೇಕ ಶತಕಗಳವರೆಗೆ ನಾನಾತರದ ತೊಂದರೆಗಳೊಳಗಿಂದ ಪಾರಾಗುತ್ತಾ ಉತ್ಕ್ರಾಂತಿಯನ್ನು ಹೊಂದಿ ಸಿದ್ಧವಾದ ಪಾಶ್ಚಾತ್ಯ ಶಿಕ್ಷಣಪದ್ಧತಿಯನ್ನು ಇದ್ದಕ್ಕಿದ್ದ ಹಾಗೆ ತಂದು, ಸ್ವಾಭಾವಿಕವಾದ ಪೂರ್ವಸಿದ್ಧತೆಯಿಲ್ಲದಿದ್ದಂಥ ಈ ದೇಶನಲ್ಲಿ ಪ್ರಾರಂಭಮಾಡಿದ್ದರಿಂದ ಇಲ್ಲಿಯ ಜನರ ವಿಚಾರಗಳಲ್ಲಿ ಕ್ರಾಂತಿಯುಂಟಾದದ್ದು ಸ್ವಾಭಾವಿಕವೇ ಸರಿ. ಈ ಕ್ರಾಂತಿಯ ವ್ಯಾಪ್ತಿಯು ಶಿಕ್ಷಣಹೊಂದಿದ ಅಲ್ಪ ಸ್ವಲ್ಪ ಜನರಲ್ಲಿಯೇ ಇದ್ದಾಗ್ಯೂ, ಅದರ ಪರಿಣಾಮವು ಅಪ್ರತ್ಯಕ್ಷವಾಗಿ ಇತರ ವರ್ಗದ ಜನರನ್ನು ಸೋಂಕದೆ ಬಿಟ್ಟಿಲ್ಲ. ಈ ಮೇರೆಗೆ ಹಳೇ ಹೊಸ ವಿಚಾರಗಳ ಬಲವತ್ತರವಾದ ಘರ್ಷಣದಿಂದ ಜನರ ಮನಸ್ಸಿನಲ್ಲಿ ಅಸ್ವಸ್ಥತೆಯುಂಟಾಗಿ, ಅದು ಅನೇಕ ರೂಪಗಳಿಂದ ಪ್ರಕಟವಾಗುವದು ಅಸ್ವಾಭಾವಿಕವಲ್ಲ. ಇಂಗ್ಲಂಡದ ಮಧುರವಾದ ವಾಸನೆಯುಳ್ಳ "ಬ್ರಾಯರ್‌ರೋಜ್" ಎಂಬ ಗುಲಾಬಿ ಗಿಡವನ್ನು ಆಸ್ಟ್ರೇಲಿಯಕ್ಕೆ ಒಯ್ದು ಅಲ್ಲಿ ಹಚ್ಚಿದ ಕೂಡಲೆ ಆದೇಶದ ಹವೆಯಲ್ಲಿ ಅದು ವಿಲಕ್ಷಣವಾಗಿ ಹಬ್ಬಿ, ಹೊಲಮಾಡುವವರಿಗೆ ಭಯಂಕರವಾದ ಮುಳ್ಳುಗಂಟಿಯಾಗಿ

ಪರಿಣಮಿಸಿತು. ಅದರಂತೆಯೇ, ಹಿಂದುಸ್ಥಾನದ ಪರಿಸ್ಥಿತಿಗೆ ಕೇವಲ ವಿಜಾತೀಯವಾದಂಥ, ಪಾಶ್ಚಿಮಾತ್ಯ ದೇಶಗಳಲ್ಲಿ ಅನೇಕ ಶತಮಾನಗಳ ವಿಚಾರದ ಫಲವಾಗಿದ್ದಂಥ, ಪ್ರಜಾಮತಸ್ವಾತಂತ್ರ್ಯದ ಕಲ್ಪನೆಗಳೆಂಬ ಬೀಜಗಳು ಈ ದೇಶದ ಉಷ್ಣ ಹವೆಯಲ್ಲಿ ಬೇಗನೆ ಮೊಳೆತು, ಬೇರೂರಿ, ವಿಲಕ್ಷಣವಾಗಿ ಬೆಳೆದು ವಿಚಿತ್ರರೂಪಗಳನ್ನು ಧಾರಣಮಾಡಿದ್ದು ಆಶ್ಚರ್ಯವಲ್ಲ.

ವಿದ್ಯಾರ್ಥಿಗಳ ಶಿಸ್ತು:—ಜಾತಿದ್ವೇಷದ ಅಥವಾ ವರ್ಣದ್ವೇಷದ ಅಸ್ತಿವಾರದ ಮೇಲೆ ಉಪಕ್ರಮಿಸಿದ ರಾಜಕೀಯ ಚಳವಳಿಯಿಂದ ಕೊಲೆಗಡಕರೇ ಉತ್ಪನ್ನರಾಗುವದು ಅಪರಿಹಾರ್ಯವಾದದ್ದು. ಪ್ರಸ್ತುತದಲ್ಲಿ ಈ ವಿಷಯದ ಈ ವಿಶೇಷ ಸ್ವರೂಪವನ್ನು ಕುರಿತು ವಿವೇಚಿಸುವದು ನನ್ನ ಉದ್ದೇಶವಿರುವದಿಲ್ಲ; ಆದರೆ, ಹಿಂದುಸ್ಥಾನದಲ್ಲಿ ಕಂಡು ಬರುವ ಅಸ್ವಸ್ಥತೆಯ ಹೆಚ್ಚು ವಿಸ್ತೃತವಾದ ಸಾಮಾನ್ಯ ಸ್ವರೂಪವನ್ನು ಕುರಿತು ನಾನು ಹೇಳಲಪೇಕ್ಷಿಸುತ್ತೇನೆ. ಈಗ ಈ ದೇಶದ ಹುಡುಗರ ಮೇಲೆ ತಾಯಿ-ತಂದೆಗಳ ಅಧಿಕಾರವು ದುರ್ಬಲವಾಗುತ್ತ ನಡೆದಿರುತ್ತದೆಂತಲೂ ಅಧಿಕೃತ ಪುರುಷರ ಅಧಿಕಾರದ ಬಗ್ಗೆ ಇರತಕ್ಕ ಪೂಜ್ಯಬುದ್ಧಿಯು ನಷ್ಟವಾಗಿರುವದೆಂತಲೂ, ಹುಡುಗರ ನಡೆನುಡಿಗಳು ಕೀಳ್ತರಕ್ಕಿಳಿಸಿರುವವೆಂತಲೂ, ಬರಬರುತ್ತ ಅವರಲ್ಲಿ ನೀತಿಸಂಬಂಧದ ಬಂಧನಗಳು ಶಿಥಿಲವಾಗುತ್ತ ನಡೆದಿರುವವೆಂತಲೂ ಈ ದೇಶದ ವಿಚಾರವಂತರಾದ ಅನೇಕ ಗೃಹಸ್ಥರು ಒಡಂಬಡುತ್ತಾರೆ. ಈ ದೇಶದಲ್ಲಿ ಪ್ರಾಚೀನಕಾಲದಿಂದ ನಡೆದು ಬಂದಿದ್ದ ಬಂಧನಗಳು ಶಿಥಿಲವಾಗಿರುವವು; ಪಾಶ್ಚಿಮಾತ್ಯ ದೇಶಗಳಲ್ಲಿರುವ ಬಂಧನಗಳು ಪ್ರಚಾರದಲ್ಲಿ ಬಂದಿರುವದಿಲ್ಲ. ಇದರಿಂದ ನೀತಿಯ ಸಂಬಂಧದಿಂದ ಉಂಟಾದ ಹಾನಿಯನ್ನು ತುಂಬಿ ಕೊಡುವಂಥ ಯಾವ ಹಿತವೂ ಆಗಿರುವದಿಲ್ಲ. ಸುಶಿಕ್ಷಿತರಾದ ಕೆಲ ಯುರೋಪಿಯನ್ನರು ಧರ್ಮದ ಕಟ್ಟಳೆಗಳನ್ನು ಕಟ್ಟಿಡಬಹುದು. ಆದರೆ ಅವರನ್ನು ನಿರ್ಬಂಧಿಸುವಂಥ ಸಮಾಜದ ನಿರ್ಬಂಧನಗಳನ್ನು ಅವರು ದುರ್ಲಕ್ಷಿಸಲಾರರು. ಈ ನಿರ್ಬಂಧನಗಳಿಗೆ ಕ್ರಿಶ್ಚನ್‌ಧರ್ಮದ ನೀತಿತತ್ವಗಳೇ ಆಧಾರವಾಗಿರುವವು. ಪಾಶ್ಚಾತ್ಯರ ಅನುಕರಣವನ್ನು ಮಾಡಲಪೇಕ್ಷಿಸುವ ಈ ದೇಶದ ಸುಶಿಕ್ಷಿತರಿಗೆ ಇಂಥ ಸಾಮಾಜಿಕಪರಿಸ್ಥಿತಿಯ ಅನುಕೂಲತೆ

ಇಲ್ಲ. ಆದ್ದರಿಂದ, ಸಂಶಯಾಕುಲವಾದ ಅವರ ಸ್ಥಿತಿಯು ಮಧ್ಯಸಮುದ್ರ ದಲ್ಲಿ ಪ್ರವಾಸ ಮಾಡುತ್ತಿರುವ ಚುಕ್ಕಾಣಿ ಇಲ್ಲದ ಹಡಗದಂತೆ ಆಗಿರುತ್ತದೆ. ಈ ಬಗೆಯ ಪರಿಸ್ಥಿತಿಯು ಈಗ ಉಂಟಾದದ್ದು ನಿಜವೆಂದು ಗೊತ್ತಾದರೆ, ಅದನ್ನು ದೂರ ಮಾಡಲಿಕ್ಕೆ ಉಪಾಯವು ಯಾವದು? ಧರ್ಮಶಿಕ್ಷಣದಿಂ ದಲೂ, ನೀತಿಶಿಕ್ಷಣದಿಂದಲೂ ಅದು ದೂರಾಗಬಹುದೋ ಹ್ಯಾಗೆ? ಇತ್ಯಾದಿ ವಿಚಾರಪರಂಪರೆಗಳು ವಿಚಾರಪರನಾದ ಮನುಷ್ಯನ ಮನಸ್ಸಿನ ಮುಂದೆ ನಿಲ್ಲುವವು. ಈ ಪರಿಸ್ಥಿತಿಯು ಬಹುದಿವಸ ನಿಲ್ಲತಕ್ಕದ್ದಲ್ಲೆಂದು ಕೆಲಕೆಲವರ ಮತವಿರುತ್ತದೆ. ಈ ಮತವು ನನಗೆ ಮಾನ್ಯವಿಲ್ಲ. ಇಷ್ಟೇ ಅಲ್ಲ, ಈ ಸಮ್ಮೇಲನಕ್ಕೂ ಅದು ಮಾನ್ಯವಾಗಲಿಕ್ಕಿಲ್ಲೆಂದು ನನ್ನ ತಿಳುವ ಳಿಕೆ ಇರುತ್ತದೆ. ಈ ಪರಿಸ್ಥಿತಿಯನ್ನೇ ಕುರಿತು ಸದ್ಯಕ್ಕೆ ನಾವು ಆಲೋ ಚಿಸಬೇಕಾಗಿದೆ. ಸರ್ವಾಂಶದಿಂದಲೂ ಈ ಪರಿಸ್ಥಿತಿಯನ್ನು ಹೋಲುವ ಪರಿಸ್ಥಿತಿಯು ಯಾವ ದೇಶದ ಯಾವ ಕಾಲದ ಇತಿಹಾಸದಲ್ಲಿಯೂ ದೊರೆಯುವದು ದುಸ್ತರವೇ ಸರಿ. ಆದಾಗ್ಯೂ ನಾವು ನಮ್ಮ ಮೇಲಿನ ಜವಾಬುದಾರಿಯನ್ನು ತಪ್ಪಿಸಿಕೊಳ್ಳಲಾರೆವು. ಈ ದೇಶದಂತೆಯೇ ಜಪಾನ ದೇಶದಲ್ಲಿಯೂ ಧ್ಯೇಯ ಹಾಗು ವ್ಯವಹಾರ ಇವುಗಳಲ್ಲಿ ಹೋರಾಟ ನಡೆದಿ ರುತ್ತದೆ. ಆ ದೇಶದ ಪರಿಸ್ಥಿತಿಗೂ ಹಿಂದುಸ್ಥಾನದ ಪರಿಸ್ಥಿತಿಗೂ ಬಹಳ ಹೆಚ್ಚು ಕಡಿಮೆ ಇರುತ್ತದೆ. ಜಪಾನದಲ್ಲಿ ಧಾರ್ಮಿಕ ಶಿಕ್ಷಣದ ಹೆಸರು ಮಾತ್ರ ಇಲ್ಲ. ಆದರೆ ವ್ಯವಹಾರದಲ್ಲಿ ಧರ್ಮದ ಭಾಗವು ಬಹಳವಾಗಿ ಇರುವದು. ಆ ದೇಶದಲ್ಲಿ ಯಾವದೊಂದು ಮಾತಿನ ವಿಷಯವಾಗಿ ವಿಚಾ ರ ಮಾಡುವಾಗ ಸದಸದ್ವಿವೇಕಬುದ್ಧಿ, ಕರ್ತವ್ಯಜಾಗೃತಿ, ಸ್ವದೇಶಾಭಿ ಮಾನ, ರಾಜನಿಷ್ಠೆ ಇವುಗಳ ಕಡೆಗೆ ಲಕ್ಷವು ಎಳೆಯಲ್ಪಡುತ್ತದೆ. ಈ ದೇಶದಲ್ಲಿ ಸರಕಾರದವರು ಧಾರ್ಮಿಕಶಿಕ್ಷಣದ ವಿಷಯದಲ್ಲಿ ಕೈಹಾಕಲಿಕ್ಕೆ ಬರುವಂತಿಲ್ಲೆಂಬ ಮಾತಿಗೆ ನಾನು ಪ್ರಾಂಜಲಮನಸ್ಸಿನಿಂದ ಒಪ್ಪಿಕೊಳ್ಳು ತ್ತೇನೆ. ಈ ವಿಷಯಕ್ಕೆ ಇಂಗ್ಲಂಡ ದೇಶದಲ್ಲಿ ಕೂಡಾ ಅನೇಕ ದೊಡ್ಡ ಎಡರುಗಳು ಇರುತ್ತವೆ. ಈ ದೇಶದಲ್ಲಿಯಂತೂ ಆ ವಿಷಯಕ್ಕೆ ನೀಗಲಸಾಧ್ಯವಾದ ಎಡರುಗಳುಂಟು. ಈಗ ಎಷ್ಟೋ ಜಾತಿಗಳವರಿಂದ ತಮ್ಮ ತಮ್ಮ ಧರ್ಮಮತಕ್ಕೆ ಒಳಪಟ್ಟ ವಿದ್ಯಾರ್ಥಿಗಳ ಸಲುವಾಗಿಯೇ ಸ್ಥಾಪಿಸಲ್ಪಟ್ಟ ಶಾಲೆಗಳಲ್ಲಿ ಧರ್ಮಶಿಕ್ಷಣವು ಕೊಡಲ್ಪಡುವದು. ಆದರೆ ಸರ

ಕಾರದ ಶಾಲೆಗಳಲ್ಲಿ ಸರಕಾರದವರು ನೈತಿಕ ಶಿಕ್ಷಣವನ್ನು ಮಾತ್ರ ಕೊಡ ಬಹುದು. ಸದ್ಯಕ್ಕೆ ಎಷ್ಟೋ ಶಾಲೆಗಳಲ್ಲಿ ನೈತಿಕ ಶಿಕ್ಷಣವನ್ನು ಕೊಡಲು ಉಪಕ್ರಮಿಸಿದ್ದಾರೆ. ಆದರೆ ಇನ್ನು ಮೇಲೆ ಅದಕ್ಕೆ ಏನಾದರೂ ಒಂದು ವ್ಯವಸ್ಥಿತವಾದ ಸ್ವರೂಪವನ್ನು ಕೊಡುವದು ಅವಶ್ಯವಿರುತ್ತದೆ.

ಈ ಪ್ರಶ್ನವು ಶಿಕ್ಷಕರನ್ನು ಬಹಳವಾಗಿ ಅವಲಂಬಿಸಿರುವದು:—ವರ್ಗದಲ್ಲಿ ದೊಡ್ಡ ಪ್ರಮಾಣದಿಂದ ಇರುವ ಹುಡುಗರ ಅಥವಾ ಹುಡಿಗೆಯರ ಮನಸಿನಲ್ಲಿ ನೀತಿಯ ತತ್ವಗಳನ್ನು ಬಿಂಬಿಸುವದು ಶಕ್ಯವಿರುವದೇ ಹ್ಯಾಗೆ? ಈ ಪ್ರಶ್ನವೇ ಈ ಹೊತ್ತು ವಿಚಾರ ಮಾಡತಕ್ಕ ಮುಖ್ಯ ಮುದ್ದೆಯಾಗಿರುತ್ತದೆ. ಈ ವಿಷಯವಾಗಿ ನಾನು ಏನೂ ಅಭಿಪ್ರಾಯವನ್ನು ಕೊಡಲಾರೆನು. ಈ ವಿಷಯದಲ್ಲಿ ಇಲ್ಲಿ ನೆರೆದ ಸಭಾಸದರೆಲ್ಲರೂ ನಿರ್ದಾಕ್ಷಿಣ್ಯದಿಂದ ತಮ್ಮತಮ್ಮ ಅಭಿಪ್ರಾಯಗಳನ್ನು ಜನರ ಮುಂದೆ ಇಡುವರೆಂದು ನಾನು ಆಶಿಸುತ್ತೇನೆ. ನೈತಿಕಶಿಕ್ಷಣವನ್ನು ಉದಾಹರಣೆಗಳಿಂದಲೂ ದೃಷ್ಟಾಂತಗಳಿಂದಲೂ, ಮನೋರಂಜಕವಾಗುವಂತೆ ಮಾಡಲಿಕ್ಕೆ ಬರಬಹುದೆಂದು ನನ್ನ ಅಭಿಪ್ರಾಯವುಂಟು. ಈ ಶಿಕ್ಷಣವು ನೀರಸವಾದದ್ದೂ, ಗಿಳಿಓದಿನಂಥಾದ್ದೂ ಆದರೆ, ಅದರಿಂದ ಏನೂ ಪ್ರಯೋಜನವಾಗಲಾರದು. ಮತ್ತು ಈ ಶಿಕ್ಷಣದ ಉಪಯುಕ್ತತೆಯು ಕೇವಲ ಶಿಕ್ಷಕರ ಶೀಲವನ್ನು ಅವಲಂಬಿಸಿರುವದು. ನೈತಿಕಶಿಕ್ಷಣವನ್ನು ಮನೋರಂಜಕವಾಗುವಂತೆ ಕೊಡುವಶಿಕ್ಷಕನಿಗೆ ಈ ವಿಷಯದಲ್ಲಿ ಕೆಲವು ಉಪಯುಕ್ತ ಸೂಚನೆಗಳನ್ನು ಮಾಡಬಹುದು. ಆದರೆ ಆ ರೀತಿಯಿಂದ ಮನೋರಂಜಕತೆಯನ್ನು ಹುಟ್ಟಿಸುವಗುಣವು ಎಲ್ಲ ಶಿಕ್ಷಕರಿಗೂ ಸಾಧ್ಯವಾಗಲಾರದು. ಶಿಕ್ಷಣವನ್ನು ಹ್ಯಾಗೆ ಕೊಡಬೇಕೆಂಬ ಪದ್ಧತಿಯನ್ನು ಟ್ರೇನಿಂಗ ಕಾಲೇಜಗಳಲ್ಲಿ ತೋರಿಸಿ ಕೊಡಬಹುದು; ಆದರೆ ಆ ಸಂಬಂಧದ ಉತ್ಸಾಹವನ್ನು ಎಲ್ಲಿಂದ ತಂದು ಕೊಡಬೇಕು? ಅದು ಶಿಕ್ಷಕನಲ್ಲಿ ಸ್ವಭಾವಸಿದ್ಧವಾಗಿಯೇ ಇರಲಿಕ್ಕೆ ಬೇಕು. ಈ ಪ್ರಕಾರದ ಪ್ರತ್ಯಕ್ಷ ಉಪಾಯಗಳ ಅಭಾವದಲ್ಲಿ ಅಪ್ರತ್ಯಕ್ಷ ಉಪಾಯಗಳ ಯೋಜನೆಯನ್ನು ಮಾಡತಕ್ಕದ್ದು. ವಿದ್ಯಾರ್ಥಿಗಳ ಶೀಲವನ್ನುಂಟು ಮಾಡುವದರಲ್ಲಿ ಒಳ್ಳೇ ಶಿಕ್ಷಣಸಂಸ್ಥೆಗಳು ಅಪ್ರತ್ಯಕ್ಷ ರೀತಿಯಿಂದ ಉಪಯೋಗವಾಗುತ್ತವೆ. ಶಿಸ್ತಿನಿಂದ ಈ ಕೆಲಸಕ್ಕೆ ಬಹಳ ಸಹಾಯವಾಗುವದುಂಟು. ಶಿಕ್ಷಕನ ಉನ್ನತವಾದ ಆಚರಣೆಯು ವಿದ್ಯಾರ್ಥಿಗಳ ಮನಸಿನಲ್ಲಿ ಹೆಜ್ಜೆ ಹೆಜ್ಜೆಗೆ ಸತ್ಪರಿಣಾಮವನ್ನುಂಟು ಮಾಡುತ್ತಿರುವದೆಂಬ ವಿಷಯದಲ್ಲಿ

ಸಂಶಯವಿಲ್ಲ. ವಿದ್ಯಾರ್ಥಿಗಳು ಮಾಡುವ ನಿತ್ಯದ ವ್ಯವಹಾರಗಳಲ್ಲಿ ನೈತಿಕ ಶಿಕ್ಷಣವನ್ನು ಕೊಡಲಿಕ್ಕೆ ಅನುಕೂಲವಾದ ನೂರಾರು ಪ್ರಸಂಗಗಳು ಒದಗಿ ಬರುವವು. ಒಳ್ಳೇ ಆಟಗಳನ್ನು, ಆಟದಲ್ಲಿ ಒಳ್ಳೇ ಹಿರಿದಿನ ಮನುಷ್ಯರ ಕೂಡ ಆನಂದವನ್ನುಂಟು ಮಾಡುವಂಥ ಉಚ್ಚತರದ ಮನೋವೃತ್ತಿಯಿಂದ ಆಡಲು, ಅವುಗಳಿಂದಲೂ ಹುಡುಗರಿಗೆ ನೀತಿ ಶಿಕ್ಷಣವು ದೊರೆಯುತ್ತದೆ. ನಾನು ಮಿ. ಗೋಲ್ಡ ಎಂಬವರ "ಲಾಯಿಫ್ ಎನ್ಡ ಮ್ಯಾನರ್ಸ" (Life and Manners) ಎಂಬದೊಂದು ಗ್ರಂಥವನ್ನು ಈಗ ಅವಲೋಕಿಸುತ್ತಾ ಇದ್ದೇನೆ. ಅದರಿಂದ ನನ್ನ ಮನಸಿಗೆ, ಉದಾರಚರಿತದ ಸಾಧಾರಣ ಸಂಗತಿಗಳಿಂದಲೂ ಉಚ್ಚಪ್ರತಿಯ ನೈತಿಕಶಿಕ್ಷಣವನ್ನು ಕೊಡಬಹುದೆಂದು ತೋರಹತ್ತಿರುತ್ತದೆ. ಇಂಥ ಪುಸ್ತಕಗಳು ಉತ್ತಮ ಶಿಕ್ಷಕರಿಗೆ ವಾಚನಕ್ಕೆ ಸಿಕ್ಕರೆ, ಅವರಿಗೆ ನೀತಿಶಿಕ್ಷಣವನ್ನು ಕೊಡುವದು ಬಹಳ ಸುಲಭವಾಗಬಹುದು.

ಮೇಲೆ ವಿವರಿಸಿದಂತೆ ನೈತಿಕ ಶಿಕ್ಷಣವನ್ನು ಕೊಡಲಿಕ್ಕೆ ಉಪಯೋಗಿಸುವ ಪುಸ್ತಕಗಳು ಹಿಂದುಸ್ಥಾನದ ಇತಿಹಾಸ, ಸತ್ಪುರುಷರ ಚರಿತ್ರಗಳು, ದಂತಕಥೆಗಳು, ವಾಙ್ಮಯ ಇವುಗಳ ಸಹಾಯದಿಂದ ಸಿದ್ಧವಾಗಲಿಕ್ಕೆಬೇಕು. ಮತ್ತು ಇಂಗ್ಲಂಡದಲ್ಲಿ ಸ್ಥಾಪಿಸಲ್ಪಟ್ಟಿರುವ 'ಮೊರಲ್ ಇನ್‌ಸ್ಟ್ರಕ್‌ಶನ್ ಲೀಗ'(ಅಂದರೆ, ನೀತಿಶಿಕ್ಷಣಸಂಘ)ದಂಥ ಒಂದು ಸಂಘವು ಈ ದೇಶದಲ್ಲಿ ಸ್ಥಾಪಿತವಾಗಿ ಅದರಲ್ಲಿ ಮೇಲಿನ ಪ್ರಶ್ನದ ವಿಚಾರವು ನಡೆದರೆ ಒಳ್ಳೆಯದು. ಹಿಂದು ಜನರಿಗೆ ನೀತಿಶಿಕ್ಷಣವನ್ನು ಕೊಡಲಿಕ್ಕೆ ಉಪಯುಕ್ತವಾದ ಪುಸ್ತಕಗಳು ಸದ್ಯಕ್ಕೆ ಅವರ ವಾಙ್ಮಯದಲ್ಲಿ ಇರುವವು. ಭಗವದ್ಗೀತೆಯಂಥ ಉತ್ಕೃಷ್ಟವಾದಂಥ ಉದಾತ್ತವಿಚಾರಪರಿಪ್ಲುತವಾದಂಥ ಗ್ರಂಥಕ್ಕೆ ಸರಿಯಾದ ಮತ್ತೊಂದು ಗ್ರಂಥವು ಎಲ್ಲಿಯೂ ದೊರೆಯದು, ಈ ಗ್ರಂಥದ ಸಹಾಯದಿಂದ ನೈತಿಕಶಿಕ್ಷಣವನ್ನು ಕೊಡುವ ಕೆಲಸವು ಸಾಧ್ಯವಾಗಬಹುದು. ಬಾಯಿಬಲ್‌ದೊಳಗಿನ "ನಿನ್ನ ನೆರೆಹೊರೆಯವರನ್ನು ನಿನ್ನಂತೆಯೇ ಪ್ರೀತಿಸು" (Love thy neighbour as thyself) ಎಂಬ ವಾಕ್ಯದಲ್ಲಿ ನೀತಿಯು ಪರಿಪೂರ್ಣವಾಗಿ ತುಂಬಿ ತುಳುಕುತ್ತಿರುವದು. ಹಿಂದು ಧರ್ಮಗ್ರಂಥಗಳಲ್ಲಿ ಪ್ರತಿಪಾದಿತವಾದ ನೀತಿತತ್ವಗಳ ಸ್ಪಷ್ಟೀಕರಣವನ್ನು ಪೌರಾಣಿಕ ಕಥೆಗಳಿಂದ ಅತ್ಯುತ್ಕೃಷ್ಟವಾಗಿ ಮಾಡಬಹುದು. ಕರ್ತವ್ಯವನ್ನು ಮಾಡುವದರಿಂದ ಉಂಟಾಗುವ ಸೌಖ್ಯವನ್ನೂ ಪರರಿಗೆ ನೆರವಾಗು

ವದರಿಂದ ಉಂಟಾಗುವ ಆನಂದವನ್ನೂ ಹಿಂದು ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ಮಾಡಿಕೊಟ್ಟರೆ, ನೈತಿಕ ಶಿಕ್ಷಣದ ಬಹು ದೊಡ್ಡ ಕೆಲಸವನ್ನು ಮಾಡಿದಂತಾಗುವದು. ಮೇಲೆ ದಿಗ್ದರ್ಶನ ಮಾಡಿದ ಪದ್ಧತಿಯಿಂದ ನೀತಿಯ ಪುಸ್ತಕಗಳು ಬರೆಯಲ್ಪಟ್ಟರೆ, ಅವುಗಳಿಂದ ಶಿಕ್ಷಕರಿಗೆ ಬಹಳ ಉಪಯೋಗವಾಗುವದು. ಮತ್ತು ಇಂಥ ಪುಸ್ತಕಗಳಿದ್ದರೆ ಬೇರೆ ವಿಷಯಗಳ ಸಂಗಡ ಈ ವಿಷಯದ ಕೆಲವು ಪಾಠಗಳನ್ನು ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ನಿಯಮಿಸಿ ಕೊಡಬಹುದು.

ಸಾಲೆಯಲ್ಲಿ ನೈತಿಕ ಶಿಕ್ಷಣವನ್ನು ಕೊಡುವ ಉದ್ದೇಶವು :— ಆದರೆ ಸಾಲೆಯಲ್ಲಿ ಹುಡುಗರು ದಿನದ ೨೪ ತಾಸುಗಳಲ್ಲಿ ೫|೬ ತಾಸು ಮಾತ್ರ ಇರುವರಾದ ಕಾರಣ ಅಲ್ಲಿ ಕೊಡಲ್ಪಡುವ ನೈತಿಕ ಶಿಕ್ಷಣದಿಂದ ವಿಶೇಷ ಉಪಯೋಗವಾಗಲಿಕ್ಕಿಲ್ಲೆಂದು ಕೆಲವು ಜನರ ಅಭಿಪ್ರಾಯವಿರುತ್ತದೆ. ನಮ್ಮ ಯುನಿವ್ಹರ್ಸಿಟಿಯು ವ್ಹಾಯಿಸ್ ಚಾನ್ಸಲರರಾದ ಸರ್‌ನಾರಾಯಣರಾವ ಚಂದಾವರಕರ ಇವರ ಅಭಿಪ್ರಾಯವಾದರೂ ಹೀಗೇ ಇದ್ದಂತೆ ಮೊನ್ನಿನ ಪದವಿದಾನಸಮಾರಂಭ (Convocation)ದ ಕಾಲದಲ್ಲಿ ಆದ ಅವರ ಭಾಷಣದಿಂದ ಗೊತ್ತಾಗುತ್ತದೆ. ಆದರೆ ಈ ವಿಷಯವಾಗಿ ನನ್ನ ಅಭಿಪ್ರಾಯವು ಭಿನ್ನವಾಗಿರುತ್ತದೆ. ಈ ಹೊತ್ತು ಸಾಲೆಯಲ್ಲಿ ವಿದ್ಯಾರ್ಥಿದೆಶೆಯಲ್ಲಿ ಕಾಣುವ ಹುಡುಗರು ಸ್ವಲ್ಪ ದಿವಸಗಳಲ್ಲಿಯೇ ಗೃಹಸ್ಥರಾಗುವರು. ಆದಕಾರಣ ಭಾವೀರಾಷ್ಟ್ರವೆನಿಸುವಂಥ ಈಗಿನ ವಿದ್ಯಾರ್ಥಿಗಳಿಗೆ ಸಾಲೆಯಲ್ಲಿ, ಅಲ್ಪ ಸ್ವಲ್ಪ ಸಿಕ್ಕ ನೈತಿಕಶಿಕ್ಷಣದ ಉಪಯೋಗವು, ಮುಂದೆ ಅವರ ಮುಖಾಂತರವಾಗಿಯೇ ಅವರ ಸಂತತಿಗೆ ಮನೆಯಲ್ಲಿ ಸಹ ಆಗಬಹುದು. ಪಾಶ್ಚಾತ್ಯಶಿಕ್ಷಣದಿಂದ ಈ ವಿಷಯದಲ್ಲಿ ಆದ ಹಾನಿಯನ್ನು ಅಂಶಮಾತ್ರದಿಂದಾದರೂ ತುಂಬಿಕೊಳ್ಳಲಿಕ್ಕೆ ಬರುವಂತಿದ್ದರೆ ತುಂಬಿಕೊಳ್ಳುವದು ನಮ್ಮ ಕರ್ತವ್ಯವಾಗಿರುತ್ತದೆ; ಮತ್ತು ಈ ಕರ್ತವ್ಯವನ್ನು ನಾವು ಮಾಡದಿದ್ದರೆ ಒಂದು ದೊಡ್ಡ ಅನ್ಯಾಯವನ್ನು ಮಾಡಿದ ದೋಷಕ್ಕೆ ಪಾತ್ರರಾಗುವೆವು. ನೈತಿಕಶಿಕ್ಷಣದ ಸಂಬಂಧದಿಂದ ಸರಕಾರದವರಿಗೆ ಏನಾದರೂ ವ್ಯವಸ್ಥೆಯನ್ನು ಮಾಡಲಿಕ್ಕೆ ಬರುವಂತೆ ಅದೆಯೋ ಹ್ಯಾಗೆ? ಒಂದು ವೇಳೆ ಬರುವಂತಿದ್ದರೆ, ಅದನ್ನು ಹ್ಯಾಗೆ ಮಾಡಬೇಕಾದೀತ.? ಈ ಪ್ರಶ್ನಗಳನ್ನು ಮುಂದೆ ಇಟ್ಟುಕೊಂಡು ಆ ಧೋರಣದಿಂದಲೇ ನಾನು ಈ ಹೊತ್ತಿನ ವಿಷಯದ ವಿವೇಚನವನ್ನು ಮಾಡಿದ್ದೇನೆ."

ಭೂಗೋಲಶಿಕ್ಷಣ.

ಭೂಗೋಲಶಾಸ್ತ್ರದ ಆರಂಭದ ಪಾಠಗಳನ್ನೂ ಊರಿನ ಹಾಗೂ ತಾಲೂಕಿನ ಭೂಗೋಲವನ್ನೂ ಕಲಿಸುವ ಬಗ್ಗೆ ಸೂಚನೆಗಳು.

ಶಾಲಾಪತ್ರಕದ ಕಳೆದ ವರ್ಷದ ಜುಲೈ ತಿಂಗಳ ಸಂಚಿಕೆಯಲ್ಲಿ ೩ನೇ ೪ನೇ ಇಯತ್ತೆಗಳಲ್ಲಿ ಭೂಗೋಲವನ್ನು ಕಲಿಸುವ ಕ್ರಮದ ಬಗ್ಗೆ ಕೆಲವು ಸೂಚನೆಗಳನ್ನು ಕೊಟ್ಟಿದ್ದೇವಷ್ಟೆ. ಆ ಸೂಚನೆಗಳನ್ನೇ ಅನುಸರಿಸಿ ಇಲ್ಲಿ ಭೂಗೋಲಶಿಕ್ಷಣದ ಆರಂಭದ ಪಾಠಗಳ ಬಗ್ಗೆ ಹೆಚ್ಚು ವಿಸ್ತೃತವಾದ ಸೂಚನೆಗಳನ್ನು ಕೊಡುತ್ತೇವೆ. ಶಿಕ್ಷಕನಲ್ಲಿ ಉತ್ಸಾಹ, ನಿರಾಲಸ್ಯ, ಜ್ಞಾನ, ಕಲ್ಪನಾಶಕ್ತಿ ಇವೇ ಮೊದಲಾದ ಗುಣಗಳು ಹೆಚ್ಚು ಇದ್ದ ಮಾನದಿಂದ ಅವನಿಗೆ ಭೂಗೋಲಶಿಕ್ಷಣದಲ್ಲಿ ಇನ್ನೂ ಅನೇಕ ಸಂಗತಿಗಳು ತೋಚಬಹುದು. ಹೊಸ ಶಿಕ್ಷಣಪದ್ಧತಿಯಂತೆ ಭೂಗೋಲಶಿಕ್ಷಣದಲ್ಲಿಯೇ ಆಗಲಿ, ಬೇರೆ ಯಾವ ವಿಷಯದ ಶಿಕ್ಷಣದಲ್ಲಿಯೇ ಆಗಲಿ, ಶಿಕ್ಷಕನು ಮುಖ್ಯವಾಗಿ ಲಕ್ಷ್ಯದಲ್ಲಿಡತಕ್ಕದ್ದೇನಂದರೆ, ಶಿಕ್ಷಣದ ಮಹತ್ವವು ವಿದ್ಯಾರ್ಥಿಗಳಿಗೆ ಮಾಡಿ ಕೊಟ್ಟ ಜ್ಞಾನದ ಪರಿಮಾಣವನ್ನು ಅವಲಂಬಿಸಿರುವದಿಲ್ಲ; ಅದರ ಪದ್ಧತಿಯನ್ನು ಅವಲಂಬಿಸಿರುತ್ತದೆ. ಅಂದರೆ, ಹುಡುಗರಿಂದ ವಸ್ತುಗಳ ಪ್ರತ್ಯಕ್ಷ ನಿರೀಕ್ಷಣವನ್ನು ಮಾಡಿಸಿ, ಅವರಿಗೆ ಕಾರ್ಯಕಾರಣಭಾವವನ್ನು ತಿಳಿಸಿ ಕೊಟ್ಟು, ವಿಚಾರ ಮಾಡಲಿಕ್ಕೆ ಹಚ್ಚಿ, ಅವರು ತಮಗೆ ಗೊತ್ತಿದ್ದ ಸಂಗತಿಗಳಿಂದ ಹೊಸ ಸಂಗತಿಗಳನ್ನು ತಾವೇ ಕಂಡುಕೊಳ್ಳುವಂತೆ ಮಾಡುವದೇ ಶಿಕ್ಷಣದ ಉದ್ದೇಶವಿರುತ್ತದೆ. ಈ ತರದ ಶಿಕ್ಷಣದಿಂದ ವಿದ್ಯಾರ್ಥಿಗಳ ವಿಚಾರಶಕ್ತಿಯು ಬೆಳೆದು ಹೊಸ ಜ್ಞಾನವನ್ನು ತಮ್ಮ ಸ್ವಂತ ಪ್ರಯತ್ನದಿಂದ ಸಂಪಾದಿಸುವದಕ್ಕೆ ಅವರು ಯಾವ ಮಾನದಿಂದ ಸಮರ್ಥರಾಗುವರೋ ಆ ಮಾನದಿಂದ ಅವರಿಗೆ ಕೊಟ್ಟ ಶಿಕ್ಷಣವು ಸಾರ್ಥಕವಾಗುವದು. ಹೀಗಾಗದೆ ಇದ್ದಲ್ಲಿ, ಶಿಕ್ಷಕನು ವಿದ್ಯಾರ್ಥಿಗಳಿಗೆ ಪುಸ್ತಕಗಳ ಮೇಲಿಂದ ಬರಿಯ ಶಾಬ್ದಿಕ ಜ್ಞಾನವನ್ನು ಎಷ್ಟೇ ಮಾಡಿ ಕೊಟ್ಟರೂ ಅದೆಲ್ಲ ವ್ಯರ್ಥವಾಗಿರುವದು. ಆದ ಕಾರಣ ಶಿಕ್ಷಣದ ಈ ಮುಖ್ಯ ಉದ್ದೇಶವನ್ನು ಲಕ್ಷ್ಯದಲ್ಲಿಟ್ಟು ಕೆಳಗೆ ಬರೆದ ಸೂಚನೆಗಳನ್ನು ಬಳಿಕೆಯಲ್ಲಿ ತರಬೇಕು—

ಭೂಗೋಲದ ಆರಂಭದಲ್ಲಿ ಹುಡುಗರು ಹೊಸ ಹೊಸ ಸಂಜ್ಞೆಗಳ ಬಗ್ಗೆ ಕಲಿಯುತ್ತಾರೆ; ಹೊಸ ಹೊಸ ಕಲ್ಪನೆಗಳನ್ನು ಮಾಡುತ್ತಾರೆ ಮೇಲೆ ಹೇಳಿದಂತೆ, ಇವುಗಳ ಬಗ್ಗೆ ಅವರಿಗೆ ಶಾಬ್ದಿಕಜ್ಞಾನವು ಮಾತ್ರ ಆಗುವದರಿಂದ ಫಲವಿಲ್ಲ. ಯಾಕಂದರೆ, ಪ್ರಾರಂಭದ ಶಾಬ್ದಿಕಜ್ಞಾನದಿಂದ ಮುಂದಿನ ಅವರ ಶಿಕ್ಷಣವೆಲ್ಲ ಶಾಬ್ದಿಕವಾಗುತ್ತದೆ. ಈ ತರದ ಆರಂಭವು ಹಾಸ್ಯಕರವಾದದ್ದು. ಆದ್ದರಿಂದ ಮೊದಲಿನ ಕಲ್ಪನೆಗಳನ್ನೂ ಸಂಜ್ಞೆಗಳನ್ನೂ ಯಥಾರ್ಥಜ್ಞಾನವಾಗುವಂತೆ ಪ್ರತ್ಯಕ್ಷ ನಿರೀಕ್ಷಣ ಮಾಡಿಸಿ ಕಲಿಸುವದು ಅವಶ್ಯವಾದದ್ದು. ನಿರೀಕ್ಷಣಶಕ್ತಿಯನ್ನು ಬಲಪಡಿಸುವದೂ, ಸುತ್ತಲಿದ್ದ ಪದಾರ್ಥಗಳ ಬಗ್ಗೆಯೂ ಸಂಗತಿಗಳ ಬಗ್ಗೆಯೂ ಜ್ಞಾನವನ್ನು ಮಾಡಿಕೊಳ್ಳುವ ಲವಲವಿಕೆಯನ್ನುಂಟು ಮಾಡುವದೂ ಈ ಸಮಯದಲ್ಲಿ ಶಿಕ್ಷಕನ ಮುಖ್ಯ ಉದ್ದೇಶವಿರತಕ್ಕದ್ದು.

ಉದ್ದಳತೆ:—ಹುಡುಗರಿಂದ ಪದಾರ್ಥಗಳನ್ನು ಪ್ರತ್ಯಕ್ಷವಾಗಿ ಅಳೆಯುಲಿಕ್ಕೆ ಹಚ್ಚಿ ಉದ್ದಳತೆ, ಅಂತರ, ಆಕಾರಗಳ ಬಗ್ಗೆ ಅವರಿಗೆ ಜ್ಞಾನ ಮಾಡಿ ಕೊಡಬೇಕು. ಮೊದಲು ವರ್ಗದ ಕೋಣೆಯನ್ನು ಕೆಲವು ಹುಡುಗರಿಂದ ಅಳೆಯುಲಿಕ್ಕೆ ಹಚ್ಚಬೇಕು. ಇವುಗಳಲ್ಲಿ ವ್ಯತ್ಯಾಸವು ತೋರುವದರಿಂದ ಒಂದು ನಿಶ್ಚಿತವಾದ ಅಳತೆಯ ಅವಶ್ಯಕತೆಯು ವ್ಯಕ್ತವಾಗುವದು. ಈ ಮೇರೆಗೆ ಯಾರ್ಡು ಹಾಗೂ ಫೂಟುಗಳ ಜ್ಞಾನವನ್ನು ಮಾಡಿಕೊಡಬೇಕು. ಅವರಿಗೆ ಈ ಅಳತೆಗಳನ್ನು ತೋರಿಸಿ ಬಿಟ್ಟರೆ ತೀರದು. ಅವರಿಂದ ಇವುಗಳನ್ನು ಉಪಯೋಗಿಸಲಿಕ್ಕೆ ಹಚ್ಚಿ ಈ ಅಳತೆಗಳು ಅವರ ಕಣ್ಣಿನಲ್ಲಿ ಕೂಡುವಂತೆ ಮಾಡತಕ್ಕದ್ದು. ಸಾಲೆಯನ್ನೂ ಸಾಲೆಗೆ ಹತ್ತಿರುವ ತೋಟವನ್ನೂ ಸಾಲೆಯ ಆಟದ ಬೈಲನ್ನೂ ಅವರು ಪ್ರತ್ಯಕ್ಷವಾಗಿ ಅಳೆದನಂತರ ಸಾಲೆಗೂ ಮನೆಗೂ ಇತರ ಇಮಾರತುಗಳಿಗೂ ಇರುವ ಅಂತರವನ್ನು ಅಜಮಾಸಿನ ಮೇಲೆ ಹೇಳಲಿಕ್ಕೆ ಅವರಿಗೆ ಬರತಕ್ಕದ್ದು. ಸಾಲೆಯಿಂದ ಒಂದು ಮೈಲು ಇಲ್ಲವೆ ಹೆಚ್ಚು ಅಂತರದಲ್ಲಿರುವ ಸ್ಥಳಗಳಿಗೆ ಅವರನ್ನು ಕರಕೊಂಡು ಹೋಗಿ ಅವರಿಗೆ ಮೈಲು, ಹರದಾರಿ ಇವುಗಳ ಬಗ್ಗೆ ಹೇಳಿಕೊಡಬೇಕು. ಈ ಸಮಯದಲ್ಲಿ ಉಂಟಾದ ಉದ್ದಳತೆ ಅಂತರಗಳ ಕಲ್ಪನೆಗಳೇ ಮುಂದಿನ ದೊಡ್ಡ ದೊಡ್ಡ ಪ್ರದೇಶಗಳ ಉದ್ದಳತೆ-ಅಂತರಗಳ ಯಥಾರ್ಥ ಕಲ್ಪನೆಗಳ ಮೂಲವಾಗಿರುವದರಿಂದ, ಇವುಗಳನ್ನು ಯೋಗ್ಯ

ವಾಗಿ ಕಲಿಸುವೆದರ ಮಹತ್ವವನ್ನು ಕುರಿತು ಬಹಳ ಹೇಳುವದು ಅವಶ್ಯವಿಲ್ಲ. ಎತ್ತರದ ಕಲ್ಪನೆಯನ್ನಾದರೂ ಪ್ರತ್ಯಕ್ಷವಾಗಿ ಹುಡುಗರನ್ನು ಅಳಿಯಲಿಕ್ಕೆ ಹಚ್ಚಿ ಮಾಡಿಕೊಡತಕ್ಕದ್ದು. ಭೂಗೋಲದಲ್ಲಿ ಪರ್ವತಗಳೂ ತಪ್ಪಲ ಭೂಮಿಗಳೂ ಇಷ್ಟು ಫೂಟು ಎತ್ತರವಿರುತ್ತವೆಂದು ಹೇಳುವದುಂಟು. ಇವುಗಳ ಯಥಾರ್ಥ ಕಲ್ಪನೆಯು ಹುಡುಗರಲ್ಲಿ ಉಂಟಾಗುವದು ಅತ್ಯವಶ್ಯವಾದದ್ದು. ಹುಡುಗಳಿಗೆ ೧೦೦೦ ಫೂಟು ಎತ್ತರವೆಂದರೆ ಏನೂ ಕಲ್ಪನೆಯು ಬರುವದಿಲ್ಲ. ಆದ್ದರಿಂದ ಗೊತ್ತಿದ್ದ ಒಡವೆಯು ಎತ್ತರದ ಇಷ್ಟು ಪಟ್ಟೆಂದು ಹೇಳಿ ಹೆಚ್ಚು ಎತ್ತರದ ಕಲ್ಪನೆಯನ್ನು ಅವರಲ್ಲಿ ಉಂಟು ಮಾಡಬೇಕಾಗುವದು. ಊರೊಳಗಿನ ಎಲ್ಲಕ್ಕೂ ಎತ್ತರವಾದ ಮನೆಯು ಎಷ್ಟು ಫೂಟು ಎತ್ತರವಿರುವದು? ಇಂಥ ಎಷ್ಟು ಮನೆಗಳನ್ನು ಒಂದನ್ನೊಂದರ ಮೇಲಿಟ್ಟರೆ ಸಮೀಪದಲ್ಲಿರುವ ಗುಡ್ಡದ ಎತ್ತರದಷ್ಟು ಆಗುವವು? ಮುಂತಾದ ಪ್ರಶ್ನಗಳಿಂದ ಅವರಲ್ಲಿ ಎತ್ತರದ ಕಲ್ಪನೆಯನ್ನುಂಟು ಮಾಡಬೇಕು. ಈ ಮೇರೆಗೆ ಕಲಿಸದಿರುವದರಿಂದಲೇ ಕೆಲವು ಹುಡುಗರು ಪರ್ವತವು ಅತಿಶಯ ಎತ್ತರವಾದ ಕಲ್ಲಿನ ಕಂಬವೆಂದು ಕಲ್ಪಿಸುತ್ತಾರೆ. ಭೂಗೋಲದಲ್ಲಿ ಪ್ರದೇಶದ ಎತ್ತರವನ್ನು ಸಮುದ್ರ ಪಾತಳಿಯಿಂದ ಎಣಿಸುವರೆಂಬದನ್ನು ಅವರಿಗೆ ಮುಂದೆ ತಿಳಿಸಿ ಕೊಡಬಹುದು.

(೨) ದಿಕ್ಕುಗಳು:—ಬಲ ಎಡ ಇವುಗಳ ಕಲ್ಪನೆಗಳು ಸಣ್ಣ ಹುಡುಗರಿಗೆ ಸಹ ಇರಬಹುದು. ಇಬ್ಬರು ಹುಡುಗರನ್ನು ಇದಿರಿದಿರಾಗಿ ನಿಲ್ಲಿಸಿ, ನಡುವೆ ಎರಡು ವಸ್ತುಗಳನ್ನಿಟ್ಟು, ಒಂದು ಪದಾರ್ಥವು ಮತ್ತೊಂದು ಪದಾರ್ಥದ ಯಾವ ಕಡೆಗೆ ಇರುವದೆಂದು ಕೇಳಿದರೆ ವಿರುದ್ಧವಾದ ಎರಡು ಉತ್ತರಗಳು ಹೊರಡುವವು. ಇದರಿಂದ ನಾವು ಬೇಕಾದ ಕಡೆಗೆ ಮೋರೆ ಮಾಡಿ ನಿಂತರೂ ಒಂದೇ ಎಂದು ಎಣಿಸಲ್ಪಡುವ ಒಂದು ಸ್ಥಿರವಾದ ದಿಕ್ಕಿನ ಕಲ್ಪನೆಯ ಅವಶ್ಯಕತೆಯನ್ನು ಹೊರಡಿಸಬಹುದು.

ಸೂರ್ಯೋದಯ, ಸೂರ್ಯಾಸ್ತ, ಧ್ರುವ ನಕ್ಷತ್ರ ಇವುಗಳನ್ನು ಹುಡುಗರನ್ನು ನೋಡಲಿಕ್ಕೆ ಹಚ್ಚಬೇಕು. ಮತ್ತು ಇವುಗಳ ಸಹಾಯದಿಂದ ದಿಕ್ಕುಗಳನ್ನು ನಿಶ್ಚಯಿಸಲಿಕ್ಕೆ ಕಲಿಸಬೇಕು. ಹುಡುಗರನ್ನು ಆಡ್ಡಾಡಲಿಕ್ಕೆ ಒಯ್ದಾಗ ಈ ಬಗ್ಗೆ ಅವರನ್ನು ಮೇಲಿಂದಮೇಲೆ ಪ್ರಶ್ನೆಮಾಡಬೇಕು.

ವರ್ಗದಲ್ಲಿ ನೆಲದಮೇಲೆ ದಕ್ಷಿಣೋತ್ತರವಾಗಿ ಹಾಯುವ ಒಂದು

ಗೆರೆಯನ್ನು ತೆಗೆಯಬೇಕು. ಇದಕ್ಕೆ ಕಾಟಕೋನವಾಗುವಂತೆ ಎಳೆದ ಗೆರೆಯು ಪೂರ್ವ ಪಶ್ಚಿಮ ದಿಕ್ಕುಗಳನ್ನು ತೋರಿಸುವದೆಂಬದನ್ನು ಹುಡುಗರ ಲಕ್ಷಕ್ಕೆ ತರಬೇಕು.

ಸಣ್ಣ ಹೋಕಾಯಂತ್ರವು ಸಿಗುವಂತಿದ್ದರೆ ಹುಡುಗರಿಗೆ ಇದರ ಸಹಾಯದಿಂದ ದಿಕ್ಕುಗಳನ್ನು ಗೊತ್ತುಹಚ್ಚಲಿಕ್ಕೆ ಕಲಿಸತಕ್ಕದ್ದು. ಅಂತೂ, ಹಗಲಾಗಲಿ ರಾತ್ರಿಯಾಗಲಿ ಒಂದು-ಸ್ಥಳದಲ್ಲಿ ನಿಂತು ಸರಿಯಾಗಿ ದಿಕ್ಕುಗಗಳನ್ನು ಗೊತ್ತುಹಚ್ಚುವದು ಭೂಗೋಲಶಿಕ್ಷಣದ ಆರಂಭದ ಪಾಠಗಳ ಭಾಗವಿರತಕ್ಕದ್ದು.

ಅಡ್ಡಾಡೋಣ:—ನಿರೀಕ್ಷಣಶಕ್ತಿಯನ್ನು ಬಲಪಡಿಸುವದೂ ಸುತ್ತಲಿದ್ದ ಸೃಷ್ಟಿಯಜ್ಞಾನವನ್ನು ಮಾಡಿಕೊಳ್ಳುವ ಕುತೂಹಲವನ್ನುಂಟುಮಾಡುವದೂ ಶಿಕ್ಷಕನ ಮುಖ್ಯ ಉದ್ದೇಶವಿರುವದರಿಂದ ಅವನು ಹುಡುಗರನ್ನು ಮೇಲಿಂದಮೇಲೆ ಊರಲ್ಲಾಗಲಿ ಊರಹೊರಗಾಗಲಿ ಅಡ್ಡಾಡಲಿಕ್ಕೆ ಒಯ್ಯಬೇಕು. ಈ ಸಮಯದಲ್ಲಿ ಹಿಂದೆ ಹೇಳಿದ ಕಲ್ಪನೆಗಳನ್ನು ಪ್ರತ್ಯಕ್ಷವಾಗಿ ಉದಹರಿಸಲಿಕ್ಕೂ ಹುಡುಗರಿಗೆ ಪ್ರಶ್ನಮಾಡಿ ಅವರಲ್ಲಿ ಅವುಗಳನ್ನು ದೃಢಪಡಿಸಲಿಕ್ಕೂ ಹಲವು ಪ್ರಸಂಗಗಳು ದೊರೆಯುವವು. ಹುಡುಗರನ್ನು ಅಡ್ಡಾಡಲಿಕ್ಕೆ ಒಯ್ಯುವಾಗ ನಿಯಮಿತ ಉದ್ದೇಶದಿಂದ ಹೊರಡಬೇಕು. ಯಾವ ಸಂಗತಿಗಳ ಕಡೆಗೆ ಹುಡುಗರ ಲಕ್ಷವನ್ನು ತಿರುಗಿಸಬೇಕು? ಪ್ರತಿಯೊಂದು ಸಂಗತಿಯನ್ನು ನಿರೀಕ್ಷಿಸಲಿಕ್ಕೆ ಹಚ್ಚಿ ಅವುಗಳ ಜ್ಞಾನವನ್ನುಂಟುಮಾಡಲಿಕ್ಕೆ ಯಾವ ಪ್ರಶ್ನಗಳನ್ನು ಕೇಳಬೇಕು? ಯಾವ ದೃಷ್ಟಾಂತಗಳಿಂದ ಆ ಸಂಗತಿಗಳನ್ನು ಸ್ಪಷ್ಟೀಕರಿಸಬೇಕು? ಎಂಬದನ್ನು ಶಿಕ್ಷಕರು ಮುಂದಾಗಿಯೇ ಯೋಚಿಸಿಕೊಂಡಿರಬೇಕು. ಅಡ್ಡಾಡಲಿಕ್ಕೆ ಹೊರಡುವದಕ್ಕಿಂತ ಮೊದಲು ಸ್ವಲ್ಪ ಹೊತ್ತು ಹುಡುಗರ ಸಂಗಡ ಸಂಭಾಷಣೆಮಾಡಿ ಮುಂದೆ ನೋಡತಕ್ಕ ಸಂಗತಿಗಳ ಬಗ್ಗೆ ಅವರಲ್ಲಿ ಕುತೂಹಲವನ್ನುಂಟುಮಾಡಬೇಕು. ಅವರು ತನ್ನ ಸಂಗಡ ಬಂದಾಗ ಅವರಿಗೆ ಗೊತ್ತಿದ್ದದ್ದನ್ನು ಅನುಸರಿಸಿ ಯಾವ ಸಂಗತಿಗಳನ್ನು ಅವರು ನಿರೀಕ್ಷಿಸಬೇಕೆಂಬದನ್ನು ಅವರಿಗೆ ಮುಂದಾಗಿ ಹೇಳಬೇಕು. ಆದರೆ ಶಿಕ್ಷಕನು ತನಗೆ ಗೊತ್ತಿದ್ದನ್ನೆಲ್ಲವನ್ನು ಅವರಿಗೆ ಹೇಳಿ, ಅವರ ಕುತೂಹಲವನ್ನು ಅಣಗಿಸಬಾರದು. ಅವರಿಗೆ ತಿಳಿಯುವಂಥ ಸಂಗತಿಗಳನ್ನು ಮಾತ್ರ ಹೇಳಬೇಕು. ಅವರ ವಿಚಾರಶಕ್ತಿಯನ್ನು ಮೊ

ಕೆದಿದ್ದ ಸಂಗತಿಗಳ ಬಗ್ಗೆ ಮಾತ್ರ ಅವರನ್ನು ವಿಚಾರಮಾಡಲಿಕ್ಕೆ ಹೇಳಬೇಕು. ಹುಡುಗರು ಒಂದು ಹೊಸ ಸಂಗತಿಯನ್ನು ತಾವಾಗಿ ಕಂಡು ಹಿಡಿಯುವದರಿಂದ ಅವರ ಮನಸ್ಸಿನ ಮೇಲೆ ಆಗುವ ಒಳ್ಳೆಯ ಪರಿಣಾಮವನ್ನು ಕುರಿತು ಎಷ್ಟು ಹೇಳಿದರೂ ತೀರದು. ಹುಡುಗರ ಸಂಖ್ಯೆಯು ಹೆಚ್ಚಾಗುವಂತೆ ತೋರಿದರೆ, ಅವರನ್ನು ಹತ್ತು ಹತ್ತು ಹುಡುಗರ ಗುಂಪುಗಳಾಗಿ ವಿಭಾಗಿಸಿ ಒಂದೊಂದು ಗುಂಪನ್ನು ಒಬ್ಬೊಬ್ಬ ಮೇಲಿನ ಇಯತ್ತೆಯ ಹುಡುಗನ ವಶಕ್ಕೆ ಕೊಡಬೇಕು. ಅಡ್ಡಾಡಿ ತಿರುಗಿ ಬಂದ ಕೂಡಲೆ ಹುಡುಗರ ಕೂಡ ಸಂಭಾಷಣೆಮಾಡಿ, ಅವರು ನಿರೀಕ್ಷಿಸಿದ್ದನ್ನೆಲ್ಲ ಹೇಳಲಿಕ್ಕೆ ಹಚ್ಚಿ, ಕ್ರಮವಾಗಿ ಅದರ ಬಗ್ಗೆ ಜ್ಞಾನವನ್ನು ಮಾಡಿಕೊಡಬೇಕು. ಈ ಬಗೆಯ ಪುನರಾವರ್ತನೆಯಿಂದ ಒಳ್ಳೇ ಲಾಭವಾಗುವದೆಂದು ಕಂಡು ಬಂದಿದೆ.

ಈ ತರದ ಶಿಕ್ಷಣವನ್ನು ಕೊಡಲಿಕ್ಕೆ ಹಳ್ಳಿಯ ಸಾಲೆಯ ಮಾಸ್ತರರಿಗೆ ಹೆಚ್ಚು ಅನುಕೂಲವಿರುವದೆಂಬದು ನಿಜವೇ ಸರಿ. ಸುತ್ತಲು ಸೃಷ್ಟಿಯು ಅವರನ್ನು ಕರೆಯುವಂತೆ ಅಂದವಾಗಿ ಹಬ್ಬಿರುತ್ತದೆ. ಆದಾಗ್ಯೂ ಸೂಕ್ಷ್ಮ ವಿಚಾರಮಾಡಿ ನೋಡಿದರೆ, ಪಟ್ಟಣದ ಶಾಲೆಯ ಮಾಸ್ತರನಿಗೂ ವಿಷಯಗಳ ಪೂರೈಕೆಯು ಸಾಕಷ್ಟು ಇರುವದೆಂದು ಕಂಡುಬರುವದು. ತರತರದ ಇಮಾರತುಗಳೂ, ಅವುಗಳಲ್ಲಿ ಉಪಯೋಗಿಸಿರುವ ಬಗೆಬಗೆಯ ಸಾಮಾನುಗಳೂ ಬಗೆಬಗೆಯ ವ್ಯಾಪಾರದ ಜೀನಸುಗಳೂ, ಐತಿಹಾಸಿಕ ದೃಷ್ಟಿಯಿಂದ ಹೆಸರಾದ ಕಟ್ಟಡಗಳೂ, ಬೇರೆ ಬೇರೆ ಬೀದಿಗಳ ಹೆಸರುಗಳೂ, ಅವಲೋಕಿಸಿ ಬುದ್ಧಿಪೂರ್ವಕವಾಗಿ ವಿಚಾರಮಾಡಲಿಕ್ಕೆ ತಕ್ಕ ವಿಷಯಗಳಾಗಿರುತ್ತವೆ. ಆಕಾಶದಲ್ಲಿಯ ಮೋಡಗಳೂ, ಮಳೆಗಾಳಿಗಳೂ, ಹವೆಯ ಉಷ್ಣತೆಯೂ ಉಪಯುಕ್ತವಾದ ವಿಷಯಗಳಾಗಿರುತ್ತವೆ.

ಪಟ್ಟಣದಲ್ಲಿ ನೆಲದ ಏರಿಳತಗಳಿಂದಲೂ ಪ್ರವಾಹಗಳ ಗತಿಗಳಿಂದಲೂ ತಕ್ಕಮಟ್ಟಿಗೆ ಹೊಳೆಹಳ್ಳಗಳ ಜ್ಞಾನವನ್ನು ಮಾಡಿಕೊಡಬಹುದು. ಪಟ್ಟಣಗಳಲ್ಲಿರುವ ಉಪವನಗಳಿಗೆ ಹುಡುಗರನ್ನು ಒಯ್ದು ತರತರದ ವನಸ್ಪತಿಗಳ ಬಗ್ಗೆ ಅವರಿಗೆ ಜ್ಞಾನಮಾಡಿ ಕೊಡಬಹುದು. ಸಣ್ಣ ಸಣ್ಣ ಊರುಗಳಲ್ಲಂತೂ ಹತ್ತರದಲ್ಲಿರುವ ಮರಡಿಗಳಿಗೂ ದಿನ್ನೆಗಳಿಗೂ ಹುಡುಗರನ್ನು ಕರಕೊಂಡು ಹೋಗಿ ಸೃಷ್ಟಿಯ ಬಗ್ಗೆ ಪ್ರತ್ಯಕ್ಷವಾಗಿ ಜ್ಞಾನಮಾಡಿ ಕೊಡಬಹುದು.

ಹುಡುಗರನ್ನು ಅಡ್ಡಾಡಲಿಕ್ಕೆ ಒಯ್ದಾಗ ನಿರೀಕ್ಷಿಸಲಿಕ್ಕೆ ಹಚ್ಚತಕ್ಕ ಮುಖ್ಯ ಸಂಗತಿಗಳನ್ನು ಕೆಳಗೆ ಕೊಟ್ಟಿರುತ್ತೇವೆ:-

(೧) ಗುಡ್ಡ, ಮರಡಿ, ಶಿಖರ, ಕೊಳ್ಳ, ಬೈಲು, ಉಸುಕಿನ ಭೂಮಿ, ಕಾಲುವೆ, ಸರೋವರ, ಹಳ್ಳ, ಹೊಳೆ, ಸಂಗಮ, ದ್ವೀಪ ಮೊದಲಾದ ಸಂಜ್ಞೆಗಳನ್ನು ಸೂಚಿಸುವ ವಸ್ತುಗಳು.

(೨) ಹೊಳೆಗಳ ಬಗ್ಗೆ ತಿಳಿಸಬಹುದಾದ ಸಂಗತಿಗಳು:—

(ಅ) ಹೊಳೆಯು ಎತ್ತರವಾದ ಪ್ರದೇಶದಿಂದ ಬೈಲು ಭೂಮಿಯ ಕಡೆಗೆ ಹರಿಯುತ್ತದೆ.

(ಬ) ಹೊಳೆಗಳು ಎತ್ತರವಾದ ಪ್ರದೇಶದಲ್ಲಿ ಗುಡ್ಡಗಳಲ್ಲಿ ಉಗಮವಾಗುತ್ತವೆ.

(ಕ) ಮಳೆಯನೀರು ನದಿಗೆ ಹರಿದು ಬರುವಾಗಲೂ, ನದಿಯು ತುಂಬಿ ಬಂದು ದಂಡೆಯಮೇಲೆ ಹರಿಯುವಾಗಲೂ ಕೂಡುವ ಸೂಸುಮಣ್ಣಿನಿಂದ ನದಿಯ ದಂಡೆಯ ಪ್ರದೇಶವು ಬೆಳೆಯುಳ್ಳದ್ದಾಗುತ್ತದೆ.

(ಡ) ಕಾಲುವೆಗಳನ್ನು ಕಡಿದು ಹೊಲಗಳಿಗೆ ನೀರನ್ನು ಹಾಯಿಸಿ ಕೊಳ್ಳಲಿಕ್ಕೆ ಹೊಳೆಗಳ ಉಪಯೋಗವಾಗುತ್ತದೆ.

(೩) ಭೂಮಿಯ ಪೃಷ್ಠಭಾಗದ ರಚನೆಯು:—ಇದನ್ನು ನಿರೀಕ್ಷಿಸಲಿಕ್ಕೆ ಹಚ್ಚುವದಾದರೆ ಹುಡುಗರನ್ನು ಹೊಂಡವನ್ನಾಗಲಿ ಬಾವಿಯನ್ನಾಗಲಿ ಕಡಿಯುತ್ತಿರುವ ಸ್ಥಳಕ್ಕೆ ಒಯ್ಯಬೇಕು. ಗುಡ್ಡದ ಬದಿಯಲ್ಲಿ ಕೊರಕಲುಗಳಿದ್ದ ಸ್ಥಳಕ್ಕೆ ಒಯ್ಯುವದು ಮೇಲಾದದ್ದು. ಅಲ್ಲಿ ಮೊದಲು ಮೇಲ್ಗಡೆಯಲ್ಲಿ ಮಣ್ಣಿನ ತರವಿರುವದೆಂದೂ, ಅದರ ಕೆಳಗೆ ಗರಸು ಭೂಮಿಯಿರುವದೆಂದೂ, ಅದಕ್ಕೂ ಕೆಳಗೆ ಮಟ್ಟಿಯ ತರಗಳಾಗಲಿ ಕಲ್ಲಿನ ತರಗಳಾಗಲಿ ಹತ್ತುವವೆಂದೂ ಹುಡುಗರು ಮನಗಾಣುವರು. ಇಂಥ ಎರಡು ಮೂರು ಸ್ಥಳಗಳನ್ನು ನೋಡಹಚ್ಚಿದರೆ ಭೂಮಿಯ ಪೃಷ್ಠಭಾಗವು ಬಹುಶಃ ಇಂಥ ತರಗಳಿಂದಲೇ ಉಂಟಾಗಿರುವದೆಂದು ಅವರಿಗೆ ಮನವರಿಕೆಯಾಗುವದು.

(೪) ಮಳೆಗಾಲದಲ್ಲಿ ಇಂಥ ಸ್ಥಳಗಳಿಗೆ ಅವರನ್ನು ಒಯ್ದು, ಸೆಲೆಗಳು ಹುಟ್ಟುವ ಕ್ರಮವನ್ನು ಅವರಿಗೆ ಪ್ರತ್ಯಕ್ಷವಾಗಿ ತೋರಿಸಬಹುದು. ಪ್ರಯೋಗಗಳನ್ನು ಮಾಡಿತೋರಿಸಿ ಕಲಿಸುವದಕ್ಕಿಂತ ಸೃಷ್ಟಿಯನ್ನು ಪ್ರತ್ಯ

ಕ್ಷವಾಗಿ ನಿರೀಕ್ಷಣ ಮಾಡಲಿಕ್ಕೆ ಹಚ್ಚಿ ಅವರಿಗೆ ಜ್ಞಾನವನ್ನುಂಟುಮಾಡಿದರೆ ಮೇಲಾದ ಪರಿಣಾಮವಾಗದಿರದು. ಸಮೀಪದಲ್ಲಿ ಉಗಬಂಡಿಯ ಲೈನಮಾರ್ಗವು ಗುಡ್ಡದೊಳಗಿಂದ ಹಾಯ್ದಿದ್ದರೆ, ಭೂಮಿಯ ರಚನೆಯನ್ನೂ ಸೆಲೆಗಳು ಕಲ್ಲಿನ ತರಗಳಲ್ಲಿ ಹಾಯುವ ಮಾರ್ಗಗಳನ್ನೂ ಅವರಿಗೆ ಮನವರಿಕೆಯಾಗುವಂತೆ ತೋರಿಸಬಹುದು.

(೫) ಗುಡ್ಡಗಳ ಮೇಲ್ಭಾಗವು ಕರಗಿ ಮಣ್ಣಾಗುವದು. ಬೇಕಾದ ಒಂದು ಸಣ್ಣ ಗುಡ್ಡಕ್ಕೆ ಹುಡುಗರನ್ನು ಒಯ್ದು ಇದನ್ನು ಪ್ರತ್ಯಕ್ಷವಾಗಿ ತೋರಿಸಬಹುದು. ಮಳೆಗಾಲದಲ್ಲಿ ಅವರನ್ನು ಒಯ್ಯುವದು ಮೇಲಾದದ್ದು. ಸುತ್ತಲು ಹಬ್ಬಿರುವ ಬೈಲು ಪ್ರದೇಶದ ಬೆಳೆಯು ಈ ಹೊಸ ಮಣ್ಣನ್ನು ಅವಲಂಬಿಸಿರುವದೆಂಬದನ್ನು ಅವರು ಕಂಡು ಹಿಡಿಯಬಹುದು.

(೬) ಗುಡ್ಡದಿಂದ ನೋಡಿದರೆ ಸುತ್ತಲು ಕಾಣುವ ನೋಟ. ಇದರಿಂದ ಹುಡುಗರಿಗೆ ಗುಡ್ಡ, ಕೊಳ್ಳ, ಬೈಲು, ಗುಡ್ಡಗಾಡು ಪ್ರದೇಶದ ನಿಜವಾದ ಸ್ವರೂಪ ಇವುಗಳ ಬಗ್ಗೆ ಬಹಳ ಉಪಯುಕ್ತವಾದ ಜ್ಞಾನವಾಗುವದು ಭೂಗೋಲದಲ್ಲಿ ಗುಡ್ಡದ ಸಾಲಿನ ಭೂಮಿ ಎಂಬ ಪ್ರದೇಶದ ಬಗ್ಗೆ ಓದಿದರೆ ಅಲ್ಲಿ ಒಕ್ಕಲತನವು ಸಾಗಲಾರದೆಂದು ಹುಡುಗರ ಕಲ್ಪನೆಯಾಗುವದು ಆದರೆ, ಎರಡು ಗುಡ್ಡಗಳ ನಡುವಿರುವ ಹರವಾದ ಕೆಲವು ಬೈಲುಗಳು ಬಹಳ ಬೆಳೆಯುಳ್ಳವಿರುತ್ತವೆ.

(೭) ಎತ್ತರವಾದ ಪ್ರದೇಶಗಳ ಕಡೆಗೆ ಹೋದಂತೆ ಹವೆಯಲ್ಲಾಗುವ ವ್ಯತ್ಯಾಸಗಳು.

(೮) ಭೂಮಿಯ ಮುಖ್ಯ ಪ್ರಕಾರಗಳು:—ಕೆಂಪು ಮಣ್ಣಿನ ಭೂಮಿ, ಕಪ್ಪು ಮಣ್ಣಿನ ಭೂಮಿ, ಗರಸುಭೂಮಿ ಇತ್ಯಾದಿ. ಗುಡ್ಡಗಳ ಅಂಚಿಗಿರುವ ಭೂಮಿಗೆ ಹುಡುಗರನ್ನು ಒಯ್ದರೆ, ಆ ಭೂಮಿಯ ಪ್ರಕಾರವು ಅದರ ಮೇಲ್ಭಾಗದಲ್ಲಿಯೂ ಕೆಲವು ಕಡೆಗಳಲ್ಲಿ ಅದರ ಸುತ್ತಲೂ ಇರುವ ಕಲ್ಲುಗಳನ್ನು ಅವಲಂಬಿಸಿರುವದೆಂದು ಹುಡುಗರು ಮನಗಾಣುವರು.

(೯) ಸುತ್ತಲಿರುವ ಪ್ರದೇಶಗಳಲ್ಲಿ ಬೆಳೆಯುವ ಪೈರುಗಳೂ ಗಿಡಗಳೂ, ಅಲ್ಲಿ ದೊರೆಯುವ ವನಸ್ಪತಿಗಳೂ. ಆಯಾ ಪ್ರದೇಶಗಳಲ್ಲಿ ಆಯಾ ಪೈರುಗಳನ್ನು ಬೆಳಸಲಿಕ್ಕೆ ಕಾರಣಗಳು. ಬೆಳೆಸುಗಳ ಋತುಗಳು ಇತ್ಯಾದಿ.

(೧೦) ಎಕರೆ, ಚೌರಸಮೈಲು ಮೊದಲಾದ ಶಬ್ದಗಳಿಂದ ಸೂಚಿತವಾಗುವ ಕ್ಷೇತ್ರಗಳು.

(೧೧) ಊರಲ್ಲಿಯೂ ಊರನೆರೆಯಲ್ಲಿಯೂ ಇರುವ ನೋಡತಕ್ಕಂಥ ಮುಖ್ಯ ಸ್ಥಳಗಳು ಗುಡಿಗಳು, ಹಳೇ ಕಟ್ಟಡಗಳು, ಕೋಟೆಗಳು, ಕೆರೆಗಳು ಇತ್ಯಾದಿ. ಇವುಗಳಿಗೆ ಹೋದ ಸಮಯದಲ್ಲಿ ಸಂಕ್ಷಿಪ್ತವಾಗಿ ಮನೋರಂಜಕವಾಗುವಂತೆ ಇವುಗಳ ಇತಿಹಾಸವನ್ನಾದರೂ ಹೇಳಬಹುದು.

(೧೨) ಒಕ್ಕಲಿಗ, ಬಡಿಗ, ಉಪ್ಪಾರ, ಕುಂಬಾರ, ಕಮ್ಮಾರ ಮೊದಲಾದವರ ಕೆಲಸಗಳು. ಶಕ್ಯವಿದ್ದರೆ ಗಿರಣಿಗಳೂ ಕಾರಖಾನೆಗಳೂ.

(೧೩) ಜಾತ್ರೆಗಳು ಸಂತೆಗಳು. ಇವುಗಳಿಂದ ವ್ಯಾಪಾರಕ್ಕೂ ಜನರ ಬಾಳುಬಳಿಕೆಗೂ ಆಗುವ ಉಪಯೋಗ.

(೧೪) ಸರಕಾರದ ಕಚೇರಿಗಳು, ಅಧಿಕಾರಸ್ಥರು, ಅವರು ಕೆಲಸ ನೋಡುವದರಿಂದ ಎಲ್ಲರಿಗೂ ಆಗುವ ಉಪಯೋಗ ಇತ್ಯಾದಿ.

(೧೫) ಹಗಲು ರಾತ್ರಿಗಳ ಬೇರೆ ಬೇರೆ ಪ್ರಹರಗಳಲ್ಲಿ ಉಷ್ಣತೆಯಲ್ಲುಂಟಾಗುವ ಹೆಚ್ಚು ಕಡಿಮೆಗಳು.

೧೬ ಹಲವು ತರದ ಮೋಡಗಳು. ಮೋಡಗಳಿಂದ ಹವೆಯ ಮೇಲಾಗುವ ಪರಿಣಾಮಗಳು.

(೧೭) ಬೇರೆ ಬೇರೆ ಋತುಗಳಲ್ಲಿ ಹವೆಯಲ್ಲುಂಟಾಗುವ ವ್ಯತ್ಯಾಸಗಳು.

(೧೮) ಮಳೆಗಳನ್ನು ತರುವ ಗಾಳಿಗಳು. ಅವು ಬೀಸುವ ದಿಕ್ಕುಗಳು. ಮೊದಲು ಎರಡು ಮೂರು ತಿಂಗಳುಗಳ ವರೆಗೆ ಪಶ್ಚಿಮದ ಕಡೆಯಿಂದ ಮಳೆಯು ಬರುವದು. ಆ ಮೇಲೆ ಪೂರ್ವದಿಂದ ಬರುವದು.

ಹವೆ ಹಾಗೂ ಮೋಡಗಳ ಬಗ್ಗೆ ಹುಡುಗರಿಂದ ವಾರಕ್ಕೆ ಒಮ್ಮೆಯಾದರೂ ನಿರೀಕ್ಷಣ ಮಾಡಿಸಬೇಕು. ತಿರುಗಾಡಿ ಬಂದನಂತರ ಹುಡುಗರು ಅಲ್ಲಿ ನಿರೀಕ್ಷಿಸಿದ ಯಾವದಾದರೊಂದು ಪದಾರ್ಥದ ಪ್ರತಿಮೆಯನ್ನು ಮಾಡಬೇಕು. ಇದರಿಂದ ಅವರ ನಿರೀಕ್ಷಣಶಕ್ತಿಯು ಬಲಪಡುವದು. ಅವರಲ್ಲಿ ಚಟುವಟಿಕೆಯು ಹೆಚ್ಚಾಗುವದು. ಯಥಾರ್ಥಜ್ಞಾನಕ್ಕೂ ಸಹಾಯವಾಗುವದು. ಸೃಷ್ಟಿಯ ಅವಲೋಕನದಿಂದ ಗೊತ್ತಾದ ಸಂಗತಿಗಳನ್ನೂ

ತಿರುಗಾಡಿ ಕಲಿತ ಸಂಗತಿಗಳನ್ನೂ ಶಿಕ್ಷಕನು ಹುಡುಗರಿಂದ ಹೊರಡಿಸಿ, ಎಲ್ಲರಿಗೂ ಕಾಣುವಂಥ ಸ್ಥಳದಲ್ಲಿ ಟಿಪ್ಪಣಿ ಮಾಡಿಡಬೇಕು. ಇದರಲ್ಲಿಯೇ ಊರಿನ ಜನಸಂಖ್ಯೆಯನ್ನೂ ವಸೂಲನ್ನೂ ಇತರ ಸಂಗತಿಗಳನ್ನೂ ದೊರಕಿಸಿ ಬರೆದಿಡಬಹುದು. ಶಾಲೆಯ ಮನೆಯ ನಕಾಶವನ್ನೂ ಊರಿನ ನಕಾಶವನ್ನೂ ಶಿಕ್ಷಕನು ತಾನಾಗಿ ತೆಗೆದು ಹುಡುಗರು ಸುಲಭವಾಗಿ ನೋಡಿಕೊಳ್ಳುವಂತೆ ಗೋಡೆಗೆ ತೂಗ ಹಾಕಬೇಕು. ಹಾಗೂ ಹೊತ್ತು ಬಂದಂತೆ ಇವೆಲ್ಲ ಸಂಗತಿಗಳ ಉಪಯೋಗವನ್ನು ಶಿಕ್ಷಕನು ಮಾಡಿಕೊಳ್ಳಬೇಕು

ನಕಾಶೆಗಳು:—ಮೇಲೆ ವಿವರಿಸಿದ ಬಗೆಯ ಶಿಕ್ಷಣವು ನಡೆದಿರುವಾಗ ಶಿಕ್ಷಕನು ಪ್ಲ್ಯಾನ ಹಾಗೂ ನಕಾಶ ಇವುಗಳ ಭೇದವನ್ನೂ ಅವುಗಳನ್ನು ಸ್ಥೂಲಮಾನದಿಂದ ತೆಗೆಯುವ ಕ್ರಮವನ್ನೂ ಹುಡುಗರಿಗೆ ಕಲಿಸತಕ್ಕದ್ದು. ಹುಡುಗರು ಮೇಲಿನ ಇಯತ್ತೆಗಳಲ್ಲಿ ಇಡೀ ಭೂಮಂಡಲದ ಭೂಗೋಲವನ್ನು ನಕಾಶಗಳ ಸಹಾಯದಿಂದಲೇ ಅಭ್ಯಾಸಿಸಬೇಕಾಗಿರುವದರಿಂದ ಇವುಗಳ ಮಹತ್ವವನ್ನು ಕುರಿತು ಎಷ್ಟು ಹೇಳಿದರೂ ತೀರದು. ಅದ್ದರಿಂದ ಆರಂಭದಲ್ಲಿಯೇ ಇವುಗಳನ್ನು ತಿಳಿದುಕೊಳ್ಳಲಿಕ್ಕೂ ಸ್ಥೂಲಮಾನದಿಂದ ರಚಿಸಲಿಕ್ಕೂ ಹುಡುಗರಿಗೆ ಕಲಿಸುವದು ಅತ್ಯವಶ್ಯವಾದದ್ದು. ಶಿಕ್ಷಕನು ಮೊದಲು ಸ್ಕೇಲನ್ನು ಉಪಯೋಗಿಸದೆ ವರ್ಗದ ಕೋಣೆಯ ಪ್ಲ್ಯಾನವನ್ನು ಕರೇಹಲಿಗೆಯ ಮೇಲೆ ತೆಗೆಯಬೇಕು; ಹಾಗೂ ವರ್ಗದಲ್ಲಿರುವ ಮೇಜು ಮೊದಲಾದ ಸಾಮಾನುಗಳನ್ನು ಸರಿಸಿಟ್ಟು ಮತ್ತೆ ಪ್ಲ್ಯಾನಗಳನ್ನು ತೆಗೆಯಬೇಕು; ಆ ಮೇಲೆ ಹುಡುಗರಿಂದ ತೆಗೆಯ ಹಚ್ಚಬೇಕು. ಆ ಮೇಲೆ ಮಾಸ್ತರನು ಶಾಲೆಯ ಸುತ್ತಲಿದ್ದ ಭಾಗಗಳ ನಕಾಶವನ್ನು ತೆಗೆದು ಓಣಿಗಳನ್ನೂ ಮುಖ್ಯ ಇಮಾರತುಗಳನ್ನೂ ಅದರಲ್ಲಿ ತೋರಿಸಬೇಕು. ಪ್ಲ್ಯಾನದ ಅರ್ಥವೂ ಅದು ಸೂಚಿಸುವ ಸಂಗತಿಗಳೂ ಹುಡುಗರ ಲಕ್ಷ್ಯದಲ್ಲಿ ಬಂದನಂತರ ಸ್ಕೇಲಿನ ಅವಶ್ಯಕತೆಯನ್ನು ತೋರಿಸಿ ಕೊಡಬೇಕು. ಬೇರೆ ಬೇರೆ ಸ್ಕೇಲಿನ ಪ್ರಕಾರ ಬೇರೆ ಬೇರೆ ಉದ್ದಳತೆಯ ಗೆರೆಗಳನ್ನು ಹುಡುಗರಿಂದ ತೆಗಿಸಬೇಕು. ಇಷ್ಟಾದ ಬಳಿಕ ಬೇರೆ ಬೇರೆ ಸ್ಕೇಲನ್ನು ಹಿಡಿಯ ಹೇಳಿ, ಹುಡುಗರಿಂದ ಆಗಾಗ ಶಾಲೆಯ ಮನೆಯ ನಕಾಶವನ್ನೂ ಶಾಲೆಯ ಸುತ್ತಲಿದ್ದ ಸ್ಥಳದ ನಕಾಶವನ್ನೂ ಅವರ ಮನೆಯ ನಕಾಶವನ್ನೂ ತೆಗಿಸತಕ್ಕದ್ದು. ಆ ಮೇಲೆ ಹುಡುಗರಿಗೆ ಊರಿನ ನಕಾಶವನ್ನು ತೋರಿಸತಕ್ಕದ್ದು.

ಹಾಗೂ ಅದರಲ್ಲಿ ತೋರಿಸಿರುವ ಅವರ ಮನೆಗಳನ್ನೂ ಬೇರೆ ಹಲವು ಸ್ಥಳಗಳನ್ನೂ ಕೆರೆ-ಹಳ್ಳಗಳನ್ನೂ ಇತರ ಸ್ಥಳಗಳನ್ನು ಗೊತ್ತು ಹಿಡಿಯಲಿಕ್ಕೆ ಹಚಬೇಕು. ಅವುಗಳೊಳಗಿನ ಅಂತರವನ್ನು ಕೆಳಗೆ ಕೊಟ್ಟ ಅಳತೆಯ ಮೇರೆಗೆ ನಿರ್ಣಯಿಸಲಿಕ್ಕೆ ಹಚ್ಚಬೇಕು. ನಕಾಶದ ನಿಜವಾದ ಅರ್ಥವು ಅವರಿಗೆ ಗೊತ್ತಾಗಿ, ಅದರಲ್ಲಿ ಉಪಯೋಗಿಸಿರುವ ಸಂಜ್ಞೆಗಳ ಜ್ಞಾನವೂ ಹೊಸ ನಕಾಶಗಳನ್ನು ರಚಿಸುವ ಕ್ರಮದ ಜ್ಞಾನವೂ ಅವರಿಗೆ ಆಗುವವರೆಗೆ ಈ ಬಗ್ಗೆ ಮೇಲಿಂದ ಮೇಲೆ ಶಿಕ್ಷಣವನ್ನು ಕೊಡತಕ್ಕದ್ದು. ಯಾಕೆಂದರೆ, ಕೆಲವು ಹುಡುಗರಿಗೆ ಈ ತರದ ಜ್ಞಾನವು ಸುಲಭವಾಗಿ ಆಗುವದಿಲ್ಲ.

ಊನ ಭಾಗಗೇಳು:—ಈ ಮೇರೆಗೆ ಪೂರ್ವಸಿದ್ಧತೆಯನ್ನು ಮಾಡಿದ ಬಳಿಕ ಹುಡುಗರಿಗೆ ತಮ್ಮ ಊರಿಗೆ ಸಂಬಂಧಿಸಿದ ಕೆಳಗೆ ಬರೆದ ಸಂಗತಿಗಳ ಬಗ್ಗೆ ಕ್ರಮವಾದ ಜ್ಞಾನವನ್ನು ಮಾಡಿಕೊಡುವ ಉದ್ದೇಶದಿಂದ ಊರಿನ ಭೂಗೋಲವನ್ನು ಹೇಳಲಿಕ್ಕೆ ಆರಂಭಿಸಬಹುದು:—

(೧) ಮೇರೆ ಹಾಗೂ ಕ್ಷೇತ್ರಫಲ.

(೨) ಸ್ವಾಭಾವಿಕ ರಚನೆ:—ತಗ್ಗುದಿನ್ನೆಗಳು, ಬೈಲುಗಳು.

(೩) ಹತ್ತರದಲ್ಲಿರುವ ಮರಡಿಗಳೂ ಗುಡ್ಡಗಳೂ. ಅವುಗಳ ಹೆಸರುಗಳನ್ನೂ ಅಜಮಾಸಿನ ಮೇಲೆ ಅವುಗಳ ಎತ್ತರಗಳನ್ನೂ ಕಲಿಸತಕ್ಕದ್ದು.

(೪) ನೀರಿನ ಪೂರೈಕೆಯ ಸಾಧನಗಳು:—ಬಾವಿ, ಕೆರೆ, ಕಾಲುವೆ, ನದಿಗಳು ಇತ್ಯಾದಿ.

(೫) ಮಳೆ:—ಮಳೆಯನ್ನು ಅಳೆಯುವ ಯಂತ್ರವನ್ನು ಹುಡುಗರಿಗೆ ತೋರಿಸಿ, ಮಳೆಯನ್ನು ಇಷ್ಟು ಇಂಚು ಇಷ್ಟು ಸೆಂಟುಗಳು, ಎಂದು ಹೇಳುವ ವಾಡಿಕೆ ಇದೆಯೆಂದು ಅವರಿಗೆ ತಿಳಿಸಿ ಕೊಡಬೇಕು. ಇಲ್ಲವೆ ಈ ಬಗೆಯ ಯಾವದಾದರೊಂದು ಸುಲಭ ಸಾಧನದ ಸಹಾಯದಿಂದ ಇದನ್ನು ಕಲಿಸತಕ್ಕದ್ದು.

(೬) ಹವೆ:—ಬೇರೆ ಬೇರೆ ಋತುಗಳಲ್ಲಿ ಉಂಟಾಗುವ ವ್ಯತ್ಯಾಸಗಳು.

(೭) ಉಪಯೋಗಕ್ಕೆ ಬರುವಂಥ ಮುಖ್ಯವಾದ ಗಿಡಗಳೂ, ಪೈರುಗಳೂ ಪ್ರಾಣಿಗಳೂ. ಅವುಗಳಿಂದ ಊರಿನ ಜನರಿಗಾಗುವ ಉಪಯೋಗವು

ಮುಖ್ಯವಾದ ಪೈರುಗಳನ್ನು ಬೆಳೆಸಲಿಕ್ಕೆ ಅನುಕೂಲವಾದ ಸಗಳು.

(೮) ಜನರ ಮುಖ್ಯ ಉದ್ಯೋಗಗಳು. ಇದ್ದರೆ, ಕಾರಖಾನೆಗಳು, ಗಿರಣಿಗಳು ಇತ್ಯಾದಿ.

(೯) ಊರೊಳಗಿಂದಲೂ ಊರ ಸಮೀಪದಿಂದಲೂ ಹಾಯುವ ಮುಖ್ಯ ಮಾರ್ಗಗಳು ಹಾಗೂ ಅವುಗಳಿಂದ ಊರಿಗಾಗುವ ಉಪಯೋಗ.

(೧೦) ಆಮದ ಹಾಗೂ ರಫ್ತಿನ ಸರಕುಗಳು. ಮ್ಯುನಿಸಿಪಾಲಿಟಿ ಇರುವ ಊರಿನಲ್ಲಿ ಅದರ ವಾರ್ಷಿಕರಿಪೋರ್ಟನಿಂದ ಈ ಬಗ್ಗೆ ಹೇಳಬಹುದು.

(೧೧) ಜನಸಂಖ್ಯೆಯೂ, ಜನರೂ, ಜನರ ಸ್ಥಿತಿಗತಿಗಳೂ.

(೧೨) ಊರಲ್ಲಿರುವ ಹಾಗೂ ಊರಿಗೆ ಬರುವ ಮುಖ್ಯ ಸರಕಾರದ ಅಧಿಕಾರಸ್ಥರು, ಅವರ ಕೆಲಸಗಳು. ಮ್ಯುನಿಸಿಪಾಲಿಟಿಯಿದ್ದರೆ ಅದರ ರಚನೆ, ಅದು ಮಾಡುವ ಕಾರ್ಯಗಳು

(೧೩) ವಸೂಲು ಹಾಗೂ ವಸೂಲಿನ ಬಾಬುಗಳು.

(೧೪) ಊರೊಳಗಿನ ಇಲ್ಲವೆ ಊರ ಹತ್ತಿರದಲ್ಲಿರುವ ನೋಡತಕ್ಕಂಥ ಸ್ಥಳಗಳು, ದೇವಸ್ಥಾನಗಳು, ಹಳೇಕಟ್ಟಡಗಳು ಇತ್ಯಾದಿ.

(೧೫) ಊರಿನ ಇತಿಹಾಸವು. ಸುಲಭವಾಗಿಯೂ ಮನೋರಂಜಕವಾಗುವಂತೆಯೂ ಇದ್ದರೆ ಮಾತ್ರ ಹೇಳಬಹುದು.

ತಾಲೂಕಿನ ಭೂಗೋಲವು. ಊರಿನ ಭೂಗೋಲವನ್ನು ಕಲಿಸಿದಂತೆಯೇ ತಾಲೂಕಿನ ಭೂಗೋಲವನ್ನಾದರೂ ಕಲಿಸತಕ್ಕದ್ದೆಂದು ಹೇಳಬಹುದು. ಆದರೆ ಇಲ್ಲಿ ಹೆಚ್ಚು ದೊಡ್ಡದಾದ ಪ್ರದೇಶದ ಭೂಗೋಲವನ್ನು ಅಭ್ಯಾಸಿಸುವದಿರುವದರಿಂದ ಕೆಲವು ವ್ಯಾಪಕ ಸಂಗತಿಗಳ ಬಗ್ಗೆ ಹೇಳುವದಿರುತ್ತದೆ. ಇದನ್ನು ಪ್ರತ್ಯಕ್ಷ ದರ್ಶನದಿಂದ ಕಲಿಸುವದು ಅಸಾಧ್ಯವಾಗಿರುವದರಿಂದ ನಕಾಶ ಹಾಗೂ ಪ್ರತಿಮೆಗಳ ಉಪಯೋಗವನ್ನು ಧಾರಾಳವಾಗಿ ಮಾಡಬೇಕಾಗುವದು. ಇದಲ್ಲದೆ, ತಮ್ಮ ಊರಿನ ಭೂಗೋಲದ ಜ್ಞಾನವು ಹುಡುಗರಿಗೆ ಚನ್ನಾಗಿ ಆಗಿರುವದರಿಂದ ಎಲ್ಲ ಸಂಗತಿಗಳನ್ನು ಅವರಿಗೆ ಗೊತ್ತಿದ್ದ ಸಂಗತಿಗಳಿಗೆ ತುಲನೆ ಮಾಡಿ ಹೇಳುವದು ಒಳ್ಳೇದು. ಇದರಿಂದ ಯಥಾರ್ಥ ಜ್ಞಾನವಾಗುವದು; ಮನೋರಂಜನವಾಗುವದು ಹಾಗೂ ಬೋಧದ ಫಲವಾದರೂ ತೀವ್ರವಾಗಿ ತೋರುವದು. ಗೊತ್ತಿದ್ದದ

ರಿಂದ ಗೊತ್ತಿಲ್ಲದ್ದರ ಕಡೆಗೆ ಹೋಗಬೇಕೆಂಬ ಶಿಕ್ಷಣಶಾಸ್ತ್ರದ ನಿಯಮವ ನ್ನು ಈ ವಿಷಯದಲ್ಲಿ, ಮುಖ್ಯವಾಗಿ ಈ ಸಮಯದಲ್ಲಿ, ಮರೆಯಲಾಗದು.

ಶಿಕ್ಷಕನು ತಯಾರುಮಾಡಿದ ತಾಲೂಕಿನ ಮಾದರಿಯನ್ನು ಹುಡುಗರ ಮುಂದಿಟ್ಟು ಅವರ ಊರನ್ನು ಆವರಿಗೆ ಅದರಲ್ಲಿ ತೋರಿಸಬೇಕು. ಆ ಮೇ ಲೆ ಅದೇ ಮಾದರಿಯನ್ನು ಅವಲೋಕಿಸ ಹೇಳಿ, ತಾಲೂಕಿನ ಉದ್ದಳತೆ, ಕ್ಷೇತ್ರಫಲ ಮೊದಲಾದವುಗಳನ್ನು ಅವರಿಂದ ತೆಗೆಯಲಿಕ್ಕೆ ಹಚ್ಚಿ, ಪ್ರಶ್ನೆಗ ಳ ದ್ವಾರದಿಂದ ತಾಲೂಕಿನ ಸ್ವಾಭಾವಿಕ ರಚನೆಯ ಬಗ್ಗೆ ಜ್ಞಾನ ಮಾಡಿ ಕೊಡಬೇಕು.

ಬಳಿಕ, ತಾಲೂಕಿನ ನಕಾಶವನ್ನು ಹುಡುಗರಿಗೆ ತೋರಿಸಬೇಕು. ಹಾಗೂ ಅವರು ಮಾದರಿಯಲ್ಲಿ ನೋಡಿದ ಸಂಗತಿಗಳನ್ನು ನಕಾಶದಲ್ಲಿ ಕಂ ಡು ಹಿಡಿಯಲಿಕ್ಕೆ ಹಚ್ಚಬೇಕು. ಹೀಗೆ ಮಾಡುವದರಿಂದ ಅವರಿಗೆ ನಕಾಶ ಗಳಲ್ಲಿ ಉಪಯೋಗಿಸಿದ ಚಿಹ್ನಗಳ ಜ್ಞಾನವು ಆಗುವದು.

ಈ ನಕಾಶದ ಸಹಾಯದಿಂದಲೇ ಗುಡ್ಡಗಳು, ಹೊಳೆಹಳ್ಳಗಳು ಅವುಗಳ ಹೆಸರುಗಳು, ಉದ್ದಳತೆ, ಎತ್ತರಗಳು ಇತ್ಯಾದಿ ಸಂಗತಿಗಳ ಬಗ್ಗೆ ಜ್ಞಾನ ಮಾಡಿಕೊಡಬೇಕು.

ತಾಲೂಕು ಸಮುದ್ರದ ದಂಡೆಗಿದ್ದರೆ, ಅವರಿಗೆ ನಡುಗಡ್ಡೆಗಳನ್ನೂ ಸಮುದ್ರದ ಒತ್ತುಗಳನ್ನೂ ಕೊಲ್ಲಿಗಳನ್ನೂ ಕಲಿಸಬೇಕು.

ನಕಾಶಗಳನ್ನು ತೆಗೆಯುವದಕ್ಕೂ ಮಾದರಿಗಳನ್ನು ಮಾಡುವದ ಕ್ಕೂ ಈ ಸಮಯದಲ್ಲಿ ಅವರಿಗೆ ಬೇಕಾದಷ್ಟು ಅಭ್ಯಾಸವನ್ನು ಕೊಡ ಬೇಕು.

ತಾಲೂಕಿನಲ್ಲಿ ಬೇರೆ ಬೇರೆ ಎತ್ತರಗಳಲ್ಲಿರುವ ಸ್ಥಳಗಳ ಹವೆಯ ಲ್ಲುಂಟಾಗುವ ಹೆಚ್ಚು-ಕಡಿಮೆಗಳನ್ನು ಸಕಾರಣವಾಗಿ ಅವರಿಗೆ ಹೇಳ ತಕ್ಕದ್ದು.

ಮಳೆಯು ಬರುವ ದಿಕ್ಕಿಗೆ ವಿರುದ್ಧವಾದ ದಿಕ್ಕಿಗಿರುವ ಪ್ರದೇಶಗಳಲ್ಲಿ ಅಷ್ಟು ಮಳೆಯಾಗುವದಿಲ್ಲ; ಪ್ರದೇಶವು ಹೆಚ್ಚು ಎತ್ತರವಿದ್ದಂತೆ ಅಲ್ಲಿ ಮಳೆ ಸುರಿಯುವದು ಹೆಚ್ಚು; ಇವೇ ಮೊದಲಾದ ಸಂಗತಿಗಳನ್ನು ತಾಲೂಕಿನಲ್ಲಿ ರುವ ಕೆಲವು ಸ್ಥಳಗಳಲ್ಲಿ ಬೀಳುವ ಮಳೆಯಮಾನದಿಂದ ಉದಾಹರಿಸಿ ಹು ಡುಗರಿಗೆ ತಿಳಿಸಿಕೊಡಬೇಕು. ಈ ಸಾಮಾನ್ಯ ಸಿದ್ಧಾಂತಗಳ ಜ್ಞಾನವಾದ

ತರುವಾಯ ತಮ್ಮ ಊರಿನ ಮಳೆಯಮಾನವನ್ನು ಲಕ್ಷ್ಯದಲ್ಲಿಟ್ಟುಕೊಂಡು, ತಾಲೂಕಿನ ಇತರ ಊರುಗಳಲ್ಲಿ ಮಳೆಯು ಎಷ್ಟು ಬೀಳುವದೆಂಬದರ ಬಗ್ಗೆ ಹುಡುಗರಿಂದ ಅನುಮಾನಗಳನ್ನು ತೆಗೆಯಲಿಕ್ಕೆ ಹಚ್ಚಬಹುದು. ಇವುಗಳಲ್ಲಿ ಏನಾದರೂ ಅಪ್ಪು ತಪ್ಪುಗಳಿದ್ದರೆ ಶಿಕ್ಷಕನು ಅವುಗಳನ್ನು ಸಕಾರಣವಾಗಿ ತಿದ್ದಬೇಕು.

ತಾಲೂಕಿನಲ್ಲಿರುವ ಭೂಮಿಯ ಮುಖ್ಯ ಪ್ರಕಾರಗಳ ಬಗ್ಗೆ ಜ್ಞಾನ ಮಾಡಿಕೊಡಬೇಕು.

ತಮ್ಮ ಊರ ಸುತ್ತಲು ಬೆಳೆಯುವ ಪೈರುಗಳ ಜ್ಞಾನದ ಸಹಾಯದಿಂದ ತಾಲೂಕಿನ ಬೆಳೆಗಳ ಜ್ಞಾನವನ್ನು ಮಾಡಿಕೊಡಬೇಕು. ತಾಲೂಕಿನಲ್ಲಿ ಬೇರೆ ತರದ ಧಾನ್ಯಗಳಾಗಲಿ ಪೈರುಗಳಾಗಲಿ ಎಲ್ಲಿಯಾದರೂ ಬಹಳವಾಗಿ ಬೆಳೆಯುತ್ತಿದ್ದರೆ, ಅದರ ಕಾರಣಗಳನ್ನು ಹುಡುಗರಿಗೆ ತಿಳಿಸಿಕೊಡಬೇಕು. ಅಕ್ಕಿ, ಗೋದಿ, ಜೋಳ, ಕಬ್ಬು, ಹತ್ತಿ ಮೊದಲಾದ ಮುಖ್ಯ ಬೆಳಸುಗಳ ಬಗ್ಗೆ ಮಾತ್ರ ಸಕಾರಣವಾಗಿ ಹೇಳಿದರೆ ಸಾಕು.

ಇದಲ್ಲದೆ ಕೆಳಗೆ ಹೇಳಿದ ಸಂಗತಿಗಳನ್ನು ಹೇಳಬೇಕು:—

(೧) ಮುಖ್ಯ ಉದ್ಯೋಗಗಳು, ಹಾಗೂ ಅವು ಅಲ್ಲಲ್ಲಿ ವೃದ್ಧಿ ಹೊಂದಲಿಕ್ಕೆ ಅನುಕೂಲವಾದ ಕಾರಣಗಳು. ಈ ಬೇರೆ ಬೇರೆ ಉದ್ಯೋಗಗಳ ಪರಸ್ಪರಾವಲಂಬನವು. ಉದಾಹರಣಾರ್ಥವಾಗಿ, ಒಕ್ಕಲಿಗನಿಗೂ ಸಾವುಕಾರನಿಗೂ, ಬಡಿಗನಿಗೂ ಕಮ್ಮಾರನಿಗೂ ಇರುವ ಸಂಬಂಧ, ಇತ್ಯಾದಿ.

(೨) ಮುಖ್ಯವಾದ ಮಾರ್ಗಗಳು:—ಮುಖ್ಯವಾದ ಮಾರ್ಗಗಳು ದೊಡ್ಡ ದೊಡ್ಡ ಊರುಗಳಗುಂಟ ಹೋಗುತ್ತವೆಂಬದನ್ನು ಹುಡುಗರ ಲಕ್ಷ್ಯಕ್ಕೆ ತಂದುಕೊಡಬೇಕು. ಈ ಮಾರ್ಗಗಳೇ ಕೆಲವು ಪಟ್ಟಣಗಳ ಬೆಳವಣಿಗೆಗೆ ಕಾರಣವಾಗಿರುತ್ತವೆಂಬದನ್ನೂ ತೋರಿಸಬಹುದು. ಒಂದು ಊರಿಂದ ಮತ್ತೊಂದು ಊರಿಗೆ ಹೋಗಬೇಕಾದರೆ ಯಾವ ಮಾರ್ಗದಿಂದ ಹೋಗಬೇಕು? ದಾರಿಯಲ್ಲಿ ಯಾವ ಯಾವ ನೋಡತಕ್ಕ ಸ್ಥಳಗಳು ಹತ್ತುತ್ತವೆ? ಎಂಬ ಪ್ರಶ್ನಗಳಿಗೆ ನಕಾಶದ ಸಹಾಯದಿಂದ ಉತ್ತರಗಳನ್ನು ತೆಗೆದುಕೊಳ್ಳಬೇಕು. ಬೇರೆ ಬೇರೆ ಊರುಗಳಿಗಿರುವ ಅಂತರವನ್ನು ಸ್ಕೇಲಿನ ಸಹಾಯದಿಂದ ಹೊರಡಿಸಬಹುದು.

(೩) ಆಯಾತ ಹಾಗೂ ನಿರ್ಯಾತ ಸರಕುಗಳು:—

ಪೇಟೆಯೊಳಗೆ ಹೋಗಿ ಮಾರಾಟದ ಎಲ್ಲ ಸಾಮಾನುಗಳನ್ನು ನೋಡಿ, ಇವುಗಳಲ್ಲಿ ತಮ್ಮ ತಾಲೂಕಿನಲ್ಲಿ ಹುಟ್ಟದಿದ್ದ ಸಾಮಾನುಗಳು ಯಾವವೆಂಬದನ್ನೂ ತಮ್ಮ ತಾಲೂಕಿನ ಪೂರೈಕೆಗಿಂತ ಹೆಚ್ಚಾಗಿ ಹುಟ್ಟುವ ಸಾಮಾನುಗಳು ಯಾವವೆಂಬದನ್ನೂ ಪ್ರಶ್ನದ್ವಾರದಿಂದ ಹುಡುಗರಿಂದ ಹೊರಡಿಸಿ, ಅವರಿಗೆ ಆಯಾತ ನಿರ್ಯಾತ ಸರಕುಗಳ ಬಗ್ಗೆಯೂ ವ್ಯಾಪಾರದಿಂದಾಗುವ ಲಾಭಗಳ ಬಗ್ಗೆಯೂ ಜ್ಞಾನಮಾಡಿ ಕೊಡಬೇಕು.

(೪) ವ್ಯಾಪಾರದ ಸ್ಥಳಗಳು. ಅಲ್ಲಿ ವ್ಯಾಪಾರವಾಗಲಿಕ್ಕೆ ವಿಶೇಷ ಕಾರಣಗಳು.

(೫) ಮುಖ್ಯ ಊರುಗಳು :—

ಒಂದು ಕಾಲ್ಪನಿಕ ಪ್ರವಾಸವನ್ನು ಮಾಡಿದಂತೆ ಹುಡುಗರ ಸಂಗಡ ಸಂಭಾಷಣೆಮಾಡಿ, ಈ ಬಗ್ಗೆ ತಿಳಿಸಿಕೊಡಬೇಕು. ಊರಿನ ಜನಸಂಖ್ಯೆಯನ್ನಾಗಲಿ ಉತ್ಪನ್ನವನ್ನಾಗಲಿ ಹುಡುಗರಿಗೆ ಹೇಳಿ, ಆ ಊರಿನ ಮಹತ್ವದ ಬಗ್ಗೆ ಜ್ಞಾನವನ್ನು ಮಾಡಿಕೊಡಬೇಕು. ಊರಿನ ಬಗ್ಗೆ ಏನಾದರೂ ಉಪಯುಕ್ತವಾದಂಥ ಹಾಗೂ ಮನೋರಂಜನವಾಗುವಂಥ ಸಂಗತಿಗಳಿದ್ದರೆ ಅವುಗಳನ್ನು ಹೇಳಬೇಕು. ಊರೊಳಗಿನ ಕಟ್ಟಡಗಳು, ಉದ್ಯೋಗಗಳು, ಕಲಾಕೌಶಲ್ಯ, ಅದರ ಇತಿಹಾಸ ಇವೇ ಮೊದಲಾದ ಸಂಗತಿಗಳ ಬಗ್ಗೆ ಜ್ಞಾನ ಮಾಡಿಕೊಡಬೇಕು. ಊರಿಗೆ ಆ ಹೆಸರು ಬರಲಿಕ್ಕೆ ಏನಾದರೂ ಮನೋರಂಜಕವಾದ ಕಾರಣಗಳಿದ್ದರೆ ಅವುಗಳ ಬಗ್ಗೆ ಹೇಳಬಹುದು. ಊರುಗಳ ಹೆಸರುಗಳು ಲಕ್ಷ್ಯದಲ್ಲಿ ಉಳಿಯುವಂತೆ ಅವುಗಳನ್ನು ಒಂದು ವಿಧದಿಂದ ವರ್ಗೀಕರಿಸುವದು ಒಳ್ಳೇದು.

(೬) ಸರಕಾರದ ಮುಖ್ಯವಾದ ಅಧಿಕಾರಸ್ಥರು ಹಾಗೂ ಅವರ ಕೆಲಸಗಳು.

(೭) ಸ್ಥಾನಿಕ ಸ್ವರಾಜ್ಯ ಹಾಗೂ ಲೋಕಲ್‌ಬೋರ್ಡುಗಳು.

(೮) ಜನಸಂಖ್ಯೆ ಹಾಗೂ ವಸೂಲು. ಇವುಗಳ ಬಗ್ಗೆ ಸ್ಥೂಲಮಾನದಿಂದ ಮಾತ್ರ ಸಂಖ್ಯೆಗಳನ್ನು ಕೊಡತಕ್ಕದ್ದು. ಈ ಸಂಖ್ಯೆಗಳನ್ನು ತುಲನೆಮಾಡುವದಕ್ಕೆ ಮಾತ್ರ ಉಪಯೋಗಿಸಬೇಕು. ತಾಲೂಕಿನ ಬಗ್ಗೆ ಹೇಳಿದ ಎಲ್ಲ ಮುಖ್ಯ ಸಂಗತಿಗಳನ್ನು ಅವರಿಗೆ ಊರಿನ ಬಗ್ಗೆ ಮುಂದಾಗಿ ಗೊತ್ತಿದ್ದ ಸಂಗತಿಗಳಿಗೆ ಸರಿಹೋಲಿಸಿ ಹೇಳಬೇಕು. ಆದರೆ ಹುಡುಗರ

ಗ್ರಾಹಕಶಕ್ತಿಗೆ ಮೀರಿದ ಸಂಗತಿಗಳನ್ನು ಹೇಳಿ ಅವರಲ್ಲಿ ಬೇಸರವನ್ನುಂಟುಮಾಡಬಾರದು.

ನಕಾಶಗಳ ಬಗ್ಗೆ:—ನಕಾಶದಲ್ಲಿ ತೋರಿಸಬಹುದಾದ ಸಂಗತಿಗಳ ಜ್ಞಾನವನ್ನೆಲ್ಲ ನಕಾಶದ ಮುಖಾಂತರವಾಗಿಯೇ ಮಾಡಿಕೊಡತಕ್ಕದ್ದು. ಪಾಠವು ನಡೆದಾಗ ಶಿಕ್ಷಕನು ಆ ಪಾಠಕ್ಕೆ ಸಂಬಂಧಿಸಿದ ನಕಾಶದ ಭಾಗವನ್ನು ಕರೆಹಲಿಗೆಯ ಮೇಲೆ ತಾನಾಗಿ ತೆಗೆದು ಆಯಾ ಸಂಗತಿಗಳ ಜ್ಞಾನವನ್ನು ಮಾಡಿಕೊಡುವದು ಮೇಲಾದದ್ದು. ಪರ್ವತ, ನದಿ, ಊರು ಮೊದಲಾದವುಗಳ ಬಗ್ಗೆ ಹುಡುಗರು ಕಲಿತನಂತರ ಕರೆ ಹಲಿಗೆಯ ಮೇಲೆ ಮಾಸ್ತರನು ತೆಗೆದ ಬಾಹ್ಯರೇಖಾನಕಾಶದಲ್ಲಿ ಇವುಗಳನ್ನು ಹುಡುಗರಿಂದ ತುಂಬಿಸಬಹುದು. ಹುಡುಗರಿಗೆ ಮುಂದಾಗಿಯೇ ಬಾಹ್ಯರೇಖಾನಕಾಶಗಳನ್ನು ಕೊಟ್ಟು, ಪಾಠವು ಸಾಗಿದಂತೆ ಅವರಿಂದ ಆ ನಕಾಶಗಳನ್ನು ತುಂಬಿಸುವದೂ ಮೇಲಾದದ್ದು. ಇದೇ ಮೇರೆಗೆ ಮೇಲಿಂದಮೇಲೆ ಅವರಿಂದ ಮಾದರಿಗಳನ್ನು ಮಾಡಲಿಕ್ಕೆ ಹಚ್ಚುವದರಿಂದಲೂ ವಿಶೇಷ ಉಪಯೋಗವಾಗುವದು.

V. N. MAGDAL.

ನಿಬಂಧಶಿಕ್ಷಣ.

(ಕಳೆದ ಜನವರಿ ತಿಂಗಳ ಸಂಚಿಕೆಯ ೨೬ ನೇ ಪೃಷ್ಠದಿಂದ ಮುಂದೆ ಸಾಗಿದ್ದು.)

೩ ನೇ ಪಾಠ—ಆಟಗಳು.

ಆಟಗಳಲ್ಲಿ ಪಂಗಡದ ಆಟಗಳೆಂತಲೂ, ಪಂಗಡವಿಲ್ಲದ ಆಟಗಳೆಂತಲೂ ಎರಡು ಭೇದಗಳುಂಟು. ಲಗ್ಗೆಚೆಂಡು, ತಿಳ್ಳಿ ಮೊದಲಾದವು ಪಂಗಡದ ಆಟಗಳು. ಹರಿಚೆಂಡು, ಗಂಗಾಳಮುರಿಗಿ, ಗಣೇಶನ ಆಟ ಮೊದಲಾದವು ಪಂಗಡವಿಲ್ಲದ ಆಟಗಳು. ಇವುಗಳ ಹೊರತು ಇಸ್ಪೇಟು, ಚದುರಂಗ ಮುಂತಾದ ಕೂತು ಆಡುವ ಆಟಗಳೂ ಉಂಟು. ಅವುಗಳಲ್ಲಿಯೂ ಕೆಲವು ಪಂಗಡದವೂ ಕೆಲವು ಪಂಗಡವಿಲ್ಲದವೂ ಇರುತ್ತವೆ. ಈ ಕೂತು ಆಡುವ ಆಟಗಳು ಹುಡುಗರಿಗೆ ತಕ್ಕವಲ್ಲ.

ಪಂಗಡದ ಆಟದಲ್ಲಿ ಕೆಲವು ಗುಣಗಳುಂಟು; ಪಂಗಡವಿಲ್ಲದ ಆಟಗಳಲ್ಲಿಯೂ ಕೆಲವು ಗುಣಗಳುಂಟು. ಪಂಗಡದ ಆಟಗಳಲ್ಲಿ ಮುಖ್ಯವಾಗಿ

ಪಂಗಡದ ಮುಖ್ಯಸ್ಥನಿಗೆ, ಅಂದರೆ ಹಿರಿಯ ಉದ್ದರಿಗೆ ಕೈಕೆಳಗಿನ ಉದ್ದರಿಗಳನ್ನು ನಡಿಸಿಕೊಳ್ಳುವ ಹೊಯಿಲವೂ, ವ್ಯವಸ್ಥೆಯನ್ನು ಕಾಯ್ದುಕೊಳ್ಳುವ ಗುಟ್ಟೂ ಗೊತ್ತಾಗುತ್ತವೆ. ಕೈಕೆಳಗಿನ ಉದ್ದರಿಗೆ ವಿಧೇಯತ್ವದ ಅಭ್ಯಾಸವೂ, ನಿಯಮಗಳನ್ನು ಪಾಲಿಸುವ ಚಟವೂ ಬೀಳುತ್ತವೆ. ಪಂಗಡವಿಲ್ಲದ ಆಟಗಳಲ್ಲಿ ಮುಖ್ಯವಾಗಿ ಸ್ವಾವಲಂಬನವು ಬೆಳೆಯುತ್ತದೆ.

ಈ ಎಲ್ಲ ಬಗೆಯ ಆಟಗಳನ್ನು ವರ್ಣಿಸುವಾಗ ಅನುಸರಿಸತಕ್ಕ ಕ್ರಮವನ್ನು ಸಾಮಾನ್ಯ ವಿವರಣೆಯೊಂದಿಗೆ ಕೆಳಗೆ ಬರೆದಿರುತ್ತದೆ:—

೧. ವಿಷಯ ವಿವೇಚ ಕ್ರಮ.

(ಅ) ಆಟದ ಉಪಕರಣಗಳು:—ಈ ಭಾಗದಲ್ಲಿ ಆಡಲಿಕ್ಕೆ ಬೇಕಾಗುವ ಜನರ ಸಂಖ್ಯೆ, ಆಟಕ್ಕೆ ಬೇಕಾಗುವ ಸಾಮಾನುಗಳು ಮುಂತಾದವನ್ನು ವರ್ಣಿಸಬೇಕು. ಸಾಧಾರಣವಾಗಿ ಪಂಗಡದ ಆಟಗಳಿಗೆ ಹೆಚ್ಚು ಜನರು ಬೇಕಾಗುವದನ್ನೂ, ಪಂಗಡವಿಲ್ಲದ ಆಟಗಳಿಗೆ ಕಡಿಮೆ ಜನರಿದ್ದರೂ ಸಾಗುವದೆಂಬದನ್ನೂ, ತೀರ ಕಡಿಮೆ ಜನರಿಂದ ಇಲ್ಲವೆ ಅಳತೆಗೆಟ್ಟ ಜನರಿಂದ ಆಟಕ್ಕೆ ತೊಂದರೆಯಾಗುವದೆಂಬದನ್ನೂ ಪ್ರಸಂಗ ನೋಡಿ ಬರೆಯಬೇಕಾಗಬಹುದು. ಬೇರೆ ಬೇರೆ ಆಟಗಳಲ್ಲಿ ಬೇರೆ ಬೇರೆ ಉಪಕರಣಗಳನ್ನು ವರ್ಣಿಸ ಬೇಕಾಗುವದಂತು ಮೇಲೆಯೇ ಕಾಣುತ್ತದೆ.

(ಬ) ಆಟದ ಸ್ಥಳ, ಕಾಲ:—ಉಪಕರಣಗಳನ್ನು ಹೇಳಿದನಂತರ ಆಟದ ಸ್ಥಳವನ್ನೂ, ಕಾಲವನ್ನೂ ವರ್ಣಿಸಬೇಕು. ಪಗಡಿಯ ಆಟ, ಇಸ್ಪೇಟಸ ಆಟ ಇವುಗಳಂಥ ಆಟಗಳಿಗೆ ಮನೆಯು ಬೇಕಾದರೆ, ತಿಳ್ಳಿ, ಲಗ್ಗೆಚಂಡಿನಂಥ ಆಟಗಳಿಗೆ ಬೈಲು ಬೇಕಾಗುತ್ತದೆಂಬದನ್ನೂ, ಗಿಡಮಂಗನ ಆಟಕ್ಕೆ ಮಾವಿನ ತೋಪಿನಂಥ ಗಿಡಗಳಿದ್ದ ಪ್ರದೇಶವೇ ತಕ್ಕದ್ದೆಂಬದನ್ನೂ ಹೇಳಬೇಕು; ಮತ್ತು ಆಟಕ್ಕೆ ಯೋಗ್ಯ ಸ್ಥಳದಿಂದಾಗುವ ಅನುಕೂಲತೆಯನ್ನೂ, ಅಯೋಗ್ಯಸ್ಥಳದಿಂದಾಗುವ ತೊಂದರೆಯನ್ನೂ ವರ್ಣಿಸಬೇಕು. ರಣಗುಟ್ಟುವ ಬಿಸಿಲಹೊತ್ತೂ, ಅಪರಾತ್ರಿಯೂ ಆಟಕ್ಕೆ ಯೋಗ್ಯವಲ್ಲೆಂಬದನ್ನು ಆಯಾ ಆಟಗಳ ವರ್ಣನಕ್ಕೆ ಸಂಬಂಧಿಸಿ ಹೇಳತಕ್ಕದ್ದು.

(ಕ) ಆಟದ ವರ್ಣನ:—ಆಟದ ಸ್ಥಳ-ಕಾಲಗಳನ್ನು ವರ್ಣಿಸಿದ ಮೇಲೆ, ಆಟವನ್ನು ಕ್ರಮವಾಗಿ ವರ್ಣಿಸುತ್ತ ಹೋಗಬೇಕು. ಉದಾಹರಣಾರ್ಥ. ಗಣೇಶನ ಆಟವನ್ನು ವರ್ಣಿಸಬೇಕಾಗಿದ್ದರೆ, ಗಣಪತಿಯು ಕೂ

ಜುವ ರೀತಿ, ದೋತರ ಚೆಲ್ಲುವ ಪ್ರಕಾರ, ಸೋಲುಗೇಲುಗಳ ಸಂಬಂಧದ ನಿಯಮ, ಲಡ್ಡಿನಿಂದ ಹೊಡೆಯುವ ಬಗೆ, ಆಟ ಮುಗಿಯುವ ನೆವ ಇವನ್ನು ಕ್ರಮವಾಗಿ ವರ್ಣಿಸಬೇಕು. ಪಗಡಿಯ ಆಟವನ್ನು ವರ್ಣಿಸ ಬೇಕಾಗಿದ್ದರೆ, ಜನರು ಕೂಡ್ರುವರೀತಿ, ಕವಡಿಗಳನ್ನು ಚೆಲ್ಲುವ ಕ್ರಮ, ಕಾಯಿನಡಿಸುವಬಗೆ, ಕಡಿತದ ನಿಯಮ, ಸೋಲುಗೇಲುಗಳ ನಿಯಮ, ಆಟವು ಮುಗಿಯುವ ನೆವ ಇವನ್ನು ವರ್ಣಿಸಬೇಕು. ಇವುಗಳ ಮೇಲಿಂದ ಬೇರೆ ಬೇರೆ ಆಟಗಳ ಕ್ರಮವನ್ನು ನೆನಪಿಗೆ ತಂದುಕೊಂಡು ಹೊಂದಿಸಿ ಬರೆಯುಬಹುದು.

(ಡ) ಆಡುವವರ ಕೆಟ್ಟಚಾಳಿಗಳು :—ಸೇಡು ಹಿಡಿಯುವದು, ಸಿಟ್ಟಿಗೇಳುವದು, ರಂಟಿಯಾಡುವದು, ಅಭ್ಯಾಸಕ್ಕೆ ದುರ್ಲಕ್ಷ್ಯವಾಡುವದು ಮುಂತಾದವನ್ನು ಇಲ್ಲಿ ವರ್ಣಿಸಬೇಕು. ಗಣೇಶನ ಆಟವಾಡುವಾಗ ಲಡಿನಿಂದ ಗಟ್ಟಿಯಾಗಿ ಹೊಡೆಯುವದು ಸೇಡು ತೀರಿಸಿಕೊಳ್ಳುವ ಲಕ್ಷಣವೂ, ಆಟದಲ್ಲಿ ಬೈದಾಡುವದು ಸಿಟ್ಟಿನ ಲಕ್ಷಣವೂ ಎಂದು ತಿಳಿಯಬೇಕು. ಇಷ್ಟಾದಬಳಿಕ ಬೇಕಾದರೆ, ಆಟವನ್ನು ಯಾವಾಗ ಮತ್ತು ಹ್ಯಾಗೆ ಆಡ ತಕ್ಕದ್ದೆಂಬದನ್ನು ಒಂದೆರಡು ಮಾತಿನಲ್ಲಿ ಹೇಳಬೇಕು.

೨. ಉದಾಹರಣ :—

೧. ಗಣೇಶನ ಆಟ.

ಗಣೇಶನ ಆಟವನ್ನು ಆಡಲಿಕ್ಕೆ ಏನಿಲ್ಲೆಂದರೂ ಐದು ಜನರಾದರೂ ಬೇಕು. ಮುಂದೆ ಎಷ್ಟು ಜನರಿದ್ದರೂ ಬರುವದು. ಸರಾಸರಿ ಇಪ್ಪತ್ತಕ್ಕಿಂತ ಹೆಚ್ಚು ಜನರಾದರೆ ಆಟದಲ್ಲಿ ಗೊಂದಲವಾಗುತ್ತದೆ. ಲಡ್ಡುಮಾಡಲಿಕ್ಕೆ ಆಡುವವರಲ್ಲಿ ಒಂದೊಂದು ದೋತರವಿರಬೇಕಾಗುವದು. ದೋತರವಿಲ್ಲದವರು ರುಮಾಲವನ್ನೂ, ವಸ್ತ್ರವನ್ನೂ ಲಡ್ಡಿಗೆ ಉಪಯೋಗಿಸಬಹುದು.

ಈ ಆಟವನ್ನು ಗಿಡದ ನೆರಳಲ್ಲಿ ಆಡಬೇಕು. ಬಿಸಿಲು ಕಡಿಮೆಯಿದ್ದಾಗ ಬೇಕಾದಲ್ಲಿ ಆಡಬಹುದು. ಆಡುವ ಸ್ಥಳವು ತಗ್ಗುದಿನ್ನೆಯುದಿರಬಾರದು. ಅಲ್ಲಿ ಕಲ್ಲು ಮುಳ್ಳುಗಳಿದ್ದರೆ ತೊಂದರೆಯಾಗುವದು. ಸಂದಿಗೊಂದಿಯ ಸ್ಥಳವು ಕೆಲಸದ್ದಲ್ಲ. ಪ್ರಶಸ್ತವಾದ ಬೈಲು ಇರಬೇಕು. ಮಾವಿನ ತೋಪು, ಪ್ರಶಸ್ತವಾದ ಗುಡಿಯ ಪೌಳಿ, ಸಾಲೆಯ ಹಿತ್ತಲ, ಊರ ಹೊರಗಿನ ಬೈಲುಗಳು ಈ ಆಟಕ್ಕೆ ತಕ್ಕ ಸ್ಥಳಗಳು. ರಣಗುಟ್ಟುವ ಬಿಸಿಲಲ್ಲಿ ಆಡುವದು ಸರಿಯಲ್ಲ.

ಬದೆಂತಲೂ, ಕಲ್ಲನು ದೊಡ್ಡಮನುಷ್ಯನೆಂತಲೂ ಆತನು ಹೇಳಿದನು.

ಅಭ್ಯಾಸಕ್ಕಾಗಿ ವಿಷಯಗಳು :—೧. ಗಂಗಾಳಮುರಿಗಿ, ೨. ಡೀಕವ ಗೋಲಿ, ೩. ಕುಂಟುವ ಹಲಪಿ, ೪. ಚಿಣಿಫಣಿ, ೫. ಹರಿಚಂಡು, ೬. ಲಗ್ಗಚಂಡು, ೭. ತಿಳ್ಳಿ, ೮. ಗಿಡಮಂಗನ ಆಟ, ೯. ಹುತುತು, ೧೦. ಪಗಡಿ ಇತ್ಯಾದಿ.

(ಇದರಂತೆ ನೋಟ, ಉದ್ಯೋಗ, ಧರ್ಮಾಚರಣೆ ಇವಕ್ಕೆ ಸಂಬಂಧಿಸಿದ ಎರಡೆರಡು ಲೇಖಗಳನ್ನು ಬರೆದು ತೋರಿಸಿ ಅಭ್ಯಾಸಕ್ಕಾಗಿ ವಿಷಯಗಳನ್ನು ಕೊಟ್ಟಿರುತ್ತದೆ; ಆದರೆ, ಅವನ್ನು ಸ್ಥಳ ಸಂಕೋಚಕ್ಕಾಗಿ ಇಲ್ಲಿ ಕೊಟ್ಟಿರುವದಿಲ್ಲ.)

೨ನೇ ಪ್ರಕರಣ.

ಕೃತ್ರಿಮಾನುಭವದ ವಿಷಯಗಳು.

ಹಿಂದಿನ ಪ್ರಕರಣದಲ್ಲಿ ಮುಖ್ಯವಾಗಿ ವಿದ್ಯಾರ್ಥಿಗಳು ಹಲವು ಸಾರೆ ಕೈಮುಟ್ಟಿ ಮಾಡಿದ್ದರಿಂದ ಇಲ್ಲವೆ ಕಣ್ಣಮುಟ್ಟಿ ನೋಡಿದ್ದರಿಂದ ಮನಸ್ಸಿನಲ್ಲಿ ಸ್ಥಿರವಾಗಿ ಉಳಿದ ವಿಷಯಗಳನ್ನು ಬರೆಯುತ್ತ ಬಂದಿರುವರು. ಈ ಪ್ರಕರಣದಲ್ಲಿ ಒಂದೆರಡು ಸಾರೆ ಹ್ಯಾಗಾದರೂ ನೋಡಿದ್ದರಿಂದ, ಇಲ್ಲವೆ ಎರಡನೆಯವರ ಬಾಯಿಂದ ಕೇಳಿದ್ದರಿಂದ, ಅಥವಾ ಪುಸ್ತಕದಲ್ಲಿ ಓದಿದ್ದರಿಂದ ಸ್ಮರಣದಲ್ಲಿ ಉಳಿಯಬಹುದಾದ ವಿಷಯಗಳನ್ನು ಅವರು ಬರೆಯಬೇಕಾಗಿರುವದು. ಇವು ಕೆಲಮಟ್ಟಿಗೆ ಒತ್ತಾಯದಿಂದ ಲಕ್ಷವನ್ನು ಪೂರೈಸಿದ್ದರಿಂದ ಹ್ಯಾಗಾದರೂ ನೆನಪಿನಲ್ಲಿ ಉಳಿದವಾದ್ದರಿಂದ ವಿದ್ಯಾರ್ಥಿಗಳಿಗೆ ಬರೆಯಲಿಕ್ಕೆ ಸ್ವಲ್ಪ ಕಠಿಣವಾಗಿರುವದು ಸ್ವಾಭಾವಿಕವು. ೫ನೆಯ ಇಯತ್ತೆಯ ವಿದ್ಯಾರ್ಥಿಗಳಿಂದ ಈ ಬಗೆಯ ಲೇಖಗಳನ್ನು ಬರಿಸಿದರೆ ಅವರ ನಿಬಂಧದ ವಿಷಯವು ಮುಗಿದಂತಾಗುವದು; ಯಾಕಂದರೆ, ಇಯತ್ತಾಪತ್ರಿಕೆಯಲ್ಲಿ "೫ನೆಯ ಇಯತ್ತೆಯ ವಿದ್ಯಾರ್ಥಿಗಳು ತಾವು ಓದಿದ ಇಲ್ಲವೆ ಪರೀಕ್ಷಕರು ಹೇಳಿದ ವಿಷಯವನ್ನು ನೆನಪಿನಲ್ಲಿಟ್ಟುಕೊಂಡು ಬರೆಯಬೇಕೆ"ಂದು ನಿಯಮಿಸಿರುತ್ತದೆ.

ಮೇಲೆ ಹೇಳಿದಂತೆ ಈ ಕೃತ್ರಿಮಾನುಭವದ ವಿಷಯಗಳಲ್ಲಿ ನೋಡಿ ಬರೆಯತಕ್ಕವು, ಕೇಳಿ ಬರೆಯತಕ್ಕವು, ಓದಿ ಬರೆಯತಕ್ಕವು ಎಂಬ

ಮೂರು ಬಗೆಯ ವಿಷಯಗಳ ಸಮಾವೇಶವಾಗುತ್ತದೆ. ಈ ಮೂರು ವಿಷಯಗಳು ಕ್ರಮವಾಗಿ ಒಂದರಿಂದೊಂದು ಕಠಿಣವಾಗಿರುವವೆಂದು ಹೇಳಬಹುದು. ನೋಡಿ ಬರೆಯತಕ್ಕ ವಿಷಯಗಳಲ್ಲಿ ಪರ್ಯಟನಪ್ರಸಂಗಗಳು, ವಸ್ತುವರ್ಣನಗಳು, ವ್ಯಾವಹಾರಿಕ ಪ್ರಸಂಗಗಳು ಮುಖ್ಯವಾಗಿ ಬರುವವು. ಕೇಳಿ ಬರೆಯತಕ್ಕ ವಿಷಯಗಳಲ್ಲಿ ಮುಖ್ಯವಾಗಿ, ಕಥೆಗಳು, ಸುದ್ದಿಗಳು ಬರುವವು. ನೋಡತಕ್ಕ ಹಾಗು ಕೇಳತಕ್ಕ ವಿಷಯಗಳನ್ನೇ ಬರೆದಿಡುವದರಿಂದ ಮೇಲಿನ ಎರಡು ಬಗೆಯ ವಿಷಯಗಳು, ಅಂದರೆ ಪರ್ಯಟನಪ್ರಸಂಗಗಳು ವಸ್ತುವರ್ಣನಗಳು, ವ್ಯಾವಹಾರಿಕ ಪ್ರಸಂಗಗಳು, ಕಥೆಗಳು, ಸುದ್ದಿಗಳು ಓದಿ ಬರೆಯತಕ್ಕ ವಿಷಯಗಳಾಗಿರುವವು. ಈ ಐದೂ ಬಗೆಯ ವಿಷಯಗಳಿಗಾಗಿ ಮುಂದೆ ಐದು ಪಾಠಗಳನ್ನು ಮಾಡಿ ಒಂದೊಂದು ಪಾಠದಲ್ಲಿ ಒಂದೊಂದು ವಿಷಯವನ್ನು ಬರೆದು ತೋರಿಸಿರುತ್ತದೆ.

ನೋಡಿ ಬರೆಯುವ ವಿಷಯಗಳಿಗೆ ಶಿಕ್ಷಕರ ಸಹಾಯವು ಇರತಕ್ಕದ್ದು. ವಿದ್ಯಾರ್ಥಿಗಳು ಯಾವದೊಂದು ವಸ್ತುವನ್ನು ಇಲ್ಲವೆ ಸಂಗತಿಯನ್ನು ಅವಲೋಕಿಸುತ್ತಿರುವಾಗ ಅವರ ಲಕ್ಷವನ್ನು ಬೇರೆ ಬೇರೆ ಕಡೆಗೆ ಒಯ್ಯುವದು ಶಿಕ್ಷಕರ ಕೆಲಸವು. ಅದರಂತೆ ವಿದ್ಯಾರ್ಥಿಗಳ ಅವಲೋಕನದಲ್ಲಿ ಬರುವ ತೊಂದರೆಗಳನ್ನಾದರೂ ಶಿಕ್ಷಕರೇ ದೂರ ಮಾಡಬೇಕಾಗುವದು. ಹೀಗೆ ವಿದ್ಯಾರ್ಥಿಗಳಿಂದ ಅವಲೋಕನ ಮಾಡಿಸಿದ ಬಳಿಕ ಆ ಅವಲೋಕಿಸಿದ ವಿಷಯವು ಸ್ಥಿರವಾಗುವದಕ್ಕಾಗಿ ವಿದ್ಯಾರ್ಥಿಗಳೊಡನೆ ಆ ವಿಷಯವನ್ನು ಕುರಿತು ಚರ್ಚಿಸಬೇಕು. ತರುವಾಯ ಬರೆಯತಕ್ಕ ವಿಷಯದಲ್ಲಿ ಮಾಡಬಹುದಾದ ಭಾಗಗಳನ್ನು ಹೇಳಿ, ಒಂದೊಂದು ಭಾಗದಲ್ಲಿ ಸೇರಿಸಬಹುದಾದ ವಿಷಯವನ್ನು ವಿದ್ಯಾರ್ಥಿಗಳ ಸ್ವಂತ ಭಾಷೆಯಿಂದ ಹೇಳಿಸಬೇಕು; ಅಂದರೆ, ಅವಲೋಕಿಸಿದ ವಿಷಯವನ್ನು ಬರೆಯಲು ವಿದ್ಯಾರ್ಥಿಗಳು ಸಮರ್ಥರಾಗುವರು.

ಇದರಂತೆ ವಿದ್ಯಾರ್ಥಿಗಳು ಕೇಳಿದ್ದನ್ನು ನೆನಪಿನಲ್ಲಿಟ್ಟು ಬರೆಯುವಾಗಾದರೂ ಶಿಕ್ಷಕರು ಸಹಾಯ ಮಾಡಬೇಕು. ಶಿಕ್ಷಕರು ಕಥೆಗಳನ್ನು ಇಲ್ಲವೆ ಬೇರೆ ಯಾವದೊಂದು ವಿಷಯವನ್ನು ಸುಲಭ ವಾಕ್ಯಗಳಿಂದ ಕ್ಲಾಸಿನಲ್ಲಿ ಹೇಳಬೇಕು. ಅವರು ಹೇಳುವ ವಾಕ್ಯಗಳೂ, ಸರಣಿಯೂ ವಿದ್ಯಾರ್ಥಿಗಳ ಬರವಣಿಗೆಗೆ ಸಹಾಯ ಮಾಡುವಂತೆ ಇರಬೇಕು. ಹೇಳು

ಆಡಲಿಕ್ಕೆ ಬಂದವರಲ್ಲಿ ಒಬ್ಬನು ಗಣಪತಿಯಾಗುವನು. ಕಾ
ನೋವಾದವರೂ, ಓಡಾಡುವ ಮನಸ್ಸಿಲ್ಲದವರೂ, ದೊಡ್ಡ ಹುಡುಗ
ಗಣಪತಿಯಾಗುವದು ವಾಡಿಕೆಯಾಗಿರುವದು. ಗಣಪತಿಯು ಅಗಲ
ಕಾಲು ಚಾಚಿಕೊಂಡು ಕುಳಿತುಕೊಳ್ಳುವನು. ಉಳಿದವರು ಕಂಚಿಯಿಂ
ದೋತರದ ಉಂಡಿಗಳನ್ನು ಗಣಪತಿಯಮುಂದೆ ಚಲ್ಲುವರು. ಗಣಪ
ಯಿಂದ ಎಲ್ಲಕ್ಕೂ ದೂರ ಬಿದ್ದ ದೋತರದವನು ಸೋಲುವನು. ಅವನ
ತನ್ನ ದೋತರದ ಒಂದು ಚುಂಗನ್ನು ಗಣಪತಿಯ ಕೈಯಲ್ಲಿ ಕೊಡುವನು
ಮತ್ತೊಂದು ತಾನು ಹಿಡಕೊಂಡು ಗಣಪತಿಯ ಸುತ್ತಲು ತಿರುಗುವನು
ಉಳಿದವರು ತಮ್ಮತಮ್ಮ ದೋತರಗಳನ್ನು, ಮುಟ್ಟಿಸಿಕೊಳ್ಳದಂತೆ ಎಚ್ಚರ
ದಿಂದ ತಕ್ಕೊಳ್ಳುವರು. ಮುಟ್ಟಿಸಿಕೊಂಡರೆ, ತಾವು ತಿರುಗಬೇಕಾಗುವದು
ಎಲ್ಲರು ದೋತರ ತಕ್ಕೊಂಡ ಬಳಿಕ ದೋತರದ ಲಡ್ಡು ಮಾಡುವರು.
ಆ ಮೇಲೆ ತಾವು ಮುಟ್ಟಿಸಿಕೊಳ್ಳದಂತೆ ಎಚ್ಚರದಿಂದ ತಿರುಗುವವ
ನನ್ನು ಲಡ್ಡಿನಿಂದ ಹೊಡೆಯಹತ್ತುವರು. ಹೊಡೆಯುವಾಗ ಮುಟ್ಟಿಸಿಕೊಂಡ
ವನು ತಾನು ತಿರುಗಬೇಕಾಗುವದು. ಆಟದಲ್ಲಿ ಗಣಪತಿಯು ದೋತರ
ವನ್ನು ಬಿಡಬಾರದು. ಬಿಟ್ಟರೆ ಲಡ್ಡಿನ ಪೆಟ್ಟು ಬೀಳುವವು. ಹೀಗೆ ಸಾಕಾ
ಗುವತನಕ ಆಡುವರು.

ಈ ಆಟದಲ್ಲಿ ಕೆಲವರು ತಿರುಗುವವನನ್ನು ಲಡ್ಡುಗಳಿಂದ ಗಟ್ಟಿಯಾ
ಗಿ ಹೊಡೆಯುವದುಂಟು. ಅದು ಸರಿಯಲ್ಲ. ಅದರಂತೆ ಒಬ್ಬರಿಗೊಬ್ಬರು
ಬೈದಾಡುವ ನಡತೆ ಒಳ್ಳೆಯದಲ್ಲ. ದೋತರ ಹರಿಯದಂತೆ ಎಚ್ಚರವಡತ
ಕ್ಕದ್ದು. ಆಟಕ್ಕೆ ಮೆಚ್ಚಿ ಅಭ್ಯಾಸ ಕೆಡಿಸಿಕೊಳ್ಳುವದು ಸರಿಯಲ್ಲ.

೨. ನಾಲ್ಕನೆಯ ಇಯತ್ತೆಯವರು ಆಡಿದ ಗಣೇಶನ ಆಟ.

ಈಗ ತಿಂಗಳಹಿಂದೆ ನಮ್ಮ ನಾಲ್ಕನೆಯ ಇಯತ್ತೆಯ ಪರೀಕ್ಷೆಯು
ಆಯಿತು. ಮಾಸ್ತರರು ಒಂದು ವಾರ ಸೂಟಿಯನ್ನು ಬಿಟ್ಟಿದ್ದರು. ಆ ಸೂಟಿ
ಯಲ್ಲಿ ನಾವು ಒಂದು ದಿವಸ ಗಣೇಶನ ಆಟವನ್ನು ಆಡಿದೆವು. ನಮ್ಮ ವರ್ಗ
ದಲ್ಲಿ ಹನ್ನೆರಡೇ ಹುಡುಗರು ಇದ್ದೆವು. ಲಡ್ಡು ಮಾಡಲಿಕ್ಕೆ ಕೆಲವರ ಹತ್ತರ
ದೋತರಗಳಿದ್ದವು. ಕೆಲವರ ಹತ್ತರ ವಸ್ತ್ರಗಳಿದ್ದವು. ಕೆಲವರು ತಲೆಯ
ಮೇಲಿನ ರುಮಾಲವನ್ನು ಲಡ್ಡಿಗೆ ತಕ್ಕೊಂಡಿದ್ದರು.

ಒಂಬತ್ತು ತಾಸಿನ ಸುಮಾರಕ್ಕೆ ಮಾವಿನ ತೋಪಿನಲ್ಲಿ ಆಟವನ್ನು ಹಚ್ಚಿದೆವು. ಅಲ್ಲಿ ಕಲ್ಲು ಮುಳ್ಳುಗಳಿದ್ದಿಲ್ಲ. ನೆರಳು ದಟ್ಟವಾಗಿಬಿದ್ದಿತ್ತು. ರಂಟೆಯ ಸಾಲುಗಳು ಮಾತ್ರ ಕಾಲಿಗೆ ಸ್ವಲ್ಪ ಒತ್ತುತ್ತಿದ್ದವು. ಮಾವಿನ ಗಿಡಗಳಿಗೆ ಹೂವು ಬಿಟ್ಟಿದ್ದವು. ಅವುಗಳ ಸುವಾಸನೆಯು ಇಡಿಗಿತ್ತು.

ನಮ್ಮಲ್ಲಿ ಸಾಲಿಯಮಠದ ಈರಯ್ಯನು ದೊಡ್ಡವನಿದ್ದನು. ಆತನೇ ಗಣಪತಿಯಾದನು. ನಾವು ಒಬ್ಬೊಬ್ಬರೇ ಕಂಚಿಯಿಂದ ದೋತರದ ಉಂಡಿಗಳನ್ನು ಗಣಪತಿಯ ಮುಂದೆ ಒಗೆಯಹತ್ತಿದೆವು. ಭೀಮನು ಕಂಚಿಯಿಂದ ಮುಂದಕ್ಕೆ ಬಂದು ದೋತರದ ಉಂಡಿಯನ್ನು ತಿರುಗಿ ಒಗೆದನು. ಅದಕ್ಕೆ ಗಣಪತಿಯು ಸಿಟ್ಟುಮಾಡಿ, ಅವನ ಉಂಡಿಯನ್ನು ತಿರುಗಿ ಒಗೆದನು. ಆಗ ಭೀಮನ ಮೋರೆಯು ಇಷ್ಟಾಯಿತು ಆತನು ಕಂಚಿಯಿಂದ ಮತ್ತೆ ದೋತರವನ್ನು ಒಗೆದನು. ಕಡೆಗೆ ಎಲ್ಲರ ದೋತರಗಳಿಗಿಂತ ಭೀಮನ ದೋತರವೇ ಗಣಪತಿಯಿಂದ ದೂರಬಿತ್ತು. ಭೀಮನು ಸೋತನು. ಉಳಿದವರು ಕೂಗಿ ಚಪ್ಪಳೆಹೊಡೆದು ಜಿಗಿದಾಡಿದರು. ಭೀಮನು ದೋತರ ಹಿಡಕೊಂಡು ಗಣಪತಿಯ ಸುತ್ತಲು ತಿರುಗಹತ್ತಿದನು. ಒಬ್ಬೊಬ್ಬರೇ ದೋತರಗಳನ್ನು ತಕ್ಕೊಂಡರು. ಕಡೆಗೆ ಕುರುಬರ ಮಲ್ಲನು ಮುಟ್ಟಿಸಿಕೊಂಡನು. ಆಗ ಭೀಮನ ಆನಂದವು ಹಿಡಿಸದಾಯಿತು. ಮಲ್ಲನಿಗೆ ಲಡ್ಡುಗಳು ಬೀಳಹತ್ತಿದವು. ಭೀಮನು ಲಡ್ಡಿನಿಂದ ಗಟ್ಟಿಯಾಗಿ ಹೊಡೆಯಹತ್ತಿದನು. ಗಣಪತಿಯು ಸಿಟ್ಟು ಮಾಡಿದರೂ ಕೇಳಲಿಲ್ಲ. ಅನ್ಯಾಯವು ಹ್ಯಾಗೆ ತಡೆಯಬೇಕು? ಕಡೆಗೆ ಜಿಗಿದಾಟದಲ್ಲಿ ಭೀಮನು ಮುಟ್ಟಿಸಿಕೊಂಡನು. ಭೀಮನ ಮೇಲೆ ಎಲ್ಲರು ಸಿಟ್ಟಾಗಿದ್ದರು. ಮಲ್ಲನ ಒಂದೇ ಹೊಡತಕ್ಕೆ ಭೀಮನ ಕಣ್ಣೊಳಗೆ ನೀರು ಬಂದವು. ಅಷ್ಟರಲ್ಲಿ ಊರೊಳಗೆ ಜಾತಿಗರ ಆಟದ ಡೊಳ್ಳಿನ ಸಪ್ಪಳವು ಕೇಳಿಸಹತ್ತಿತು. ಆಗ ನಾವೆಲ್ಲರು ಆಟ ನೋಡಲಿಕ್ಕೆ ಹೋದೆವು.

ಆಪ್ರೊತ್ತಿನ ಆಟದಲ್ಲಿ ಭೀಮನು ಮೊದಲಿನಿಂದಲೇ ಅನ್ಯಾಯ ಮಾಡಹತ್ತಿದನು. ಆತನು ನೆವ ತೆಗೆದು ಮಲ್ಲನನ್ನು ಬಾಯಿಗೆ ಬಂದಂತೆ ಬೈದನು. ಕಲ್ಲನ ವಸ್ತ್ರವನ್ನು ಜಗ್ಗಿ ಹರಿದನು. ಜಗಳಕ್ಕೆ ಸುರುವಾಗತಕ್ಕದ್ದಿತ್ತು. ಕಡೆಗೆ ಈರಯ್ಯನು ಎಲ್ಲರನ್ನು ಸಮಾಧಾನಪಡಿಸಿದನು. ಭೀಮನು ರಂಟೆಯಾಡಿದ್ದು ತಕ್ಕದ್ದಲ್ಲೆಂತಲೂ, ಮಲ್ಲನಾದರೂ ಹಾಗೆ ಹೊಡೆಯಬಾ

ಆದೆಂತಲೂ, ಕಲ್ಲನು ದೊಡ್ಡಮನುಷ್ಯನೆಂತಲೂ ಆತನು ಹೇಳಿದನು.

ಅಭ್ಯಾಸಕ್ಕಾಗಿ ವಿಷಯಗಳು :—೧. ಗಂಗಾಳಮುರಿಗಿ, ೨. ಡೀಕುವ ಗೋಲಿ, ೩. ಕುಂಟುವ ಹಲಪಿ, ೪. ಚಿಣಿಫಣಿ, ೫. ಹರಿಚಂಡು, ೬. ಲಗ್ಗಚಂಡು, ೭. ತಿಳ್ಳಿ, ೮. ಗಿಡಮಂಗನ ಆಟ, ೯. ಹುತುತು, ೧೦. ಪಗಡಿ, ಇತ್ಯಾದಿ.

(ಇದರಂತೆ ನೋಟ, ಉದ್ಯೋಗ, ಧರ್ಮಾಚರಣೆ ಇವಕ್ಕೆ ಸಂಬಂಧಿಸಿದ ಎರಡೆರಡು ಲೇಖಗಳನ್ನು ಬರೆದು ತೋರಿಸಿ ಅಭ್ಯಾಸಕ್ಕಾಗಿ ವಿಷಯಗಳನ್ನು ಕೊಟ್ಟಿರುತ್ತದೆ; ಆದರೆ, ಅವನ್ನು ಸ್ಥಳ ಸಂಕೋಚಕ್ಕಾಗಿ ಇಲ್ಲಿ ಕೊಟ್ಟಿರುವದಿಲ್ಲ.)

೨ನೇ ಪ್ರಕರಣ.

ಕೃತ್ರಿಮಾನುಭವದ ವಿಷಯಗಳು.

ಹಿಂದಿನ ಪ್ರಕರಣದಲ್ಲಿ ಮುಖ್ಯವಾಗಿ ವಿದ್ಯಾರ್ಥಿಗಳು ಹಲವು ಸಾರೆ ಕೈಮುಟ್ಟಿ ಮಾಡಿದ್ದರಿಂದ ಇಲ್ಲವೆ ಕಣ್ಣುಮುಟ್ಟಿ ನೋಡಿದ್ದರಿಂದ ಮನಸ್ಸಿನಲ್ಲಿ ಸ್ಥಿರವಾಗಿ ಉಳಿದ ವಿಷಯಗಳನ್ನು ಬರೆಯುತ್ತ ಬಂದಿರುವರು. ಈ ಪ್ರಕರಣದಲ್ಲಿ ಒಂದೆರಡು ಸಾರೆ ಹ್ಯಾಗಾದರೂ ನೋಡಿದ್ದರಿಂದ, ಇಲ್ಲವೆ ಎರಡನೆಯವರ ಬಾಯಿಂದ ಕೇಳಿದ್ದರಿಂದ, ಅಥವಾ ಪುಸ್ತಕದಲ್ಲಿ ಓದಿದ್ದರಿಂದ ಸ್ಮರಣದಲ್ಲಿ ಉಳಿಯಬಹುದಾದ ವಿಷಯಗಳನ್ನು ಅವರು ಬರೆಯಬೇಕಾಗಿರುವದು. ಇವು ಕೆಲ ಮಟ್ಟಿಗೆ ಒತ್ತಾಯದಿಂದ ಲಕ್ಷವನ್ನು ಪೂರೈಸಿದ್ದರಿಂದ ಹ್ಯಾಗಾದರೂ ನೆನಪಿನಲ್ಲಿ ಉಳಿದವಾದ್ದರಿಂದ ವಿದ್ಯಾರ್ಥಿಗಳಿಗೆ ಬರೆಯಲಿಕ್ಕೆ ಸ್ವಲ್ಪ ಕಠಿಣವಾಗಿರುವದು ಸ್ವಾಭಾವಿಕವು. ೫ನೆಯ ಇಯತ್ತೆಯ ವಿದ್ಯಾರ್ಥಿಗಳಿಂದ ಈ ಬಗೆಯ ಲೇಖಗಳನ್ನು ಬರಿಸಿದರೆ ಅವರ ನಿಬಂಧದ ವಿಷಯವು ಮುಗಿದಂತಾಗುವದು; ಯಾಕಂದರೆ, ಇಯತ್ತಾಪತ್ರಿಕೆಯಲ್ಲಿ "೫ನೆಯ ಇಯತ್ತೆಯ ವಿದ್ಯಾರ್ಥಿಗಳು ತಾವು ಓದಿದ ಇಲ್ಲವೆ ಪರೀಕ್ಷಕರು ಹೇಳಿದ ವಿಷಯವನ್ನು ನೆನಪಿನಲ್ಲಿಟ್ಟುಕೊಂಡು ಬರೆಯಬೇಕೆ"ಂದು ನಿಯಮಿಸಿರುತ್ತದೆ.

ಮೇಲೆ ಹೇಳಿದಂತೆ ಈ ಕೃತ್ರಿಮಾನುಭವದ ವಿಷಯಗಳಲ್ಲಿ ನೋಡಿ ಬರೆಯತಕ್ಕವು, ಕೇಳಿ ಬರೆಯತಕ್ಕವು, ಓದಿ ಬರೆಯತಕ್ಕವು ಎಂಬ

ಮೂರು ಬಗೆಯ ವಿಷಯಗಳ ಸಮಾವೇಶವಾಗುತ್ತದೆ. ಈ ಮೂರು ವಿಷಯಗಳು ಕ್ರಮವಾಗಿ ಒಂದರಿಂದೊಂದು ಕಠಿಣವಾಗಿರುವವೆಂದು ಹೇಳಬಹುದು. ನೋಡಿ ಬರೆಯತಕ್ಕ ವಿಷಯಗಳಲ್ಲಿ ಪರ್ಯಟನಪ್ರಸಂಗಗಳು, ವಸ್ತುವರ್ಣನೆಗಳು, ವ್ಯಾವಹಾರಿಕ ಪ್ರಸಂಗಗಳು ಮುಖ್ಯವಾಗಿ ಬರುವವು. ಕೇಳಿ ಬರೆಯತಕ್ಕ ವಿಷಯಗಳಲ್ಲಿ ಮುಖ್ಯವಾಗಿ ಕಥೆಗಳು, ಸುದ್ದಿಗಳು ಬರುವವು. ನೋಡತಕ್ಕ ಹಾಗು ಕೇಳತಕ್ಕ ವಿಷಯಗಳನ್ನೇ ಬರೆದಿರುವದರಿಂದ ಮೇಲಿನ ಎರಡು ಬಗೆಯ ವಿಷಯಗಳು, ಅಂದರೆ ಪರ್ಯಟನಪ್ರಸಂಗಗಳು ವಸ್ತುವರ್ಣನೆಗಳು, ವ್ಯಾವಹಾರಿಕ ಪ್ರಸಂಗಗಳು, ಕಥೆಗಳು, ಸುದ್ದಿಗಳು ಓದಿ ಬರೆಯತಕ್ಕ ವಿಷಯಗಳಾಗಿರುವವು. ಈ ಐದೂ ಬಗೆಯ ವಿಷಯಗಳಿಗಾಗಿ ಮುಂದೆ ಐದು ಪಾಠಗಳನ್ನು ಮಾಡಿ ಒಂದೊಂದು ಪಾಠದಲ್ಲಿ ಒಂದೊಂದು ವಿಷಯವನ್ನು ಬರೆದು ತೋರಿಸಿರುತ್ತದೆ.

ನೋಡಿ ಬರೆಯುವ ವಿಷಯಗಳಿಗೆ ಶಿಕ್ಷಕರ ಸಹಾಯವು ಇರತಕ್ಕದ್ದು. ವಿದ್ಯಾರ್ಥಿಗಳು ಯಾವದೊಂದು ವಸ್ತುವನ್ನು ಇಲ್ಲವೆ ಸಂಗತಿಯನ್ನು ಅವಲೋಕಿಸುತ್ತಿರುವಾಗ ಅವರ ಲಕ್ಷವನ್ನು ಬೇರೆ ಬೇರೆ ಕಡೆಗೆ ಒಯ್ಯುವದು ಶಿಕ್ಷಕರ ಕೆಲಸವು. ಅದರಂತೆ ವಿದ್ಯಾರ್ಥಿಗಳ ಅವಲೋಕನದಲ್ಲಿ ಬರುವ ತೊಂದರೆಗಳನ್ನಾದರೂ ಶಿಕ್ಷಕರೇ ದೂರ ಮಾಡಬೇಕಾಗುವದು. ಹೀಗೆ ವಿದ್ಯಾರ್ಥಿಗಳಿಂದ ಅವಲೋಕನ ಮಾಡಿಸಿದ ಬಳಿಕ ಆ ಅವಲೋಕಿಸಿದ ವಿಷಯವು ಸ್ಥಿರವಾಗುವದಕ್ಕಾಗಿ ವಿದ್ಯಾರ್ಥಿಗಳೊಡನೆ ಆ ವಿಷಯವನ್ನು ಕುರಿತು ಚರ್ಚಿಸಬೇಕು. ತರುವಾಯ ಬರೆಯತಕ್ಕ ವಿಷಯದಲ್ಲಿ ಮಾಡಬಹುದಾದ ಭಾಗಗಳನ್ನು ಹೇಳಿ, ಒಂದೋಂದು ಭಾಗದಲ್ಲಿ ಸೇರಿಸಬಹುದಾದ ವಿಷಯವನ್ನು ವಿದ್ಯಾರ್ಥಿಗಳ ಸ್ವಂತ ಭಾಷೆಯಿಂದ ಹೇಳಿಸಬೇಕು; ಅಂದರೆ, ಅವಲೋಕಿಸಿದ ವಿಷಯವನ್ನು ಬರೆಯಲು ವಿದ್ಯಾರ್ಥಿಗಳು ಸಮರ್ಥರಾಗುವರು.

ಇದರಂತೆ ವಿದ್ಯಾರ್ಥಿಗಳು ಕೇಳಿದ್ದನ್ನು ನೆನಪಿನಲ್ಲಿಟ್ಟು ಬರೆಯುವಾಗಾದರೂ ಶಿಕ್ಷಕರು ಸಹಾಯ ಮಾಡಬೇಕು. ಶಿಕ್ಷಕರು ಕಥೆಗಳನ್ನು ಇಲ್ಲವೆ ಬೇರೆ ಯಾವದೊಂದು ವಿಷಯವನ್ನು ಸುಲಭ ವಾಕ್ಯಗಳಿಂದ ಕ್ಲಾಸಿನಲ್ಲಿ ಹೇಳಬೇಕು. ಅವರು ಹೇಳುವ ವಾಕ್ಯಗಳೂ, ಸರಣಿಯೂ ವಿದ್ಯಾರ್ಥಿಗಳ ಬರವಣಿಗೆಗೆ ಸಹಾಯ ಮಾಡುವಂತೆ ಇರಬೇಕು. ಹೇಳು

ವದಾದ ಮೇಲೆ ವಿದ್ಯಾರ್ಥಿಗಳೂ, ಶಿಕ್ಷಕರೂ ವಿಷಯದಲ್ಲಿ ಮಾಡಬಹುದಾದ ಭಾಗಗಳನ್ನು ಕುರಿತು ಚರ್ಚಿಸಬೇಕು. ತರುವಾಯ ಆಯಾ ಭಾಗಗಳಲ್ಲಿ ಸೇರಿಸಬಹುದಾದ ಸಂಗತಿಗಳನ್ನು ಕೆಲವು ವಿದ್ಯಾರ್ಥಿಗಳಿಂದ ಅವರ ಸ್ವಂತದ ಭಾಷೆಯಿಂದ ಹೇಳಿಸಬೇಕು. ಅಂದರೆ, ಕೇಳಿದ ವಿಷಯವು ವಿದ್ಯಾರ್ಥಿಗಳ ಮನಸ್ಸಿನಲ್ಲಿ ನಟ್ಟು, ಅವರು ಕೈಮುಟ್ಟ ಬರೆಯಲು ಸಮರ್ಥರಾಗುವರು.

ಇನ್ನು ವಿದ್ಯಾರ್ಥಿಗಳು ಕೇಳಿದ್ದನ್ನೆಲ್ಲ ನೆನಪಿನಲ್ಲಿಟ್ಟು ಬರೆಯಲಾರರೆಂಬುದು ಸ್ವಾಭಾವಿಕವು. ಅವರು ಹಾಗೆ ಬರೆಯುವ ಅವಶ್ಯಕತೆಯೂ ಇಲ್ಲ. ತಮಗೆ ನೆನಪಿದ್ದದ್ದನ್ನಷ್ಟು ವ್ಯವಸ್ಥೆಯಿಂದ ಬೇರೆ ಬೇರೆ ಕಲಮು ಮಾಡಿ, ಸಣ್ಣ ಸಣ್ಣ ವಾಕ್ಯಗಳಿಂದ ಬರೆದರಾಯಿತು. ವಿದ್ಯಾರ್ಥಿಗಳಿಂದ ಅಂದೆ ಹೇಳಿದ ವಿಷಯವನ್ನು ಅಂದೇ ಬರಿಸುವದಲ್ಲದೆ, ಕ್ಲಾಸಿನಲ್ಲಿ ಕಲಿಸಿದ ವಿಷಯಗಳನ್ನಾದರೂ ಅವರಿಂದ ಬರಿಸಬಹುದು. ಅದರಂತೆ, ಮನೆಯಲ್ಲಿಯೂ, ನೆರೆಹೊರೆಯಲ್ಲಿಯೂ ಕೇಳಿದ ಸಂಗತಿಗಳನ್ನು ಬರಿಸಬಹುದು. ಐತಿಹಾಸಿಕ ಪ್ರಸಂಗಗಳು, ವಿದ್ಯಾರ್ಥಿಗಳಿಗೆ ಮಾಡಿದ ಉಪದೇಶ, ಮನೆಯೊಳಗಿನ ಸುದ್ದಿಗಳು, ಊರೊಳಗಿನ ಸುದ್ದಿಗಳು, ಪುರಾಣಪ್ರಸಂಗಗಳು, ಹರಿಕೀರ್ತನದೊಳಗಿನ ಪ್ರಸಂಗಗಳು, ಭಾಗವತರ ಆಟ, ನಾಟಕ ಮುಂತಾದವುಗಳ ಸಾರಾಂಶಗಳು ಇವು ಕೇಳಿ ಬರೆಯತಕ್ಕ ವಿಷಯಗಳಾಗಿವೆ. ಇವನ್ನು ಬರೆಯ ಹೇಳುವ ಮೊದಲಾದರೂ ಮೇಲೆ ಹೇಳಿದಂತೆ ವಿದ್ಯಾರ್ಥಿಗಳೊಡನೆ ಭಾಗ ಮಾಡುವದು ಮುಂತಾದವುಗಳ ಸಂಬಂಧದಿಂದ ಕ್ಲಾಸಿನಲ್ಲಿ ಚರ್ಚಿಸುವದು ಹಿತಕರವು.

ಹೀಗೆ ಕೇಳಿದ ವಿಷಯವನ್ನು ವಿದ್ಯಾರ್ಥಿಗಳು ಬರೆದಂತೆ, ಬರೆದಿಟ್ಟಿರುವ ವಿಷಯವನ್ನು ಓದಿ ನೆನಪಿನಲ್ಲಿಟ್ಟು ಅವರು ಬರೆಯಬೇಕು. ಕೇಳಿದ ವಿಷಯದ ಬರವಣಿಗೆಯಲ್ಲಿ ಶಿಕ್ಷಕರ ಹಾಗು ನೆರೆಹೊರೆಯವರ ಹೇಳಿಕೆಯಿಂದ ವಿದ್ಯಾರ್ಥಿಗಳ ಬರವಣಿಗೆಗೆ ಬಹುಮಟ್ಟಿಗೆ ಸಹಾಯವಾಗುತ್ತಿತ್ತು. ಆ ಸಹಾಯವು ಓದಿ ಬರೆಯುವಾಗ ತಕ್ಕಂತೆ ಆಗುವದಿಲ್ಲ. ಅನ್ಯರ ಪ್ರತ್ಯಕ್ಷ ಸಹಾಯವಿಲ್ಲದೆ ಮಾಡಬೇಕಾದ ಈ ಕೆಲಸವು ಸ್ವಲ್ಪ ಬಿಗಿಯಾದದ್ದು. ಗ್ರಂಥಾವಲೋಕನದಿಂದ ನಿಬಂಧ ಬರೆಯುವ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳುವ ಗೌರವದ ಮಾರ್ಗವನ್ನು

ಕಂಡುಕೊಳ್ಳಲಿಕ್ಕೆ ಇಲ್ಲಿಂದಲೇ ಆರಂಭವಾಗುವದು. ಈ ಕೆಲಸದ ಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಯೋಗ್ಯ ಮಾರ್ಗವನ್ನು ತೋರಿಸದಿದ್ದರೆ, ಅವರು ವೈಗಳ್ಳರಾಗುವ ಸಂಭವವಿರುವದು; ಯಾಕಂದರೆ, ವಿದ್ಯಾರ್ಥಿ ಗಳಿಗೆ ಯಾವದೊಂದು ವಿಷಯವನ್ನು ಓದಿಕೊಂಡು ಬರೆಯಿರೆಂದು ಹೇಳಿ ದರೆ, ಅವರು ನೋಡಿಕೊಂಡು ಬರೆಯಲಿಕ್ಕೆ ಹವಣಿಸುವದು ಸ್ವಾಭಾವಿಕ ವು. ಈ ಕೆಟ್ಟ ಚಟವು ಬೀಳದಂತೆ ಶಿಕ್ಷಕರು ಉಪಾಯಗಳನ್ನು ಯೋ ಚಿಸಬೇಕು. ಆ ಉಪಾಯಗಳು ನಾಲ್ಕು ಇರುತ್ತವೆ: ಕ್ಲಾಸಿನಲ್ಲಿಯೇ ಓದಿಸಿ ಕ್ಲಾಸಿನಲ್ಲಿಯೇ ಬರಿಸುವದು ಒಂದನೆಯ ಉಪಾಯವು; ನೋಡಿ ಕೊಂಡು ಬರೆಯಲಿಕ್ಕೆ ಆಸ್ಪದವಾಗದಂತೆ ಚಾತುರ್ಯದಿಂದ ವಿಷಯಗಳ ನ್ನು ನಿಯಮಿಸುವದು ಎರಡನೆಯ ಉಪಾಯವು; ಅವ್ಯಯಗಳನ್ನು ಉಪ ಯೋಗಿಸದೆ ಸಣ್ಣ ಸಣ್ಣ ವಾಕ್ಯಗಳಿಂದ ಬರೆಯಿರೆಂದು ಹೇಳುವದು ಮೂರನೆಯ ಉಪಾಯವು; ಬರೆಯುತಕ್ಕ ವಿಷಯದಲ್ಲಿ ಮಾತ್ರತಕ್ಕ ಭಾಗ ಗಳನ್ನು ಹೇಳಿ, ಆಯಾ ಭಾಗಗಳಲ್ಲಿ ಸೇರಿಸಬಹುದಾದ ಸಂಗತಿಗಳನ್ನು ಆರಿಸಿ ಬರೆಯ ಹಚ್ಚುವದು ನಾಲ್ಕನೆಯ ಉಪಾಯವು. ಇವುಗಳಲ್ಲಿ ಪ್ರಸಂಗಕ್ಕೆ ಯೋಗ್ಯವಾದ ಉಪಾಯವನ್ನು ಶಿಕ್ಷಕರು ಉಪಯೋಗಿಸಿದರೆ ಲಾಭವಾಗದೆ ಇರದು.

ವೆ. ತಿ. ಕುಲಕರಣಿ.

ವಿದ್ಯಾಖಾತೆಯ ನೋಟೀಸುಗಳು.

ಕೆಳಗೆ ಬರೆದ ಪುಸ್ತಕಗಳು ಪ್ರಾಥಮಿಕ ಶಾಲೆಗಳ ಬಗ್ಗೆ ಸರಕಾರ ದಿಂದ ಮಂಜೂರ ಮಾಡಲ್ಪಟ್ಟವೆ:—

ಕನ್ನಡ ಪುಸ್ತಕಗಳು. **ಕ್ರಿಂ.**

ಪುಸ್ತಕದ ಹೆಸರು.	ಯಾತರ ಬಗ್ಗೆ ಮಂಜೂರ ಮಾಡಿರುತ್ತದೆ.	ರು.	ಆ.	ಪೈ.
ಗೆಜ್ಜೀಕೃತ ಪ್ರೊಫೆಸರ ಗೋಖಲೆ ಯವರ ಅಂಕಗಣಿತ ಭಾಗ ೧	ಲೈಬ್ರರಿಗಳ ಬಗ್ಗೆ ಮತ್ತು ಶಾಲೆಯಲ್ಲಿ ಉಪಯೋಗಿ ಸುವದಕ್ಕೆ.	೦	೪	೬
ಸದರ ಭಾಗ ೨		೦	೮	೦
ದಾತಾರಕೃತ ಮುಂಬಯಿ ಇಲಾ ಖೆಯ ವ-ನೆಯಲ್ಲುಪಯೋಗಿ ಸುವ ನಕಾಶೆ (ಕಾಗದ)	ಇನಾಮಿನ ಬಗ್ಗೆ ಮತ್ತು ಶಾಲೆಯಲ್ಲಿ ಉಪಯೋಗಿ ಸುವ ಬಗ್ಗೆ.	೦	೩	೦

ಸದರ. ಹಿಂದುಸ್ತಾನದ ನಕಾಶೆ (ಕಾಗದ)	ಸದರ	೦ ೩ ೦
ಉರ್ದು ಪುಸ್ತಕಗಳು.		
ಮೌಲವಿ ಹಾಫೀಜ್ ಜಲಾಲುದ್ದೀನ ಅಹಮ್ಮದಕೃತ:—		
ಸಂಬುಲಿಸ್ತಾನ ಇ ಉರ್ದು (ಉರ್ದು ವಾಚನ ಪುಸ್ತಕ)	ಉರ್ದು ಶಾಲೆಗಳಲ್ಲಿ ಇನಾಮಿನ ಬಗ್ಗೆ ಮತ್ತು ಲೈಬ್ರರಿಗಳ ಬಗ್ಗೆ.	೦ ೪ ೦
ನಿಗರಿಸ್ತಾನ ಇ ಉರ್ದು (ಉರ್ದು ವಾಚನ ಪುಸ್ತಕ)	ಸದರ	೦ ೬ ೦

ಪುಣೆ ಡೈರೆಕ್ಟರ ಆಫ್ ಪಬ್ಲಿಕ ಇನ್‌ಸ್ಟ್ರಕ್ಶನರವರ ಆಫೀಸು ತಾ|| ೩೩|೨|೧೦

W. H. SHARP,
Director of Public Instruction.

ಪ್ರವಾಹಿ ಪದಾರ್ಥಗಳ ಭಾರವು ನಾಲ್ಕೂ ಕಡೆಗೆ ಒತ್ತುತ್ತಿರುತ್ತದೆಂಬದನ್ನೂ ನೀರಿನ ಶಕ್ತಿಯನ್ನು ಯಂತ್ರಗಳನ್ನು ನಡಿಸುವದಕ್ಕೆ ಉಪಯೋಗಿಸುವ ಬಗೆಯನ್ನೂ ತೋರಿಸುವದಕ್ಕೋಸ್ಕರ ಪೆನಶನರ ಸ್ಕೂಲಮಾಸ್ತರ ಮಿ|| ಗೋವಿಂದ ರಾಮಚಂದ್ರ ಕೇಳಕರ (ಪತ್ತೆ:— ಪುಣೆಶಹರದ ಹತ್ತರ ಹಿಂಗಣೆ ಬುದ್ರುಕ ಎಂಬಲ್ಲಿ ಅನಾಥ ಬಾಲಿಕಾಶ್ರಮದಲ್ಲಿ) ಇವರು ಮಾಡಿದ "ಬಾರ್ಕರ್ಸ ಮಿಲ್" (ಕ್ರಯ ರು-೧೪-೪) ಎಂಬ ಯಾಂತ್ರಿಕ ಉಪಕರಣವು ಮಾನ್ಯಮಾಡಲ್ಪಟ್ಟಿರುತ್ತದೆ. ಇದನ್ನು ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸವದಕ್ಕೋಸ್ಕರ ಆ ಆ ಜಿಲ್ಹೆಯ ಡಿಪುಟಿ ಎಜ್ಯುಕೇಶನಲ್ ಇನಸ್ಪೆಕ್ಟರರ ಮರ್ಜಿಗೆ ಬಂದರೆ ಕೊಳ್ಳಬಹುದು.

ಧಾರವಾಡ ತಾ|| ೧೨|೪|೧೦

R. B. Karandikar.
ಎಜ್ಯುಕೇಶನಲ್ ಇನಸ್ಪೆಕ್ಟರ, ದಕ್ಷಿಣಭಾಗ

ಮಿ|| ಗೋವಿಂದ ರಾಮಚಂದ್ರ ಕೇಳಕರ ಪೆನಶನರ ಸ್ಕೂಲಮಾಸ್ತರ (ಪತ್ತೆ: ಪುಣೆ ಶಹರದ ಹತ್ತರ ಹಿಂಗಣೆ ಬುದ್ರುಕ ಎಂಬಲ್ಲಿ ಅನಾಥ ಬಾಲಿಕಾಶ್ರಮದಲ್ಲಿ) ಇವರು ತಯಾರಮಾಡಿದ "ಇಂಟರಮಿಂಟಂಟ್ ಫೌಂಟನ್" ಅಂದರೆ, ನಿಂತು ನಿಂತು ನೀರು ಪುಟಿಯುವ ಕಾರಂಜಿ (ಕ್ರಯ ೧ ರೂಪಾಯಿ)ಯನ್ನು ಮಾನ್ಯಮಾಡಿರುತ್ತದೆ. ಇದನ್ನು ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವದಕ್ಕೋಸ್ಕರ ಆ ಆ ಜಿಲ್ಹೆಯ ಡಿಪುಟಿ ಎಜ್ಯುಕೇಶನಲ್ ಇನಸ್ಪೆಕ್ಟರವರು ಕೊಳ್ಳಬಹುದು.

ಧಾರವಾಡ. ತಾ|| ೧೨|೪|೧೦

R. B. Karandikar.
ಎಜ್ಯುಕೇಶನಲ್ ಇನಸ್ಪೆಕ್ಟರ, ದಕ್ಷಿಣಭಾಗ

ಸಿದ್ಧನಾಥ ಪೂಂ, ಮೊರಬ

ಶಾಲಾಪತ್ರಿಕ.

ಜುಲೈ ೧೯೧೦.

ಶಾಲಾಪತ್ರಕ.

ಪದ್ಯಂ

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಿಂ ಸಚ್ಛಿಕ್ಷಣೋತ್ಕರ್ಷವಂ
ಬಯಸುತ್ತಂ ಪ್ರತಿಮಾಸದಾದಿಗೊಳವಿಂದೀ ಪತ್ರಮಂ ಮುದ್ರಿಸಿ ||
ನಯದಿಂದಿತ್ತಪೆವೋದುವರ್ಗೆ ಸುಗುಣಂದೋರ್ಕಲ್ಕೆ ಕೈಕೊಂಬುದೈ
ದಯೆಯಿಂ ದೋಷವತಿದ್ದವೇಳ್ವುದು ಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ||೧||

ಪುಸ್ತಕ ೪೬ } ಜುಲೈ ೧೯೧೦. { ಸಂಚಿಕೆ ೭.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಬಾದಶಹರಾದ ೫ನೇ ಜಾರ್ಜರವರು.

ಲೋಕಪ್ರಿಯರೂ ಶಾಂತತಾಪ್ರವರ್ತಕರೂ ಆದ ೭ನೇ ಎಡ್ವರ್ಡ ಬಾದಶಹರವರು ಕಳೆದ ಮೇ ತಿಂಗಳ ೬ನೇ ತಾರೀಖಿನಲ್ಲಿ ಪರಲೋಕವಾಸಿಗಳಾದ ಸಂಗತಿಯನ್ನು ಕಳೆದ ಸಂಚಿಕೆಯಲ್ಲಿ ಶ್ರುತಪಡಿಸಿದ್ದೇವಷ್ಟೇ. ಇಂಗ್ಲಿಷ ರಾಜ್ಯವ್ಯವಹಾರಶಾಸ್ತ್ರದಲ್ಲಿ "ಇಂಗ್ಲಂಡದ ಅರಸನು ಎಂದೂ ಸಾಯುವದಿಲ್ಲ" ಎಂಬದೊಂದು ಗಾದೆಯ ಮಾತು ಇರುವದು. ಆ ದೇಶದ ಪರಂಪರಾಗತವಾದ ರೂಢಿಯಿಂದಲೂ, ಕಾಯಿದೆಯ ನಿರ್ಬಂಧಗಳಿಂದಲೂ, ರಾಜ್ಯವನ್ನಾಳುತ್ತಿದ್ದ ಅರಸು ತೀರಿದರೆ ಅವನ ಪಟ್ಟಕ್ಕೆ ಯಾರು ಬಾಧ್ಯಸ್ಥರೆಂಬ ಸಂಗತಿಯು ನಿಃಸಂದೇಹವಾಗಿ ನಿರ್ಣಯಿಸಲ್ಪಟ್ಟಿರುವದರಿಂದ ಸೂರ್ಯಚಂದ್ರರ ಉದಯಾಸ್ತಗಳು, ಸಮುದ್ರದ ಏರಿಳಿತಗಳು ಇವೇ ಮೊದಲಾದ ಸೃಷ್ಟಿಕಾರ್ಯಗಳು ಅವ್ಯಾಹತವಾಗಿ ನಡೆಯುವಂತೆ, ಒಬ್ಬ ಅರಸು ತೀರಿದ ಕ್ಷಣಕ್ಕೆ ಯತ್ಕಿಂಚಿತವೂ ಅವ್ಯವಸ್ಥೆಯಾಗದೆ, ಕಾಯಿದೆಯಿಂದಲೂ, ಪರಂಪರಾಗತವಾದ ರೂಢಿಯಿಂದಲೂ, ಮೊದಲೇ ಗೊತ್ತಾಗಿದ್ದ ವಾರಸದಾರನು ರಾಜ್ಯಾಧಿಕಾರವನ್ನು ವಹಿಸಿಕೊಳ್ಳುತ್ತಾನೆ. ಅನೇಕ ದೇಶಗಳ ಪ್ರಾಚೀನ-ಅರ್ವಾಚೀನ ಇತಿಹಾಸಗಳನ್ನು ನೋಡಲಾಗಿ, ಸಿಂಹಾಸನಾರೂಢನಾಗಿದ್ದ ಅರಸು ಮರಣ ಹೊಂದಲಾಗಿ, ಅವನ ಸ್ಥಾನಕ್ಕೆ ಎರಡನೇ ಮನುಷ್ಯನು ಬರುವದು ರಾಷ್ಟ್ರದ ಇತಿಹಾಸದಲ್ಲಿ ಅತ್ಯಂತ ಮಹತ್ವ

ವುಳ್ಳ ಸಂಗತಿಯೆಂದು ಎಣಿಸಲ್ಪಡುತ್ತಾ ಬಂದಿರುತ್ತದೆ; ಮತ್ತು ಒಮ್ಮೊಮ್ಮೆ ಈ ಪ್ರಸಂಗಗಳು ಪ್ರಜೆಗಳಿಗೆ ಭೂಕಂಪ-ವಿದ್ಯುತ್ಪಾತಗಳಂತೆ ಬಹಳ ಹಾನಿಕರವಾಗುತ್ತವೆ. ಆದರೆ ನಿಯಮಬದ್ಧವಾದ ರಾಜ್ಯಪದ್ಧತಿಯುಳ್ಳ ಇಂಗ್ಲಂಡ ದೇಶದಲ್ಲಿ ಹೊಸ ಅರಸನ ರಾಜ್ಯಾರೋಹಣವು ಪ್ರಜೆಗಳಿಗೆ ಅನಾಹೂವಾಗಿ ಪರಿಣಮಿಸದೆ, ಸ್ವಾಭಾವಿಕವಾದ ಸೃಷ್ಟಿಕ್ರಮದಂತೆ ಶಾಂತವಾಗಿ ನಡೆಯುತ್ತದೆ. ಇದರಿಂದಲೇ, ಇಂಗ್ಲಂಡದ ಅರಸನು ಸಾಯುವದಿಲ್ಲೆಂಬ ನಾಣ್ಣುಡಿಯುಂಟಾಗಿರುವದು. ಇದರ ಅರ್ಥವು ಇಂಗ್ಲಂಡದಲ್ಲಿ ರಾಜ್ಯಾಧಿಕಾರವನ್ನು ನಡಿಸುತ್ತಿದ್ದ ಮನುಷ್ಯನು ಎಂದೂ ಸಾಯುವದೇ ಇಲ್ಲವೆಂತಲ್ಲ; ಆದರೆ ರಾಜ್ಯಾಧಿಕಾರದ ಮೂರ್ತಿರೂಪವಾದ ಅರಸನು ಸತ್ತರೂ ಅರಸುತನವು ಸಾಯುವದಿಲ್ಲ; ಒಬ್ಬ ಅರಸನು ಸತ್ತ ಕೂಡಲೆ, ಅರಸುತನದ ಅಧಿಕಾರವು ಅರಸುತನಕ್ಕೆ ಬಾಧ್ಯಸ್ಥನಾಗಿದ್ದ ಮತ್ತೊಬ್ಬನಲ್ಲಿ ಸೇರುವದು. ಇಷ್ಟೇ ಈ ನಾಣ್ಣುಡಿಯ ಅರ್ಥವಿರುವದು. ಈತತ್ವವು ಇಂಗ್ಲಂಡದ ರಾಜ್ಯವ್ಯವಸ್ಥೆಗೆ ಅತ್ಯಂತ ಭೂಷಣಾಸ್ಪದವಾಗಿದೆ.

ಇಂಗ್ಲಂಡದ ರಾಜಪ್ರಜೆಗಳ ಪರಸ್ಪರ ಸಂಬಂಧವಾದರೂ ಮೇಲೆ ಹೇಳಿದ ಪ್ರಕಾರ ಪೂರ್ವಪರಂಪರೆಯಿಂದಲೇ ಗೊತ್ತಾದದ್ದಿರುತ್ತದೆ. ಪ್ರಜೆಗಳಲ್ಲಿ ಪ್ರತಿ ಒಬ್ಬ ಮನುಷ್ಯನು ಅರಸನು ನಿಯಮಿಸಿದ ಕೆಲಸವನ್ನು ಮಾಡಲಿಕ್ಕೆ ಬದ್ಧನಿರುತ್ತಾನೆ. ಅರಸನು ಹೇಳಿದ ಕೆಲಸವನ್ನು ಅವನು ಯಾವ ಕಾರಣದಿಂದಲೂ ಒಲ್ಲೆನೆನ್ನಗೆ, ತನ್ನ ಸಾಮರ್ಥ್ಯಾನುಸಾರವಾಗಿ ಮಾಡಲೇ ಬೇಕಾಗುತ್ತದೆ. ಈ ನಿಯಮಕ್ಕನುಸರಿಸಿ ಅರಸನ ಅಪ್ಪಣೆಯ ಮೇರೆಗೆ ಇಂದಿಗೆ ಎಷ್ಟೋ ಶತಮಾನಗಳಿಂದ ದೇಶದೊಳಗಿನ ಲಾರ್ಡ್ಸ, ಅಂದರೆ ಪ್ರಭುಗಳೂ, ಕಾಮನ್ಸ, ಅಂದರೆ ಸಾಮಾನ್ಯ ಜನರ ಪ್ರತಿನಿಧಿಗಳೂ ಪಾರ್ಲಮೆಂಟ ಸಭೆಯಲ್ಲಿ ತಮ್ಮ ಸ್ವಂತ ಖರ್ಚಿನಿಂದ ಬಂದು ಕೂಡ್ರುತ್ತಿರುವರು. ಇದರಂತೆಯೇ ಅರಸನು ಮಂತ್ರಿಯ ಕೆಲಸವನ್ನು ಯಾವಾತನಿಗೆ ನಿಯಮಿಸುವನೋ ಅವನು ಅದನ್ನು ಮಾಡಲಿಕ್ಕೇಬೇಕು; ಮಾಡುವದಿಲ್ಲೆಂದು ಹೇಳಲಾಗದು. ಒಂದು ವೇಳೆ ಅರಸನು ನಿಯಮಿಸಿದ ಕೆಲಸವು ತನ್ನಿಂದ ಆಗದಂತಿದ್ದರೆ, ಆ ಮನುಷ್ಯನು "ಈ ಕೆಲಸವು ನನ್ನಿಂದ ಆಗುವದಿಲ್ಲ"ಂದು ಎಂದೂ ಹೇಳುವದಿಲ್ಲ. "ಈ ಕೆಲಸಕ್ಕೆ ನನ್ನನ್ನು ನಿಯಮಿಸುವದಕ್ಕಿಂತ ಇಂಥವನನ್ನು ನಿಯಮಿಸಿದರೆ ಒಳ್ಳೇದಾಗುವದು" ಎಂದು

ಸೂಚಿಸಬಹುದು. ' ಯೋಗ್ಯನಾದ ಮತ್ತೊಬ್ಬ ಮನುಷ್ಯನು ಬಂದು ಕೆಲಸವನ್ನು ವಹಿಸಿಕೊಳ್ಳುವತನಕ ಮೊದಲಿನ ಮನುಷ್ಯನು ತನ್ನ ಕೆಲಸವನ್ನು ಯಥಾಕ್ರಮದಂತೆ ಮಾಡಲಿಕ್ಕೆ ಬೇಕು. ಈ ಮೇರೆಗೆ ಯಾವತ್ತು ಕೆಲಸಗಳು ಪೂರ್ವಾಪರಂಪರೆಯನ್ನು ಅನುಸರಿಸಿ ನಡೆಯುತ್ತವೆ. ಇಂಗ್ಲಿಷ ರಾಜ್ಯಕಾರಭಾರದಲ್ಲಿ ಪ್ರತಿ ಒಬ್ಬನು ಪೂರ್ವಾಪರಂಪರೆಯನ್ನು ಅನುಸರಿಸಿಯೇ ನಡೆಯಬೇಕೆಂಬ ನಿರ್ಬಂಧವಿರುತ್ತದೆ. ಅದರಿಂದ, ಅವ್ಯವಸ್ಥೆಯು ಎಂದೂ ಆಗುವದಿಲ್ಲ; ಮತ್ತು ಯಾವತ್ತು ಕೆಲಸಗಳು ಅಖಂಡವಾಗಿ ಸಾಗುವವು.

ಮೇಲೆ ಹೇಳಿದ ತತ್ವಕ್ಕನುಸಾರವಾಗಿ, ಪರಮಪೂಜ್ಯರಾದ ೭ನೇ ಎಡ್ವರ್ಡ ಚಕ್ರವರ್ತಿಯವರು ಕಾಲವಶವಾದ ಮರುದಿವಸವೇ ಅವರ ಹಿರಿಯಮಕ್ಕಳಾದಂಥ ಮತ್ತು ಅದುವರೆಗೆ ಪ್ರಿನ್ಸ ಆಫ್ ವೇಲ್ಸರಾಗಿದ್ದಂಥ ಜಾರ್ಜಯುವರಾಜರು ೫ನೇ ಜಾರ್ಜರೆಂಬ ಅಭಿಧಾನದಿಂದ ಸಮಸ್ತ ಬ್ರಿಟಿಶ್ ಸಾಮ್ರಾಜ್ಯದ ಆಧಿಪತ್ಯವನ್ನು ವಹಿಸಿಕೊಂಡರು; ಮತ್ತು ಪೂರ್ವಪದ್ಧತಿಯಂತೆ ಪ್ರಮುಖರಾದ ಸರದಾರರು ನೆರೆದಂಥ ಪ್ರಿವ್ಹಿ ಕೌನ್ಸಿಲ್ ಸಭೆಯಲ್ಲಿ "ನಾನು ಪರಂಪರೆಯಿಂದ ನಡೆದುಬಂದ ಕಾಯಿದೆಗಳನ್ನು ಅನುಸರಿಸಿ ರಾಜ್ಯಕಾರಭಾರವನ್ನು ಸಾಗಿಸುವೆನು; ಹಾಗೂ ಧರ್ಮಸಂರಕ್ಷಣೆಯನ್ನು ಮಾಡುವೆನು" ಎಂದು ಪ್ರತಿಜ್ಞೆಯನ್ನು ಮಾಡಿದರು. ಅವರು ಇಂಗ್ಲಂಡದ ಅರಸರೂ ಹಿಂದುಸ್ತಾನದ ಸಾಮ್ರಾಜ್ಯಕ್ಕೆ ಬಾದಶಹರೂ ಆದ ಬಗ್ಗೆ ಜಾಹೀರನಾಮೆಗಳು ಬ್ರಿಟಿಶ್ ಸಾಮ್ರಾಜ್ಯದೊಳಗಿನ ಯಾವತ್ತು ಮುಖ್ಯಸ್ಥಳಗಳಲ್ಲಿ ಓದಲ್ಪಟ್ಟಿರುತ್ತವೆ. ಆ ಜಾಹೀರನಾಮೆಗಳನ್ನೂ ಬಾದಶಹರವರ ಅಭಿವಚನವನ್ನೂ ಹಿಂದುಸ್ತಾನದ ಪ್ರಜೆಗಳಿಗೂ ಸಂಸ್ಥಾನಿಕರಿಗೂ ಅವರು ಕಳುಹಿದ ಪತ್ರವನ್ನೂ ಇದೇ ಸಂಚಿಕೆಯಲ್ಲಿ ಮುಂದೆ ಮುದ್ರಿಸಿದ್ದೇವೆ. ಈ ಮೇರೆಗೆ ಈಗ ನಮ್ಮ ಸಾರ್ವಭೌಮರಾಗಿರುವ ೫ನೇ ಜಾರ್ಜ ಪ್ರಭುಗಳ ಸಂಕ್ಷಿಪ್ತ ಚರಿತ್ರವನ್ನು ನಮ್ಮ ವಾಚಕರಿಗೋಸ್ಕರ ಇದರಡಿಯಲ್ಲಿ ಕೊಡುತ್ತೇವೆ:—

ಇವರು ಎಡ್ವರ್ಡ ಪ್ರಭುಗಳ ಮತ್ತು ಅಲೆಕ್ಸಾಂಡ್ರಾ ಮಹಾರಾಣಿಯವರ ಮರುಚಲ ಮಕ್ಕಳು. ಇವರು ಇ. ಸ. ೧೮೬೫ ವರ್ಷ ಜೂನ ತಿಂಗಳ ೩ನೇ ತಾರೀಖಿನ ದಿವಸ ಲಂಡನದಲ್ಲಿ ಮಾರ್ಲಬರೋ ಎಂಬ ಅರಮ

ನೆಯಲ್ಲಿ ಹುಟ್ಟಿದವರು. ಎಡ್ವರ್ಡ ಪ್ರಭುಗಳ ಚೊಚ್ಚಲ ಮಕ್ಕಳು ಕ್ಲಾರೆನ್ಸನ ಡ್ಯೂಕರಾಗಿದ್ದ ಆಲ್ಬರ್ಟ ವ್ಹಿಕ್ಟರರೆಂಬವರು. ಇವರಿಗಿಂತ ನಮ್ಮ ಬಾದಶಹರು ೧೭ ತಿಂಗಳು ಚಿಕ್ಕವರು. ಇಂಗ್ಲಂಡದ ಪಟ್ಟಕ್ಕೆ ಬಾಧ್ಯಸ್ಥನಾದ ರಾಜಪುತ್ರನಿಗೂ ಬೇರೆ ರಾಜಪುತ್ರರಿಗೂ ಎಲ್ಲ ಪ್ರಕಾರದ ಜ್ಞಾನವಾಗುವಂಥ ಶಿಕ್ಷಣವು ಕೊಡಲ್ಪಡುವದು. ಕೇವಲ ಪಾಂಡಿತ್ಯದ ಅಥವಾ ವಿಶ್ವವಿದ್ಯಾಲಯದ ಶಿಕ್ಷಣವನ್ನು ಅವರಿಗೆ ಕೊಡುವದಿಲ್ಲ. ಮತ್ತು ಅನೇಕಜನ ರಾಜಪುತ್ರರಿದ್ದರೆ, ಒಬ್ಬನಿಗೆ ಹಡಗುಪಡೆಯ ಶಿಕ್ಷಣವನ್ನೂ ಮತ್ತೊಬ್ಬನಿಗೆ ನೆಲದ ಮೇಲಿನ(ಲಷ್ಕರೀ) ಯುದ್ಧಶಿಕ್ಷಣವನ್ನೂ ಕೊಡುವ ಪದ್ಧತಿಯು ಪ್ರಚಾರದಲ್ಲಿರುವದು. ಗ್ರೇಟಬ್ರಿಟನ್ನಿನ ಸುರಕ್ಷಿತತೆಯು ವಿಶೇಷವಾಗಿ ಹಡಗುಪಡೆಯನ್ನು ಅವಲಂಬಿಸಿರುವದು. ಆದಕಾರಣ ಒಬ್ಬ ರಾಜಪುತ್ರನು "ಅಡಮಿರಲ್" ಅಂದರೆ, ಯುದ್ಧದ ಹಡಗುಪಡೆಯ ಮುಖ್ಯಸ್ಥನಾಗಲೇ ಬೇಕೆಂದು ಸಾಧಾರಣವಾದ ನಿಯಮ ಉಂಟು. ಆ ಮೇರೆಗೆ ಇ. ಸ. ೧೮೭೭ ನೇ ವರ್ಷ ನಮ್ಮ ಬಾದಶಹರನ್ನೂ ಇವರ ಅಣ್ಣಂದಿರನ್ನೂ ಬ್ರಿಟ್ಯಾನಿಯಾ ಎಂಬ ಯುದ್ಧದ ಹಡಗದಲ್ಲಿ ಹಡಗುಪಡೆಯ ಶಿಕ್ಷಣವನ್ನು ಹೊಂದುವದಕ್ಕಾಗಿ ಇಟ್ಟರು. ರಾಜಪುತ್ರರಿದ್ದಾಗ್ಯೂ ಇವರು ನಾವಿಕವಿದ್ಯೆಯ ಅಭ್ಯಾಸದ ಸಲುವಾಗಿ ಅದೇ ಹಡಗದಲ್ಲಿ ಇರುತ್ತಿದ್ದ ಸಾಮಾನ್ಯ ಜನರ ಮಕ್ಕಳೊಡನೆ ಬೆರೆತುಕೊಂಡು ಇರುತ್ತಿದ್ದರು. ಸರತಿಯ ಪ್ರಕಾರ ರಾತ್ರಿಯ ಕಾವಲಿನ ಕೆಲಸ ಸಹಿತವಾಗಿ ಸಂಗಡಿಗರು ಮಾಡುತ್ತಿದ್ದ ಎಲ್ಲ ಕೆಲಸಗಳನ್ನು ಇವರು ಮಾಡುತ್ತಿದ್ದರು. ಆದರೆ ಮಲಗುವದಕ್ಕೆ ಮಾತ್ರ ಇವರಿಗೆ ಬೇರೆ ಕೋಣೆಗಳು ಕೊಡಲ್ಪಟ್ಟಿದ್ದವು. ಸಾರಾಂಶವೇನೆಂದರೆ, ಇವರು ರಾಜಪುತ್ರರಾದಾಗ್ಯೂ ಶಿಕ್ಷಣದ ಸಂಬಂಧವಾದ ಎಂಥ ಕಷ್ಟದ ಕೆಲಸಗಳನ್ನಾದರೂ ಮಾಡಬೇಕಾಗುತ್ತಿತ್ತು. ಅಲ್ಲಿ ಕೆಲಸದ ಸಂಬಂಧದಿಂದ ಇವರ ಗೌರವವನ್ನಾಗಲಿ ದಾಕ್ಷಿಣ್ಯವನ್ನಾಗಲಿ ತಿಲಮಾತ್ರವೂ ಎಣಿಸುತ್ತಿರಲಿಲ್ಲ. ಪ್ರಾಚೀನ ಕಾಲದಲ್ಲಿ ನಮ್ಮ ದೇಶದಲ್ಲಿಯಾದರೂ ಇದೇ ಪ್ರಕಾರದ ವ್ಯವಸ್ಥೆ ಇತ್ತು. ಶ್ರೀ ಕೃಷ್ಣನು ಸಾಂದೀಪನ ಮನೆಯಲ್ಲಿ ವಿದ್ಯಾಭ್ಯಾಸಕ್ಕಿದ್ದಾಗ ಅರಣ್ಯಕ್ಕೆ ಹೋಗಿ ಕಾಷ್ಠಭಾರಗಳನ್ನು ಸಹ ಹೊತ್ತು ತರುತ್ತಿರಲಿಲ್ಲವೇ! ಆದ್ದರಿಂದ ಈ ಕಾಲದಲ್ಲಿ ಉಚ್ಚ ಪ್ರತಿಯ ಶಿಕ್ಷಣವನ್ನು ಹೊಂದುವ ವಿದ್ಯಾರ್ಥಿಗಳು, ಈ ಮಾತನ್ನು ಲಕ್ಷದಲ್ಲಿಡತಕ್ಕದ್ದಾಗಿದೆ. ಈ ಪ್ರಕಾರ ಈ ಉಭಯ

ರಾಜಪುತ್ರರು ಎರಡು ವರ್ಷ ಶಿಕ್ಷಣ ಹೊಂದಿದ ತರುವಾಯ, ಬ್ಯಾಕಾಂಟೆ ಎಂಬ ಎರಡನೇದೊಂದು ಹಡಗದಲ್ಲಿ ಭೂಪ್ರದಕ್ಷಿಣೆಗಾಗಿ ಕಳುಹಲ್ಪಟ್ಟರು. ಆ ಹಡಗದಲ್ಲಿ ನಾವಿಕ ವಿದ್ಯೆಯ ಬೇರೆ ಬೇರೆ ಕೆಲಸಗಳ ಅನುಭವವನ್ನು ತೆಗೆದುಕೊಳ್ಳುತ್ತ ೩ ವರ್ಷ ಎಷ್ಟೋ ದೂರ ದೂರದ ಪ್ರವಾಸಗಳನ್ನುಮಾಡಿ ತಿರುಗಿ ಬಂದರು. ಆ ಮೇಲೆ ಪ್ರಿನ್ಸ ಜಾರ್ಜರನ್ನು "ಕ್ಯಾನಡಾ" ಎಂಬ ಯುದ್ಧದ ಹಡಗದಲ್ಲಿ "ಮಿಡ್ ಶಿಪ್ ಮನ್" ಅಂದರೆ ಹಡಗದ ಯುದ್ಧ ವಿದ್ಯೆಯನ್ನು ಬಲ್ಲ ನಾವಿಕನನ್ನಾಗಿ ನಿಯಮಿಸಿದರು. ಈ ಹಡಗವು ಅಮೇರಿಕೆಯ ಪೂರ್ವ ದಂಡೆಯ ಮೇಲೆ ಇತ್ತು. ಇ. ಸ. ೧೮೮೫ನೇ ವರ್ಷ ಅವರು "ಲೆಫ್ಟನೆಂಟ"-ರಾದರು. ತರುವಾಯ ಅವರು ಹಡಗದ ಮುಖ್ಯಾಧಿಕಾರಿಯಾಗುವ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲಾಗಿ, ಇ. ಸ. ೧೮೯೦ ನೇ ವರ್ಷ ಅಮೇರಿಕೆಯ ಪೂರ್ವ ದಂಡೆಯ ಮೇಲೆ ಇರುವ "ಥ್ರಶ್" ಎಂಬದೊಂದು ಸಣ್ಣ ಹಡಗುಪಡೆಯ ಮುಖ್ಯಾಧಿಕಾರಿಯಾಗಿ ನಿಯಮಿಸಲ್ಪಟ್ಟರು. ಅವರಿಗೆ ಕ್ಯಾಪ್ಟನ್ನ ಎಂಬ ಪದವಿಯು ೧೮೯೧ನೇ ವರ್ಷ ದೊರೆಯಿತು. ಇದೇ ಕಾಲಕ್ಕೆ ಅವರು ಜಮೇಕಾ ದ್ವೀಪದಲ್ಲಿ ನೆರೆದ ಔದ್ಯೋಗಿಕ ಪ್ರದರ್ಶನದ ಬಾಗಿಲವನ್ನು ತೆರೆದರು. ಅಲ್ಲಿಂದ ರಾಜಪುತ್ರರಾದ ಜಾರ್ಜರು ಕೆಲವು ದಿವಸ ಸ್ವದೇಶಕ್ಕೆ ಬಂದು, ಅಣ್ಣಂದಿರನ್ನು ಕೂಡಿಕೊಂಡು, ಇಡೀ ಗ್ರೇಟಬ್ರಿಟನ್ನದಲ್ಲಿಯೂ ಆಯರ್ಲಂಡ ಹಾಗು ನೆರೆಯ ದ್ವೀಪಗಳಲ್ಲಿಯೂ ಪ್ರವಾಸ ಮಾಡಿದರು. ಮುಂದೆ ೧೮೯೨ನೇ ವರ್ಷ ಅಣ್ಣಂದಿರು ಜ್ವರದಿಂದ ಅಕಸ್ಮಾತ್ತಾಗಿ ತೀರಿಕೊಂಡರು. ಈ ಉಭಯ ಬಂಧುಗಳಲ್ಲಿ ಪರಸ್ಪರ ಪ್ರೇಮವು ವಿಶೇಷವಾಗಿದ್ದದರಿಂದ ರಾಜಪುತ್ರ ಜಾರ್ಜರಿಗೆ ಅಣ್ಣಂದಿರ ಮರಣದಿಂದ ಬಹಳ ದುಃಖವಾಯಿತು. ಅಣ್ಣಂದಿರಾದ ಪ್ರಿನ್ಸ ವ್ಹಿಕ್ಟರರು ತೀರಿಕೊಂಡದ್ದರಿಂದ ಪಟ್ಟದ ಬಾಧ್ಯಸ್ಥಿಕೆಯು ಸಹಜವಾಗಿ ಜಾರ್ಜರ ಕಡೆಗೆ ಬಂದಿತು. ಅದರಿಂದ ಅವರ ಶಿಕ್ಷಣದ ಧೋರಣವು ಅಂದಿನಿಂದ ಬದಲು ಮಾಡಲ್ಪಟ್ಟಿತು. ಅವರು ಹಡಗು ಪಡೆಯ ಶಿಕ್ಷಣದಿಂದ ಬಿಡುಗಡೆ ಹೊಂದಿದರು. ಆದಾಗ್ಯೂ ಅವರಿಗೆ ಹಡಗದ ಮೇಲಿನ ಅಧಿಕಾರಿಗಳ ಹುದ್ದೆಗಳು ಯೋಗ್ಯ ಮುದ್ದತಿಗೆ ಸಿಗುತ್ತ ಹೋದವು. ಹಾಗು ಅವರು ಪೂರ್ವ ಪದ್ಧತಿಗೆ ಸರಿಯಾಗಿ ಲಾರ್ಡರ ಸಭೆಯಲ್ಲಿ ಕೂಡ್ರಹತ್ತಿದರು. ಅವರಿಗೆ ಅವರ ಅಣ್ಣಂದಿರ "ಡ್ಯೂಕ ಆಫ್ ಯಾರ್ಕ" ಎಂಬ ಪದವಿ

ಯೂ ಪ್ರಾಪ್ತವಾಯಿತು, ಇಷ್ಟಾದ ಬಳಿಕೂ ಕೆಲವು ವರ್ಷಗಳ ವರೆಗೆ ರಾಜಪುತ್ರ ಜಾರ್ಜರು ಹಡಗು ಪಡೆಯ ಖಾತೆಯಲ್ಲಿ ಕೆಲಸವನ್ನು ಮಾಡಿದರು.

ಇ. ಸ. ೧೮೯೩ರಲ್ಲಿ ರಾಜಪುತ್ರ ಜಾರ್ಜ ಇವರ ವಿವಾಹವು ಟೆಕ್ಕದ ವಿಕ್ಟೋರಿಯಾ ಮೇರಿ ಎಂಬ ರಾಜಪುತ್ರಿಯ ಸಂಗಡ ಆಗತಕ್ಕದ್ದೆಂದು ಪ್ರಸಿದ್ಧವಾಯಿತು. ಈ ರಾಜಪುತ್ರಿಯನ್ನು ಮೊದಲು, ರಾಜಪುತ್ರ ಆಲಬರ್ಟ ವ್ಹಿಕ್ಟರ ಎಂಬವರು ಲಗ್ನ ಮಾಡಿಕೊಳ್ಳಬೇಕೆಂದು ಗೊತ್ತಾಗಿತ್ತು. ಆದರೆ ಅವರು ಅಕಾಲಿಕವಾಗಿ ಮರಣಹೊಂದಿದ್ದರಿಂದ ಪ್ರಿನ್ಸ ಜಾರ್ಜರವರು ಅದೇ ರಾಜಪುತ್ರಿಯನ್ನು ಮದುವೆಯಾದರು. ಈ ಲಗ್ನ ಸಮಾರಂಭವು ಇದೇ ವರ್ಷ, ಅಂದರೆ ರಾಜಪುತ್ರರ ವಯಸ್ಸಿನ ೨೮ನೇ ವರ್ಷ ಬಹು ವಿಜೃಂಭಣೆಯಿಂದ ಸಾಂಗವಾಯಿತು. ರಾಜಕನ್ಯಾ ವಿಕ್ಟೋರಿಯಾ ಮೇರಿ ಇವರು ಇಂಗ್ಲಂಡದ ರಾಜಮನೆತನಕ್ಕೆ ಬಹಳ ಸಮೀಪದ ಸಂಬಂಧಿಕರಾಗಿರುವರು; ಮತ್ತು ಇವರು ಬಾಲ್ಯವನ್ನು ಇಂಗ್ಲಂಡದಲ್ಲಿಯೇ ಕಳೆದಿರುವರು. ಅದರಿಂದ ಇಂಗ್ಲಂಡದಲ್ಲಿ ಮೊದಲಿನಿಂದಲೇ ಲೋಕಪ್ರಿಯರಾಗಿದ್ದ ಇವರ ವಿವಾಹಕ್ಕೆ ಇಂಗ್ಲಂಡದ ಎಲ್ಲ ಪ್ರಜೆಗಳೂ ಒಪ್ಪಿಗೆಯನ್ನು ಕೊಟ್ಟರು. ಇಂಗ್ಲಂಡದ ರಾಜ್ಯಪಟ್ಟಕ್ಕೆ ಬರತಕ್ಕ ಗಂಡಸಾಗಲಿ, ಹೆಂಗಸಾಗಲಿ ಸ್ವದೇಶದೊಳಗೆ ಶರೀರಸಂಬಂಧವನ್ನು ಮಾಡಕೂಡದೆಂದು ಕಾಯಿದೆಯ ನಿರ್ಬಂಧವಿರುತ್ತದೆ. ಈ ನಿರ್ಬಂಧದ ಉದ್ದೇಶವು ಸ್ತುತ್ಯವಿರಬಹುದು; ಆದರೆ ಅದರಿಂದ ರಾಜಕುಮಾರ-ಕುಮಾರಿಯರಿಗೆ ಬಹಳ ತೊಂದರೆಯೂ ಸಂಭವಿಸುತ್ತದೆ. ಸಾಮಾನ್ಯ ಪ್ರಜೆಗಳಲ್ಲಿ ಯಾವನೊಬ್ಬ ತರುಣನಿಗೆ ಅಥವಾ ತರುಣಿಗೆ ತನಗೆ ಅನುರೂಪರಾದವರನ್ನು ಆರಿಸಿಕೊಂಡು ಮದುವೆಯಾಗುವ ಅನುಕೂಲತೆಯುಂಟು. ಆದರೆ, ಸಿಂಹಾಸನವೇರತಕ್ಕ ರಾಜಪುತ್ರ-ಪುತ್ರಿಯರಿಗೆ ಪರದೇಶದಲ್ಲಿ ಹೊತ್ತಿಗೆ ದೊರೆತ ವಧೂ-ವರಗಳೊಡನೆ ಶರೀರಸಂಬಂಧವನ್ನು ಮಾಡಿಕೊಳ್ಳಬೇಕಾಗುತ್ತದೆ. ಇದರಿಂದ ಪ್ರಜೆಗಳ ಮನಸಿಗೂ ಸಮಾಧಾನವಾಗುವದಿಲ್ಲ. ಯಾಕಂದರೆ, ಪರದೇಶದ ಒಬ್ಬ ಸ್ತ್ರೀಯು ಅಥವಾ ಪುರುಷನು ತಮ್ಮ ದೇಶದಲ್ಲಿ ಬಂದು ಅತ್ಯುಚ್ಚಪದಕ್ಕೇರುವದು ಅವರಿಗೆ ಸೇರುವದಿಲ್ಲ. ಮಹಾರಾಣಿ ವಿಕ್ಟೋರಿಯಾ ಇವರ ಪೂಜ್ಯಪತಿಗಳಾದ ಪ್ರಿನ್ಸ

ಅಲ್ಬರ್ಟರವರು ಸುಸ್ವಭಾವವುಳ್ಳವರೂ ಸರ್ವಮಾನ್ಯರೂ ಆದ ಗೃಹಸ್ಥ ರಾಗಿದ್ದಾಗ್ಯೂ, ಅವರು ತಮ್ಮ ಪತ್ನಿಯು ಪ್ರಜೆಗಳ ಹಿತದ ಸಲುವಾಗಿ ಪೂರ್ಣ ದೇಶಾಭಿಮಾನಿಯಾದ ಬ್ರಿಟಿಶ್ ಮುತ್ಸದ್ದಿಯಂತೆ ಜೀವದಿಂದಿರು ವಮಟ್ಟಿಗೂ ಮನಃಪೂರ್ವಕವಾಗಿ ಪ್ರಯತ್ನವನ್ನು ಮಾಡುತ್ತಿದ್ದಾಗ್ಯೂ ಇಂಗ್ಲಂಡದ ಜನರ ಮನಸಿನಲ್ಲಿ ಅವರ ವಿಷಯವಾಗಿ ತೀರ ತಪ್ಪು ತಿಳುವಳಿಕೆಯು ಕಡೆತನಕ ಇತ್ತು. ಅವರು ಪರಲೋಕವಾಸಿಗಳಾದ ಮೇಲೆ, ಅವರಿಂದ ಆರಂಭವಾಗಿದ್ದ ವಿದ್ಯಾಪ್ರಸಾರದ ಕಾರ್ಯಗಳೂ ಉದ್ಯೋಗಾಭಿವೃದ್ಧಿಯ ಕಾರ್ಯಗಳೂ ಬೇರೆ ಎಷ್ಟೋ ಪ್ರಜಾಹಿತದ ಕಾರ್ಯಗಳೂ ಸರಿಯಾಗಿ ಸಾಗದಿರಲು, ಆಗ ಇಂಗ್ಲಂಡದ ಜನರ ಕಣ್ಣು ತೆರೆದವು; ಮತ್ತು "ಪ್ರಿನ್ಸ್ ಅಲ್ಬರ್ಟರವರು ನಿಜವಾಗಿ ನಮ್ಮ ದೇಶದ ಏಳ್ಗೆ ಯ ಸಲುವಾಗಿ ಯತ್ನ ಮಾಡುತ್ತಿದ್ದರು" ಎಂದು ಆಗ ಜನರು ಅನ್ನಹತ್ತಿದ ರು. ಎಡ್ವರ್ಡ ಬಾದಶಹರವರ ಲಗ್ನದ ಸಂಬಂಧದಿಂದಲೂ ಮೊದಮೊದಲು ಇಂಗ್ಲಂಡದ ಪ್ರಜೆಗಳ ಮನಸಿನಲ್ಲಿ ತಪ್ಪುತಿಳುವಳಿಕೆಯೇ ಇತ್ತು. ಆದರೆ ಅವರ ಪತ್ನಿಯು ಇಂಗ್ಲಂಡಕ್ಕೆ ತೀರ ಸಮೀಪದ ದೇಶದ ರಾಜಪುತ್ರಿಯೂ ಅತ್ಯಂತ ಸುಸ್ವಭಾವವುಳ್ಳವಳೂ ಆಗಿದ್ದದರಿಂದ ಆ ತಪ್ಪು ತಿಳುವಳಿಕೆ ಯು ಬಹು ದಿವಸ ನಿಲ್ಲಲಿಲ್ಲ. ಸದ್ಯದ ರಾಣಿಯವರು ಇಂಗ್ಲಂಡದ ಕಾಯಿ ದೆಗೆ ಅನುಸಾರವಾಗಿ ಇಂಗ್ಲಂಡದ ಪ್ರಜೆಗಳೊಳಗಿನವರಾಗದಿದ್ದರೂ ಇಂ ಗ್ಲಂಡದಲ್ಲಿಯೇ ಬೆಳೆದು ದೊಡ್ಡವರಾಗಿರುತ್ತಾರೆ; ಮತ್ತು ಇಂಗ್ಲಂಡದ ರಾಜಮನೆತನಕ್ಕೆ ಹೊಂದಿದವರಿರುತ್ತಾರೆ. ಅದರಿಂದ ಸ್ವಾಭಾವಿಕವಾಗಿ ಯೇ ಅವರು ಲೋಕಪ್ರಿಯರಾಗಿರುವರು.

ನಮ್ಮ ಬಾದಶಹರಾದ ೫ನೇ ಜಾರ್ಜರವರಿಗೆ ಐದು ಮಂದಿ ಗಂಡು ಮಕ್ಕಳೂ ಒಬ್ಬ ಹೆಣ್ಣುಮಗಳೂ ಹೀಗೆ ಆರು ಮಂದಿ ಮಕ್ಕಳು ಇರುವ ರು. ಹಿರೇ ಮಗನಾದ ರಾಜಪುತ್ರ ಎಡ್ವರ್ಡನು ತಾರೀಖು ೨೦ನೇ ಜೂನ ೧೮೯೪ನೇ ವರ್ಷ ಹುಟ್ಟಿದನು. ಸದ್ಯಕ್ಕೆ ಇವನೇ ಪ್ರಿನ್ಸಆಫ್ ವೇಲ್ಸನು, ಅಂದರೆ ಯುವರಾಜನು.

ಇ. ಸ. ೧೮೯೭ನೇ ವರ್ಷ ನಮ್ಮ ಬಾದಶಹರು ಆಯರ್ಲಂಡಕ್ಕೆ ಹೋದರು. ಆಗ ಅಲ್ಲಿಯ ಜನರು ಇವರಿಗೆ ಬಹಳ ಸನ್ಮಾನಮಾಡಿದರು. ಅಲ್ಲಿಯ ಔದ್ಯೋಗಿಕ ಪ್ರದರ್ಶನದ ಸಮಾರಂಭವು ಇವರಿಂದಲೇ ನೆರವೇ

ರಿಸಲ್ಪಟ್ಟಿತು. ಡಬ್ಲಿನ್ ಪಟ್ಟಣದ ಯುನಿವ್ಹರ್ಸಿಟಿಯವರು, ಅಂದರೆ ವಿಶ್ವ ವಿದ್ಯಾಲಯದವರು ಇವರಿಗೆ ಎಲ್. ಎಲ್. ಡಿ. ಎಂಬ ಬಹುಮಾನದ ಪದವಿಯನ್ನು ಕೊಟ್ಟರು. ೧೮೯೮ ರಲ್ಲಿ ಇವರು ಪುನಃ ನೌಕಾವಿದ್ಯೆಯ ನ್ನು ಕೈಕೊಂಡು ಇಂಗ್ಲಿಷ ಕೊಲ್ಲೆಯೊಳಗಿನ ಕ್ರೆಸೆಂಟ್ ಎಂಬ ಯುದ್ಧದ ನಿಶಾನಿ ಹಡಗದಲ್ಲಿ ಕಮಾಂಡರರಾದರು. ಇ. ಸ. ೧೯೦೧ ನೇ ವರ್ಷ ಅದೇಹಡಗು ಪಡೆಯಲ್ಲಿ ಅವರು ಉಪಸೇನಾಪತಿಯಾದರು; ಮತ್ತು ಅದೇ ವರ್ಷ ಅವರಿಗೆ ಆಡಮಿರಲ್, ಅಂದರೆ ನೌಕಾಸೇನಾಪತಿ ಎಂಬ ಪದವಿಯು ದೊರೆಯಿತು. ವಿಕ್ಟೋರಿಯಾ ಮಹಾರಾಣಿಯವರು ತೀರಿಕೊಳ್ಳಲು, ಅವರ ಜ್ಯೇಷ್ಠಪುತ್ರರೂ ಈ ಜಾರ್ಜರ ತೀರ್ಥರೂಪರೂ ಆಗ ಪ್ರಿನ್ಸಆಫ್ ವೇಲ್ಸರೂ ಆಗಿದ್ದ ೭ ನೇ ಎಡ್ವರ್ಡರವರು ಸಿಂಹಾಸನವೇರಿದ್ದರಿಂದ, ದರ್ಬಾರದ ಪದ್ಧತಿಗನುಸಾರವಾಗಿ ಜಾರ್ಜರವರಿಗೆ ಡ್ಯೂಕ್‌ಆಫ್‌ಯಾರ್ಕ ಎಂಬ ಪದವಿಯು ಹೋಗಿ, ಪ್ರಿನ್ಸಆಫ್ ವೇಲ್ಸ ಎಂಬ ಪದವಿಯೂ ಅರ್ಲ ಆಫ್ ಚೆಸ್ಟರ ಎಂಬ ಪದವಿಯೂ ದೊರೆತವು.

ಪೂರ್ವ ಗೋಲಾರ್ಧದಲ್ಲಿರುವ ಆಸ್ಟ್ರೇಲಿಯಾ ಎಂಬ ಮಹಾ ದ್ವೀಪ ದಲ್ಲಿ ಎಷ್ಟೋ ವರ್ಷಗಳಿಂದ ಬ್ರಿಟಿಶ ಪ್ರಜೆಗಳು ಬಿಕ್ಕಲಾಗಿ ನಿಂತಿರುವ ರಷ್ಟೇ. ಇ. ಸ. ೧೯೦೧ ನೇ ವರ್ಷದ ಸುಮಾರಿಗೆ ಆ ಮಹಾದ್ವೀಪದ ಲ್ಲಿ ಬೇರೆಬೇರೆ ಕಡೆಗೆ ಬಿಕ್ಕಲಾಗಿ ನಿಂತ ಜನರ ರಾಜ್ಯಗಳನ್ನು ಒಟ್ಟು ಗೂಡಿಸಿ, ಒಂದೇ ರಾಜ್ಯವನ್ನು ಮಾಡಿ, ಅದಕ್ಕೆ ಪಾರ್ಲಮೆಂಟ ಸಭೆ ಯನ್ನೂ ಬ್ರಿಟಿಶ್ ಸಾಮ್ರಾಜ್ಯದ ಕೆಳಗೆ ಸ್ವಾತಂತ್ರ್ಯವನ್ನೂ ಕೊಡ ಬೇಕೆಂದು ಗೊತ್ತಾಯಿತು. ಇದಕ್ಕಾಗಿ ಆ ಕಾಲದ ಬಾದಶಹರಾದ ೭ ನೇ ಎಡ್ವರ್ಡರವರು ಜಾರ್ಜ ಯುವರಾಜರನ್ನು ಆಸ್ಟ್ರೇಲಿಯಾದೇಶಕ್ಕೆ ಕಳಿಸಿ ಕೊಟ್ಟರು. ಆ ಕೆಲಸವು ತೀರಿದ ಬಳಿಕ ಯುವರಾಜರು ಆ ದೇಶದಲ್ಲಿ ಬಹ ಳವಾಗಿ ತಿರುಗಾಡಿದರು. ಆಸ್ಟ್ರೇಲಿಯದಿಂದ ತಿರುಗಿ ಇಂಗ್ಲಂಡಕ್ಕೆ ಬಂದ ಮೇಲೆ ಅವರಿಗೆ ಲಂಡನದ ಮೇಅರನ ಮುಖಾಂತರವಾಗಿ "ಗಿಲ್ಡಹಾಲ್" ಎಂಬಲ್ಲಿ ಬಹು ದೊಡ್ಡ ಮೇಜವಾನಿಯು ಕೊಡಲ್ಪಟ್ಟಿತು. ಆ ಕಾಲಕ್ಕೆ ಲಾರ್ಡ ರೋಜಬರಿ, ಲಾರ್ಡ ಸಾಲಿಸಬರಿ, ಮಿ. ಚೇಂಬರ್ಲೇನ ಮೊದಲಾದ ದೊಡ್ಡದೊಡ್ಡ ಮುತ್ಸದ್ದಿಗಳು ಬಹಳ ಸರಸಾಗಿ ಮಾತಾಡಿದರು. ಅವರ ಭಾಷಣದಲ್ಲಿ ಯುವರಾಜರಸ್ತುತಿಯು ವಿಶೇಷವಾಗಿತ್ತು. [ಸಶೇಷ

ನಿಬಂಧಶಿಕ್ಷಣ.

(ಕಳೆದ ಮೇ ತಿಂಗಳ ಸಂಚಿಕೆಯ ೧೫೨ನೇ ಪುಟದಿಂದ ಮುಂದೆ ಸಾಗಿದ್ದು.)

ಆರನೇ ಪಾಠ—ಪರ್ಯಟನಪ್ರಸಂಗಗಳು.

ವಿದ್ಯಾರ್ಥಿಗಳಿಗೆ ಪರ್ಯಟನಪ್ರಸಂಗಗಳು ಸ್ವಾಭಾವಿಕವಾಗಿಯೇ ಒದಗುತ್ತವೆ. ಲಗ್ನ, ಮುಂಜಿ, ಜಾತ್ರೆ, ತೇರು, ಯಾತ್ರೆ, ತೀರ್ಥ ಮುಂತಾದವುಗಳ ನೆವದಿಂದ ಅವರು ಪರ್ಯಟನಗಳನ್ನು ಆಗಾಗ್ಗೆ ಮಾಡುವರು. ಹೊರತು, ಶಿಕ್ಷಕರು ಮುಖ್ಯವಾಗಿ ಭೂಗೋಲ, ಇತಿಹಾಸ, ವಸ್ತುಪಾಠ ಈ ವಿಷಯಗಳನ್ನು ಕಲಿಸುವಾಗ ಹುಡುಗರಿಗೆ ಪರ್ಯಟನಪ್ರಸಂಗಗಳನ್ನು ಬುದ್ಧಿಪೂರ್ವಕವಾಗಿ ಒದಗಿಸಿ ಕೊಡಬೇಕಾಗುವದು. ಈ ಕೃತ್ರಿಮಾನುಭವದ ಪ್ರಸಂಗಗಳೆಲ್ಲ ವಿದ್ಯಾರ್ಥಿಗಳ ನಿಬಂಧಲೇಖನಕ್ಕೆ ತಕ್ಕ ವಿಷಯಗಳಾಗಿರುತ್ತವೆ.

ಹುಡುಗರು ಸ್ವಾಭಾವಿಕವಾದ ಪರ್ಯಟನಗಳಿಗೆ ಹೊರಡುವಾಗ, ಶಿಕ್ಷಕರ ಅಪ್ಪಣೆಯನ್ನು ಪಡೆಯುತ್ತಾರಷ್ಟೇ. ಆಗ ಶಿಕ್ಷಕರು ಪರ್ಯಟನದಲ್ಲಿ ನೋಡತಕ್ಕ ಸಂಗತಿಗಳನ್ನು ಕುರಿತು ಅವರನ್ನು ಎಚ್ಚರಗೊಳಿಸುವದು ಹಿತಕರವು. ಹೊರಡುವ ಸಿದ್ಧತೆ, ಮಾರ್ಗಕ್ರಮಣ, ಕಣ್ಣಿಗೆ ಬೀಳುವ ಸಂಗತಿಗಳು, ಅವುಗಳಿಂದ ಮನಸ್ಸಿನ ಮೇಲೆ ಆದ ಪರಿಣಾಮ ಇವುಗಳನ್ನು ಕುರಿತು ಲಕ್ಷ್ಯ ಪೂರಯಿಸುವಂತೆ ವಿದ್ಯಾರ್ಥಿಗಳಿಗೆ ಹೇಳಬೇಕು. ಇದಲ್ಲದೆ ಶಿಕ್ಷಕರು ತಾವು ಶಿಕ್ಷಣದ ಸಂಬಂಧದಿಂದ ವಿದ್ಯಾರ್ಥಿಗಳೊಡನೆ ಚಿಕ್ಕ ಪರ್ಯಟನಗಳನ್ನು ಮಾಡುವಾಗ, ಅವರಿಗೆ ಅವಲೋಕನದ ಮಾರ್ಗವನ್ನು ಪ್ರತ್ಯಕ್ಷ ತೋರಿಸಬೇಕು.

ಮೇಲೆ ಹೇಳಿದ ಎಲ್ಲ ಬಗೆಯ ಪರ್ಯಟನಪ್ರಸಂಗಗಳನ್ನು ವರ್ಣಿಸುವಾಗ ಅನುಸರಿಸತಕ್ಕ ಕ್ರಮವನ್ನು ಸಾಮಾನ್ಯ ವಿವರಣೆಯೊಂದಿಗೆ ಕೆಳಗೆ ಬರೆದಿರುತ್ತದೆ:-

೧. ವಿಷಯ ವಿವೇಚನ ಕ್ರಮ.

(ಅ) ಪೂರ್ವವೃತ್ತ:—ಇದರಲ್ಲಿ ಪರ್ಯಟನಪ್ರಸಂಗವು ಒದಗಿದ ಕಾರಣವನ್ನೂ, ಪರ್ಯಟನದ ಸಿದ್ಧತೆಯನ್ನೂ ಬರೆಯಬೇಕು; ಅಂದರೆ ಯಾವದೊಂದು ಕಾರ್ಯನಿಮಿತ್ತವಾಗಿ, ಇಲ್ಲವೆ, ಪುಣ್ಯಸಂಪಾದನೆಯ ಅಥವಾ ಜ್ಞಾನಸಂಪಾದನೆಯ ನೆವನದಿಂದ, ಅಥವಾ, ಜಿಜ್ಞಾಸಾತೃಪ್ತಿಯ

ಮುಶಲಿಕ ಪರ್ಯಟನ ಮಾಡಬೇಕಾದದ್ದನ್ನು ಬರೆಯಬೇಕು; ತರುವಾಯ, ಪರ್ಯಟನಕ್ಕೆ ಹೊರಟ ಜನರು, ಪರ್ಯಟನೋಪಯುಕ್ತ ಸಾಧನಗಳು ಮುಂತಾದವನ್ನು ವರ್ಣಿಸಬೇಕು.

(ಬ) ಮಾರ್ಗಕ್ರಮಣ:—ಇದರಲ್ಲಿ ಇಚ್ಛಿತ ಸ್ಥಳಕ್ಕೆ ಮುಟ್ಟುವವರೆಗೆ ಮಾಡಿದ ಮಾರ್ಗಕ್ರಮಣವನ್ನು ವರ್ಣಿಸಬೇಕು; ಅಂದರೆ, ಪ್ರಯಾಣ ಮಾಡಿದ ಬಗೆ, ಸೃಷ್ಟಿಸೌಂದರ್ಯ, ಬೇರೆ ಚಿತ್ತಾಕರ್ಷಕ ಸಂಗತಿಗಳು, ಒದಗಿದ ಅನುಕೂಲ ಪ್ರತಿಕೂಲ ಪ್ರಸಂಗಗಳು, ಮಾಡಿದ ವಸತಿಗಳು, ಪ್ರಯಾಣಸ್ಥರ ಗುಣ ಸ್ವಭಾವಗಳು ಮುಂತಾದವುಗಳಲ್ಲಿ ಪ್ರಸಂಗಕ್ಕೆ ಅವಶ್ಯವಾದವನ್ನು ವರ್ಣಿಸಬೇಕು.

(ಕ) ನೋಡಿದ ಸಂಗತಿಗಳು:—ಇಷ್ಟಾದ ಬಳಿಕ ಪರ್ಯಟನಸ್ಥಾನದೊಳಗೆ ನೋಡಿದ್ದನ್ನೂ, ಕಣ್ಣಿಗೆ ಬಿದ್ದದ್ದನ್ನೂ ಕ್ರಮವಾಗಿ ವರ್ಣಿಸಬೇಕು; ಅಂದರೆ, ಆ ಸ್ಥಳದ ಪ್ರಾಕೃತಿಕ ಸ್ವರೂಪ, ಅಲ್ಲಿಯ ನೋಡತಕ್ಕ ಇಮಾರತುಗಳು, ಐತಿಹಾಸಿಕ-ಧಾರ್ಮಿಕಸ್ಥಳಗಳು, ವ್ಯಾಪಾರೋದ್ಯೋಗಗಳು, ರಾಜ್ಯಪದ್ಧತಿ, ಜನರ ಗುಣ ಸ್ವಭಾವಗಳು ಮುಂತಾದವುಗಳಲ್ಲಿ ಅವಶ್ಯವಾದವನ್ನು ವರ್ಣಿಸಬೇಕು.

(ಡ) ಪರಿಣಾಮ:—ಕಟ್ಟಕಡೆಯಲ್ಲಿ ಪರ್ಯಟನದಿಂದಾದ ಪ್ರಯೋಜನವನ್ನು ವರ್ಣಿಸಬೇಕು; ಅಂದರೆ, ಪರ್ಯಟನದಲ್ಲಿ ನೋಡಿದ ಸಂಗತಿಗಳಿಂದಾದ ಲಾಭಹಾನಿಗಳನ್ನೂ, ಕಣ್ಣಿಗೆ ಬಿದ್ದ ಗುಣದೋಷಗಳನ್ನೂ, ತನಗೆ ಮೊದಲೇ ಗೊತ್ತಿದ್ದ ಹಾಗು ಈಗ ಗೊತ್ತಾದ ಸಂಗತಿಗಳ ತುಲನೆಯನ್ನೂ, ಅನುಸರಿಸತಕ್ಕ ಮಾತುಗಳನ್ನೂ, ಉಂಟಾದ ಉಚ್ಚಮನೋಭಾವಗಳನ್ನೂ ಪ್ರಸಂಗವರಿತು ವರ್ಣಿಸಬೇಕು.

೨ ಉದಾಹರಣ:—

೧. ಧಾರವಾಡದ ಪ್ರವಾಸ.

ಧಾರವಾಡವನ್ನು ನೋಡುವ ಇಚ್ಛೆಯು ನನಗೆ ಬಹಳ ಇತ್ತು. ನಾನು ಶಹರವನ್ನು ಎಂದೂ ನೋಡಿದ್ದಿಲ್ಲ. ನನ್ನ ಗೆಳೆಯನಾದ ಶ್ರೀಧರನಿಗೆ ಧಾರವಾಡದಲ್ಲಿ ಹೆಣ್ಣು ತೆಗೆದರು. ಆತನು ತನ್ನ ಲಗ್ನಕ್ಕೆ ನನ್ನನ್ನು ಆಗ್ರಹದಿಂದ ಕರೆದನು. ಅದಕ್ಕೆ ನಾನೂ ಸಂತೋಷದಿಂದ ಒಪ್ಪಿಕೊಂಡೆನು. ಒಟ್ಟಿಗೆ ಲಗ್ನಕ್ಕೆ ಮೂವತ್ತು ಮೂವತ್ತೈದು ಜನರು ಹೊರಟದ್ದರು. ಲಗ್ನದ ಸಾಹಿತ್ಯಗಳನ್ನೆಲ್ಲ ಸಿದ್ಧ ಮಾಡಿಕೊಂಡಿದ್ದರು.

ಕಳೆದ ವೈಶಾಖಶುದ್ಧ ತೃತೀಯೆಯ ದಿವಸ ನಿಬ್ಬಣವು ಹೊರಟಿತು. ನಾವೆಲ್ಲರು ಕರ್ಜಗಿಯ ಸ್ಟೇಶನಿನಲ್ಲಿ ಗಾಡಿಯೊಳಗೆ ಕುಳಿತೆವು. ಹಾದಿಯಲ್ಲಿ ಗಾಡಿಯ ಎಡಬಲಕ್ಕೆ ಕರಿಯ ನೆಲದ ಹೊರತು ಹೆಚ್ಚಿನ ಯಾವ ಶೋಭೆಯೂ ಕಣ್ಣಿಗೆ ಬೀಳಲಿಲ್ಲ. ಆದರೆ, ಕೋಳೂರ ವರದಾ ನದಿಯ ಪ್ರಾಂತದ ಬೈಲುಭೂಮಿಯಲ್ಲಿ ಉಲ್ಲಾಸದಿಂದ ಜಿಗಿಯುತ್ತಿದ್ದ ಚಿಗರೆಯ ಹಿಂಡುಗಳು, ಹುಬ್ಬಳ್ಳಿಯ ಸ್ಟೇಶನು, ಧಾರವಾಡದ ಹತ್ತರದ ಗುಡ್ಡದ ಕಡಿವಾಣ ಇವು ನನ್ನ ಮನಸ್ಸನ್ನು ಎಳಕೊಂಡವು.

ನಾವು ಧಾರವಾಡದಲ್ಲಿ ಶುಕ್ರವಾರದ ಪೇಟೆಯೊಳಗೆ ಇಳಕೊಂಡೆವು. ನಾವು ಬೀಗರಾಗಿ ಹೋದವರು! ಕೇಳುವದೇನು? ಉಣ್ಣುವದು, ಚಕ್ಕಂದದಿಂದ ತಿರುಗುವದು ಇವು ನಮ್ಮ ದಿನದ ಕೆಲಸಗಳಾಗಿದ್ದವು. ನಾನು ಧಾರವಾಡದೊಳಗಿನ ನೋಡತಕ್ಕ ಸ್ಥಳಗಳನ್ನೆಲ್ಲ ನೋಡಿದೆನು. ಧಾರವಾಡವು ಸಾಧಾರಣವಾಗಿ ಮಲೆನಾಡಿನ ಸೆರಗು ಎಂದು ಹೇಳಬಹುದು. ಇಲ್ಲಿಯ ಶ್ರೀ ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಯು, ಊರೊಳಗಿನ ಇಮಾರತುಗಳಲ್ಲಿ ಅಚ್ಚುಕಟ್ಟಿನ ಸುಂದರವಾದ ಇಮಾರತು ಆಗಿರುತ್ತದೆ. ಅದಕ್ಕೆ ನಾಲ್ಕು ಅಂತಸ್ತುಗಳಿರುವವು. ಶಾಲೆಯು ತರತರದ ಬಣ್ಣಗಳಿಂದ ಬಲು ಚಂದ ಕಾಣುತ್ತದೆ. ಈ ಊರ ಮಾರ್ಕೇಟು ಅಷ್ಟು ಚಂದವಿಲ್ಲ. ಅಲ್ಲಿಯ ವ್ಯಾಪಾರವೂ ಅಷ್ಟು ದೊಡ್ಡದಲ್ಲ. ಹಾಯಸ್ಕೂಲು-ಕಾಲೇಜಗಳು ನೋಡತಕ್ಕ ಇಮಾರತುಗಳಾಗಿರುತ್ತವೆ. ಇವಲ್ಲದೆ ಈ ಊರಲ್ಲಿ ನಾನು ಕೋಟೆ, ರೇಲ್ವೆಯ ಹೆಡ್ಡಆಫೀಸು, ಫ್ಲ್ಯಾಕರೆ ಸಾಹೇಬರ ಗೋರಿ, ಸೆರೆಮನೆ, ಹುಚ್ಚರಮನೆ, ಸೋಮೇಶ್ವರ ದೇವಸ್ಥಾನ ಮುಂತಾದವನ್ನು ನೋಡಿದೆನು. ಕೋಟೆಯು ದೊಡ್ಡದು; ಅದಕ್ಕೆ ಎರಡು ಸುತ್ತುಗಳಿರುತ್ತವೆ. ಹೆಡ್ಡಆಫೀಸನ್ನು ನೋಡಿ ನಾನು ಬೆರಗಾದೆನು. ಅದನ್ನು ವರ್ಣಿಸುವದು ನನ್ನಿಂದಾಗದು. ಧಾರವಾಡಕ್ಕೆ ಬಂದವರು ಅದನ್ನು ನೋಡದೆ ಬಿಡಬಾರದು. ಸೋಮೇಶ್ವರದ ಬಳಿಯಲ್ಲಿ ಶಾಲ್ಮಲಾನದಿಯ ಉಗಮವದೆ. ಧಾರವಾಡವು ಜಿಲ್ಹೆಯ ಮುಖ್ಯ ಸ್ಥಳವಾಗಿರುತ್ತದೆ. ಅಲ್ಲಿ ಜಿಲ್ಹಾಧಿಕಾರಿಗಳ ಕಚೇರಿಗಳು ಇರುವವು. ಧಾರವಾಡದ ಜನರ ನಡೆನುಡಿಗಳು ನಮ್ಮಿಂದ ಬಹಳ ಭಿನ್ನವಾಗಿರುವದಿಲ್ಲ. ಈ ಊರಲ್ಲಿ ಹೇಳಿಕೊಳ್ಳತಕ್ಕ ಯಾವ ಉದ್ಯೋಗಗಳೂ ನಡೆಯುವದಿಲ್ಲ.

ಒಟ್ಟಿಗೆ ಈ ಶಹರವನ್ನು ನೋಡಿ ನನಗೆ ಸಮಾಧಾನವಾಯಿತು. ಶಹರದಲ್ಲಿರುವದು ನೆಟ್ಟಗೆಂದು ನನಗೆ ತೋರಿತು. ಅಲ್ಲಿಯ ಜನರಲ್ಲಿ ಚಟುವಟಿಕೆ ಬಹಳ. ನಮ್ಮ ಹಳ್ಳಿಗಿಂತ ಅಲ್ಲಿ ಉದ್ಯೋಗಿಗಳು ಹೆಚ್ಚು. ಜನರಲ್ಲಿ ಮಡ್ಡತನವು ಕಡಿಮೆ. ಇವನ್ನೆಲ್ಲ ನಾನು ಕಲಿಯತಕ್ಕದ್ದು. ಆದರೆ, ಸಾಧಾರಣವಾಗಿ ನಮ್ಮ ಹಳ್ಳಿಯ ಜನರಷ್ಟು ಪಟ್ಟಣದವರು ದೊಡ್ಡ ಮನಸ್ಸಿನವರಲ್ಲ. ಅವರಲ್ಲಿ ಠಾಗಿತನವು ಹೆಚ್ಚು ಇದ್ದಂತೆ ತೋರಿತು. ಇದಲ್ಲದೆ ಊರೊಳಗಿನ ನೀರಿನ ಹರಿಗಳು, ಪಾಯಖಾನೆಗಳು ಬಲು ಹೊಲಸು. ಅವನ್ನು ನೆನಿಸಿದರೆ ಈಗಲೂ ನನಗೆ ಹೇಸಿಗೆ ಬರುತ್ತದೆ. ಏನ್ನಾದರೂ ಪಟ್ಟಣವು, ಅದಕ್ಕೆ ಮಹತ್ವವಿರುತ್ತದೆ. "ಕೆಟ್ಟು ಪಟ್ಟಣಸೇರು" ಎಂಬ ಉಪದೇಶವನ್ನು ನಾವು ಮರೆಯತಕ್ಕದ್ದಲ್ಲ

೩. ಅಭ್ಯಾಸಕ್ಕಾಗಿ ವಿಷಯಗಳು:—೧. ಯಾತ್ರೆಯ ವರ್ಣನ. ೨. ಕ್ಷೇತ್ರದ ವರ್ಣನ. ೩. ಐತಿಹಾಸಿಕಸ್ಥಳದ ವರ್ಣನ. ೪. ಸೃಷ್ಟಿಸೌಂದರ್ಯ ವರ್ಣನ. ೫. ಪ್ರಾಕೃತಿಕವಸ್ತು (ಗುಡ್ಡ, ಹೊಳೆ, ಸಮುದ್ರ ಮುಂತಾದವು) ಗಳ ವರ್ಣನ.

---

೫೪ ನೇ ಪಾಠ—ಹಾರಿಕೆಯ ಸುದ್ದಿಗಳು.

ಜನರು ವಿಶ್ರಾಂತಿಗಾಗಿ ಹರಟೆಕೊಚ್ಚುತ್ತಿರುವಾಗ ಹೇಳುತ್ತಿರುವ ಸುದ್ದಿಗಳು ಹಾರಿಕೆಯ ಸುದ್ದಿಗಳಾಗಿರುವವು. ಅವನ್ನು ಒಬ್ಬರು ಮತ್ತೊಬ್ಬರಿಂದ, ಮತ್ತೊಬ್ಬರು ಇನ್ನೊಬ್ಬರಿಂದ, ಇನ್ನೊಬ್ಬರು ಬೇರೊಬ್ಬರಿಂದ ಕೇಳುತ್ತ ಬಂದಿರುವರು. ಈ ಸುದ್ದಿಗಳನ್ನು ಹೇಳುವವರು ಮೊದಲಿನಿಂದ ಕಡೆತನಕ ಸುದ್ದಿಗಳನ್ನು ಯಥಾರ್ಥವಾಗಿ ಕೇಳಿಕೊಂಡಿರುವದಿಲ್ಲ. ಜನರು ಮೆಚ್ಚುವಂತೆ ಅವಕ್ಕೆ ಉಪ್ಪುಕಾರಹಚ್ಚಿ ಅವರು ಸುದ್ದಿಗೆ ಹೊಸ ರುಚಿಯನ್ನುಂಟುಮಾಡುವರು. ಇವುಗಳಲ್ಲಿ ಸತ್ಯಕ್ಕಿಂತ ಮನೋರಂಜನವು ವಿಶೇಷವಾಗಿರುತ್ತದೆ. ಇಂಥ ಸುದ್ದಿಗಳಿಗೆ ಅಷ್ಟು ಮಹತ್ವವಿಲ್ಲದಿದ್ದರೂ, ಅವುಗಳೊಳಗಿನ ಮನೋರಂಜಕತ್ವದ ಮೂಲಕ ಅವು ಕೇಳುವವರ, ವಿಶೇಷವಾಗಿ ಹುಡುಗರ ಮನಸ್ಸಿನಲ್ಲಿ ಸ್ಥಿರವಾಗಿ ಉಳಿಯುವವು; ಕಾರಣ, ಇವು ನಿಬಂಧಶಿಕ್ಷಣಕ್ಕೆ ಉಪಯುಕ್ತವಾಗಿರುತ್ತವೆಂದು ಧಾರಾಳವಾಗಿ ಹೇಳಬಹುದು. ಇಂಥ ಸುದ್ದಿಗಳನ್ನು ಹಿರಿಯರಿಂದಲೂ, ನೆರೆ

ಪೊರೆಯುವರಿಂದಲೂ ಕೇಳಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಶಿಕ್ಷಕರು ಸೂಚಿಸಬೇಕು.

ಸುದ್ದಿಗಳಲ್ಲಿ, ಜಾತ್ರೆ-ತೇರುಗಳಿಗೆ ಸಂಬಂಧಿಸಿದವು, ಮಳೆ-ಬೆಳೆಗಳಿಗೆ ಸಂಬಂಧಿಸಿದವು, ಬೇನೆ-ಬೇಸರಿಕೆಗಳಿಗೆ ಸಂಬಂಧಿಸಿದವು, ಕಳ್ಳರು ಕಾಕರಿಗೆ ಸಂಬಂಧಿಸಿದವು, ಜಗಳ ತೋಟೆಗಳಿಗೆ ಸಂಬಂಧಿಸಿದವು, ಸಾವು-ಕೇಡುಗಳಿಗೆ ಸಂಬಂಧಿಸಿದವು, ಅಭ್ಯಾಸ-ಪರೀಕ್ಷೆಗಳಿಗೆ ಸಂಬಂಧಿಸಿದವು. ದೆವ್ವ-ಭೂತಗಳಿಗೆ ಸಂಬಂಧಿಸಿದವು ಎಂದು ಹಲವು ಪ್ರಕಾರಗಳಿರುವವು.

ಈ ಹಾರಿಕೆಯ ಸುದ್ದಿಗಳನ್ನು ಬರೆಯುವವರು ಮುಂದಿನ ಮಾತನ್ನು ಮರೆಯತಕ್ಕದ್ದಲ್ಲ. ಯಾವನೊಬ್ಬ ವ್ಯಕ್ತಿಯ, ಇಲ್ಲವೆ ಯಾವದೊಂದು ಸಮಾಜದವರ ಅಥವಾ ಧರ್ಮದವರ ಮನಸ್ಸಿಗೆ ಹತ್ತುವಂಥ ಸುದ್ದಿಗಳನ್ನು ಬರೆಯಬಾರದು. ಅದರಂತೆ ಸರಕಾರದವರನ್ನು ಅಡಿಕೊಂಡ ಸುದ್ದಿಗಳನ್ನೂ, ಅಸಹ್ಯವಾದ ಸುದ್ದಿಗಳನ್ನೂ ಬರೆಯತಕ್ಕದ್ದಲ್ಲ.

ಎಲ್ಲ ಬಗೆಯ ಸುದ್ದಿಗಳನ್ನು ವರ್ಣಿಸುವಾಗ ಅನುಸರಿಸತಕ್ಕ ಕ್ರಮವನ್ನು ಸಾಮಾನ್ಯವಿವರಣೆಯೊಂದಿಗೆ ಕೆಳಗೆ ಬರೆದಿರುತ್ತದೆ:—

೧ ವಿಷಯವಿವೇಚನಕ್ರಮ.

(ಅ) ಪೂರ್ವವೃತ್ತ:—ಇದರಲ್ಲಿ ಸುದ್ದಿಯು ಗೊತ್ತಾದ ಬಗೆಯನ್ನು ಬರೆಯಬೇಕು; ಅಂದರೆ, ಸುದ್ದಿಯನ್ನು ಕೇಳಿದ ಸ್ಥಳ, ಕಾಲ, ಕೇಳಿದಾಗ ಇದ್ದ ಜನರು, ಅವರು ಮಾಡುತ್ತಿದ್ದ ಕೆಲಸ ಮುಂತಾದವನ್ನು ವರ್ಣಿಸಬೇಕು.

(ಬ) ಸುದ್ದಿಯ ವರ್ಣನ:—ಇದರಲ್ಲಿ ತಾನು ಕೇಳಿದ ಸುದ್ದಿಯನ್ನು ಕ್ರಮವಾಗಿ ವರ್ಣಿಸುತ್ತ ಹೋಗಬೇಕು. ಕಳ್ಳರು-ಕಾಕರಿಗೆ ಸಂಬಂಧಿಸಿದ ಸುದ್ದಿಗಳಿದ್ದರೆ ಅವರ ದುರ್ಗುಣಗಳೂ, ಭೂತ-ಪಿಶಾಚಿಗಳಿಗೆ ಸಂಬಂಧಿಸಿದವಿದ್ದರೆ ಅವುಗಳ ಚೇಷ್ಟೆಗಳೂ, ಸಾವು-ಕೇಡುಗಳಿಗೆ ಸಂಬಂಧಿಸಿದವಿದ್ದರೆ ದುಃಖವೂ, ಸಾಧುಸಂತರಿಗೆ ಸಂಬಂಧಿಸಿದವಿದ್ದರೆ ಪೂಜ್ಯಬುದ್ಧಿಯೂ ವ್ಯಕ್ತವಾಗುವಂತೆ ವರ್ಣಿಸಬೇಕು.

ಮನಸ್ಸಿನಮೇಲೆ ಆದ ಪರಿಣಾಮ:—ಈ ಭಾಗದಲ್ಲಿ ಸುದ್ದಿಯನ್ನು

ಹೇಳಿದವರ ಹಾಗು ಸುದ್ದಿಯ ಗುಣದೋಷ, ಸುದ್ದಿ ಕೇಳಿದ್ದರಿಂದಾದ ಮನಸ್ಸಿನ ಸ್ಥಿತಿ, ನೆನಪಿಡತಕ್ಕ ಸಂಗತಿಗಳು ಮುಂತಾದವನ್ನು ಬರೆಯಬೇಕು.

೨ ಉದಾಹರಣ:—

ದೆವ್ವನ ಸುದ್ದಿ.

ವೈಶಾಖಮಾಸ, ಬೆಳದಿಂಗಳ ರಾತ್ರಿ. ಒಂದು ದಿನ ನಮ್ಮ ಮನೆಯ ಕಟ್ಟೆಯಮೇಲೆ ಬಹು ಜನರು ಮಾತಾಡುತ್ತ ಕುಳಿತಿದ್ದರು. ಅವರೊಳಗೆ ಕೆಲವರು, ಮಾತಿನಲ್ಲಿ ಬಹು ಚತುರರಿದ್ದರು. ಅವರು ತಮ್ಮ ಸವಿಮಾತುಗಳಿಂದ ಜನರನ್ನು ಆನಂದಗೊಳಿಸುತ್ತಿದ್ದರು. ಆಗ ನಾನೊಂದು ಸುದ್ದಿಯನ್ನು ಹೇಳು, ನೀನೊಂದು ಸುದ್ದಿಯನ್ನು ಹೇಳು ಎಂದು ಸುದ್ದಿಗೆ ಸುದ್ದಿ ಹೊರಟವು. ಕಡೆಗೆ ಒಬ್ಬರು ಒಂದು ದೆವ್ವನ ಸುದ್ದಿಯನ್ನು ಹೇಳಿದರು. ಅದನ್ನು ಕೇಳಿ ನನಗೆ ಬಹಳ ಸೋಜಿಗವಾಯಿತು.

ಒಂದು ಊರಲ್ಲಿ ಮೂವರು ಅಣ್ಣತಮ್ಮಂದಿರು ಇದ್ದರಂತೆ. ಅವರಲ್ಲಿ ಚಿಕ್ಕವನು ಸರಕಾರಿಯ ಚಾಕರಿಯನ್ನು ಮಾಡುತ್ತಿದ್ದನು. ಉಳಿದವರು ಹೊಲಮನೆ ಮಾಡಿಕೊಂಡು ಮನೆಯಲ್ಲಿದ್ದರು. ಚಾಕರಿ ಮಾಡುವವನು ಹೆಂಡತಿಗೆ ವಸ್ತ್ರ ಒಡವೆಗಳನ್ನು ಮಾಡಿಸಿದ್ದನು. ದುಡ್ಡನ್ನೂ ಚನ್ನಾಗಿ ಗಳಿಸಿದ್ದನು.

ಒಮ್ಮೆ ಆ ಚಿಕ್ಕವನು ಯಾವದೋ ಒಂದು ಕಾರಣದಿಂದ ಮನೆಗೆ ಬಂದನು. ಆತನ ಗಳಿಕೆಯನ್ನು ನೋಡಿ ನಡುವಿನವನಿಗೆ ದುರಾಶೆಯು ಉತ್ಪನ್ನವಾಯಿತು. ಒಂದು ದಿನ ಆ ಚಿಕ್ಕವನು ತನ್ನ ಹೆಂಡತಿಯ ಕೈಯಲ್ಲಿ ಕೀಲಿಯ ಕೈಯನ್ನು ಕೊಟ್ಟು ಊರಿಗೆ ಹೋಗಿದ್ದನು. ಆಗ ನಡುವಿನವನೂ ಆತನ ಮಗನೂ ಕೂಡಿ ದುಡ್ಡಿನ ಆಶೆಯಿಂದ ಆ ಹೆಣ್ಣುಮಗಳನ್ನು ಕೊಂದು, ಬಾವಿಯಲ್ಲಿ ಹಾಕಿದರು. ಕಾಲುಜಾರಿ ಬಿದ್ದಳೆಂದು ಸುದ್ದಿಯು ಹಬ್ಬಿತು. ಈ ನೀಚಕೃತ್ಯದಿಂದ ಆ ಹೆಣ್ಣುಮಗಳ ನಾಲ್ಕು ವರ್ಷದ ಗಂಡುಕೂಸು ಪರದೇಶಿಯಾಯಿತು; ಮತ್ತು ಮಗನಮೇಲಿನ ಪ್ರೀತಿಯಿಂದಲೂ, ದುಡ್ಡಿನ ಮೇಲಿನ ಆಶೆಯಿಂದಲೂ ಆ ಹೆಣ್ಣುಮಗಳು ದೆವ್ವವಾದಳು.

ದೆವ್ವವು ತನ್ನನ್ನು ಕೊಂದವನನ್ನೂ, ಆತನ ಮಗನನ್ನೂ, ಸೊಸೆಯನ್ನೂ ಪರಿಪರಿಯಿಂದ ಕಾಡಹತ್ತಿತು. ಕೊಂದವನು ಒಂದು ದಿನ

ಪತ್ರವ್ಯವಹಾರ.

ರಾವಸಾಹೇಬ ಶಾಳಾಪತ್ರಿಕೆಯ ಎಡೀಟರರ ಸನ್ನಿಧಿಗೆ

ತಮ್ಮ ಕರಕಮಲದಿಂದ ಉದ್ಭವಿಸುವ ಮಾಸ ಪತ್ರಿಕೆಯಲ್ಲಿ ಕೆಳಗಿನ ನಾಲ್ಕು ಪಂಕ್ತಿಗಳಿಗೆ ಇಂಬು ದೊರದೀತೆಂದು ನನ್ನ ಪೂರ್ಣ ನಂಬಿಗೆ ಅದೆ:—

"ಹಾಲೀ ಧೂಮಕೇತು."

ಇದೇ ವರ್ಷದ ಮಾರ್ಚ ತಿಂಗಳ ಶಾಲಾ ಪತ್ರಿಕೆಯಲ್ಲಿ "ಧೂಮಕೇತುಗಳ" ವಿಷಯಕ್ಕೆ ಮಾಹಿತಿ ಕೊಟ್ಟಂತೆ ನಾವು "ಧೂಮಕೇತು" ಮೂಡುವ ಕಾಲವನ್ನು ನಿರೀಕ್ಷಿಸುತ್ತಿದ್ದೆವು. ತಾರೀಖು ೨೦ ಏಪ್ರೀಲ ೧೯೧೦ ಇಸ್ವಿ ದಿವಸ ಇನ್ನೂ ಎರಡು ತಾಸು ರಾತ್ರಿ ಇರುವಾಗ್ಗೆ ಪೂರ್ವ ದಿಕ್ಕಿಗೆ "ಶುಕ್ರಗ್ರಹದ" ಹತ್ತರ ಸುಮಾರು ೨ ಫೂಟು ಬಾಲವುಳ್ಳದ್ದಾಗಿ ಒಂದು "ಧೂಮಕೇತು" ಕಾಣಹತ್ತಿತು; ಮುಂದೆ ೨೮ ತಾರೀಖಿನವರೆಗೆ ಅದರ ಬಾಲ ಬೆಳೆಯುತ್ತ ಬೆಳೆಯುತ್ತ ಎರಡು ಯಾರ್ಡ ಆಯಿತು; ಮುಂದೆ ತಾರೀಖು ೮ ನೇ ೧೯೧೦ ಇಸ್ವಿಯಿಂದ ೧೩ ನೇ ವರೆಗೆ ಅದರ ಬಾಲವು ಬೆಳೆಯಹತ್ತಿ ಅದರ ಪ್ರಕಾಶವಾದರೂ ಬೆಳೆಯ ಹತ್ತಿತು. ಮುಂದೆ ೧೫ ನೇ ದಿವಸ ಸುಮಾರು ಅದರ ಬಾಲು ಆರು ಯಾರ್ಡ ಕಾಣಿಸಿ "ಶುಕ್ರಗ್ರಹ"ಕ್ಕಿಂತ ಕೆಳಗಡಿಗೆ ಅಂದರೆ ಸೂರ್ಯನ ಕಡಿಗೆ ಹೋಗುವಂತೆ ತೋರಿತು; ೧೬–೧೭ ತಾರೀಖಿನ ದಿವಸ ೩–೩॥ ತಾಸು ರಾತ್ರಿ ಇರುವಾಗ ನಕ್ಷತ್ರವು ಇನ್ನೂ ಮೂಡದೆ ಬರೇ ಅದರ ಬಾಲವೇ ಕಾಣಹತ್ತಿ ಕೆಲವು ವೇಳೆಯ ನಂತರ ಅದು ಕ್ಷಿತಿಜದಿಂದ ಖಸ್ವಸ್ತಿಕದ ವರೆಗೆ ಬೆಳೆಯಿತು; ನಂತರಾ ೪ ಹೊಡೆಯುವ ಸುಮಾರಿಗೆ ಇದರ ತಲೆ ಕೇಂದ್ರಗಳು ಕಾಣಹತ್ತಿ ಬಾಲವು ತೇಜಉಳ್ಳದ್ದು ಕಿರಿದು ಆಯಿತು; ೫॥ ಹೊಡಿಯುವಾಗ್ಗೆ ಮಂದ ಪ್ರಕಾಶವಾಗಹತ್ತಿತು; ಇದರಂತೆ ೧೮ ತಾರೀಖಿನ ವರೆಗೆ ಪೂರ್ವ ದಿಕ್ಕಿಗೆ ಮೂಡುತ್ತಿತ್ತು; ಹಾಗು ವೇಗದಿಂದ ಸೂರ್ಯನ ಸಮೀಪಕ್ಕೆ ಹೋಗುತ್ತಿತ್ತು; ೧೯ ತಾರೀಖಿನ ದಿವಸ "ಧೂಮಕೇತು" ಕಾಣಲೇ ಇಲ್ಲಾ. ಆಮೇಲೆ ೨೦ ತಾರೀಖು ಶುಕ್ರವಾರ ದಿವಸ ೭ ಘಂಟೆ ಸುಮಾರಿಗೆ ಪಶ್ಚಿಮ ದಿಕ್ಕಿಗೆ "ಮುಕ್ಕಾಲು" ತಾಸಿನ ವರೆಗೆ "ರೋಹಿಣೀ" ನಕ್ಷತ್ರದ ಹತ್ತರಾ ಕಾಣುತ್ತಿತ್ತು; ೨೨–೨೫ ತಾರೀಖುಗಳವರೆಗೆ ೭–೭॥ ರಾತ್ರಿವರೆಗೆ "ಅ

ರಿದ್ರಾ” ಮತ್ತು ಆಶ್ಲೇಷಾ ನಕ್ಷತ್ರಗಳ ಹತ್ತರ ಕಾಣುತ್ತಿತ್ತು; ಅದರ ವಿರುದ್ಧ ದಿಕ್ಕಿಗೆ ಚಂದ್ರನ ಪ್ರಕಾಶವಿದ್ದರಿಂದ ಬಾಲವು ಮಂದಪ್ರಕಾಶವಾಗಿ ತೋರುತ್ತಿತ್ತು; ಈ ತಿಂಗಳ ಅಂತ್ಯದವರೆಗೆ ಅದು ಕಾಣಿಸುವ ಆಜವಾಸು ಅದೆ. ಈ ಧೂಮಕೇತು ಪೂರ್ವದಿಕ್ಕಿಗೆ ೨೮ ದಿವಸಗಳವರೆಗೆ ಕಾಣಿಸಿತು; ಪಶ್ಚಿಮ ದಿಕ್ಕಿಗೆ ಸುಮಾರು ೧೦ ದಿವಸ, ಅಂತು ೩೮ ದಿವಸ ಈ ಸಾರೆ ಬರೆಗಣ್ಣಿಗೆ ಕಾಣಿಸಿದಂತಾಯಿತು. ನೋಡಿದ್ದನ್ನು ತಮಗೆ ಬರೆದು ತಿಳಿಸಿದ್ದೇವೆ. ಪತ್ರವಿಸ್ತಾರಕ್ಕೆ ಕ್ಷಮಾ ಇರಲಿ. ತಾರೀಖು ೨೬—೫—೧೯೧೦

ಹೊನಗನಹಳ್ಳಿ
ತಾ॥ ವಿಜಾಪೂರ. }

ಬಾಳಾಜಿಸ್ಥವಿಶ್ವನಾಥ ದೀಕ್ಷಿತ
೧ನೇ ಅಸಿ॥ ಮಾಸ್ತರ

ಕಾರಾಗೃಹದಿಂದ ಜಾರಿ ಅಡವೀ ಸೇರಿದ ಒಬ್ಬ ಕಳ್ಳನು.

॥ಕುಸುಮಷಟ್ಪದಿ॥

ಪರರೊಂದು ಚಿನ್ನದಾ। ಭರಣವಂ ಕೀಳ್ಮನದೆ। ಹರಣ ಮಾಡಿದ ಕಳ್ಳನವನೊಬ್ಬನು॥ ಸೆರೆಮನೆಯ ಕಾವಲೊಳ। ಗಿರುವ ಶೀಕ್ಷೆಯ ಪಡೆದ। ನರರೆ ತನ್ನಯ ಮಾಡಿದಪರಾಧಕೆ ॥೧॥

ಅಲ್ಲಿ ನಿಯಮಿತ ಕಾಲ। ದಲ್ಲಿಯಾಹಾರಾದಿ। ಯೆಲ್ಲ ಸರಿಯಾಗಿ ದೊರೆಯುತಲಿರ್ದರು॥ ವಲ್ಲಿ ರಮಿಪಂತೆ ತರು। ವಲ್ಲಿ, ಸ್ವಾತಂತ್ರ್ಯಸುಖ। ದಲ್ಲಿ ರಮಿಸಿತ್ತವನ ಮಾನಸವದು ॥೨॥

ಒಂದು ದಿನವಧಿಕಾರಿ। ವೃಂದದ ಕಟಾಕ್ಷ ತ। ನ್ನಿಂದ ದೂರಾದುದಂ ತಿಳಿದಾಗಿನಾ॥ ಸಂಧಿ ಸಾಧಿಸಿ ಕಾರ। ದಿಂದ ತಪ್ಪಿಸಿಕೊಂಡು। ಸಂದನಡವಿಯ, ಹುದುಗಿಕೊಂಡಿರ್ದನು ॥೩॥

ವನದೊಳಾಕಾಲ ಚೈ। ತ್ರನು ಬಂದು ರಾಜಪದ। ವನು ಸೇರಿ ವೈಭವದೊಳೊಸೆದಾಳಲು॥ ತನಿಗಂಪು ಮಿಡಿವ ಪೂ। ನನೆ ಮುಡಿದ ನವಲತಾ। ವನಿತೆಯರು ನಲಿದು ನರ್ತಿಸುತಿರ್ದರು ॥೪॥

ಪಲತೆರದ ಗಿಡಗಳೊಳ್। ಸಲೆ ಪಣ್ತ ಮಧುರಫಲ। ಗಳ ತಿಂದು ತೃಪ್ತಿವಡೆದಾನಂದದಿ॥ ತಲೆದೂಗುತಾಡಿ ಕೋ। ಕಿಲಕೀರಬಂದಿಗಳು। ಕಲಭಾಷೆಯಿಂ ವಸಂತನ ಸ್ತುತಿಪವು ॥೫॥

ಇಂತು ತದ್ವಿಪಿನದೊಳ್| ಸಂತೋಷವಿರಲೊಡಂ| ಬಂತು ಜಲದೆಡೆಗೆ ಶೋಷಣಕಾಲವು|| ಸಂತಾಪಕರ ರಶ್ಮಿ| ಮಂತನು ಭಡಾಳಿಸಲು| ನಿಂತು ತೋರ್ಪುವೆ? ಹಳ್ಳಹೊಳೆ ಕೆರೆಗಳು ||೬||

ದುಂದುಗಾರಿಕೆ ಧನವ| ಕುಂದಿಸುವ ತೆರದಿಂದ| ಚಂದಿರನು ಮರೆಗೆ ಕ್ಷಯಿಸುವ ಸ್ಥಾನದೆ|| ಗಂಧವಾಹ-ಸ್ಪರ್ಶ| ದಿಂದ ಸೆಕೆಯಡಗುವವೊ| ಲಂದಗೆಟ್ಟುದು ನೀರ ನೆಲೆ ಬಿಸಿಲಿಗೆ ||೭||

ಇತ್ತ ಬಾಯಾರಿ ಬೇ| ಸತ್ತು ಕಳ್ಳನು ನೀರ| ಸುತ್ತೆಲ್ಲ ಹುಡುಕಿಕೊಂಡರು ಕಾಣದೆ|| ಅತ್ತಿತ್ತ ಬೆಂಡಾಗಿ| ಗೊತ್ತುಗಾಣದೆ ದೂರ| ವಿತ್ತು ತೃಷ್ಣೆಯನಿಟ್ಟಿಸುತಲಿರ್ದನು ||೮||

ಆಗ ಕಿರಿದಂತರದೆ| ಯೋಗಿಯ ಕಮಂಡಲುವ| ತಾಗಿ ಗೇಲಿಸುವ ಹೊಜೆಯು ನೋಡುತ|| ನೀಗಿ ತಾಪವ, ಸುಖವು| ಬೇಗ ದೊರೆಯುವದೆಂದು ಕೂಗಿಕೊಂಡನು ನೀರು ನೀರೆನ್ನುತಾ ||೯||

ಬಳಲಿ ಬಸವಳಿದ ಕಾ| ಲೆಳೆಯುತಲ್ಲಿಗೆ ಹೋಗ| ಲಳಿಯಿತಾಶೆಯು ನೀರಿರುವದೆನ್ನುವಾ|| ಒಳಗೆ ಸ್ವರ್ಣಮಯ ಬಹು| ಬೆಲೆ ಬಾಳುವಾಭರಣ| ಗಳು ರತ್ನಗಳು ಹೊಳೆದವವನ ಕಣ್ಗೆ ||೧೦||

ಮೃಗಜಲವ ಬೆನ್ನಟ್ಟಿ| ನೆಗೆದ ಕಾಳ್ಕಿಗದಂತೆ| ಮಿಗಿಲು ಮನದಾಯಾಸಕೆಡೆಯಾಗುತಾ|| ಬಗೆದು ಮುನ್ನಿನಕ್ರಿಯೆಯ| ಮಿಗೆ ದೈನ್ಯದಿಂದ, ಮೆ| ಲ್ಲಗೆ ಪೇಳ್ದನಾಗ ಮುಂದಿನ ವಾಕ್ಯವಾ ||೧೧||

ಒಂದು ತೊಡವಿನ ಕಳವು| ಬಂಧವೆಸಗಿದುದೆನಗೆ| ವಿಂಧ್ಯದಲಿ ಸಿಕ್ಕಿತುಲಬೆಲೆಗಾಣುವಾ|| ಚಂದದಾಭರಣಗಳ| ಸುಂದರತ್ನಗಳ, ನಾ| ನೊಂದು ಸೆರೆನೀರೆರೆವನಿಗೆ ಕೊಡುವೆನು ||೧೨||

ಕುಮಟಾ.	ವೆಂಕಟೇಶ. ರಾ. ಪ್ರಭು.
ತಾ|| ೧೦-೨-೧೯೧೦ಇಸ್ವಿ.	ಅಸಿ|| ಮಾ|| ಶಾಲಾ ಬಂಡ (ಕಾರವಾರ)

ರಾವಸಾಹೇಬ ಕನ್ನಡ ಶಾಳಾಪತ್ರಿಕ ಎಡಿಟರ ಮಹಾಶಯರವರ ಸನ್ನಿಧಿಗೆ:—

ಶಿರಸಾಷ್ಟಾಂಗ ನಮಸ್ಕಾರಗಳು ವಿನಂತಿ ವಿಜ್ಞಾಪನೆಗಳು:—ಧೊರೆಗಳೇ ತಮ್ಮ ದರ್ಶನಕ್ಕೆ ಎಂದೂ ಬರದೆ ಇದ್ದ ನನಗೆ ತಮ್ಮ ಕರಕಮಲ

ಜಲ್ಲಿ ಉದ್ಧವಿಸುವ ಮಾಸಪತ್ರಿಕೆಯಲ್ಲಿ ಇಂಬು ದೊರೆದೀತೆಂದು ನಂಬಿದ್ದೇನೆ—

(೧) ಸನ್ ೧೯೦೯ನೆಯ ವರ್ಷ ಆದ ವ್ಹರ್ನ್ಯಾಕ್ಯೂಲರ ಫಾಯನಲ್ ಪರೀಕ್ಷೆಗೆನಮ್ಮ ಊರ ಶಾಲೆಯಿಂದ ಹೋದ ವಿದ್ಯಾರ್ಥಿಗಳಲ್ಲಿ ನಾಲ್ವರು ತೇರ್ಗಡೆಹೊಂದಿ ಪಡೆದುಕೊಂಡಿದ್ದ ಸರಟಿಪಿಕೇಟ ಸಮಾರಂಭವು ಈ ಊರಶಾಲೆಯಲ್ಲಿ ತಾರೀಖು ೧೦-೪-೧೦ನೆಯ ದಿವಸ ಮಧ್ಯಾನದ ೪ ಘಂಟೆಗೆ ಊರೊಳಗಿನ ಪಾಟೀಲ ಕುಲಕರ್ಣಿ ಶೆಟ್ಟಿ ಸಾವುಕಾರ ಮೊದಲಾದ ಸರ್ವಜನರಿಂದಲೂ ಯುಕ್ತವಾಗಿ ನಡೆಯಿತು.

ಈ ಕಾಲಕ್ಕೆ ಸರ್ವಾನುಮತದಿಂದ ಅಂಕಲಗಿ ಶ್ರೀಸದ್ಗುರು ಚನ್ನಪ್ಪಯ್ಯಸ್ವಾಮಿ ಗುರು ಅಡವೀಸ್ವಾಮಿ ಬೊಮ್ಮನಗಟ್ಟೀಮಠ ಈ ಮಹನೀಯರ ಅಧ್ಯಕ್ಷತೆಯ ಕೆಳಗೆ ಒಳ್ಳೇ ಸಡಗರದಿಂದ ಸಭೆಯು ಕೂಡಿತ್ತು. ಮಿ॥ ರಾಮರಾವ ಕುಲಕರ್ಣಿ ಇವರು ವಿದ್ಯದ ಗೌರವ ಮತ್ತು ಅದರ ಪ್ರಸಾರ ಹಾಗೂ ಮಹತ್ವಗಳನ್ನು ವರ್ಣಿಸಿದರಲ್ಲದೆ, ೪-೬ ಸುರಸ ಭಾಷಣಗಳೂ ಆದವು. ನಂತರ ಇಲ್ಲಿಯ ಶಾಲಾ ಹೆಡ್‌ಮಾಸ್ತರರಾದ ಗುರುವರ್ಯ ವ್ಯಂಕಟೇಶ ಅರಳೋ ಬರ್ದವಾಡ ಇವರು ಶಾಲೆಯ ಹಿಂದಿನ ಸ್ಥಿತಿ ಮತ್ತು ಈಗಿನ ಸ್ಥಿತಿ ಇವುಗಳ ಬಗ್ಗೆ ಉಪನ್ಯಾಸಮಾಡಿ ಸಾಂಪ್ರತಕ್ಕೆ ತಾಲೀಮ ಕಲಿಸುವದಕ್ಕಾಗಿ ಯೋಗ್ಯ ಸಾಮಾನುಗಳು ಇಲ್ಲದ್ದರಿಂದ ಆಗುವ ಕೊರತೆಗಳನ್ನು ಸಭೆಯ ಮುಂದೆ ಸೂಚಿಸಿದರು. ಕೂಡಲೆ ಈ ಭಾಗದ ಸರಕಲ್ ಇನ್ಸಪೇಕ್ಟರರಾದ ಮ॥ ರಾ॥ ಕುಂಚೂರ ಇವರು ಯಾವತ್ತೂ ಜನರಿಗೆ ವಿದ್ಯಾಸುಧಾರಣೆಯ ಸಲುವಾಗಿ ತಮ್ಮ ಕೈಯಿಂದಾ ದಷ್ಟು ಸಹಾಯ ಮಾಡುವದು ಪ್ರತಿಯೊಬ್ಬರ ಕರ್ತವ್ಯವಾಗಿದೆ, ಎಂಬಾಶಯದ ಸುಶ್ರಾವ್ಯ ಭಾಷಣವನ್ನು ಮಾಡಿದಮೇಲೆ ಕೆಳಗೆ ಬರೆದ ಜನರ ಕಡಿಂದಾ ವರ್ಗಣಿಯು ಕೊಡಲ್ಪಟ್ಟಿತು:—

		ರೂಪಾಯಿ
(೧)	ಗುರುಶಿದ್ದಪ್ಪ ಶಿವಪ್ಪ ಹಳೆಮನಿ	೪
(೨)	ಬಸವಣ್ಣೆಪ್ಪ ಬಸಲಿಂಗಪ್ಪ ಅಕ್ಕಿ	೨
(೩)	ಬಸನಗೌಡಾ ಎಲ್ಲಪ್ಪಗೌಡಾ ಮ॥ ಪಾಟೀಲ	೨
(೪)	ಚಿದಂಬರ ನಾರಾಯಣ ಸಹಸ್ರಬುದ್ಧೆ	೨
(೫)	ಫಕೀರಗೌಡಾ ಸಂಕನಗೌಡಾ ಪೊ॥ ಪಾಟೀಲ	೨
		೧೨

ಜಾಹೀರ್ನಾಮೆ

ಸರ್ವಶಕ್ತನಾದ ಪರಮೇಶ್ವರನ ಇಚ್ಛಾನುರೂಪವಾಗಿ ಸುಸಂಸ್ಕರಣೀಯರಾದ ಮತ್ತು ವೈಭವ ಶಾಲಿಗಳಾದ ನಮ್ಮ ಮಾಜಿ ಸಾರ್ವಭೌಮ ಅರಸು ಏಳನೇ ಎಡ್ವರ್ಡ, ಇವರು ಪರಲೋಕವಾಸಿಯಾಗಿದ್ದು, ಅವರ ದೇಹಾವಸಾನದ ಮೂಲಕವಾಗಿ ಗ್ರೇಟಬ್ರಿಟನ್ ಮತ್ತು ಅಯರ್ಲಂಡ್ ಈ ಸಂಯುಕ್ತ ರಾಜ್ಯದ ಮತ್ತು ಮಲಿಕ್‌ಮೊಆಝುಮರವರ ಇತರ ಎಲ್ಲ ಪ್ರದೇಶಗಳ ಸಾರ್ವಭೌಮ ರಾಜಸತ್ತೆಯು ಮಹಾನ್ ಮತ್ತು ಬಲಾಢ್ಯರಾದ ಯುವರಾಜ ಜಾರ್ಜ್ ಫ್ರೆಡರಿಕ್ ಅರ್ನೆಸ್ಟ್ ಅಲ್ಬರ್ಟ್ ಇವರೊಬ್ಬರಿಗೆಯೇ ಹಕ್ಕಿನಿಂದ ಪ್ರಾಪ್ತವಾಗಿರುತ್ತದೆ; ಆದದರಿಂದ ಹಿಂದುಸ್ಥಾನದ ಗವ್ಹರ್ನರ್ ಜನರಲ್ ಮತ್ತು ಕೌನ್ಸಿಲ್ಲಿನ ಸಭಾಸದರಾದ ನಾವು ಈಗ ಏಕಸ್ವರದಿಂದಲೂ ಏಕಮತದಿಂದಲೂ ಪ್ರಸಿದ್ಧ ಮತ್ತು ಜಾಹೀರು ಮಾಡುವದೇನೆಂದರೆ:—ಸುಸಂಸ್ಕರಣೀಯರಾದ ಮತ್ತು ವೈಭವಶಾಲಿಗಳಾದ ನಮ್ಮ ಮಾಜಿ ಸಾರ್ವಭೌಮ ರಾಜಾಸಾಹೇಬರವರ ನಿಧನದ ಮೂಲಕವಾಗಿ, ಈಗ, ಈಶ ಕೃಪೆಯಿಂದ, ಮಹಾನ್ ಮತ್ತು ಬಲಾಢ್ಯರಾದ ಯುವರಾಜ ಜಾರ್ಜ್ ಫ್ರೆಡರಿಕ್ ಅರ್ನೆಸ್ಟ್ ಅಲ್ಬರ್ಟ್ ಇವರೇ ಕಾಯದೆಯಿಂದ ಮತ್ತು ಹಕ್ಕಿನಿಂದ ನಮ್ಮ ಸಾರ್ವಭೌಮ ಅರಸು ಐದನೇ ಜಾರ್ಜ್ ಆಗಿದ್ದು ಗ್ರೇಟ್‌ಬ್ರಿಟನ್ ಮತ್ತು ಆಯರ್ಲಂಡ್ ಈ ಸಂಯುಕ್ತ ರಾಜ್ಯದ ಮತ್ತು ಸಮುದ್ರದ ಆಚೆಗಿರುವ ಬ್ರಿಟಿಶ್ ಪ್ರದೇಶಗಳ ಅರಸರೂ, ಧರ್ಮಸಂರಕ್ಷಕರೂ, ಹಿಂದುಸ್ಥಾನದ ಬಾದಶಹರೂ ಆಗಿದ್ದಾರೆ, ಮತ್ತು ಅವರ ಮೇಲೆ ನಾವು ಅಂತಃಕರಣ ಪೂರ್ವಕವಾಗಿ ಮತ್ತು ನಮ್ರಭಾವದಿಂದ ಪ್ರೇಮವನ್ನಿಟ್ಟು ಏಕನಿಷ್ಠೆಯಿಂದ ನಡೆಯಲಿಕ್ಕೆ ಮತ್ತು ಅವರ ಆಜ್ಞೆಯನ್ನು ನಿರಂತರವಾಗಿ ಪಾಲಿಸಲಿಕ್ಕೆ ಒಪ್ಪಿಕೊಳ್ಳುತ್ತೇವೆ. ಮತ್ತು ಯಾವ ಈಶ್ವರನ ಅನುಗ್ರಹದಿಂದ ರಾಜರು ಮತ್ತು ರಾಜ್ಞಿಯರು ಆಳುತ್ತಾರೋ ಆ ಈಶ್ವರನನ್ನು ನಾವು ಪ್ರಾರ್ಥಿಸುವದೇನೆಂದರೆ:—"ರಾಜಪುತ್ರ ಐದನೇ ಜಾರ್ಜ್ ಇವರು ನಮ್ಮನ್ನು ಆಳಲಿಕ್ಕೆ ದೀರ್ಘಾಯುರಾಗಿ ಸುಖಿಯಾಗಿರಲಿ."

ಅಭಿವಚನವು.

ಲಾರ್ಡ್ಸ್ ಮತ್ತು ಸದ್ಗೃಹಸ್ಥರೇ,

ನನ್ನ ಅಂತಃಕರಣವು ಎಷ್ಟು ತುಂಬಿ ಬಂದಿರುವದೆಂದರೆ, ನಾನು

ಈ ಹೊತ್ತು ನಿಮ್ಮ ಕೂಡ ವಿಶೇಷ ಮಾತನಾಡಲಾರೆನು. ನನ್ನ ಅತ್ಯಂತ ಪ್ರಿಯ ತಂದೆಯಾದ ರಾಜೇಸಾಹೇಬರ ದೇಹಾವಸಾನದ ವಾರ್ತೆಯನ್ನು ನಿಮಗೆ ತಿಳಿಸುವ ದುಃಖಕರವಾದ ಕೆಲಸವು ನನ್ನ ಪಾಲಿಗೆ ಬಂದಿರುತ್ತದೆ. ಈ ಪ್ರಕಾರ ಅಕಸ್ಮಾತ್ತಾಗಿ ನನ್ನ ಮತ್ತು ಇಡೀ ಸಾಮ್ರಾಜ್ಯದ ಮೇಲೆ ಯಾವಾಗಲೂ ತುಂಬಿ ಬರಲಾರದಂಥ ಹಾನಿಯು ಬಂದಾಗ್ಯೂ, ತನ್ನ ಪ್ರಜೆಗಳ ಸುಖವೇ ತನ್ನ ಸುಖವೆಂದು ಎಣಿಸಿ ಅದನ್ನು ಹೆಚ್ಚಿಸುವದರಲ್ಲಿ ಸುಖಪಡುತ್ತಲಿದ್ದ ತಮ್ಮ ಪ್ರಿಯ ರಾಜೇಸಾಹೇಬರವರ ಬಗ್ಗೆ ಶೋಕಗ್ರ ಸ್ಯುತ್ತಿರುವ ನನ್ನ ಭಾವೀಪ್ರಜೆಗಳ ಸಹಾನುಭೂತಿಯು ನನಗೆ ಉಂಟೆಂ ಬುದನ್ನು ತಿಳಿದು ನನಗೆ ದುಃಖದಲ್ಲಿ ಸುಖಕಾಣುತ್ತದೆ. ರಾಜೇಸಾಹೇಬರ ನಿಧನದ ಮೂಲಕವಾಗಿ ನಾನು ಪಿತೃಪ್ರೇಮವನ್ನು ಕಳಕೊಂಡೆನು ಮಾತ್ರ ವಲ್ಲದೆ ನನ್ನ ಒಬ್ಬ ಪ್ರಿಯಮಿತ್ರ ಮತ್ತು ಸಲ್ಲಾಗಾರನ ಮಮತೆಯ ಮತ್ತು ದೃಢವಾದ ಸಂಬಂಧವನ್ನೂ ಕಳಕೊಂಡಿರುತ್ತೇನೆ. ನನ್ನ ಅತ್ಯಂತ ಪ್ರಿಯ ಮಾತೆಯ ಅಗಾಧ ದುಃಖದಲ್ಲಿ ಅವಳಿಗೆ ಸಾರ್ವತ್ರಿಕವಾಗಿ ಪ್ರೇಮ ಪೂರ್ವ ಕವಾದ ಸಹಾನುಭೂತಿಯು ತೋರಿಸಲ್ಪಡುವದೆಂಬ ವಿಷಯದಲ್ಲಿ ನನಗೆ ಖಾತ್ರಿಯುಂಟು. ಸುಮಾರು ಒಂಭತ್ತು ವರ್ಷಗಳ ಹಿಂದೆ ನಮ್ಮ ಪ್ರಿಯ ರಾಜೇಸಾಹೇಬರವರು ಇದೇ ಸ್ಥಳದಲ್ಲಿ ನಿಂತು ಏನೆಂದು ಅಭಿವಚನ ಕೊಟ್ಟಿದ್ದರೆಂದರೆ: ನನ್ನ ಶರೀರದಲ್ಲಿ ಪ್ರಾಣವಿರುವ ವರೆಗೆ ನಾನು ನನ್ನ ಪ್ರಜಾ ಜನರ ಸುಖಾಭಿವೃದ್ಧಿಯ ಮತ್ತು ಉನ್ನತಿಯ ಬಗ್ಗೆ ಯತ್ನಿಸುತ್ತಿ ರುವೆನು. ಈ ಅಭಿವಚನವು ಪೂರ್ಣವಾಗಿ ಕೊನೆಗಾಣಿಸಲ್ಪಟ್ಟಿತೆಂದು ಇಡೀ ರಾಜ್ಯವು ಅಭಿಪ್ರಾಯ ಪಡುವದೆಂಬ ಬಗ್ಗೆ ನನಗೆ ಖಾತ್ರಿ ಇದೆ. ಅವರ ವರ್ತನವನ್ನನುಸರಿಸಲಿಕ್ಕೆ ಪ್ರಯತ್ನಪಡುವದು ಮತ್ತು ಈ ರಾಜ್ಯದ ನಿಯಮಬದ್ಧವಾದ ರಾಜ್ಯಪದ್ಧತಿಯನ್ನು ಕಾಪಾಡುವದು ಇವೇ ನನ್ನ ಆಯುಷ್ಯದ ಮುಖ್ಯ ಉದ್ದೇಶಗಳಾಗಿರುವವು. ನನ್ನ ಮೇಲೆ ಎಷ್ಟು ದೊಡ್ಡ ಜವಾಬುದಾರಿಯು ಬಿದ್ದಿರುವದೆಂಬುದು ನನಗೆ ಚೆನ್ನಾಗಿ ಗೊತ್ತಿರುತ್ತದೆ. ಈ ಜವಾಬುದಾರಿಯ ದುರ್ಘಟವಾದ ಕೆಲಸಗಳನ್ನು ಮಾಡುವಲ್ಲಿ ನನಗೆ ಪಾರ್ಲಮೆಂಟಿನವರು ಮತ್ತು ಈ ದ್ವೀಪದೊಳಗಿನ ಮತ್ತು ಸಮುದ್ರದ ಆಚೆಯ ನನ್ನ ಪ್ರದೇಶಗಳೊಳಗಿನ ಜನರು ಸಹಾಯ ಮಾಡುವರೆಂದು ಮತ್ತು ನನಗೆ ಶಕ್ತಿಯನ್ನೂ ಬುದ್ಧಿಯನ್ನೂ ಕೊಡಲಿಕ್ಕೆ ಅವರು ಪರಮೇಶ್ವ

ರನನ್ನೂ ಪ್ರಾರ್ಥಿಸುವರೆಂದು ನಾನು ಖಾತ್ರಿ ಪಡುತ್ತೇನೆ. ನನ್ನ ಪ್ರಜೆಯ ಸುಖಾಭಿವೃದ್ಧಿಯ ಬಗ್ಗೆ ಮಾಡಲ್ಪಡುವ ಪ್ರತಿಯೊಂದು ಪ್ರಯತ್ನದಲ್ಲಿ ನನೆಗೆ ಯಾವಾಗಲೂ ಸಹಾಯ ಮಾಡುವಂಥ ಪ್ರಿಯಪತ್ನಿಯು ನನಗೆ ದೊರಕಿರುವಳೆಂಬುವನ್ನು ತಿಳಿದು ನಾನು ಧೈರ್ಯಗೊಳ್ಳುತ್ತೇನೆ.

(True translation.)
SAYAD SHAMSUDDIN KADRI'
Oriental Translator to Government.

ಜಾಹೀರ್‌ನಾಮೆ.

—:•••:—

ಜನರಲ್ ಡಿಪಾರ್ಟಮೆಂಟ್.

ಮುಕ್ಕಾಮು ಜಂಜಿರೆ ಮುಂಬಯಿ,
ತಾರೀಖು ೨೭ ನೇ ಮೇ ಸನ್ ೧೯೧೦.

ನಂಬರ ೨೫೧೭. ಹಿಂದುಸ್ಥಾನ ಸರಕಾರದ ಈ ಕೆಳಗಿನ ಜಾಹೀರುನಾಮೆಯು ಎಲ್ಲ ಜನರ ಮಾಹೀತಿಯ ಬಗ್ಗೆ ಪುನಃ ಪ್ರಕಟಗೊಳಿಸಲಾಗಿದೆ.

ಹೋಮ್ ಡಿಪಾರ್ಟಮೆಂಟ್.

ಪಬ್ಲಿಕ್.

ನಂಬರು ೧೬೭೨, ಮುಕ್ಕಾಮು ಸಿಮ್ಲಾ, ತಾರೀಖು ೨೪ ನೇ ಮೇ ಸನ್ ೧೯೧೦.

ಮಲಿಕ್‌ಮೊ ಅಝುಮ್ ಕೈಸರ್ — ಇ-ಹಿಂದ್‌ರವರು ಹಿಂದುಸ್ಥಾನದ ಸಂಸ್ಥಾನಿಕರಿಗೆ ಮತ್ತು ಪ್ರಜಾ ಜನರಿಗೆ ಈ ಕೆಳಗಿನ ಜಾಹೀರು ಪತ್ರವನ್ನು ಕಳುಹಿಸಲಿಕ್ಕೆ ಸಂತೋಷ ಉಳ್ಳವರಾಗಿದ್ದಾರೆ:—

'ನನ್ನ ಅತ್ಯಂತ ಪ್ರಿಯ ತಂದೆಯ ಶೋಚನೀಯ ಮತ್ತು ಅಕಸ್ಮಾತ್ತಾದ ಮರಣದ ಮೂಲಕವಾಗಿ ನನಗೆ, ಪ್ರತಾಪಶಾಲಿಯಾದ ಮತ್ತು ಪ್ರಾಚೀನವಾದ ರಾಜವಂಶದ ವಾರಸದಾರನೆಂಬ ನಾತೆಯಿಂದ, ಅರಸು ಮತ್ತು ಬಾದಶಹನೆಂದು ಸಿಂಹಾಸನಾರೂಢನಾಗ ಬೇಕಾಗಿದೆ. ನಾನು ನನ್ನ ಹಿಂದುಸ್ಥಾನದ ಪ್ರದೇಶಗಳೊಳಗಿನ ಅರಸರಿಗೆ ರಾಜ್ಯಕರ್ತರಾದ ಸಂಸ್ಥಾನಿ

ಕರಿಗೆ ಮತ್ತು ಇತರ ಎಲ್ಲ ನಿವಾಸಿಗಳಿಗೆ ವಂದನೆಗಳನ್ನು ಮಾಡುತ್ತೇನೆ.

ನಾನು ಸಿಂಹಾಸನಾರೂಢನಾಗಲಾಗಿ ಹಿಂದುಸ್ಥಾನದೊಳಗಿನ ಬೇರೆ ಬೇರೆ ಜಾತಿಗಳ, ದರ್ಜೆಗಳ ಮತ್ತು ಧರ್ಮಗಳ ಎಲ್ಲಾ ಜನರಿಂದ ಸಾರ್ವಭೌಮ ಸಿಂಹಾಸನದ ಬಗ್ಗೆ ಯಾವ ರಾಜನಿಷ್ಠೆಯು ಮತ್ತು ಸಿಂಹಾಸನಾರೂಢರಾಗುವವರ ಬಗ್ಗೆ ಯಾವ ವ್ಯಕ್ತಿ ವಿಷಯಿಕವಾದ ಪ್ರೇಮವು ಅಂತಃಕರಣಪೂರ್ವಕವಾಗಿ ಮತ್ತು ಪ್ರಭೂತವಾಗಿ ತೋರಿಸಲ್ಪಟ್ಟಿತೋ ಅದರ ಬಗ್ಗೆ ನಾನು ಅಂತಃಕರಣ ಪೂರ್ವಕವಾಗಿ ನಿಮ್ಮ ಉಪಕಾರವನ್ನು ಸ್ಮರಿಸುತ್ತೇನೆ.

ಆದರಪೂರ್ವಕವಾಗಿ ಸ್ಮರಿಸಲ್ಪಡುವ ವ್ಹಿಕ್ಟೋರಿಯಾ ಮಹಾರಾಣಿಯವರು, ಸನ್ ೧೮೫೮ ನೇ ಇಸವಿಯಲ್ಲಿ ರಾಜ್ಯಸೂತ್ರಗಳನ್ನು ಪ್ರತ್ಯಕ್ಷವಾಗಿ ತಮ್ಮ ಕೈಯಲ್ಲಿ ತೆಗೆದುಕೊಂಡಾಗ, ತಮ್ಮ ಹಿಂದೀ ಪ್ರಜಾ ಜನರಿಗೆ ಮತ್ತು ಮಾಂಡಲಿಕ ಸಂಸ್ಥಾನಗಳ ಅಧಿಪತಿಗಳಿಗೆ ಒಂದು ಜಾಹೀರುನಾಮೆಯನ್ನು ಕಳುಹಿಸಿದ್ದರು, ಮತ್ತು ಅವರ ಪ್ರತಾಪಶಾಲಿಗಳಾದ ಚಿರಂಜೀವರು, ಎಂದರೆ, ಪೂಜ್ಯ ಮತ್ತು ಪ್ರಿಯರಾದ ನನ್ನ ತಂದೆಯವರು ಐವತ್ತು ವರ್ಷಗಳ ತರುವಾಯ ನಿಮಗೆ ಕಳುಹಿಸಿದ ತಮ್ಮ ಜಾಹೀರುನಾಮೆಯಲ್ಲಿ ಆ ಅತ್ಯಂತ ಪ್ರಸಿದ್ಧವಾದ ಸಂಗತಿಯ ನೆನಪು ಕೊಟ್ಟಿದ್ದರು. ಈ ಜಾಹೀರುನಾಮೆಗಳು ಬಾದಶಾಹೀ ರಾಜ್ಯ ಪದ್ಧತಿಯ ಉದಾರ ಮತ್ತು ಹಿತಕರವಾದ ಧೋರಣೆಯ ಸನದುಗಳೇ ಆಗಿವೆ, ಮತ್ತು ಆ ಧೋರಣೆಯಂತೆ ನಾನು ನನ್ನ ಮುಂದಿನ ಇಡೀ ಆಯುಷ್ಯದಲ್ಲಿ ನಿಷ್ಠಾಪೂರ್ವಕವಾಗಿ ನಡೆಯುವೆನು.

ಮಾಜಿ ಮಲಿಕ್ ಮೊಅಜ್ಝುಮ್‌ರವರ ಇಚ್ಛೆಯ ಮೇರೆಗೆ ಮತ್ತು ಅವರ ಸ್ವಂತ ಉದಾಹರಣೆಯನ್ನೇ ಅನುಸರಿಸಿ ನಾನು ಐದು ವರ್ಷಗಳ ಹಿಂದೆ ನನ್ನ ರಾಜ್ಞಿಯ ಸಹಿತವಾಗಿ ಹಿಂದುಸ್ಥಾನಕ್ಕೆ ಬಂದಿದ್ದೆನು. ಆ ವಿಸ್ತೀರ್ಣವಾದ ದೇಶದೊಳಗಿನ ಇತಿಹಾಸಪ್ರಸಿದ್ಧವಾದ ದೊಡ್ಡ ದೊಡ್ಡ ರಾಜ್ಯಗಳ, ನಮ್ಮ ಸುಧಾರಣೆಗಿಂತ ಹೆಚ್ಚು ಪ್ರಾಚೀನವಾದ ಸುಧಾರಣೆಯ ಸ್ಮಾರಕಗಳ, ಪ್ರಾಚೀನ ರೂಢಿ ಮತ್ತು ನಡಾವಳಿಗಳ, ದೇಶೀಯ ಸಂಸ್ಥಾನಿಕರ, ಮತ್ತು ಜನರ, ಶಹರುಗಳ, ಕಸಬೆಗಳ ಮತ್ತು ಗ್ರಾಮಗಳ ಪರಿಚಯವು ನಮಗೆ ಪ್ರತ್ಯಕ್ಷವಾಗಿ ಆಯಿತು. ಆ ಅಪೂರ್ವವಾದ ಪ್ರವಾಸ

ನಲ್ಲಿ ನಮ್ಮ ಮನಸ್ಸಿನ ಮೇಲೆ ಅತಿ ಸ್ಪಷ್ಟವಾಗಿ ಬಿಂಬಿಸಿರುವ ವಿಚಾರಗಳು ಅಥವಾ ಆ ಪ್ರವಾಸದ ಪ್ರೇಮಸಂಬಂಧಗಳು ಎಂದಿಗೂ ಇಲ್ಲದಂತಾಗಲಿಕ್ಕಿಲ್ಲ, ಅಥವಾ ಅಸ್ಪಷ್ಟವಾಗಲಿಕ್ಕಿಲ್ಲ. ನನ್ನ ಮುಂದೆ ಇರುವ ದೊಡ್ಡ ಮತ್ತು ದ.ರ್ಘಟವಾದ ಕೆಲಸಗಳಲ್ಲಿ ನೀವು ಕರ್ತವ್ಯತತ್ಪರತೆಯಿಂದಲೂ ಉತ್ಸಾಹದಿಂದಲೂ ನನಗೆ ಸಹಾಯ ಮಾಡುವಿರೆಂದು ನಾನು ದೃಢವಾಗಿ ನಂಬ.ತ್ತೇನೆ. ಹಿಂದುಸ್ಥಾನದ ಸುಖಾಭಿವೃದ್ಧಿಯ ಬಗ್ಗೆ ನನಗೆ ಉತ್ಕಟವಾದ ಸಹಾನುಭೂತಿ ಇದ್ದು ಅದರಿಂದಲೇ ನಾನು ನನ್ನ ಆಡಳತೆಯಲ್ಲಿ ಯಾವಾಗಲೂ ಪ್ರೇರಿತನಾಗುವೆನು, ಮತ್ತು ಅಂಥಾದ್ದೇ ಸಹಾನುಭೂತಿಯನ್ನು ನೀವು ತತ್ಪರತೆಯಿಂದ ತೋರಿಸುವಿರೆಂದು ನನಗೆ ದೃಢ ವಿಶ್ವಾಸವಿದೆ.

ಆಲಿಜನಾಬ ಗವರ್ನರ್ ಜನರಲ್ ಇನ್ ಕೌನ್ಸಿಲ್‌ರವರ ಅಪ್ಪಣೆಯ ಮೇಲಿಂದ, (ಸಹಿ) ಏ. ಅರ್ಲೇ,

ಆಫೀಶಿಯೇಟಿಂಗ್ ಸೆಕ್ರೆಟರಿ ನಿಸಬತ್ ಹಿಂದುಸ್ಥಾನ ಸರಕಾರ.

ಅಲೀಜಾ ನಾಮದಾರ ಗವರ್ನರ್ ಇನ್ ಕೌನ್ಸಿಲ್‌ರವರ ಅಪ್ಪಣೆಯ ಮೇಲಿಂದ

ಎಲ್. ರಾಬರ್ಟ್‌ಸನ್,

ಸೆಕ್ರೆಟರಿ ನಿಸಬತ ಸರಕಾರ.

(True translation.)

SAYAD SHAMSUDDIN KADRI.

Oriental Translator to Government.

ಪತ್ರ ಕಳಿಸಿದವರಿಗೆ ಹಾಗೂ ಕಳಿಸುವವರಿಗೆ ಸೂಚನೆಗಳು.

ಅನೇಕ ಶಾಲೆಗಳಲ್ಲಿ ಆದ ಬಕ್ಷಿಸ ಸಮಾರಂಭಗಳ ವರ್ಣನೆಯುಳ್ಳ ಪತ್ರಗಳು ಶಾಲಾಪತ್ರಿಕದಲ್ಲಿ ಮುದ್ರಿಸುವದಕ್ಕೋಸ್ಕರ ಬಂದಿರುತ್ತವೆ. ಆದರೆ ಇಂಥ ಸಮಾರಂಭಗಳು ಯಾವ ಶಾಲೆಗಳಲ್ಲಿಯೇ ಆದರೂ ಅವುಗಳ ಕ್ರಮವು ಬಹುಶಃ ಒಂದೇ ಆಗಿರುವದರಿಂದ ಇಂಥ ಪತ್ರಗಳನ್ನು ಸಾದ್ಯಂತವಾಗಿ ಮುದ್ರಿಸುವದರಿಂದ ಶಾಲಾಪತ್ರಿಕದ ವಾಚಕರಿಗೆ ವಿಶೇಷ ಉಪಯೋಗವಾದೀತೆಂದು ತೋರುವದಿಲ್ಲ. ಆದಕಾರಣ ಇನ್ನು ಮುಂದೆ ಇಂಥ ಪತ್ರಗಳಲ್ಲಿ ವಿಶೇಷ ಸಂಗತಿಯೇನಾದರೂ ಇದ್ದ ಹೊರ್ತು ಅವನ್ನು

ಕ್ಷಚಿತ್ತಾಗಿಯೇ ಮುದ್ರಿಸುವೆವು. ಆದ್ದರಿಂದ ಇಂಥ ಪತ್ರಗಳನ್ನು ಕಳಿಸು ವವರು ಇನ್ನು ಮುಂದೆ ವ್ಯರ್ಥ ಶ್ರಮಬಡಬಾರದು. ಉಪಯುಕ್ತವಾದ ವಿಷಯಗಳನ್ನು ಕುರಿತು ಲೇಖಗಳನ್ನು ಬರೆದು ಪ್ರಸಿದ್ಧ ಪಡಿಸಲಿಕ್ಕೆ ಶಾಳಾ ಮಾಸ್ತರರಿಗೆ ಅನುಕೂಲವಾಗಬೇಕೆಂದು ಶಾಳಾಪತ್ರಕದ ಆಕಾರವನ್ನು ಕಳೆದ ವರ್ಷದಿಂದ ಇಮ್ಮಡಿ ಮಾಡಿದ್ದೇವೆ. ಆದರೆ ಇದುವರೆಗೆ ಶಾಳಾ ಮಾಸ್ತರರು ಈ ಅನುಕೂಲತೆಯ ಉಪಯೋಗವನ್ನು ಮಾಡಿಕೊಳ್ಳುವ ದಕ್ಕೆ ವಿಶೇಷ ಪ್ರಯತ್ನಬಟ್ಟಂತೆ ಕಂಡು ಬರುವದಿಲ್ಲ. ಆದಕಾರಣ, ಬರೆಯುವ ಅಪೇಕ್ಷೆಯೂ ಸಾಮರ್ಥ್ಯವೂ ಉಳ್ಳ ಮಾಸ್ತರರು ಇನ್ನು ಮುಂದಾದರೂ ವಸ್ತು ವರ್ಣನೆ, ಸ್ಥಲವರ್ಣನೆ, ಪಶುಪಕ್ಷ್ಯಾದಿಗಳ ವರ್ಣನೆ, ಸೃಷ್ಟಿಚಮತ್ಕಾರಗಳು, ಶಾಸ್ತ್ರೀಯ ವಿಷಯಗಳು, ಸಾಮಾಜಿಕ ವಿಷಯ ಗಳು, ನೀತಿಯ ವಿಷಯಗಳು, ಕೃಷಿ, ಗಣಿತ, ಇತಿಹಾಸ, ಭೂಗೋಲ, ವಿವಿಧ ನಿಬಂಧಗಳು ಇವೇ ಮೊದಲಾದ ಉಪಯುಕ್ತ ವಿಷಯಗಳನ್ನು ಕುರಿತು ಗ್ರಂಥಗಳಿಂದಲೂ ಸ್ವಾನುಭವದಿಂದಲೂ ಕಂಡುಕೊಂಡ ಸಂಗತಿ ಗಳನ್ನು ಬರೆದು ಕಳಿಸಿದರೆ ಅವುಗಳಿಗೆ ನಾವು ಶಾಲಾಪತ್ರಕದಲ್ಲಿ ಅವಶ್ಯವಾಗಿ ಸ್ಥಳ ಕೊಡುವೆವೆಂಬದಿಷ್ಟೇ ಅಲ್ಲ, ಅವರಿಗೆ ಉತ್ತೇಜನಾರ್ಥವಾಗಿ ಆ ಆ ಲೇಖದ ಯೋಗ್ಯತೆಯ ಪ್ರಕಾರ ಶಾಳಾಪತ್ರಕದಲ್ಲಿ ಮುದ್ರಿಸಲ್ಪಟ್ಟ ಪ್ರತಿ ಒಂದು ಪುಟದಷ್ಟು ಮಜಕೂರಿಗೆ ೮ ಆಣೆಯ ವರೆಗೆ ಬಕ್ಷೀಸು ಕೊಡುವೆವು. ಮುದ್ರಿಸಲಿಕ್ಕೆ ಕಳುಹಿದ ಲೇಖಗಳು ಶಾಲಾಪತ್ರಕದಲ್ಲಿ ಮುದ್ರಿಸ ಲಿಕ್ಕೆ ಯೋಗ್ಯವಲ್ಲವೆಂದು ಕಂಡು ಬಂದ ಪಕ್ಷದಲ್ಲಿ ಆ ಲೇಖಕರ ಇಚ್ಛೆಯ ಪ್ರಕಾರ ಅವರ ಲೇಖಗಳನ್ನು ಅವರ ಖರ್ಚಿನಿಂದ ತಿರುಗಿ ಕಳಿಸುವೆವು.

ಮ್ಯಾನೇಜರ ಶಾಳಾಪತ್ರಕ.

ವಿದ್ಯಾಖಾತೆಯ ನೋಟೀಸುಗಳು.

ಧಾರವಾಡ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟಿಸಿಂಗಸ್ಕೂಲಿನಲ್ಲಿ ಕೊಡಲ್ಪಡುವ ಮುಹಮ್ಮಡನ್ ಬರ್ಸರೀಫಂಡ ಸ್ಕಾಲರಶೀಪಿನ ಬಗ್ಗೆ.

ನೋಟೀಸು.

ಧಾರವಾಡ ಜಿಲ್ಹೆಯಲ್ಲಿ ಮುಹಮ್ಮಡನ್ ಬರ್ಸರೀ ಫಂಡದ ಒಂದು ಸ್ಕಾಲರಶೀಪು ಕೊಡುವ ಬಗ್ಗೆ ಮುಂಬಯಿ ಸರಕಾರೀ ಗ್ಯಾಝೇಟ

ತಾ|| ೩೦ನೇ ದಿಸೆಂಬರ ೧೯೦೮ ಭಾಗ ೧ ಪುಟ ೨೦೬೫ ರಿಂದ ೨೦೬೩ರಲ್ಲಿ ಕೊಟ್ಟ ನಿಯಮಗಳ ಪ್ರಕಾರ ಸದರೀ ಸ್ಕಾಲರಶೀಪಿನ ಬಗ್ಗೆ ಪರೀಕ್ಷೆಯು ಧಾರವಾಡ ಗಂಡು ಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ಸೋಮವಾರಕ್ಕೆ ತಾ|| ೧೨ನೇ ಸಪಟಂಬರ ೧೯೧೦ನೇ ದಿವಸ ೧೧ಘಂಟೆಗೆ ಪ್ರಾರಂಭವಾಗುವದು.

೨. ಶಾಳಾಖಾತೆಯಿಂದ ಮಾನ್ಯವಾದ ಧಾರವಾಡ ಜಿಲ್ಹೆಯೊಳಗಿನ ಬೇಕಾದ ಶಾಲೆಯ ಮುಸಲ್ಮಾನ ವಿದ್ಯಾರ್ಥಿಗಳು ಈ ಪರೀಕ್ಷೆಗೆ ಬರಬಹುದು. ಆದರೆ ಅವರು ತಾವು ನಿಜವಾಗಿ ಧಾರವಾಡ ಜಿಲ್ಹೆಯಲ್ಲಿ ವಾಸ ಮಾಡುವವರೆಂಬ ಬಗ್ಗೆಯೂ, ಧಾರವಾಡ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟಿಸಿಂಗಸ್ಕೂಲಿನಲ್ಲಿ ಇದ್ದು ದೇಶಭಾಷೆಯ ಅಭ್ಯಾಸ ಮಾಡಲಿಕ್ಕೆ ತಾಗುವ ಖರ್ಚನ್ನು ಕೊಡಲಿಕ್ಕೆ ಆಗದಷ್ಟು ಬಡವರಿದ್ದ ಬಗ್ಗೆಯೂ ಇಬ್ಬರು ಸಂಭಾವಿತ ಗೃಹಸ್ಥರ ಸರ್ಟಿಫಿಕೇಟನ್ನು ಹಾಜರ ಮಾಡಲಿಕ್ಕೆ ಬೇಕು. ಆದರೆ ಪರೀಕ್ಷೆಯ ಮೊದಲು ಕನಿಷ್ಟ ೧೨ ತಿಂಗಳ ವರೆಗೆ ಶಾಲೆಯಲ್ಲಿ ನಿಜವಾಗಿ ಇರದಂಥ ಉಮೇದವಾರರನ್ನು ಈ ಪರೀಕ್ಷೆಗೆ ಕೂಡ್ರಗೊಡಲಿಕ್ಕಿಲ್ಲ.

೩. ಮೇಲಿನ ೨ನೇ ನಿಯಮದಲ್ಲಿ ಹೇಳಿದ ಶರ್ತುಗಳಿಗನುಸಾರವಾಗಿ ತಿಂಗಳಿಗೆ ೩ ರೂಪಾಯಿ ಬೆಲೆಯುಳ್ಳ ಎರಡು ವರ್ಷಗಳ ವರೆಗೆ ನಡೆಯುವಂಥ ಒಂದು ಸ್ಕಾಲರಶೀಪು ಕೆಳಗೆ ಬರೆದ ಶರ್ತುಗಳ ಪ್ರಕಾರ ಧಾರವಾಡ ಪ್ರ್ಯಾಕ್ಟಿಸಿಂಗಸ್ಕೂಲಿನಲ್ಲಿ ಕೊಡಲ್ಪಡುವದು:—

(೧) ಉಮೇದಾರನ ವಯಸ್ಸು ೧೫ ವರ್ಷಕ್ಕಿಂತ ಹೆಚ್ಚು ಇರಬೇಕು.

(೨) ಕನ್ನಡ ಅಥವಾ ಉರ್ದು ೫ನೇ ಇಯತ್ತೆಯ ಪ್ರಕಾರ ತೆಗೆದುಕೊಂಡ ಪರೀಕ್ಷೆಯಲ್ಲಿ ಅವನು ಎಲ್ಲವರಲ್ಲಿ ಹೆಚ್ಚು ಗುಣಗಳನ್ನು ದೊರಕಿಸಬೇಕು, ಮತ್ತು ಹೆಚ್ಚು ಚುರುಕತನವನ್ನು ತೋರಿಸಬೇಕು.

(೩) ಅವನು ಪ್ರ್ಯಾಕ್ಟಿಸಿಂಗಸ್ಕೂಲಿಗೆ ತಪ್ಪಿಸದೆ ಹೋಗಬೇಕು. ಮತ್ತು ಅವನ ನಡತೆಯೂ ಅಭ್ಯಾಸವೂ ಸಮಾಧಾನಕರವಾಗಿರಬೇಕು.

(೪) ಅವನು ವ್ಹರ್ನ್ಯಾಕ್ಯೂಲರ ಫಾಯನಲ್ ಪರೀಕ್ಷೆಯನ್ನು ಪಾಸಾದನಂತರ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ಕಲಿತು ಟ್ರೇಂಡ ಶಿಕ್ಷಕನಾಗಲಿಕ್ಕೂ ಮತ್ತು ಆ ಪ್ರಕಾರ ಯೋಗ್ಯ ಜಾಮೀನುಗಳನ್ನು ಕೊಟ್ಟು ಕರಾರ ಪತ್ರ ಬರಕೊಡಲಿಕ್ಕೂ ಕಬೂಲ ಇರಬೇಕು.

೪. ಈ ಪರೀಕ್ಷೆಯು ಒಂದು ಕಮಿಟಿಯ ಮುಖಾಂತರ ತೆಗೆದುಕೊ

ಳ್ಳಲ್ಪಡುವದು. ಆ ಕಮಿಟಿಗೆ ಧಾರವಾಡ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರು ಪ್ರೆಸಿಡೆಂಟರಿರುವರು. ಈ ಪರೀಕ್ಷೆಗೆ ಕೂಡ್ರುವದಕ್ಕೆ ಪರವಾನಗಿಯ ಬಗ್ಗೆ ಮಾಡತಕ್ಕ ಅರ್ಜಿಯನ್ನು ವ್ಹರ್ನ್ಯಾಕ್ಯೂಲರ ಫಾಯನಲ್ ಪರೀಕ್ಷೆಯ ಛಾಪಿಸಿದ ನಮೂನೆಯಲ್ಲಿ ತಕ್ಕ ಬದಲಾವಣೆಗಳನ್ನು ಮಾಡಿ ಅದರ ಮೇಲೆ ಮಾಡತಕ್ಕದ್ದು. ಈ ನಮೂನೆಯ ಪ್ರತಿಗಳು ಮೆ|| ಎಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬರವರ ಕಡೆಯಿಂದ ಅಥವಾ ಪರೀಕ್ಷಾ ಕಮಿಟಿಯ ಪ್ರೆಸಿಡೆಂಟರ ಕಡೆಯಿಂದ ಕಿಮ್ಮತ್ತು ಬೀಳದೆ ದೊರೆಯುವವು. ಪರೀಕ್ಷೆಯ ಅರ್ಜಿಗಳನ್ನು ಪ್ರೆಸಿಡೆಂಟರ ಕಡೆಗೆ ೧೫ನೇ ಅಗಸ್ಟ ೧೯೧೦ ನೇ ದಿವಸ ಅಥವಾ ಅದಕ್ಕೂ ಪೂರ್ವದಲ್ಲಿ ಮುಟ್ಟುವಂತೆ ಕಳಿಸಬೇಕು. ಆನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

ಧಾರವಾಡ. | R. B. Karandikar.
ತಾ|| ೧೬. ೬ ೧೯೧೦ | ಎಜ್ಯುಕೇಶನಲ್ ಇನಸ್ಪೆಕ್ಟರ, ದಕ್ಷಿಣಭಾಗ.

ಧಾರವಾಡ ಟ್ರೇನಿಂಗ ಕಾಲೇಜದ ಸರಟೀಫಿಕೇಟ ಪರೀಕ್ಷೆಯು ಸೋಮವಾರ ತಾ|| ೩ನೇ ಅಕ್ಟೋಬರ ೧೯೧೦ನೇ ಇಸವಿ ದಿವಸ ಪ್ರಾರಂಭವಾಗುವದು. ಹೊರಗಿನಿಂದ ಪರೀಕ್ಷೆಗೆ ಬರುವವರು ಮೆ|| ಎಜ್ಯುಕೇಶನಲ್ ಇನಸ್ಪೇಕ್ಟರ ಸಾ|| ಬಾ|| ದಕ್ಷಿಣಭಾಗ ಇವರ ಅಪ್ಪಣೆಯನ್ನು ಪಡೆದುಕೊಂಡು ಪರೀಕ್ಷೆಗೆ ಕೂಡ್ರಬಹುದು.

V. B Joshi.
ಪ್ರಿನ್ಸಿಪಾಲ, ಟ್ರೇನಿಂಗಕಾಲೇಜ
ಧಾರವಾಡ.

ಈ ವರ್ಷದ ವ್ಹರ್ನ್ಯಾಕ್ಯೂಲರ ಫಾಯನಲ್ ಪರೀಕ್ಷೆಯು ಧಾರವಾಡ, ಬೆಳಗಾವ, ವಿಜಾಪುರ, ಕಾರವಾರ ಸೆಂಟರುಗಳಲ್ಲಿ ಬರುವ ಸಪ್ಟಂಬರ ತಿಂಗಳ ತಾ|| ೧೯ ಸೋಮವಾರ ದಿವಸ ಪ್ರಾರಂಭವಾಗುವದು. ಈ ಪರೀಕ್ಷೆಯ ವಿಶೇಷ ನಿಯಮಗಳು ಕಳೆದ ವರ್ಷದ ಶಾಲಾಪತ್ರಕದ ವೋ ತಿಂಗಳ ಸಂಚಿಕೆಯ ೧೫೭-೧೫೮ನೇ ಪುಟಗಳಲ್ಲಿ ಕೊಟ್ಟಂತೆ ಇರುತ್ತವೆ. ಈ ವರ್ಷದ ಪರೀಕ್ಷೆಗೆ ನೇಮಿಸಿದ ಪುಸ್ತಕಗಳು ಇದೇ ವರ್ಷದ ಶಾಳಾಪತ್ರಕದ ಮಾರ್ಚ ತಿಂಗಳ ಸಂಚಿಕೆಯ ೯೬ನೇ ಪುಟದಲ್ಲಿ ಪ್ರಸಿದ್ಧಿಸಲ್ಪಟ್ಟಿರುತ್ತವೆ.

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ ಧಾರವಾಡ.

ಶಾಲಾಪತ್ರಿಕೆ.

ಪದ್ಯಂ

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಶಿಷ್ಯರ್ಗಳುತ್ಕರ್ಷಮಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀ ಪತ್ರಮಂ ಮುದ್ರಿಸಿ ||
ನಯದಿಂದಿತ್ತಪೆವೋದುವರ್ಗೆ ಮುಗುಳುಂದೋರಲ್ಕೆ ಕೈಕೊಂಬುದೈ
ದಯೆಯಿಂ ದೋಷವತಿದ್ದವೇಳ್ವುದು ಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ||೧||

ಪುಸ್ತಕ ೪೬ | ಅಗಸ್ಟ ೧೯೧೦. | ಸಂಚಿಕೆ ೮.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಬಾದಶಹರಾದ ೫ನೇ ಜಾರ್ಜರವರ ಚರಿತ್ರವು.

(ಕಳೆದ ಸಂಚಿಕೆಯಿಂದ ಮುಗಿದದ್ದು.)

"ಗಿಲ್ಡಹಾಲದ" ಮೇಜವಾನಿಯ ಕಾಲಕ್ಕೆ ನಮ್ಮ ಬಾದಶಹರವರು ಮಾಡಿದ ಭಾಷಣವು ಬ್ರಿಟಿಶರ ಒಕ್ಕಲಾದ ಪ್ರದೇಶಗಳ ವಿಷಯವಾಗಿ ಅವರ ಅಭಿಪ್ರಾಯವನ್ನು ಚನ್ನಾಗಿ ವ್ಯಕ್ತಪಡಿಸುತ್ತದೆ. ಅವರು ತಮ್ಮ ಭಾಷಣದ ಕೊನೆಯಲ್ಲಿ ಅಂದದ್ದೇನಂದರೆ:—

"ನನ್ನ ಹಾಗೆ ಆಸ್ಟ್ರೇಲಿಯಾ ದ್ವೀಪದಲ್ಲಿ ಪ್ರವಾಸ ಮಾಡಿದ ಪ್ರತಿಒಬ್ಬನಿಗೂ ಆ ಪ್ರದೇಶದಲ್ಲಿ ಜನವಸತಿಯು ತೀರ ಕಡಿಮೆ ಇರುತ್ತದೆಂಬ ಸಂಗತಿಯು ಕೂಡಲೆ ಲಕ್ಷಕ್ಕೆ ಬರುವದು. ಅಲ್ಲಿ ಎಷ್ಟೋ ಪ್ರದೇಶಗಳು ಪಡ ಬಿದ್ದಿರುವವು. ಅಲ್ಲಿಯ ಭೂಮಿಯು ಹೊಟ್ಟೆಯೊಳಗೆ ಅಪಾರವಾದ ಸಂಪತ್ತು ಇದ್ದು ಅದು ಅಗಿಯುವ ಮನುಷ್ಯರ ದಾರೀ ನೋಡುತ್ತಿರುವದು. ಬೆಳೆಯುಳ್ಳ ಹೊಲಗಳು ಉತ್ಕೃಷ್ಟವಾದ ಬೆಳೆಯನ್ನು ಧರಿಸಿ, ಒಕ್ಕಲಿಗರಿಗೆ ಕೊಡುವದಕ್ಕಾಗಿ ಸಿದ್ಧವಾಗಿ ನಿಂತಿರುತ್ತವೆ. ಆದರೆ ಇವೆಲ್ಲವುಗಳನ್ನು ಉಪಭೋಗಿಸುವ ಜನರೇ ಅಲ್ಲಿ ಇಲ್ಲ. ಇವುಗಳ ಸಾರ್ಥಕ್ಯವಾಗಬೇಕಾದರೆ, ಇಲ್ಲಿಂದ ಉದ್ಯೋಗಿಗಳಾದ ಬಹು ಜನರು ಅಲ್ಲಿಗೆ ಒಕ್ಕಲಾಗಿ ನಿಲ್ಲಲಿಕ್ಕೆ ಹೋಗಬೇಕು. ಅಲ್ಲಿ ಒಕ್ಕಲಾಗಿ ನಿಂತ ಜನರ ಸಲುವಾಗಿ ಉದಾರತನದ ಕಾಯದೆಗಳನ್ನು ಮಾಡಬೇಕು. ಬೇರೆ ಬೇರೆ ಉದ್ಯೋಗಗಳನು

ಮಾಡಲಿಕ್ಕೆ ಅವರಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಡಬೇಕು. ಜನವಸತಿಯು ಅತಿ ದಟ್ಟಾಗಿ ಉದರ ನಿರ್ವಾಹಕ್ಕಾಗಿ ಒಬ್ಬರ ಕುತ್ತಿಗೆಯನ್ನು ಮತ್ತೊಬ್ಬರು ಹಿಚಕುವ ಪ್ರದೇಶದೊಳಗಿನ ಜನಸಂಖ್ಯೆಯನ್ನು ಕಡಿಮೆ ಮಾಡಿ ಅಲ್ಲಿಯ ಜನರನ್ನು ಆಸ್ಟ್ರೇಲಿಯಕ್ಕೆ ಕಳಿಸಿದರೆ, ಉಭಯಪಕ್ಷದವರಿಗೂ ಸುಖವೃದ್ಧಿಯಾಗುವದೆಂಬದಕ್ಕೆ ಸಂದೇಹವಿಲ್ಲ. ಈ ಸಂಬಂಧದಿಂದ ಅಲ್ಲಿಯ ಜನರು ನಮಗೆ ಬೇಡುವದೇನಂದರೆ:— "ನಮಗೆ ಉಪಯೋಗವಾಗುವಂಥ ಉತ್ತಮೋತ್ತಮರಾದ ಜನರನ್ನು ಆರಿಸಿ ಇಲ್ಲಿಗೆ ಒಕ್ಕಲಾಗಲಿಕ್ಕೆ ಕಳಿಸಿಕೊಡಿರಿ." ಅವರ ಈ ಬೇಡಿಕೆಯು ಯಥಾರ್ಥವಾಗಿರುವದು. ಆದಕ್ಕಾಗಿ ನಾವು ನಮ್ಮ ದೇಶಬಾಂಧವರಿಗೆ ಸ್ಪಷ್ಟವಾಗಿ ಹೇಳುವದೇನಂದರೆ, ಒಕ್ಕಲಾದ ಪ್ರದೇಶಗಳ ವಿಷಯವಾಗಿ ನಿಮ್ಮ ಪ್ರೇಮವನ್ನು ದೃಢ ಪಡಿಸುವದಕ್ಕಾಗಿ ನಿಮ್ಮೊಳಗಿನ ಉತ್ತಮೋತ್ತಮರಾದ ಜನರನ್ನು ಆರಿಸಿ ಅಲ್ಲಿಗೆ ಕಳಿಸಿ ಕೊಡಿರಿ."

ಇ. ಸ. ೧೯೦೩ರಲ್ಲಿ ನಮ್ಮ ಬಾದಶಹರವರು ಆಸ್ಟ್ರಿಯಾ ದೇಶಕ್ಕೆ ಹೋಗಿ ಅಲ್ಲಿಯ ಚಕ್ರವರ್ತಿಯ ಭೇಟಿಯನ್ನು ತೆಗೆದುಕೊಂಡು ಅವರ ಸ್ನೇಹ ಸಂಪಾದನ ಮಾಡಿದರು. ಅಮೇರಿಕದಲ್ಲಿ ಸೆಂಟ ಲೂಯಿಸ್ ಎಂಬಲ್ಲಿ ನಡೆದ ಪ್ರದರ್ಶನಕ್ಕೆ ಕಳುಹಿಸಲ್ಪಟ್ಟ ಬ್ರಿಟಿಶ್ ಕಮಿಶನ್ನಿಗ ಇವರೇ ಪ್ರೆಸಿಡೆಂಟರಾಗಿದ್ದರು. ಇಂಗ್ಲಂಡದ ಬಾದಶಹರಾಗತಕ್ಕವರು ಹಿಂದುಸ್ಥಾನವನ್ನು ಒಮ್ಮೆ ಕಣ್ಣುಟ್ಟ ನೋಡತಕ್ಕದ್ದೆಂದು, ನಮ್ಮ ದೇಶದ ಮೊದಲನೇ ಇಂಗ್ಲಿಷ ಬಾದಶಹರಾದ ೭ನೇ ಎಡ್ವರ್ಡರವರು ಯುವರಾಜರಾಗಿದ್ದ ಕಾಲಕ್ಕೇ ಪಾರ್ಲಮೆಂಟಿನವರು ನಿರ್ಣಯಿಸಿರುತ್ತಾರೆ. ಆ ಮೇರೆಗೆ ೧೯೦೫ನೇ ಇಸವಿಯಲ್ಲಿ ಯುವರಾಜ ಪ್ರಿನ್ಸ ಜಾರ್ಜರವರು ತಮ್ಮ ಪತ್ನಿಯನ್ನೊಂದಿಗೆ ಈ ದೇಶವನ್ನು ನೋಡುವದಕ್ಕಾಗಿ ಬಂದಿದ್ದರು. ಆ ಕಾಲಕ್ಕೆ ಈ ದೇಶದೊಳಗಿನ ಎಲ್ಲ ಜಾತಿಯ, ಎಲ್ಲ ಧರ್ಮದ, ಎಲ್ಲ ವರ್ಗದ ಜನರಿಂದ ಅವರಿಗೆ ತಕ್ಕ ಸನ್ಮಾನವೂ ಆದರಸತ್ಕಾರವೂ ಆಯಿತು. ಅವರು ಈ ದೇಶದಲ್ಲಿ ನೋಡತಕ್ಕ ಸ್ಥಳಗಳನ್ನು ನೋಡಿ ಅವುಗಳ ಸಂಬಂಧದಿಂದ ನಾನಾಪ್ರಕಾರದ ಸಂಗತಿಗಳನ್ನು ಬಹಳ ಆಸ್ಥೆಯಿಂದ ಕೇಳಿಕೊಂಡು, ಗೊತ್ತು ಮಾಡಿಕೊಂಡರು. ಅವರು ಅಲ್ಲಲ್ಲಿ ಮಾಡಿದ ಭಾಷಣಗಳಲ್ಲಿ ಈ ದೇಶದ ಜನರ ವಿಷಯವಾಗಿ ಅವರ ಪೂರ್ಣವಾದ ಪ್ರೇಮವೂ

ಸಹಾನುಭೂತಿಯೂ ವ್ಯಕ್ತವಾದವು. ಯುವರಾಜರು ಹಿಂದುಸ್ತಾನದಿಂದ ತಿರುಗಿ ಹೋದ ಮೇಲೆ ಲಂಡನದ ಮೇಯರರನು ಸ್ವಾಗತಕ್ಕಾಗಿ ಅವರಿಗೆ ಮೇಜವಾನಿಯನ್ನು ಮಾಡಿಸಿದನು. ಆ ಕಾಲಕ್ಕೆ ಅವರು ಹಿಂದುಸ್ತಾನದ ವಿಷಯವಾಗಿ ಮಾತಾಡಿದ್ದೇನಂದರೆ:— "ಹಿಂದೂ ಜನರು ಶಾಂತ ಸ್ವಭಾವದವರಿರುವರು; ಅವರ ಇರುವಿಕೆಯು ತೀರ ಸಾದಾ ಇರುವದು. ಅವರು ಪೂರ್ಣ ರಾಜನಿಷ್ಠರಾಗಿರುವರು; ಸ್ವಧರ್ಮದಲ್ಲಿ ಅವರ ನಿಷ್ಠೆಯು ಬಹಳ. ನಮ್ಮ ರಾಜ್ಯಕಾರಭಾರವು ನ್ಯಾಯಕ್ಕೂ ಸತ್ಯಕ್ಕೂ ಅನುಸರಿಸಿದ್ದಿರುವದೆಂದು ಅಲ್ಲಿಯ ಎಲ್ಲ ಪ್ರಜೆಗಳ ಪೂರ್ಣ ವಿಶ್ವಾಸದ ತಿಳುವಳಿಕೆಯು ಇರುತ್ತದೆಂದು ನನ್ನ ಮನವರಿಕೆಯಾಗಿರುತ್ತದೆ. ನಮ್ಮ ರಾಜ್ಯಕಾರಭಾರವು ಅಲ್ಲಿ ಸುಸೂತ್ರವಾಗಿ ಸಾಗಬೇಕಾದರೆ ನಮ್ಮ ಪಕ್ಷದವರು ಪ್ರಜೆಗಳ ವಿಷಯವಾಗಿ ಈಗಿನದಕ್ಕಿಂತ ಹೆಚ್ಚು ಸಹಾನುಭೂತಿಯುಳ್ಳವರಾಗಿ ನಡೆಯತಕ್ಕದ್ದೆಂದು ನಾನು ಅಲ್ಲಿರುವಾಗ ಕೇಳಿದ ಹಾಗು ನೋಡಿದ ಸಂಗತಿಗಳಿಂದ ನನಗೆ ಗೊತ್ತಾಗಿರುತ್ತದೆ. ಹಿಂದುಸ್ತಾನದ ಪ್ರಜೆಗಳಲ್ಲಿ ಈ ನಮ್ಮ ಸಹಾನುಭೂತಿಯು ಸತ್ಪರಿಣಾಮವಾಗದೆ ಎಂದೂ ಇರದು. ಆದಕಾರಣ ಅಲ್ಲಿಯ ಎಲ್ಲ ಪ್ರಜೆಗಳ ಹಿತವನ್ನು ಸಾಧಿಸಿ ಅವರ ಕಲ್ಯಾಣವಾಗುವಂತೆ ಇನ್ನೂ ಹಲವು ಸಂಗತಿಗಳನ್ನು ಮಾಡಿ ನಮ್ಮ ವಿಷಯವಾಗಿ ಅಲ್ಲಿಯ ಪ್ರಜೆಗಳ ಮನಸಿನಲ್ಲಿ ಹೆಚ್ಚು ಪೂಜ್ಯಬುದ್ಧಿಯನ್ನೂ ಹೆಚ್ಚು ನಂಬಿಗೆಯನ್ನೂ ನಾವು ಯಾಕೆ ಹುಟ್ಟಿಸಿಕೊಳ್ಳಬಾರದು!" ಈ ಉದ್ಗಾರಗಳು ಅಂತಃಕರಣಪೂರ್ವಕವಾಗಿಯೂ ವಿಶೇಷವಾದ ಪ್ರೇಮದಿಂದಲೂ ಕೂಡಿದಂಥವಿರುತ್ತವೆ. ಈ ರಾಜಪುತ್ರರು ಕಲಕತ್ತೆಗೆ ಹೋದಕಾಲಕ್ಕೆ ಅಲ್ಲಿಯ 'ಅಮೃತ ಬಝಾರ ಪತ್ರಿಕೆ' ಎಂಬ ದೇಶೀ ವರ್ತಮಾನಪತ್ರದ ಎಡಿಟರರಾದ ಬಾಬು ಮೋತೀಲಾಲ ಘೋಸ ಎಂಬವರು ಅವರ ಭೆಟ್ಟಿಗೆ ಹೋಗಿ ಒಳ್ಳೇ ರಾಜನಿಷ್ಠೆಯಿಂದ ಅವರ ಸ್ವಾಗತವನ್ನು ಮಾಡಿ,— "ಮಹಾರಾಜರೆ, ಇಂಗ್ಲಂಡದ ಜನರು ತಮಗೆ ಹ್ಯಾಗೆ ಪ್ರಜೆಗಳೋ ಅದೇ ಪ್ರಕಾರ ಹಿಂದುಸ್ತಾನದ ಜನರೂ ತಮ್ಮ ಪ್ರಜೆಗಳು; ತಮಗೆ ಅವರ ನೆನಪು ಸರ್ವಕಾಲವೂ ಇರತಕ್ಕದ್ದು; ಮತ್ತು ಅವರ ಮೇಲೆ ತಮ್ಮ ವಿಶೇಷ ಪ್ರಕಾರದ ಕೃಪಾದೃಷ್ಟಿಯು ಇರತಕ್ಕದ್ದು," ಎಂದು ಅಂದರು. ಈ ಮಾತನ್ನು ಕೇಳಿ ರಾಜಪುತ್ರರು ಅವರನ್ನು ಕುರಿತು ಸಂತೋಷದಿಂದ—"ತಮ್ಮ

ಭೆಟ್ಟಿಯಿಂದ ನನಗೆ ಬಹಳ ಆನಂದವಾಯಿತು. ಹಿಂದುಸ್ತಾನದ ಪ್ರಜೆಗಳನ್ನು ಮರೆಯಬಾರದೆಂದು ತಾವು ಹೇಳುತ್ತೀರಿ; ಆದರೆ ನಾನು ನಿಮ್ಮನ್ನು ಎಂದೂ ಮರೆಯಲಿಕ್ಕಿಲ್ಲೆಂದು ನಿಜವಾಗಿ ಆಶ್ವಾಸನವನ್ನು ಕೊಡುತ್ತೇನೆ. ಇಲ್ಲಿಯ ಪ್ರಜೆಗಳನ್ನು ನಿರಂತರದಲ್ಲಿಯೂ ನಾನು ಸ್ಮರಿಸುವೆನು. ತಾವು ನನಗೆ ಮಾಡಿದ ಆದರಾತಿಥ್ಯದಿಂದ ನನಗೆ ಪೂರ್ಣ ಸಮಾಧಾನವಾಗಿರುತ್ತದೆ. ಈ ಸಮಾಧಾನವನ್ನು ನಾನು ನನ್ನ ತೀರ್ಥರೂಪರ ಬಳಿಗೆ ಯಥಾರ್ಥವಾಗಿ ವ್ಯಕ್ತಮಾಡುತ್ತೇನೆ; ಮತ್ತು ಹಿಂದುಸ್ತಾನದೊಳಗಿನ ಪ್ರಜೆಗಳ ವಿಷಯವಾಗಿ ನಾವು ಈಗಿನದಕ್ಕಿಂತ ಹೆಚ್ಚು ಸಹಾನುಭೂತಿಯುಳ್ಳವರಾಗಬೇಕೆಂದು ನಮ್ಮ ತೀರ್ಥರೂಪರಿಗೆ ತಿಳಿಸುತ್ತೇನೆ. ನಾನು ಈ ದೇಶದಿಂದ ಪೂರ್ಣ ಸಮಾಧಾನವುಳ್ಳವನಾಗಿ ಸ್ವದೇಶಕ್ಕೆ ಹೋಗುತ್ತೇನೆ" ಎಂದು ಉತ್ತರವನ್ನು ಕೊಟ್ಟರು. ಯುವರಾಜರಾದ ರಾಜಪುತ್ರರ ಈ ಎರಡು ಉದ್ಗಾರಗಳು ಹೊರಟು ಇಂದಿಗೆ ಐದು ವರ್ಷಗಳಾದವು. ಆಗ ಯುವರಾಜರಿದ್ದವರು ಈಗ ಬಾದಶಹರಾಗಿರುವರು. ಆದ ಕಾರಣ ನಮ್ಮ ದೇಶದ ಪ್ರಜೆಗಳ ವಿಷಯವಾಗಿ ಅವರ ಮನಸ್ಸಿನಲ್ಲಿದ್ದ ಪ್ರೇಮಭಾವವು ದೃಢವಾಗಿ ನಿಂತು, ನಮ್ಮ ದೇಶದ ಅಭಿವೃದ್ಧಿಗೋಸ್ಕರ ಶಕ್ಯವಿದ್ದಷ್ಟು ಪ್ರಯತ್ನಗಳನ್ನು ಅವರು ಮನಃಪೂರ್ವಕವಾಗಿ ಮಾಡುವರೆಂದು ಹಿಂದುಸ್ತಾನದ ರಾಜನಿಷ್ಠರಾದ ಪ್ರಜೆಗಳಿಗೆ ಪೂರ್ಣನಂಬಿಗೆಯುಂಟು.

ನಮ್ಮ ಸದ್ಯದ ಹೊಸ ಬಾದಶಹರಿಗೆ ಸರ್ವಾಂಗಪರಿಪೂರ್ಣವೂ ಈಗಿನ ಕಾಲಕ್ಕೆ ಉಚಿತವೂ ಆದ ರಾಜಕೀಯ ಶಿಕ್ಷಣವು ಕೊಡಲ್ಪಟ್ಟಿರುತ್ತದೆ. ಸದ್ಯದ ಅರಸರಲ್ಲಿ ಅವರಷ್ಟು ದೇಶಪರ್ಯಟಣವನ್ನು ಬೇರೆ ಯಾವ ಅರಸರೂ ಮಾಡಿಲ್ಲ. ವಿಸ್ತಾರವಾದ ಬ್ರಿಟಿಶ್ ಸಾಮ್ರಾಜ್ಯದ ಎಲ್ಲ ಭಾಗಗಳಲ್ಲಿಯೂ ಅವರು ತಿರುಗಾಡಿ ಬಂದಿರುವರು; ಮತ್ತು ತಮ್ಮ ಎಲ್ಲ ಪ್ರಜೆಗಳನ್ನು ಅವರು ಕಣ್ಣುಮುಟ್ಟಿ ನೋಡಿರುವರು. ಸ್ವದೇಶದೊಳಗಿನ ಬೇರೆ ಬೇರೆ ಪಕ್ಷಗಳನ್ನೂ ಒಂದೊಂದು ಪಕ್ಷದ ಮುಂದಾಳುಗಳಾದ ಮುತ್ಸದ್ದಿಗಳನ್ನೂ ಅವರು ಪೂರ್ಣವಾಗಿ ಬಲ್ಲರು. ಅವರು ನೀತಿವಂತರೂ, ಸತ್ಪಕ್ಷಪಾತಿಗಳೂ, ದೃಢನಿಶ್ಚಯವುಳ್ಳವರೂ, ಮಹತ್ವಾಕಾಂಕ್ಷಿಗಳೂ, ನಿಷ್ಕಲಂಕವಾದ ಚಾರಿತ್ರ್ಯವುಳ್ಳವರೂ ಇದ್ದಾರೆ. ಅವರ ಮಾತುಗಳು

ಪ್ರಗತಿಗೆ ಅನುಕೂಲವಾಗಿರುವವು. ಅವರ ಅಜ್ಜಂದಿರಾದ ಪ್ರಿನ್ಸ ಆಲ್ಬರ್ಟರ ಮತಗಳಂತೆ ಅವರ ಮತಗಳು ಇರುತ್ತವೆಂದು ಪ್ರಖ್ಯಾತಿಯಿರುವದು. ಇಂಗ್ಲಂಡದ ಜನರು ಅರಸನೆಂದರೆ ಪರಮೇಶ್ವರನ ಸಮಿಪದ ಯೋಗ್ಯತೆಯುವನೆಂದು ತಿಳಿಯುತ್ತಾರೆ. ಆ ಜನರು ಸ್ವಾತಂತ್ರ್ಯಪ್ರಿಯರಾದಾಗ್ಯೂ, ಲೋಕಸ್ವಾತಂತ್ರ್ಯದ ಅಧಿಷ್ಠಾನವು ರಾಜನೇ ಎಂದು ತಿಳಿಯುತ್ತಾರೆ. ಪ್ರಜೆಗಳಿಗೂ ರಾಜಸತ್ತೆಗೂ ನಡುವೆ ಸಲಿಗೆಯುಂಟಾಗಲಿಕ್ಕೆ ಅರಸನೇ ಕಾರಣನೆಂದು ಇಂಗ್ಲಿಷ ಜನರು ಬಹು ದಿವಸದಿಂದ ತಿಳಿಯುತ್ತ ಬಂದಿರುವರು; ಮತ್ತು ಜನರಿಗೆ ತಮ್ಮೊಳಗೆ ಕೂಡಿಕೊಂಡು ನಡೆಯುವ ಅರಸನು ಬಹಳ ಸೇರುವನು. ವಿಕ್ಟೋರಿಯಾ ಮಹಾರಾಣಿಯವರು ಪಟ್ಟಕ್ಕೆ ಬರುವ ಪೂರ್ವದಲ್ಲಿ ಅರಸನು ಪ್ರಜೆಗಳ ಸಂಗಡ ಕೂಡಿಕೊಂಡು ನಡೆಯುವ ಪದ್ಧತಿಯು ತೀರ ನಷ್ಟವಾಗಿತ್ತು. ಆದಾಗ್ಯೂ ವಿಕ್ಟೋರಿಯಾ ಮಹಾರಾಣಿಯವರ ಚಿಕ್ಕಂದಿರಾದ ನಾಲ್ಕನೇ ಉಯಿಲ್ಯಮ್ ಬಾದಶಹರು ಸ್ವತಃ ಹಡಗುಪಡೆಯ ಖಾತೆಯೊಳಗಿನವರಿದ್ದದರಿಂದ ಅವರು ಜನರೊಳಗೆ ವಿಶೇಷವಾಗಿ ಕೂಡಿಕೊಂಡು ನಡೆಯುತ್ತಿದ್ದರು. ಅವರ ತರುವಾಯ ವ್ಹಿಕ್ಟೋರಿಯಾ ಮಹಾರಾಣಿಯವರೂ ಅವರ ಪೂಜ್ಯಪತಿಗಳಾದ ಪ್ರಿನ್ಸಆಲ್ಬರ್ಟರವರೂ ಜನರೊಳಗೆ ಕೂಡಿಕೊಂಡು ನಡೆಯುವ ಸ್ವಭಾವದವರಿದ್ದರು. ಅದರಿಂದ ಅವರ ವಿಷಯವಾಗಿ ಜನರಲ್ಲಿ ಪೂಜ್ಯಬುದ್ಧಿಯು ವಿಶೇಷವಾಗಿ ಉತ್ಪನ್ನವಾಯಿತು. ಈ ತಾಯಿತಂದೆಗಳ ಮೇಲುಪಙ್ತಿಯನ್ನೇ ನಮ್ಮ ಗತಿಸಿದ ಬಾದಶಹರಾದ ೭ನೇ ಎಡ್ವರ್ಡ ಮಹಾರಾಜರು ತೀಡಿದರು. ಇದಲ್ಲದೆ ಎಡ್ವರ್ಡ ಬಾದಶಹರು ಯುರೋಪದ ಎಲ್ಲ ದೇಶಗಳಲ್ಲಿಯೂ ತಿರುಗಾಡಿ ಶಾಂತತೆಯನ್ನು ಕಾಯ್ದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಿದ್ದರಾದ ಕಾರಣ ಅವರಿಗೆ ಶಾಂತತಾಪ್ರವರ್ತಕರೆಂಬ ಬಿರುದು ಇತಿಹಾಸದಲ್ಲಿ ನೆಲಿಸಿರುತ್ತದೆ. ಎಡ್ವರ್ಡಪ್ರಭುಗಳ ಉತ್ತಮವಾದ ಕಿರ್ತಿಯು ಸದ್ಯದ ಬಾದಶಹರಾದ ೫ನೇ ಜಾರ್ಜರವರ ಮುಂದೆ ಇರುವದು. ಇಂಗ್ಲಂಡದ ಜನರಿಗೆ ಹಡಗುಪಡೆಯೂ ಹಡಗುಪಡೆಯ ಮೇಲಿನ ಅಧಿಕಾರಿಗಳೂ ಬಹಳವಾಗಿ ಸೇರುವರು. ಸದ್ಯದ ಬಾದಶಹರ ಶಿಕ್ಷಣವು ಹಡಗುಪಡೆಯಲ್ಲಿ ತೀರ ಕನಿಷ್ಠಪ್ರತಿಯ ನಾವಿಕನಿಂದ ಆರಂಭವಾಗಿರುವದರಿಂದ ಅವರು

ಚಿಕ್ಕಂದಿನಿಂದ ಜನರೊಳಗೆ ಕೂಡಿಕೊಂಡು ನಡೆದವರಿರುತ್ತಾರೆ. ಅದರಿಂದ ಜನರ ಪ್ರೇಮವು ಅವರ ಮೇಲೆ ವಿಶೇಷವಾಗಿರುತ್ತದೆ. ಈ ಎಲ್ಲ ಕಾರಣಗಳಿಂದ ಅವರ ರಾಜ್ಯದಾಡಳಿತೆಯು ಹೆಚ್ಚು ಲೋಕಪ್ರಿಯವಾದದ್ದೂ ಕಲ್ಯಾಣಕರವಾದದ್ದೂ ಆಗುವದೆಂದು ನಂಬುವದಕ್ಕೆ ಬಹಳ ಕಾರಣವಿದೆ. ನಮ್ಮ ದೇಶದ ಸಂಬಂಧದಿಂದಂತೂ ಅವರು ಹಿಂದಕ್ಕೆ ತೆಗೆದ ಉದ್ಗಾರಗಳನ್ನು ಮೇಲೆ ಕೊಟ್ಟದ್ದೇವೆ. ರಾಜ್ಯಾರೋಹಣದ ತರುವಾಯ ಅವರು ನಮಗೆ ಕಳಿಸಿದ ಸಂದೇಶವಾದರೂ ಪೂರ್ಣಸಹಾನುಭೂತಿಯುಳ್ಳದ್ದಾಗಿದೆ. ಇವರು ಹಿಂದುಸ್ತಾನದ ಜನರ ವಿಷಯವಾಗಿ ಹೆಚ್ಚು ವಾತ್ಸಲ್ಯವೂ ಸಹಾನುಭೂತಿಯೂ ಇರಬೇಕೆಂದು ತಮ್ಮ ತೀರ್ಥರೂಪರಿಗೆ ಹೇಳುವದಕ್ಕಾಗಿ ಹಿಂದಕ್ಕೆ ಈ ದೇಶದಿಂದ ನಿರೋಪವನ್ನು ತಕ್ಕೊಂಡು ಹೋಗಿದ್ದರು. ಆ ವರ್ತಮಾನವನ್ನು ಹೇಳುವದಾದ ಮೇಲೆ ಈಗ ಅದರಂತೆ ಪ್ರತ್ಯಕ್ಷ ನಡೆಯುವ ಕಾಲವು ಅವರಿಗೆ ಪ್ರಾಪ್ತವಾಗಿರುವದು. ನಡುವೆ ಹೋದ ಕಾಲದಲ್ಲಿ ಹಿಂದಿನ ಬಾದಶಹರ ಸದ್ಧೇತುವಿನಿಂದಲೂ, ಲಾರ್ಡ ಮೋರ್ಲೆ, ಲಾರ್ಡ ಮಿಂಟೋ ಇವರಂಥ ಕಳಕಳಿಯ ಮುತ್ಸದ್ದಿಗಳ ಉದ್ಯೋಗದಿಂದಲೂ, ನಮ್ಮ ದೇಶಕ್ಕೆ ಹಿತಕರವಾದ ಅನೇಕ ಸುಧಾರಣೆಗಳ ಅಸ್ತಿವಾರವು ಹಾಕಲ್ಪಟ್ಟಿರುವದು; ಮತ್ತು ಬರಿಯ ಮಾತಿಗಿಂತ ಆಚರಣೆಯು ವಿಶೇಷವಾಗಿ ಅಮಲಿನಲ್ಲಿ ಬರಹತ್ತಿರುವದು. ಆದಕಾರಣ ಹೊಸ ಬಾದಶಹರು ಈ ಎಲ್ಲ ಸಂಗತಿಗಳನ್ನು ಹಾಗೇ ಮುಂದಕ್ಕೆ ಸಾಗಿಸಿ, ತಮ್ಮ ಕಾಲಕಿರ್ದಿಯಲ್ಲಿ ಹಿಂದುಸ್ತಾನದ ರಾಜ್ಯವನ್ನು ಆಸ್ಟ್ರೇಲಿಯಾ, ಕಾನಡಾ, ದಕ್ಷಿಣಆಫ್ರಿಕಾ ಇವೇ ಮೊದಲಾದ ಬ್ರಿಟಿಶ್ ಸಾಮ್ರಾಜ್ಯದೊಳಗಿನ ಒಕ್ಕಲಾಗಿ ನಿಂತ ಜನರ ರಾಜ್ಯಗಳಂತೆ ಇಂಗ್ಲಂಡದ ದೊಡ್ಡಿಸ್ತನದ ದ್ಯೋತಕವಾಗುವ ಹಾಗೆ ಮಾಡುವರೆಂದು ಇಲ್ಲಿಯ ಎಲ್ಲ ಪ್ರಜೆಗಳೂ ಆಶೆಯುಳ್ಳವರಾಗಿರುವರು. ಈ ಆಶೆಯು ಪೂರ್ಣವಾಗಲಿಕ್ಕೆ ಪರಮೇಶ್ವರನು ಬಾದಶಹರನ್ನು ಬಹು ದಿವಸಗಳ ವರೆಗೆ ಸುಖವಾಗಿ ಕಾಪಾಡಿ ಅವರಿಗೆ ಉತ್ತಮ ಬುದ್ಧಿಯನ್ನೂ ಶಕ್ತಿಯನ್ನೂ ಕೊಡಲೆಂದು ಅನನ್ಯಭಾವದಿಂದ ಬೇಡಿಕೊಳ್ಳುತ್ತೇವೆ.

ಶಾಸ್ತ್ರೀಯ ಟಿಪ್ಪಣಿಗಳು.

ವಾತಾವರಣದೊಳಗಿನ ಉಷ್ಣತೆಯು.

ವಾತಾವರಣದೊಳಗಿನ ಅತ್ಯುಚ್ಚ ಪ್ರದೇಶದ ಉಷ್ಣಮಾನವೆಷ್ಟು ಎಷ್ಟಿರುವದೆಂಬದನ್ನು ಶೋಧಮಾಡುವದಕ್ಕಾಗಿ ಆಕಾಶಯಾನ, ಗಾಳಿಪಟ ಮುಂತಾದವುಗಳಿಗೆ ಕೆಲವೊಂದು ಶಾಸ್ತ್ರೀಯ ಯೋಜನೆಯನ್ನು ಮಾಡಿ ಅವುಗಳಿಂದ ಹಲವು ಸಂಗತಿಗಳನ್ನು ಇತ್ತಲಾಗಿ ಗೊತ್ತುಹಚ್ಚಿದ್ದಾರೆ. ಆ ಸಂಗತಿಗಳಿಂದ ವಾತಾವರಣದೊಳಗಿನ ಉಷ್ಣತೆಯ ಸಂಬಂಧದಿಂದ ಸದ್ಯಕ್ಕೆ ಪ್ರಚಾರದಲ್ಲಿರುವ ಕಲ್ಪನೆಗಳಲ್ಲಿ ಎಷ್ಟೋ ಭ್ರಾಂತಿಯುಂಟಾಗುವ ಸಂಭವ ತೋರುತ್ತದೆ. ಪೃಥ್ವಿಯ ಪೃಷ್ಠಭಾಗದಿಂದ ೭ ಮೈಲು ಎತ್ತರದ ವರೆಗೆ ವಾತಾವರಣದ ಉಷ್ಣತೆಯು ಕಡಿಮೆ ಕಡಿಮೆಯಾಗುತ್ತ ಹೋಗುವದು. ಆದರೆ ಅದಕ್ಕೂ ಹೆಚ್ಚು ಎತ್ತರವಾದ ಪ್ರದೇಶಗಳಿಗೆ ಹೋದಂತೆ ಅದೇ ಪ್ರಮಾಣದಿಂದ ಉಷ್ಣತಾಮಾನವು ಕಡಿಮೆಯಾಗುತ್ತ ಹೋಗುವದೆಂಬ ಅನುಮಾನವು ಮಾತ್ರ ಸರಿಯಾದದ್ದಲ್ಲ ಯಾಕೆಂದರೆ, ವಸ್ತುಸ್ಥಿತಿಯು ತೀರ ವಿಪರೀತವಾಗಿದ್ದಂತೆ ಕಂಡು ಬರುತ್ತದೆ. ಈ ಪ್ರಕಾರದ ಸ್ಥಿತಿಯು ಭೂಮಿಯಮೇಲೆಬಿತ್ತಟ್ಟಿಗೇ ಇರುವದೆಂತಲ್ಲ; ಸಾರ್ವತ್ರಿಕವಾಗಿ ಇದ್ದದ್ದು ಅನುಭವಕ್ಕೆ ಬರುವದು. ವಾತಾವರಣದಲ್ಲಿ ಮೇಲೆ ಮೇಲೆ ಹೋದಂತೆ ೭ ಮೈಲಿನ ವರೆಗೆ ಉಷ್ಣತಾದರ್ಶಕ ಯಂತ್ರದೊಳಗಿನ ಪಾರಜವು ಇಳಿಯುತ್ತ ಹೋಗುವದು; ಮತ್ತು ೭ ಮೈಲಿನ ಮುಂದೆ ಅದು ಏರುತ್ತ ಹೋಗುವದು. ಇನ್ನೊಂದು ಚಮತ್ಕಾರದ ಸಂಗತಿಯು ಯಾವದೆಂದರೆ, ಉಷ್ಣಕಟಿಬಂಧದೊಳಗಿನ ಅತ್ಯುಚ್ಚವಾದ ಒಂದು ಪ್ರದೇಶದ ಹವೆಯು ಶೀತಕಟಿಬಂಧದೊಳಗಿನ ಅಷ್ಟೇ ಎತ್ತರವಾದ ಸ್ಥಳದ ಹವೆಗಿಂತ ಹೆಚ್ಚು ತಣ್ಣಗೆ ಇರುವದು.

ಸೂರ್ಯಚಂದ್ರರ ಮೇಲೆ ಪ್ರಾಣಿವನಸ್ಪತಿಗಳು ಉಂಟೋ ಇಲ್ಲವೋ!

ಭೂಮಿಯ ಮೇಲೆ ಹವೆಯೂ ನೀರೂ ಉಂಟು; ಹಾಗೆ ಚಂದ್ರನ ಮೇಲೆ ಇಲ್ಲ. ಇದರಿಂದ ಜ್ಯೋತಿಷಶಾಸ್ತ್ರಜ್ಞರು ಚಂದ್ರನ ಮೇಲೆ

ಪ್ರಾಣಿವನಸ್ಪತಿಗಳು ಇಲ್ಲೆಂದು ಅನುಮಾನ ಮಾಡಿದ್ದಾರೆ. ಆದರೆ ಪ್ರೊಫೆಸರ ಗ್ಲಿಡಿಸ್ ಎಂಬವರು ದೃಗ್ವಿದ್ಯಾಶಾಸ್ತ್ರದಲ್ಲಿ ಹೆಚ್ಚು ಪ್ರಗತಿಯಾದ ಕಾಲಕ್ಕೆ ಈ ಮಾತಿನ ನಿರ್ಣಯವಾಗುವದೆಂದು ಹೇಳುವರು. ಥರನೀಅರನೆಂಬವನ ಮತದಿಂದ ಸೂರ್ಯನ ಮೇಲೆ ಸಹ ಪ್ರಾಣಿವನಸ್ಪತಿಗಳು ಇರಬಹುದೆಂದು ಅನುಮಾನವಾಗುತ್ತದೆ.

ದುರ್ಬೀನಿನ ಸಹಾಯದಿಂದ ಚಂದ್ರನು ೫೦೦ ಮೈಲು ಅಂತರದ ಮೇಲೆ ಬಂದಂತೆ ಕಾಣುವನು. ಚಂದ್ರನು ಇಷ್ಟು ಸಮೀಪಕ್ಕೆ ಬಂದಾಗ್ಯೂ ಇನ್ನೂವರೆಗೆ ಅವನ ಮೇಲೆ ಸೇಂದ್ರಿಯ ಪದಾರ್ಥಗಳು ಉಂಟೋ ಇಲ್ಲವೋ ಎಂಬ ಬಗ್ಗೆ ಖಂಡಿತವಾಗಿ ಯಾರಿಗೂ ಗೊತ್ತಾಗಿಲ್ಲ. ದೃಕ್ಸಾಧನಗಳಿಂದ ಹೇಳಲಸಾಧ್ಯವಾದ ಸಂಗತಿಗಳನ್ನು ಅನುಮಾನ ಸಾಧನದಿಂದಲೇ ಅರಿತುಕೊಳ್ಳಬೇಕಾಗುತ್ತದೆ. ಚಂದ್ರನ ಮೇಲೆ ವಾತಾವರಣವೂ ನೀರೂ ಇಲ್ಲೆಂದು ಹೇಳುತ್ತಾರೆ. ಆದಾಗ್ಯೂ ಗುರು, ಶನಿ, ಬುಧ, ಪ್ರಜಾಪತಿ, ವರುಣ ಇವುಗಳ ಮೇಲೆ ವಾತಾವರಣವಿರುವದರಿಂದಲೂ, ಮಂಗಳ, ಶುಕ್ರ ಈ ಗ್ರಹಗಳ ಮೇಲೆ ಸಮುದ್ರಗಳುಂಟೆಂದು ಇತ್ತಿತ್ತಲಾಗಿ ಗೊತ್ತಾಗಿರುವದರಿಂದಲೂ, ಪ್ರೊಫೆಸರ ಗ್ಲಿಡಿಸ್ ಎಂಬವರು ಚಂದ್ರನ ಮೇಲೆ, ಭೂಮಿಯ ಮೇಲೆ ಇರುವಂಥ ಪ್ರಾಣಿಗಳು ಇರದಿದ್ದರೂ ಬೇರೆ ಪ್ರಕಾರದ ಪ್ರಾಣಿಗಳು ಇರಬಹುದೆಂದು ಅನುಮಾನ ಮಾಡುತ್ತಾರೆ.

ಅರ್ವಾಚೀನ ವೇಧಗಳಿಂದ ಚಂದ್ರನ ಮೇಲೆ ಅಲ್ಪ ಸ್ವಲ್ಪ ವಾತಾವರಣವು ಇರುತ್ತದೆ ಎಂತಲೂ, ಅದರ ಎತ್ತರವು ಚಂದ್ರನ ಪೃಷ್ಠಭಾಗದಿಂದ ಒಂದು ಮೈಲಿಗಿಂತ ಕಡಿಮೆ ಉಂಟೆಂತಲೂ, ಪ್ಲೇಥೋ ಎಂಬ ಹೆಸರಿನ ಚಂದ್ರನ ಮೇಲಿನ ಒಂದು ಭಾಗದ ಹತ್ತರ ಕೆಲವು ಪ್ರಾಣಿಗಳು ಇರಬಹುದೆಂತಲೂ ಗೊತ್ತಾಗಿರುತ್ತದೆ. ಈ ಪ್ರಾಣಿಗಳು ಪ್ರೊಫೆಸರ ಗ್ಲಿಡಿಸರ ಹೇಳಿಕೆಯ ಪ್ರಕಾರ ಭೂಮಿಯ ಮೇಲಿನ ಪ್ರಾಣಿಗಳಿಂದ ಭಿನ್ನವಾಗಿರುತ್ತವೆ ಎಂಬದೂ ಕಾಲಾಂತರದಲ್ಲಿ ಅನುಭವಕ್ಕೆ ಬರಬಹುದು.

ಶಾಲಾಪತ್ರಕ.

ಪದ್ಯಂ

ಪ್ರಿಯವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಷ್ಯಗೋತ್ಕರ್ಷವುಂ
ಬಯಸುತ್ತುಂ ಪ್ರತಿಮಾಸದಾದಿಗೊಲವಿಂದೀ ಪತ್ರವುಂ ಮುದ್ರಿಸಿ ||
ನಯದಿಂದಿತ್ತಪೆವೋದುವರ್ಗೆ ಸುಗುಣಂದೋರಲ್ಕೆ ಕೈಕೊಂಬುದೈ
ದಯೆಯಿಂ ದೋಷವತಿದ್ದವೇಳ್ವುದು ಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ||೧||

ಪುಸ್ತಕ ೪೬ } ಸಪ್ಟಂಬರ ೧೯೧೦. { ಸಂಚಿಕೆ ೯.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಶಾಲೆಯೊಳಗಿನ ಮಾನಸಿಕ ಶ್ರಮವು.

ಶಿಕ್ಷಣದ ಸಂಬಂಧದಿಂದ ಜರ್ಮನೀ ದೇಶವು ಬೇರೆ ಎಲ್ಲ ದೇಶಗಳಿಗಿಂತ ಬಹಳ ಮುಂದೆ ಹೋಗಿರುತ್ತದೆ. ಸಾಲೆಯಲ್ಲಿ ಕೊಡಲ್ಪಡುವ ಶಿಕ್ಷಣದಿಂದ ವಿದ್ಯಾರ್ಥಿಗಳ ಮಿದುಳಿಗೆ ತಕ್ಕಷ್ಟಕ್ಕಿಂತ ಹೆಚ್ಚು ಕೆಲಸವು ಬೀಳುವದರಿಂದ ಆಗುವ ದುಷ್ಪರಿಣಾಮಗಳನ್ನು ಕಂಡು, ಆ ದೇಶದ ಶಿಕ್ಷಣಾಭಿಮಾನಿಗಳು ಅವುಗಳನ್ನು ದೂರ ಮಾಡಲಿಕ್ಕೆ ಯಾವ ಉಪಾಯಗಳನ್ನು ಯೋಜಿಸಬೇಕೆಂದು ವಿಚಾರ ಮಾಡತೊಡಗಿರುವರು. ಈ ವಿಷಯದಲ್ಲಿ ನಮ್ಮ ದೇಶವು ಬಹಳ ಹಿಂದೆ ಉಳಿದದೆ. ಆದಕಾರಣ ಆ ದೇಶದಲ್ಲಿ ನಡೆಯುವ ಪ್ರಯತ್ನಗಳನ್ನೂ ಬಂದಿರುವ ಅನುಭವಗಳನ್ನೂ ನಾವು ಗೊತ್ತು ಮಾಡಿಕೊಂಡು, ನಮ್ಮ ದೇಶದ ಪರಿಸ್ಥಿತಿಗನುಸರಿಸಿ ಅವುಗಳನ್ನು ಉಪಯೋಗಿಸಿಕೊಂಡರೆ ನಮ್ಮ ಸಂತತಿಯ ಮೇಲೆ ಬಹು ದೊಡ್ಡ ಉಪಕಾರ ಮಾಡಿದಂತಾಗುವದು.

ಮಾನಸಿಕ ಅಶಕ್ತತೆ ಅಥವಾ ಗ್ಲಾನಿ ಅಂದರೇನು? ಜ್ಞಾನತಂತುಗಳಿಗೆ ಕೆಲಸವು ಹೆಚ್ಚಾಯಿತೆಂದರೆ, ನಮ್ಮ ಕೆಲಸವು ಕನಿಷ್ಠ ಪ್ರತಿಯದೂ ಕಡಿಮೆ ಕಡಿಮೆಯೂ ಆಗುತ್ತ ಹೋಗುವದು; ಮತ್ತು ಉತ್ಸಾಹವು ಕುಗ್ಗುತ್ತ ಹೋಗಿ, ಏನೂ ಮಾಡಬಾರದೆಂಬಂತೆ ಆಗುತ್ತದೆ. ಶಿಕ್ಷಣಶಾಸ್ತ್ರದ ಅಧ್ಯಯನ ಮಾಡಿದ ವಿದ್ವಾಂಸರು ಮಾನಸಿಕ ಶ್ರಮಕ್ಕೂ ಮಾನಸಿಕ ಅಶ

ಕ್ತತೆಗೂ ವಿಶಿಷ್ಟ ಪ್ರಕಾರದ ಸಂಬಂಧವುಂಟೆಂದು ಅಭಿಪ್ರಾಯ ಪಡು ತ್ತಾರೆ. ಈ ಸಂಬಂಧವನ್ನು ಅರಿತುಕೊಳ್ಳುವದರಿಂದ ಹುಡುಗರ ಆರೋಗ್ಯತೆಯ ಕಡೆಗೆ ಲಕ್ಷಕೊಟ್ಟು ಶಿಕ್ಷಣವನ್ನು ಸಾಗಿಸುವ ಕೆಲಸದಲ್ಲಿ ಬಹಳ ಸಹಾಯವಾಗುತ್ತದೆ.

ಮಾನಸಿಕ ಅಶಕ್ತತೆಯಿಂದ ಆಗುವಷ್ಟು ಹಾನಿಕಾರಕ ಪರಿಣಾಮವು ಶಾರೀರಿಕ ಅಶಕ್ತತೆಯಿಂದ ಆಗುವದಿಲ್ಲ. ಮನುಷ್ಯರಿಗೆ ಮಾನಸಿಕ ಗ್ಲಾನಿಯ ಅನುಭವವು ಕೂಡಲೆ ಬರುವದು. ಆದಗೆ ಇತ್ತಿತ್ತಲಾಗಿ ಅದನ್ನು ಅಳೆಯುವ ಯುಕ್ತಿಯು ಹೊರಟಿರುವದು. ಶಾರೀರಿಕ ಹಾಗು ಮಾನಸಿಕ ಶ್ರಮದಿಂದ ಹುಟ್ಟುವ ಶರೀರದ ಮೇಲಿನ ಹೊಲಸಿನಿಂದ ಸ್ನಾಯುಗಳ ಹಾಗು ಇಂದ್ರಿಯಗಳ ವ್ಯಾಪಾರದಲ್ಲಿ ವ್ಯತ್ಯಯವುಂಟಾಗುತ್ತದೆ, ಎಂದು ಡಾ. ಶೇಲೆ ಎಂಬವರ ಅಭಿಪ್ರಾಯವಿರುತ್ತದೆ. ಮಾನಸಿಕ ಶ್ರಮವು ಮಿತಿ ಮೀರಿದರೆ ಸ್ಪರ್ಶೇಂದ್ರಿಯದ ಸಂವೇದನಶಕ್ತಿಯು ಕಡಿಮೆಯಾಗಿ ಶರೀರಕ್ಕೆ ಮಾಂದ್ಯವುಂಟಾಗುತ್ತದೆ. ಮನುಷ್ಯನ ಕೆಲಸ ಮಾಡುವ ಶಕ್ತಿಯನ್ನೂ ಶ್ರಮ ಮಾಡಿದ ಮೇಲೆ ಅದರಲ್ಲಿ ಆಗುವ ಹೆಚ್ಚು ಕಡಿಮೆಯನ್ನೂ ಮೇಲಿನ ಯುಕ್ತಿಯಿಂದ ಅಳೆಯಬಹುದು. ಮಾಸೋ ಎಂಬವನ 'ಶ್ರಮಲೇಖಕ (Ergograph) ಯಂತ್ರದ ಸಹಾಯದಿಂದ ಯಾವದೊಂದು ಸ್ನಾಯುವು ನಿಯಮಿತ ಹೊತ್ತಿನಲ್ಲಿ ಎಷ್ಟು ಕೆಲಸವನ್ನು ಮಾಡಿತೆಂಬದು ತಿಳಿಯುತ್ತದೆ. ಈ ಯಂತ್ರದ ಒಂದು ತುದಿಯನ್ನು ಆ ಸ್ನಾಯುವಿಗೂ ಮತ್ತೊಂದು ತುದಿಯನ್ನು ತಿರುಗುತ್ತಿರುವ ಒಂದು ಸಿಲಿಂದರಕ್ಕೂ (ಅಂದರೆ ಉಳಕಕ್ಕೂ) ಹಚ್ಚತಕ್ಕದ್ದು. ಸ್ನಾಯುವಿನ ವ್ಯಾಪಾರವು ನಡೆದಂತೆ ಉಳಕಕ್ಕೆ ಹಚ್ಚಿದ ಕಾಗದದ ಮೇಲೆ ಹೆಚ್ಚು ಕಡಿಮೆಯಾಗಿ ವಕ್ರರೇಖೆಗಳು ಮೂಡುವವು. ಆ ರೇಖೆಗಳಿಂದ ಆ ಸ್ನಾಯುವು ಮಾಡಿದ ಕೆಲಸವನ್ನು ಗೊತ್ತು ಮಾಡುವರು.

ಸಾಲೆಯ ಹುಡುಗರ ಮಾನಸಿಕ ಅಶಕ್ತತೆಯನ್ನು ಮೇಲೆ ಹೇಳಿದ ಶ್ರಮಲೇಖಕ ಯಂತ್ರದ ಸಹಾಯದಿಂದ ಪ್ರೋ. ಕೆನಸೀಜ ಎಂಬವರು ಅಳೆದು ನೋಡಿ ಅನೇಕ ಟಿಪ್ಪಣೆಗಳನ್ನು ಮಾಡಿರುವರು. ಅವುಗಳಲ್ಲಿ ಒಂದರ ನಕಲನ್ನು ಇಲ್ಲಿ ಕೊಟ್ಟದ್ದೇವೆ:—

ಹುಡುಗರು ಕಲಿತ ವಿಷಯ ಹಾಗು ವೇಳೆ.	ಶ್ರಮಲೇಖಕಯಂತ್ರದಿಂದ ಅಳೆದ ಕೆಲಸ ಮಾಡುವ ಶಕ್ತಿಯು. (ಕಿಲೋಗ್ರ್ಯಾಮದಲ್ಲಿ. ೧ ಕಿಲೋಗ್ರ್ಯಾಮ = ೨.೨ ಪೌಂಡು)
ಮುಂಜಾನೆ ೮ ಗಂಟೆಗೆ.	
ಪಾಠವು ಪ್ರಾರಂಭವಾಗುವ ಪೂರ್ವದಲ್ಲಿ	೧.೯೪೦
ಭೂಮಿತಿಯ ಪಾಠ	−೦.೪೧೧ ಹಾನಿ.
ಮುಂಜಾನೆ ೯ ಗಂಟೆಗೆ.	೧.೫೨೯
ಫ್ರೆಂಚಭಾಷೆಯ ಪಾಠ	+೦.೧೩೫ ಲಾಭ
ಮುಂಜಾನೆ ೧೦ ಗಂಟೆಗೆ.	೧.೬೬೪
ರಾಷ್ಟ್ರೀಯ ಇತಿಹಾಸ	+೦.೧೧೮ ಲಾಭ.
ಮುಂಜಾನೆ ೧೧ ಗಂಟೆಗೆ	೧.೭೮೨
ಡ್ರಾಯಿಂಗ	−೦.೩೮೩ ಹಾನಿ.
ಮುಂಜಾನೆ ೧೨ ಗಂಟೆಗೆ	೧.೩೯೯
ಜರ್ಮನ್ (ಮಾತೃಭಾಷಾ)	+೦.೩೮೩ ಲಾಭ.
ಮಧ್ಯಾಹ್ನದ ೧ ಗಂಟೆಗೆ	೧.೭೮೨
ಒಟ್ಟುವ್ಯಯ	= ೦.೧೫೮

ಈ ಟಿಪ್ಪಣೆಯಿಂದ ಗೊತ್ತಾಗುವದೇನಂದರೆ:— ಮುಂಜಾನೆ ೮ ಗಂಟೆಗೆ ವಿದ್ಯಾರ್ಥಿಯ ಕಾರ್ಯಕ್ಷಮತೆಯು ೧.೯೪೦ ಇತ್ತು. ಅವನು ಭೂಮಿತಿಯನ್ನು ಕಲಿತ ತರುವಾಯ ಅದು ೦.೪೧೧ ದಷ್ಟು ಕಡಿಮೆಯಾಯಿತು. ಆದರೆ ಫ್ರೆಂಚ ಭಾಷೆಯ ಅಭ್ಯಾಸದಿಂದ ಅವನ ಕಾರ್ಯಕ್ಷಮತೆಯು ಹೆಚ್ಚಾಗಿ ಭೂಮಿತಿಯಿಂದ ಉಂಟಾದ ಅಶಕ್ತತೆಯು ಕಡಿಮೆಯಾಯಿತು. ಇತಿಹಾಸದ ಪಾಠದಿಂದ ಜಾಗೃತಿಯು ಹುಟ್ಟಿ, ಮಿದುಳಿಗೆ ಸ್ವಲ್ಪ ಸ್ವಸ್ಥತೆಯುಂಟಾಯಿತು. ಡ್ರಾಯಿಂಗ ವಿಷಯದಿಂದ ಪುನಃ ಶ್ರಮವಾಯಿತು; ಆದರೆ ಜರ್ಮನ್ ಎಂಬ ಸ್ವಭಾಷೆಯ ಅಭ್ಯಾಸದಿಂದ ಆ ಶ್ರಮವು ಹೋಗಿ ಪುನಃ ಜಾಗೃತಿಯುಂಟಾಯಿತು. ಮಾನಸಿಕ ಶ್ರಮವು ವಿಶೇಷವಾಗದಂತೆ ಈ ವೇಳಾಪತ್ರಕವು ರಚಿಸಲ್ಪಟ್ಟಿರುವದು. ಮಾನಸಿಕಶ್ರಮವು ಹೆಚ್ಚಾದರೆ, ವಿದ್ಯಾರ್ಥಿಗಳ ಸ್ನಾಯುಗಳ ಮೇಲೆ ಅದರ ಪರಿಣಾಮವಾಗುವದೆಂತಲೂ, ವಿದ್ಯಾರ್ಥಿಗಳಿಗೆ ಅದರ ಅನುಭವವು ಬರುವದೆಂತಲೂ, ಆ ಅನುಭವವು ಶ್ರಮಲೇಖಕಯಂತ್ರದ ಸಹಾಯದಿಂದ ತೆಗೆದುಕೊಂಡ ಅನುಭವಕ್ಕೆ ಹೊಂದುವದೆಂತಲೂ ಪ್ರೊ. ಕೆನಸೇಜ ಇವರು ಸಿದ್ಧ ಮಾಡಿದ್ದಾರೆ.

ಮಾನಸಿಕ ಶ್ರಮವನ್ನೇ ಹೆಚ್ಚಾಗಿ ಮಾಡುವವರ ಬೆಳವಣಿಗೆಯು ಕುಗ್ಗುವದನ್ನೂ ಅವರ ಗಾತ್ರಗಳಿಗೆ ಕ್ಷೀಣತೆಯುಂಟಾಗುವದನ್ನೂ ನಾವು ನೋಡುತ್ತೇವೆ. ಇದರಿಂದ ಮಿದುಳಿಗೂ ಇಂದ್ರಿಯಗಳಿಗೂ ಎಷ್ಟು ನಿಕಟ ಸಂಬಂಧವಿರುತ್ತದೆಂಬದು ಗೊತ್ತಾಗುವದು. ಸ್ಪರ್ಶೇಂದ್ರಿಯದ ಸಂವೇದನಾಶಕ್ತಿಯು ಎಷ್ಟು ಕಡಿಮೆಯಾಯಿತೆಂಬದನ್ನೂ ಅಳೆಯುವ ಯಂತ್ರವನ್ನು ಡಾ. ಗ್ರೀಜಬಕ್ ಎಂಬವರು ಶೋಧಿಸಿದ್ದಾರೆ. ಅದಕ್ಕೆ 'ಸಂವೇದನಾಲೇಖಕ' (Æsthe Siometre) ಯಂತ್ರವೆಂದು ಹೆಸರು ಕೊಟ್ಟಿದ್ದಾರೆ. ಶ್ರಮಲೇಖಕ ಹಾಗು ಸಂವೇದನಾಲೇಖಕ ಯಂತ್ರಗಳಿಂದ ಸಾಲೆಯೊಳಗಿನ ವೇಳಾಪತ್ರಕವನ್ನು ರಚಿಸುವದು ಬಹಳ ಸುಲಭವಾಗಿದೆ; ಮತ್ತು ಅಂಥ ವೇಳಾಪತ್ರಕಗಳಿಂದ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಹಿತವಾಗುವದು.

ಜಪಾನದ ಸ್ತ್ರೀಯರ ಉದ್ಯೋಗಗಳು.

ಯಾವದೇಶದಲ್ಲಿಯಾದರೂ ಶ್ರೀಮಂತರೂ ಬಡವರೂ ಇರತಕ್ಕದ್ದೇ. ಬೇರೆ ದೇಶಗಳ ಸ್ತ್ರೀಯರಂತೆ ಜಪಾನ ದೇಶದ ಸ್ತ್ರೀಯರಲ್ಲಿಯೂ ಶ್ರೀಮಂತರು, ಬಡವರು ಎಂಬ ಭೇದವು ಉಂಟು. ಕೆಲಸ ಮಾಡಿ ದುಡ್ಡು ಗಳಿಸಲಪೇಕ್ಷಿಸುವ ಹೆಣ್ಣು ಮಕ್ಕಳಿಗೆ ಅಲ್ಲಿ ಅನೇಕ ಉದ್ಯೋಗಗಳು ಇರುತ್ತವೆ. ಉದ್ಯೋಗವು ಸಿಗದ್ದರಿಂದ ಹೊಟ್ಟೆಗಿಲ್ಲದೆ ಸಾಯುವ ಹೊತ್ತು ಆ ಗೇಶಕ್ಕೆ ಇನ್ನೂವರೆಗೆ ಬಂದಿಲ್ಲ. ಶ್ರೀಮಂತರ ಹೆಣ್ಣುಮಕ್ಕಳು ಸಹ ಏನಾದರೊಂದು ಉದ್ಯೋಗವನ್ನು ಮಾಡುತ್ತಿರುವರು; ವ್ಯರ್ಥವಾಗಿ ಕಾಲವನ್ನು ಕಳೆಯುವದಿಲ್ಲ. ಉದರನಿರ್ವಾಹದ ಚಿಂತೆಯು ಅಲ್ಲಿಯ ಶ್ರೀಮಂತ ಸ್ತ್ರೀಯರಿಗೆ ಇರದಿದ್ದರೂ ಅವರು ಉದ್ಯೋಗದಲ್ಲಿ ಮಗ್ನರಾಗಿರುವರು. ನಮ್ಮ ದೇಶದ ಒಬ್ಬ ಗೃಹಸ್ಥನು ಅಲ್ಲಿಯ ಒಬ್ಬ ಧನಾಢ್ಯ ಸ್ತ್ರೀಯಳಿಗೆ– ನಿಮಗೆ ಪರಮೇಶ್ವರನು ಬೇಕಾದಷ್ಟು ಐಶ್ವರ್ಯವನ್ನು ಕೊಟ್ಟಿದ್ದೂ ನೀವು ಇಷ್ಟು ಯಾಕೆ ದುಡಿಯುತ್ತೀರೆಂದು ಕೇಳಲು, ಅದಕ್ಕೆ ಆ ಸ್ತ್ರೀಯು– ಹಾಗಾದರೆ ನಾನು ಏನು ಮಾಡಬೇಕು? ನನ್ನ ಇಡೀ ಆಯುಷ್ಯವನ್ನು ಸೋಮಾರಿತನದಿಂದ ಕೇವಲ ಊಟಬುಡಿಗೆಗಳಲ್ಲಿಯೇ ಕಳೆಯಬೇಕೆ? ಎಂದು ಉತ್ತರ ಕೊಟ್ಟಳಂತೆ. ಇದೇ ಉದ್ಯೋಗಶೀಲತೆಯು.

ಜಪಾನದ ಎಲ್ಲ ಸ್ತ್ರೀಯರು ಬಹುತರವಾಗಿ ತಮ್ಮ ಗಂಡಂದಿರಿಗೆ ನೆರವಾಗುತ್ತಾರೆ. ಫೋಟೋ ತೆಗೆಯುವದರಲ್ಲಿಯೂ, ಶಿಲಾಪ್ರೆಸ್ಸಿನಿಂದ

ಚಿತ್ರಗಳನ್ನು ಛಾಪಿಸುವದರಲ್ಲಿಯೂ, ಅಚ್ಚುಕೂಟದ ಬೇರೆ ಬೇರೆ ಕೆಲಸಗಳನ್ನು ಮಾಡುವದರಲ್ಲಿಯೂ ಜಪಾನದ ಹೆಂಗಸರು ಬಳ್ಳೇ ಬುದ್ಧಿವಂತರಿರುವರು. ಎಷ್ಟೋ ಹೆಂಗಸರು ನಾವಿಕರ ಕೆಲಸವನ್ನು ಸಹ ಮಾಡುವರು. ಬೇರೆ ದೇಶಗಳಂತೆ ಈ ದೇಶದಲ್ಲಿಯೂ ಅಂಗಡಿಯ ಮೇಲೆ ಕೂತು ವ್ಯಾಪಾರ ಮಾಡುವ ಹೆಂಗಸರೂ, ಒಕ್ಕಲತನವನ್ನು ಮಾಡುವ ಹೆಂಗಸರೂ ಇರುವರು. ಆದರೆ ಒಂದು ದೊಡ್ಡ ವೈಲಕ್ಷಣ್ಯವೇನಂದರೆ, ಜಪಾನದ ಸ್ತ್ರೀಯರು ಸುಶಿಕ್ಷಿತರಿರುತ್ತಾರೆ. ಆ ದೇಶದಲ್ಲಿ ಸ್ತ್ರೀಪುರುಷರಿಗೆ ಪುಕ್ಕಟೆಯಾಗಿ, ಜುಲುಮೆಯಿಂದ ಶಿಕ್ಷಣವನ್ನು ಕೊಡುವರು. ಅದರಿಂದ ಅಲ್ಲಿಯ ಸ್ತ್ರೀಯರು ಸಾಧಾರಣವಾಗಿ ನಮ್ಮ ದೇಶದ ಪ್ರವೇಶಪರೀಕ್ಷೆಯ ವರೆಗೆ ಅಭ್ಯಾಸ ಮಾಡಿದ ಹುಡುಗನಷ್ಟು ಯೋಗ್ಯತೆಯುಳ್ಳವರಿರುತ್ತಾರೆ.

ಈ ಹೆಂಗಸರು ಸರ್ವಸಾಧಾರಣವಾಗಿ ದಿನಾಲು ಆರು ಆಣೆ ಗಳಸುತ್ತಾರೆ. ಅವರ ಕೆಲಸವು ಸ್ವಚ್ಛವಾಗಿರುವದು. ಹರ್ಮೋನಿಯಮ್ (ರಾಗದಪೆಟ್ಟಿಗೆ) ತಂತುವಾದ್ಯಗಳು ಇವೇ ಮೊದಲಾದವುಗಳನ್ನು ಮಾಡುವ ಕಾರಖಾನೆಗಳಲ್ಲಿ ಕೆಲಸ ಮಾಡುವ ಹೆಂಗಸರು ಯಾವದೊಂದು ಗಾಯನಶಾಲೆಯ "ಡಿಪ್ಲೋಮಾ" ಅಂದರೆ ಯೋಗ್ಯತಾಪತ್ರವನ್ನು ತೆಗೆದುಕೊಳ್ಳಬೇಕಾಗುವದು. ಈ ಹೆಂಗಸರು ದಿನಾಲು ಒಂದೂವರೆ ರೂಪಾಯಿಯ ವರೆಗೆ ಸಂಪಾದಿಸುವರು. ಕೆಲವು ಸ್ತ್ರೀಯರು ಅರಿವೆಗಳ ಮೇಲೆ ಕಸೂತಿಯನ್ನು ಹಾಕಿ ಹೊಟ್ಟೆ ತುಂಬಿಕೊಳ್ಳುವರು. ಅವರ ಸರಾಸರಿ ದಿನದ ಉತ್ಪನ್ನವು ಹನ್ನೆರಡು ಆಣೆಯ ವರೆಗೆ ಬೀಳುವದು. ಆದರೆ ಈ ಕೆಲಸದಲ್ಲಿ ಬಳ್ಳೇ ನೈಪುಣ್ಯವನ್ನು ಪಡೆದ ಸ್ತ್ರೀಯು ದಿನಒಂದಕ್ಕೆ ಒಂದು ರೂಪಾಯಿ ಸಹಜವಾಗಿ ಗಳಿಸುವಳು. ನಮ್ಮ ದೇಶದಲ್ಲಿಯೂ ಈ ಉದ್ಯೋಗವನ್ನು ಮಾಡುವ ಹೆಂಗಸರು ಇರುವರು; ಆದರೆ ಅವರಿಗೆ ಜಪಾನದ ಸ್ತ್ರೀಯರಂತೆ ವ್ಯವಸ್ಥಿತವಾದ ಶಿಕ್ಷಣವು ದೊರೆಯುವದಿಲ್ಲ. ಜಪಾನದಲ್ಲಿ ಸ್ತ್ರೀಯರಿಗೆ ಕಲಾಕೌಶಲ್ಯವನ್ನು ಕಲಿಸುವ ನೂರಾರು ಶಾಲೆಗಳು ಇರುತ್ತವೆ.

ಜಪಾನದ ಹುಡಿಗೆಯರು ಟಾಯಿಪ ರಾಯಟರ ಯಂತ್ರದಿಂದ ಅತ್ಯುತ್ತಮವಾಗಿ ಬರೆಯ ಬಲ್ಲರು. ಹುಡುಗರಿಗಿಂತಲೂ ಅವರ ಕೆಲಸವು ಹೆಚ್ಚು ಸುಂದರವಾಗಿರುವದು. ಮತ್ತು ಅವರು ತಮ್ಮ ಕೆಲಸವನ್ನು ಬಹುಬೇಗ ಮಾಡುವರು. ಮೇಲಾಗಿ ಹುಡುಗರಿಗಿಂತ ಕಡಿಮೆ ಸಂಬಳವನ್ನು ತಕ್ಕೊಳ್ಳುವರು. ಎಷ್ಟೋ ಸ್ತ್ರೀಯರು ಹಣದ ಲೆಕ್ಕಪಾಕಿಗಳನ್ನು ಬರೆಯುವಂಥ ಜವಾಬದಾರಿಯ ಕೆಲಸಗಳನ್ನೂ ಮಾಡುವರು. ಎಷ್ಟೋ ಸ್ತ್ರೀಯರಿಗೆ ಇಂಗ್ಲಿಷ

ಬರೆಯಲಿಕ್ಕೆ ಓದಲಿಕ್ಕೆ ಚೆನ್ನಾಗಿ ಬರುವದು. ಆದೇಶದ ದೊಡ್ಡದೊಡ್ಡ ಬೀದಿಗಳಲ್ಲಿ ಶುಭ್ರವಾದ ಪೋಷಾಕನ್ನು ಹಾಕಿಕೊಂಡು, ಕೆಲವು ಹೆಂಗಸರು ಅತ್ತಿಂದ ಇತ್ತ, ಇತ್ತಿಂದ ಅತ್ತ ಹೋಗುವದು ದೃಷ್ಟಿಗೆ ಬೀಳುವದು. ಅವರು ಸೂಲಗಿತ್ತಿಯ ಕೆಲಸವನ್ನು ಮಾಡುವ ಹೆಂಗಸರು. ಅವರು ವೈದ್ಯಕೀಯ ಶಾಲೆಗಳಲ್ಲಿ ಕಲಿತು ಪಾಸಾದವರು. ಬೇಕಾದಾಗ ಅವರ ನೆರವು ಸಿಗುವದು. ರೇಲ್ವೆಗಳಲ್ಲಿಯೂ, ಪೋಸ್ಟಆಫೀಸುಗಳಲ್ಲಿಯೂ, ತಾರಆಫೀಸುಗಳಲ್ಲಿಯೂ, ಎಷ್ಟೋ ಸ್ತ್ರೀಯರು ಕಾರಕೂನರ ಕೆಲಸವನ್ನು ಮಾಡುವರು. ಇವರು ಬಹು ಚಿಕಿತ್ಸಕರೂ ಪ್ರಾಮಾಣಿಕರೂ ಆಗಿರುವರು. ಈ ಕೆಲಸಗಳು ಬಹು ತೊಂದರೆಯುಳ್ಳಂಥವಾದಾಗ್ಯೂ ಆ ಸ್ತ್ರೀಯರು ಅವುಗಳನ್ನು ಬಹು ಶಾಂತತೆಯಿಂದ ಮಾಡುವರು.

ವಿದುಷಿಯರೂ, ಸುಸಂಸ್ಕೃತರೂ ಆದ ಸ್ತ್ರೀಯರಿಗೂ ಜಪಾನದಲ್ಲಿ ಮುಂದೆ ಬರಲಿಕ್ಕೆ ಮಾರ್ಗವಿರುತ್ತದೆ. ಎಷ್ಟೋ ಸ್ತ್ರೀಯರು ಪದವೀಧರರಾಗಿದ್ದು, ಎಷ್ಟೋ ಮಾಸಿಕ ಪುಸ್ತಕಗಳ ಹಾಗು ವರ್ತಮಾನ ಪತ್ರಗಳ ಸಂಪಾದಕರ ಕೆಲಸವನ್ನು ಮಾಡುವರು. ಕೆಲವರು ರಾಜಕಾರಣದಂಥ ಎಷ್ಟೋ ಮಹತ್ವದ ವಿಷಯಗಳಲ್ಲಿ ಲೇಖಗಳನ್ನು ಬರೆದು ಬಹುಮಾನ್ಯತೆಯನ್ನು ಪಡೆದಿದ್ದರೆ, ಎಷ್ಟೋ ದೊಡ್ಡ ಮನೆತನದ ಬೇರೆ ಕೆಲವರು ಹೆಂಗಸರು ಸಾರ್ವಜನಿಕ ಕೆಲಸಗಳ ಅಗ್ರಣಿಗಳಾಗಿ ಕೆಲಸ ಮಾಡುತ್ತಿರುವರು. ಸಾಮಾಜಿಕ, ಧಾರ್ಮಿಕ, ನೈತಿಕ, ಔದ್ಯೋಗಿಕ ಮುಂತಾದ ಹಲವು ಬಗೆಯ ವಿಚಾರಜಾಗೃತಿಯನ್ನು ಜನರಲ್ಲಿ ಉಂಟುಮಾಡುವದಕ್ಕಾಗಿ ಎಷ್ಟೋ ಸಾರ್ವಜನಿಕ ಸಂಸ್ಥೆಗಳು ಅವರಿಂದ ಸ್ಥಾಪಿಸಲ್ಪಟ್ಟಿರುವವು. ಜಪಾನದೊಳಗಿನ "ಲೇಡೀಜ ಪೆಟ್ರಿಅಟಿಕ್ ಅಸೋಸಿಏಶನ್" ಎಂಬ ಅತಿ ದೊಡ್ಡ ಸಾರ್ವಜನಿಕ ಸಂಸ್ಥೆಯು ಆ ದೇಶದ ಸ್ತ್ರೀಯರಿಂದಲೇ ಸ್ಥಾಪಿಸಲ್ಪಟ್ಟಿರುತ್ತದೆ. ತನ್ನ ಮಾತೃಭೂಮಿಯ ಸಲುವಾಗಿ ಕೆಲಸ ಮಾಡುವ ಇಚ್ಛೆಯುಳ್ಳ ಬೇಕಾದ ಸ್ತ್ರೀಯು ಅವಳು ಶ್ರೀಮಂತಳಿರಲಿ, ಬಡಿವೆಯಿರಲಿ, ಈ ಸಂಸ್ಥೆಯ ಸಭಾಸದಳಾಗಬಹುದು. ಈ ಮುಖ್ಯ ಸಂಸ್ಥೆಯು ಟೋಕೀಓ ಪಟ್ಟಣದಲ್ಲಿದ್ದು ಅದರ ಶಾಖೆಗಳು ಇಡೀ ದೇಶದ ತುಂಬ ಪಸರಿಸಿರುತ್ತವೆ. ಮುಖ್ಯ ಸಂಸ್ಥೆಯು ಇದ್ದ ಟೋಕೀಓ ಪಟ್ಟಣದಲ್ಲಿ ಒಂದು ಮಾಸಿಕಪುಸ್ತಕವು ಹೊರಡುತ್ತದೆ. ಶಾಂತತೆಯ ಕಾಲದಲ್ಲಿ ನಾನಾಬಗೆಯ ಶಿಕ್ಷಣವನ್ನು ಕೊಡುವದೂ ಸಾಮಾಜಿಕ ಸುಧಾರಣೆಯನ್ನು ಮಾಡುವದೂ ಆ ಸಂಸ್ಥೆಯ ಮುಖ್ಯ ಕೆಲಸಗಳಾಗಿರುತ್ತವೆ. ಯುದ್ಧದ ಕಾಲಕ್ಕೆ ಸ್ವದೇಶದ ಸಲುವಾಗಿ ಯುದ್ಧ

ಮಾಡುತ್ತಿರುವ ದಂಡಾಳುಗಳ ಕುಟುಂಬದ ಸಂರಕ್ಷಣೆಯನ್ನು ಈ ಸಂಸ್ಥೆಯವರೇ ಮಾಡುವರು. ಈ ಸಂಸ್ಥೆಗೆ "ರೆಡ್‌ಕ್ರಾಸ ಸೊಸಾಯಿಟಿ" ಎಂಬದೊಂದು ಶಾಖೆಯು ಇರುವದು. ಈ ಶಾಖೆಯವರು ರಣಾಂಗಣಕ್ಕೆ ದಾಯಿಗಳನ್ನು ಕಳುಹಿ ರಣಭೂಮಿಯಲ್ಲಿ ಘಾಯ ಹೊಂದಿದ ಶಿಪಾಯಿಗಳ ಶುಶ್ರೂಷೆಯನ್ನು ಮಾಡುವರು. ಜಪಾನದ ಸೇನಾಪತಿಯಾದ ಮಾರ್ಶಲ್ ಓಯಾಮಾ ಎಂಬವರ ಪತ್ನಿಯು ಈ ಸಂಸ್ಥೆಯ ಅಧ್ಯಕ್ಷಳಿರುತ್ತಾಳೆ. ಈ ಮೇರೆಗೆ ಜಪಾನದ ಸ್ತ್ರೀಯರು ಬಹಳ ಉದ್ಯೋಗಶೀಲರಾಗಿರುವರು.

ಶಾಸ್ತ್ರೀಯ ಟಿಪ್ಪಣಿಗಳು.

ಪೃಥ್ವಿಯು ಎಂದಾದರು ಒಂದು ದಿವಸ ಒಡೆಯತಕ್ಕದ್ದೇ.

ರಸಾಯನ ಶಾಸ್ತ್ರದಲ್ಲಿ ಅಣು ಶಬ್ದದ ವ್ಯಾಖ್ಯೆಯು "ವಿಭಾಗ ಮಾಡಲಿಕ್ಕೆ ಬಾರದಂಥ, ಪದಾರ್ಥದ ವಿಭಾಗವು" ಎಂದು ಕೊಡಲ್ಪಟ್ಟಿರುತ್ತದೆ. ಯಾವದೊಂದು ಪದಾರ್ಥವನ್ನು ತಕ್ಕೊಂಡು, ಅದರಲ್ಲಿ ಹಲವು ವಿಭಾಗಗಳನ್ನು ಮಾಡುತ್ತಾ ಮಾಡುತ್ತಾ, ಕಟ್ಟಕಡೆಗೆ ಆ ಭಾಗಗಳಲ್ಲಿ ವಿಭಾಗಗಳನ್ನು ಮಾಡುವದು ಶಕ್ಯವಿಲ್ಲವೆಂಬ ಸ್ಥಿತಿಯ ವರೆಗೆ ಅದನ್ನು ಒಯ್ಯಬಹುದು. ಪದಾರ್ಥಗಳ ಈ ಅವಿಭಾಜ್ಯವಾದ ಸೂಕ್ಷ್ಮ ಸ್ಥಿತಿಯೇ ಅಣುವೆಂದೆನ್ನಿಸಿ ಕೊಳ್ಳುತ್ತದೆ. ಕೆಲವು ದಿವಸಗಳ ಪೂರ್ವದಲ್ಲಿ ಸರ್. ಜೆ. ಜೆ. ಟಾಮ ಸನ್ ಎಂಬ ಒಬ್ಬ ಶಾಸ್ತ್ರಜ್ಞರು ಇಂಗ್ಲಂಡದೊಳಗಿನ ಒಂದು ವಿದ್ವತ್ಸಭೆಯಲ್ಲಿ ಕೊಟ್ಟ ವ್ಯಾಖ್ಯಾನದಲ್ಲಿ ಹೇಳಿದ್ದೇನಂದರೆ:—"ಸೂಕ್ಷ್ಮತೆಯ ದೃಷ್ಟಿಯಿಂದ ಅಣುವು, ವಿದ್ಯುತ್ತಿನ ಪರಮಾಣುವಿಗಿಂತ ಎಷ್ಟೋಪಟ್ಟು ಸ್ಥೂಲವಾಗಿರುವದು. ಅತಿದೊಡ್ಡ ಸಭಾಮಂಟಪಕ್ಕೂ ಹುಡಿಯ ಒಂದು ಕಣಕ್ಕೂ ಯಾವ ಪ್ರಮಾಣವಿರುವದೋ ಅದೇ ಪ್ರಮಾಣವು, ಸಾಧಾರಣ ಅಣುವಿಗೂ, ವಿದ್ಯುತ್ತಿನ ಪರಮಾಣುವಿಗೂ ಇರುವದು. ವಿದ್ಯುಚ್ಛಾಸ್ತ್ರದ ದೃಷ್ಟಿಯಿಂದ ಋಣ ವಿದ್ಯುತ್ತಿನ "ಕಾರ್ಪುಸ್ಕಲ್" ಎಂಬ ಹೆಸರುಳ್ಳ ಪರಮಾಣುಗಳು ಸೂಕ್ಷ್ಮಗಳಲ್ಲಿ ಅತಿಸೂಕ್ಷ್ಮಗಳಾಗಿರುತ್ತವೆ. ಈ ಪರಮಾಣುಗಳು ಪ್ರತಿಒಂದು ಪದಾರ್ಥದ ಅಣುಗಳಲ್ಲಿ ಅಸಂಖ್ಯ ಇರುತ್ತವೆ; ಮತ್ತು ಅವುಗಳಲ್ಲಿ ಪ್ರಚಂಡವಾದ ಶಕ್ತಿಯು ಇರುತ್ತದೆ. ಈ ಪರಮಾಣುಗಳಿಂದ ತುಂಬಿದ ಒಂದು ಗ್ರೇನ ಹೈಡ್ರೋಜನದಲ್ಲಿ ಇರುವಷ್ಟು ಉಷ್ಣತೆಯು, ಹತ್ತು ಟನ್ನ ಇದ್ದಲಿಯನ್ನು ಸುಟ್ಟರೂ ಉತ್ಪನ್ನವಾ

ಗುವದಿಲ್ಲ. ಪೃಥ್ವಿಯ ಹೊಟ್ಟೆಯಲ್ಲಿ ಇರುವ ಈ ವಿದ್ಯುತ್ಪರಮಾಣುಗಳು ತಮ್ಮ ಸ್ಥಳ ಬಿಟ್ಟು ಹೋಗಲಿಚ್ಛಿಸಿದರೆ ಒಮ್ಮಿಂದೊಮ್ಮೆ ಪೃಥ್ವಿಯ ಸ್ಫೋಟ ವಾಗಿ ವಾಯುರೂಪವನ್ನು ಹೊಂದಿ, ಧೂಮಕೇತುವಿನ ಬಾಲದ ತುದಿಯ ಹಾಗೆ ಅದರ ಸ್ಥಿತಿಯಾಗಬಹುದು."

ಗೋದಿಯ ಹಿಟ್ಟಿನಂತೆ ಹತ್ತಿಯ ಕಾಳಿನ ಹಿಟ್ಟಿನ ಉಪಯೋಗವು.

—(೦)—

ಇಪ್ಪತ್ತನೇ ಶತಮಾನವು ಸುಧಾರಣೆಯ ಕಾಲವು. ಈ ಕಾಲದಲ್ಲಿ ನಾನಾಪ್ರಕಾರದ ಶೋಧಗಳು ಬೈಲಿಗೆ ಬರುತ್ತಿರುವವು. ಅಮೇರಿಕಾ ಖಂಡದ ಜನರಂತೂ ಹೊಸ ಹೊಸ ಶೋಧಗಳನ್ನು ಮಾಡುವದರಲ್ಲಿ ಹೆಸರು ಪಡೆದಿದ್ದಾರೆ. ಆ ಖಂಡದ ಡಲೊಸ ಟೆಕ್ಸಸ್ ಎಂಬ ಪ್ರದೇಶದಲ್ಲಿ ಮಿ. ಜೋಸೆಫ ಅಲಿಸನ್ ಎಂಬೊಬ್ಬ ಶಾಸ್ತ್ರಜ್ಞನು ಈಗ ಎಷ್ಟೋ ದಿವಸಗ ಳಿಂದ ಪ್ರಯೋಗಗಳನ್ನು ಮಾಡಿ, ಹತ್ತಿಯ ಕಾಳಿನ ಹಿಟ್ಟನ್ನು ಗೋದಿಯ ಹಿಟ್ಟಿನಂತೆ ಉಪಯೋಗ ಮಾಡಬಹುದೆಂದು ಸಿದ್ಧ ಮಾಡಿದ್ದಾನೆ. ಅವನು ತೆಗೆದ ಹತ್ತಿಯ ಕಾಳಿನ ಹಿಟ್ಟನ್ನು ಅಮೇರಿಕೆಯ ರಸಾಯನ ಶಾಸ್ತ್ರಜ್ಞರು ಪರೀಕ್ಷಿಸಿ, "ಈ ಹಿಟ್ಟು, ಗೋದಿಯ ಹಿಟ್ಟಿಗಿಂತ ಸರಸವಾಗಿಯೂ ರುಚಿ ಕರವಾಗಿಯೂ ಪಾಚಕತನದಿಂದ ಲಘುವಾಗಿಯೂ ಇರುತ್ತದೆ. ಮಾಂಸ ದಂತೆ ಈ ಹತ್ತಿಯ ಕಾಳಿನ ಹಿಟ್ಟಿನಲ್ಲಿ 'ಪ್ರೋಟೀನ್' ಎಂಬ ಮಾಂಸೋ ತ್ಪಾದಕ ಪದಾರ್ಥವು ವಿಶೇಷವಾಗಿರುತ್ತದೆ" ಎಂದು ತಮ್ಮ ಅಭಿಪ್ರಾಯ ವನ್ನು ಕೊಟ್ಟಿದ್ದಾರೆ. ಡಲೊಸ ಪ್ರಾಂತದಲ್ಲಿ ಈಗ್ಗ ಎಷ್ಟೋ ಜನರು ಗೋದಿಯ ಆಹಾರವನ್ನು ಬಿಟ್ಟು, ಹತ್ತೀ ಕಾಳಿನ ಮೇಲೆಯೇ ತಮ್ಮ ನಿರ್ವಾಹವನ್ನು ಸಾಗಿಸುತ್ತಿರುವರು. ೩ ಭಾಗ ಹತ್ತೀಕಾಳಿನ ಹಿಟ್ಟನ್ನೂ ೪೩ ಭಾಗ ಗೋದಿಯ ಹಿಟ್ಟನ್ನೂ ಕೂಡಿಸಿ ಆ ಮಿಶ್ರ ಹಿಟ್ಟಿನ ರೊಟ್ಟಿ ಯನ್ನು ಮಾಡಿದರೆ ಅದು ಬಹಳ ಉತ್ಕೃಷ್ಟವಾಗುವದು. ಮಿ. ಅಲಿಸನ್ ಇವರು ಡಲೊಸ ಎಂಬಲ್ಲಿ ಹತ್ತೀಕಾಳಿನ ಹಿಟ್ಟು ಮಾಡುವ ಕಾರಖಾನೆ ಯನ್ನು ತೆಗೆದಿರುತ್ತಾರೆ. ಈ ಹಿಟ್ಟು, ಗೋಧೀಹಿಟ್ಟಿನ ಅರ್ಧ ದರದಿಂದ ದೊರೆಯುತ್ತದೆ.

ನಿಬಂಧಶಿಕ್ಷಣ.

(ಕಳೆದ ಜುಲೈ ತಿಂಗಳ ಸಂಚಿಕೆಯ ೨೦೭ನೇ ಪುಟದಿಂದ ಮುಂದೆ ಸಾಗಿದ್ದು)

೬ನೇ ಪಾಠ—ಕಥೆಗಳು.

ಕೊಟ್ಟ ವಿಷಯದಲ್ಲಿ ಭಾಗಗಳನ್ನು ಮಾಡಿ, ಆಯಾ ಭಾಗಗಳನ್ನು ಕುರಿತು ಕ್ರಮವಾಗಿ ಬರೆಯುತ್ತ ಹೋಗುವದು ಮಹತ್ವದ್ದಾಗಿರುವಂತೆ, ಬರೆದ ವಿಷಯವನ್ನು ಓದಿ, ಅದರಲ್ಲಿ ಭಾಗಗಳನ್ನು ಕಲ್ಪಿಸಿ, ಆಯಾ ಭಾಗಗಳಲ್ಲಿ ಆಯಾ ವಿಷಯವನ್ನು ಸೇರಿಸಿ ಸ್ವಂತ ಭಾಷೆಯಿಂದ ಬರೆಯುವದೂ ಮಹತ್ವದ್ದಾಗಿರುತ್ತದೆ. ನಾವು ಎರಡನೇಯವರ ಬಾಯಿಂದ ಕೇಳಿದ ಇಲ್ಲವೆ ಪುಸ್ತಕಗಳಲ್ಲಿ ಓದಿದ ಕಥೆಗಳು ಇದಕ್ಕೆ ತಕ್ಕ ವಿಷಯಗಳಾಗಿವೆ.

ಕಥೆಗಳಲ್ಲಿ ಆದ ಕಥೆಗಳು, ಕಟ್ಟುಕಥೆಗಳು ಎಂದು ಮುಖ್ಯವಾಗಿ ಎರಡು ಪ್ರಕಾರಗಳುಂಟು. ಆದ ಕಥೆಗಳಲ್ಲಿ ಐತಿಹಾಸಿಕ ಕಥೆಗಳೂ ಕೆಲವು ಪೌರಾಣಿಕ ಕಥೆಗಳೂ ಬರುತ್ತವೆ. ಕಟ್ಟುಕಥೆಗಳಲ್ಲಿ ಇಸಾಪನ ನೀತಿ, ಪಂಚತಂತ್ರ, ದಂತಕಥೆಗಳು, ಕೆಲವು ಪೌರಾಣಿಕ ಕಥೆಗಳು ಬರುತ್ತವೆ. ಆದ ಕಥೆಗಳಲ್ಲಿ ಹೆಚ್ಚು ಕಡಿಮೆ ಮಾಡಲಾಗದು. ಮಾಡುವದಾದರೆ, ಬಹಳ ಎಚ್ಚರದಿಂದ ಮಾಡಬೇಕು. ಕಟ್ಟುಕಥೆಗಳಲ್ಲಿ ಯೋಗ್ಯವಾದ ಒಪ್ಪುವ ಹೆಚ್ಚುಕಡಿಮೆಗಳನ್ನು ಬೇಕಾದ ಹಾಗೆ ಮಾಡಬಹುದು. ಈ ಮಾತನ್ನು ಕಥೆ ಬರೆಯುವವರು ಅವಶ್ಯವಾಗಿ ಲಕ್ಷ್ಯದಲ್ಲಿಡಬೇಕು.

ಕಥೆಗಳೆಂದರೆ, ವಿವೇಚಿಸಿದ ವಿಷಯಗಳಾಗಿರುವದರಿಂದ ಅವುಗಳನ್ನು ಬರೆಯುವ ಬಗ್ಗೆ ಸಾಮಾನ್ಯ ವಿವರಣೆಯೊಂದಿಗೆ ವಿಷಯ ವಿವೇಚನ ಕ್ರಮವನ್ನು ತೋರಿಸಲಾಗುವದಿಲ್ಲ. ಕಥೆಗಳನ್ನು ಕೇಳಿ, ಇಲ್ಲವೆ ಪುಸ್ತಕಗಳಲ್ಲಿ ಓದಿ ಅವುಗಳೊಳಗಿನ ಮುಖ್ಯ ಸಂಗತಿಗಳನ್ನು ಆರಿಸಬೇಕು. ತರುವಾಯ ಲೇಖಕರು ಆ ಸಂಗತಿಗಳನ್ನು ಕ್ರಮವಾಗಿ ತಮ್ಮ ಭಾಷೆಯಿಂದ ಬರೆಯುತ್ತ ಹೋಗಬೇಕು. ಈ ಕ್ರಮಕ್ಕನುಸರಿಸಿ ಕೆಳಗೆ ಒಂದು ಪೌರಾಣಿಕ ಕಥೆಯನ್ನು ಮಾದರಿಗಾಗಿ ಬರೆದು ತೋರಿಸಿರುತ್ತದೆ. ಆ ಕಥೆಯೊಳಗೈ ಆರಿಸಿದ ಮುಖ್ಯ ಸಂಗತಿಗಳು ಅದರ ತಲೆಯ ಮೇಲೆ ಬರೆದಿರುತ್ತವೆ.

೨. ಉದಾಹರಣ— ಒಂದು ಪೌರಾಣಿಕ ಪ್ರಸಂಗೆ.
ಸುಭದ್ರೆಯೂ, ಶ್ರೀಕೃಷ್ಣನೂ.

ಕಥೆಯಲ್ಲಿಯ ಮುಖ್ಯ ಸಂಗತಿಗಳು:— ೧. ಸುಭದ್ರೆಯ ಶಂಕೆ. ೨. ಕೃಷ್ಣನ ಯೋಚನೆ. ೩. ಶಂಕಾನಿವಾರಣ. ೪. ವಿಚಾರಾಂಶ.

ಒಂದು ದಿನ ಸುಭದ್ರೆಯು ಅಣ್ಣನಾದ ಶ್ರೀಕೃಷ್ಣನೊಡನೆ ಮಾತಾಡುತ್ತ ಕುಳಿತಿದ್ದಳು. ಆಗ ಮಾತಿಗೆ ಮಾತು ಹೊರಟು ಆಕೆಯು ಅಣ್ಣನಿಗೆ— ಅಣ್ಣಾ, ನಾನು ನಿನ್ನ ಬೆನ್ನಿನಲ್ಲಿ ಬಿದ್ದ ತಂಗಿಯು. ನನ್ನ ಮೇಲೆ ನಿನ್ನ ಪ್ರೀತಿಯು ವಿಶೇಷವಾಗಿರಬೇಕು. ಹೀಗಿದ್ದು ನೀನು ದ್ರೌಪದಿಯನ್ನು ಬಹಳವಾಗಿ ಪ್ರೀತಿಸುತ್ತಿರುವೆಯಲ್ಲ! ಆಕೆಯು ನಿನಗೇನು ಮರುಳು ಮಾಡಿರುವಳೋ, ತಿಳಿಯದು ಎಂದು ನುಡಿದಳು.

ತಂಗಿಯ ಈ ಮಾತುಗಳನ್ನು ಕೇಳಿ ಕೃಷ್ಣನು ಮನಸ್ಸಿನಲ್ಲಿ ಈ ಸುಭದ್ರೆಗೆ “ನಾನು ಕೃಷ್ಣನ ತಂಗಿ” ಯೆಂಬ ಅಭಿಮಾನವು ಉತ್ಪನ್ನವಾಗಿದೆ. ನಾನು ದ್ರೌಪದಿಯ ಮೇಲೆ ಪ್ರೀತಿ ಮಾಡುವದು ಈಕೆಗೆ ಸಹನವಿಲ್ಲ. ಇದು ಒಳ್ಳೆಯ ಲಕ್ಷಣವಲ್ಲ. ಈಕೆಯಲ್ಲಿಯ ಈ ದೋಷಗಳನ್ನು ಉಪಾಯದಿಂದ ದೂರ ಮಾಡಬೇಕು, ಎಂದು ಯೋಚಿಸಿದನು.

ಈ ಮಾತಿಗೆ ಕೆಲವು ದಿನಗಳಾದವು. ಒಂದು ದಿನ ಕೃಷ್ಣನ ಬಳಿಯಲ್ಲಿ ಸುಭದ್ರೆಯು ನಿಂತಿದ್ದಳು; ದ್ರೌಪದಿಯೂ ನಿಂತಿದ್ದಳು. ಆಗ ಶ್ರೀಕೃಷ್ಣನು ಈಳಿಗೆಯಿಂದ ಏನೋ ಹೆಚ್ಚುತ್ತ ಕುಳಿತಿದ್ದನು. ಅಷ್ಟರಲ್ಲಿ ಕೈಜಾರಿ ಈಳಿಗೆಯು ಕೃಷ್ಣನ ಬೆರಳಿಗೆ ಹತ್ತಿತು. ಆಗ ಆತನು ಅಸಮಾಧಾನದಿಂದ ಇಬ್ಬರು ತಂಗೆಯರ ಮೋರೆಯನ್ನು ನೋಡಹತ್ತಿದನು. ಅದನ್ನು ಕಂಡು ಸುಭದ್ರೆಯು ಮರಮರನೆ ಮರುಗಿ, ಒದ್ದೆ ಅರಿವೆಯನ್ನು ತರುವದಕ್ಕಾಗಿ ಚಟ್ಟನೆ ಮನೆಯೊಳಗೆ ಹೋದಳು. ಇತ್ತ ದ್ರೌಪದಿಯು ಬಹು ವ್ಯಸನಬಟ್ಟು, ತಡ ಮಾಡದೆ ತನ್ನ ಜರದ ಪೀತಾಂಬರದ ಅಂಚಿನ ಒದ್ದೆಯಿಂದ ಬೆರಳು ಕಟ್ಟಿ ಬಿಟ್ಟಳು. ಸುಭದ್ರೆಯು ಒದ್ದೇ ಅರಿವೆ ತರುವದರೊಳಗೆ ಕೃಷ್ಣನು ಬೆರಳು ಕಟ್ಟಿಕೊಂಡು ಕುಳಿತಿದ್ದನು. ಇದನ್ನು ನೋಡಿ ಸುಭದ್ರೆಯ ಅಭಿಮಾನವು ದೂರಾಯಿತು; ದ್ರೌಪದಿಯ ಯೋಗ್ಯತೆಯೂ ಗೊತ್ತಾಯಿತು. ಸುಭದ್ರೆಯು ನಾಚಿಕೆಯಿಂದ ತಲೆಯನ್ನು ಬಾಗಿಸಿದಳು.

ನಾವು ಮಂದಿಯನ್ನು ಪ್ರೀತಿಸುವಂತೆ ಮಂದಿ ನಮ್ಮನ್ನು ಪ್ರೀತಿಸುತ್ತಾರೆ. ದ್ರೌಪದಿಗೆ ತನ್ನ ಜರದ ಪೀತಾಂಬರಕ್ಕಿಂತ ಕೃಷ್ಣನು ಪ್ರಿಯನಾದನು. ಸುಭದ್ರೆಗೆ ಕೃಷ್ಣನಿಗಿಂತ ತನ್ನ ಬೆಲೆಯುಳ್ಳ ಉಟ್ಟ ಬಟ್ಟೆಯು ಪ್ರಿಯವಾಯಿತು. ಅಂದರೆ, ದ್ರೌಪದಿಯು ಶ್ರೀಕೃಷ್ಣನ ಸಲುವಾಗಿ ತನ್ನ ಜರದ ಪೀತಾಂಬರದ ಲೋಭವನ್ನು ಬಿಟ್ಟಳು; ಸುಭದ್ರೆಯು ತನ್ನ ಉಟ್ಟ ಬಟ್ಟೆಯ ಸಲುವಾಗಿ ಕೃಷ್ಣನ ಲೋಭವನ್ನು ಬಿಟ್ಟಳು. ಇದರ ಗುಟ್ಟನ್ನು ನಾವು ವಿಚಾರಿಸಬೇಕು; ಅಂದರೆ, ಸುಭದ್ರೆಗಿಂತ ದ್ರೌಪದಿಯ ಮೇಲೆ ಕೃಷ್ಣನ ಲೋಭವು ಯಾಕೆ ಹೆಚ್ಚೆಂಬದು ತಾನೇ ಗೊತ್ತಾಗುವದು.

೩. ಅಭ್ಯಾಸಕ್ಕಾಗಿ ವಿಷಯಗಳು:—ಇಲ್ಲಿ ಮಹಾಭಾರತ-ರಾಮಾಯಣಗಳಂಥ ಸುರಸಗ್ರಂಥಗಳೊಳಗಿನ ಪ್ರಸಂಗಗಳನ್ನೂ, ಐತಿಹಾಸಿಕ ಪ್ರಸಂಗಗಳನ್ನೂ, ಕ್ರಮಿಕ ಪುಸ್ತಕಗಳೊಳಗಿನ ಕಥೆಗಳನ್ನೂ, ದಂತಕಥೆಗಳನ್ನೂ, ಹಿರಿಯರಿಂದ ಕೇಳಿದ ಕಥೆಗಳನ್ನೂ ವಿದ್ಯಾರ್ಥಿಗಳಿಂದ ಬರಿಸತಕ್ಕದ್ದು.

೩ನೇ ಪ್ರಕರಣ.

ಪತ್ರವ್ಯವಹಾರವು.

ಇಲ್ಲಿಯವರೆಗೆ ವಿದ್ಯಾರ್ಥಿಗಳು ತಮ್ಮ ಅನುಭವದ ಸಂಗತಿಗಳನ್ನು ಬರೆಯುತ್ತ ಬಂದಿರುವರು. ಇದರಿಂದ ಅವರಿಗೆ ಗೊತ್ತಿದ್ದ ಸಂಗತಿಗಳನ್ನು ಒಟ್ಟುಗೂಡಿಸುವ ಕ್ರಮವು ಗೊತ್ತಾಗುವ ಸಂಭವವಿರುತ್ತದೆ. ಇದರ ಉಪಯೋಗವನ್ನು ಅವರು ವ್ಯವಹಾರದಲ್ಲಿ ಮಾಡಿಕೊಳ್ಳತಕ್ಕದ್ದು. ಇದಲ್ಲದೆ ತಮಗೆ ಗೊತ್ತಿಲ್ಲದಂಥ ಹೊಸ ಹೊಸ ಸಂಗತಿಗಳನ್ನಾದರೂ ಅವರು ವಾಚನದ ಬಲದಿಂದ ಮೆಲ್ಲಮೆಲ್ಲನೆ ಗೊತ್ತು ಮಾಡಿಕೊಂಡು ಅವನ್ನು ತಮ್ಮ ಲೇಖಗಳಲ್ಲಿ ಉಪಯೋಗಿಸತಕ್ಕದ್ದು. ಇವೆರಡೂ ಕೆಲಸಗಳಿಗೆ ಆಸ್ಪದವು ದೊರೆಯುವಂತೆ ಮುಂದಿನ ಪತ್ರಗಳಲ್ಲಿ ವ್ಯವಸ್ಥೆಯು ಮಾಡಲ್ಪಟ್ಟಿರುತ್ತದೆ.

ಪತ್ರಗಳಲ್ಲಿ ಮನೆವಾರ್ತೆಗೆ ಸಂಬಂಧಿಸಿದ ಪತ್ರಗಳು, ಕೊಡಕೊಳ್ಳುವದಕ್ಕೆ ಸಂಬಂಧಿಸಿದ ಪತ್ರಗಳು, ಸರಕಾರಿಯ ಪತ್ರಗಳು ಎಂದು ಮೂರು ಪ್ರಕಾರಗಳನ್ನು ಕಲ್ಪಿಸಬಹುದು. ಮನೆವಾರ್ತೆಯ ಪತ್ರಗಳಲ್ಲಿ ಪತ್ರ ಬರೆಯುವ ಪದ್ಧತಿಗಳೂ, ಹುಡುಗರ ಆಚರಣೆಯ ತಿದ್ದುಪಡೆಗೆ ಸಂಬಂ

ಥಿಸಿದ ಹಲವು ಸಣ್ಣ ಸಣ್ಣ ಲೇಖಗಳೂ ಕೊಡಲ್ಪಟ್ಟಿರುತ್ತವೆ; ಮತ್ತು ಕೆಲವು ಮನೋರಂಜಕ ವಿಷಯಗಳೂ ಸೇರಿಸಲ್ಪಟ್ಟಿರುತ್ತವೆ. ಉಳಿದ ಎರಡು ಬಗೆಯ ಪತ್ರಗಳಲ್ಲಿ ಇಂಥ ವಿಷಯಗಳಿಗೆ ಆಸ್ಪದವು ದೊರೆಯುವಂತೆ ಇಲ್ಲ. ಅವುಗಳಲ್ಲಿ ಬಹುತರ ನಿಯಮಿತ ವಿಷಯಗಳು ಮರ್ಯಾದಿತವಾಗಿ ಬರೆಯಲ್ಪಡಬೇಕಾಗುವವು. ಈ ಮೂರು ಬಗೆಯ ಪತ್ರಗಳಿಗಾಗಿ ಮೂರು ಗುಂಪುಗಳನ್ನು ಮಾಡಿ ಒಂದೊಂದು ಗುಂಪಿನಲ್ಲಿ ಒಂದೊಂದು ಬಗೆಯ ಪತ್ರಗಳನ್ನು ಬೇರೆ ಬೇರೆ ಪಾಠಗಳೊಳಗೆ ಬರೆದು ತೋರಿಸಿರುತ್ತದೆ.

ಎಷ್ಟೋ ಜನರು ಪತ್ರ ಬರೆಯುವಾಗ ಇಲ್ಲದ ಕೃತ್ರಿಮ ಪ್ರೌಢಿಯನ್ನೂ, ಚಾತುರ್ಯವನ್ನೂ ತೋರಿಸಲಿಕ್ಕೆ ಯತ್ನಯಿಸುತ್ತಾರೆ; ಅಂದರೆ, ಅವರು ಅಪರಿಚಿತವಾದ ಹಳೆಗನ್ನಡ-ಸಂಸ್ಕೃತ ಶಬ್ದಗಳನ್ನು ಸೇರಿಸುತ್ತಾರೆ, ಕ್ಲಿಷ್ಟವಾದ ಸಂಧಿಗಳನ್ನು ಮಾಡುತ್ತಾರೆ. ಅನವಶ್ಯಕವಾದ ಅಲಂಕಾರಗಳನ್ನು ಉಪಯೋಗಿಸುತ್ತಾರೆ. ಇದು ಸರಿಯಲ್ಲ. ಬರೆಯತಕ್ಕದ್ದನ್ನು ಸರಳವಾಗಿಯೂ, ಸುಲಭವಾಗಿಯೂ, ಶುದ್ಧವಾಗಿಯೂ, ವ್ಯಾವಹಾರಿಕಭಾಷಾಸರಣಿಯನ್ನು ಅನುಸರಿಸಿಯೂ ಬರೆಯಬೇಕು. ಸ್ವಾಭಾವಿಕವಾದಂಥ ಸುಲಭ ಶೈಲಿಯನ್ನು ಉಪಯೋಗಿಸುವ ಸ್ಥಾನವು ಪತ್ರವೇ ಎಂದು ಹೇಳಬಹುದು.

೧ನೆಯ ಗುಂಪು.

ಮನೆವಾರ್ತೆಗೆ ಸಂಬಂಧಿಸಿದ ಪತ್ರಗಳು.

ಈ ಪತ್ರಗಳಲ್ಲಿ ಮನೆತನಕ್ಕೆ ಸಂಬಂಧಿಸಿದ ಸುಖದುಃಖದ ಪ್ರಸಂಗಗಳು, ಉಪದೇಶಗಳು, ವೃತ್ತಾಂತಗಳು ಮುಂತಾದ ಹಲವು ವಿಷಯಗಳು ಬರೆಯಲ್ಪಡುವವು. ಪ್ರತಿ ಒಂದು ಮನೆವಾರ್ತೆಯ ಪತ್ರದಲ್ಲಿ ಸಾಧಾರಣವಾಗಿ (೧) ಒಕ್ಕಣಿಕೆ, (೨) ಸಂಗತಿ, (೩) ಉಪಸಂಹಾರ, ಎಂದು ಮೂರು ಮುಖ್ಯ ಭಾಗಗಳಿರುತ್ತವೆ.

ಒಕ್ಕಣಿಕೆ:—ಮನುಷ್ಯನ ಹೆಸರಿನ ಹಿಂದೆ ಅವನ ಜಾತಿ, ವಿದ್ವತ್ತೆ, ಬಂಧುತ್ವ ಮೊದಲಾದವುಗಳನ್ನನುಸರಿಸಿ ಬರೆಯಲ್ಪಡುವ ಸ್ತುತಿಪರಶಬ್ದಗಳಿಗೆ ಅಥವಾ ವಾಕ್ಯಗಳಿಗೆ ಒಕ್ಕಣಿಕೆಯನ್ನುವರು. ಕನ್ನಡದೊಳಗಿನ ಒಕ್ಕಣಿಕೆಗಳೆಲ್ಲ ಸಂಸ್ಕೃತ ಶಬ್ದಗಳ ಅಥವಾ ವಾಕ್ಯಗಳ ರೂಪದಿಂದ

ಇರುತ್ತವೆ. ಮೊದಲು ನಮ್ಮಲ್ಲಿ ಒಕ್ಕಣಿಕೆಗಳ ಮಹತ್ವವು ಹೆಚ್ಚು ಇತ್ತು; ಮತ್ತು ಪತ್ರಲೇಖನಪದ್ಧತಿಯಾದರೂ ಹೆಚ್ಚು ನಿಯಮಿತವಾಗಿತ್ತು. ಆದರೆ ಈಗ ಟಪಾಲಖಾತೆಯಾದಂದಿನಿಂದ ಒಕ್ಕಣಿಕೆಗಳ ಮಹತ್ವವು ಕಡಿಮೆಯಾಗಿರುವದಲ್ಲದೆ, ಪತ್ರ ಬರೆಯುವ ಪದ್ಧತಿಯಾದರೂ ಅನಿಯಮಿತವಾಗಿರುತ್ತದೆ. ಈಗ ಕಾರ್ಡಿನ ಮೇಲೆ ಪತ್ರ ಬರೆಯುವ ಸಂಕ್ಷಿಪ್ತ ಪದ್ಧತಿಯನ್ನು ಮನಸಿನಲ್ಲಿ ತಂದರೆ ಇದರ ನಿಜತ್ವವು ಗೊತ್ತಾಗುವದು. ಟಪಾಲಖಾತೆಯ ಮೂಲಕ ಈಗ ಪತ್ರವ್ಯವಹಾರವು ಬೆಳೆದಿರುತ್ತದೆ. ಸಣ್ಣಪುಟ್ಟ ಮಾತುಗಳಿಗಾಗಿ ಮೇಲೆ ಮೇಲೆ ಪತ್ರ ಬರೆಯುವ ಪ್ರಚಾರವು ಹೆಚ್ಚಾಗಿದೆ. ಹೀಗಿರಲು, ಮಹತ್ವದ್ದಲ್ಲದ ಸ್ವಲ್ಪ ಮಾತಿನ ಪತ್ರಕ್ಕೂ ದೊಡ್ಡ ಒಕ್ಕಣಿಕೆಯನ್ನು ಬರೆಯುವದೆಂದರೆ ನಾಲ್ಕು ವರ್ಷದ ಹುಡುಗನಿಗೆ ಹೆಡಿಗೆ ಪಾವಡ ಹಾಕಿದಂತೆಯೇ ಸರಿ. ಕಾರಣ, ಪ್ರಸಂಗವರಿತು ಒಕ್ಕಣಿಕೆಯನ್ನು ಸಂಕ್ಷೇಪ ಮಾಡಬೇಕಾಗುವದು. ಸಾರಾಂಶವೇನೆಂದರೆ, ಪ್ರಸಂಗವಿದ್ದಂತೆ ಸಂಪೂರ್ಣವಾದ ಒಕ್ಕಣಿಕೆಗಳೂ, ಸಂಕ್ಷೇಪವಾದ ಒಕ್ಕಣಿಕೆಗಳೂ ಬೇಕಾಗುವವು. ಅವೆರಡನ್ನೂ ಮುಂದಿನ ಪತ್ರಗಳಲ್ಲಿ ಬರೆದು ತೋರಿಸಿರುತ್ತದೆ. ಮಹತ್ವದ ಪತ್ರಗಳನ್ನು ಪದ್ಧತಿಯಂತೆ ಬರೆಯುವಾಗ್ಗೆ ಪೂರ್ಣ ಒಕ್ಕಣಿಕೆಗಳು ಬೇಕಾಗುವವು. ಧರ್ಮಗುರುಗಳಿಗೂ, ಅರಸರಿಗೂ, ದೊಡ್ಡ ಮರ್ಯಾದಸ್ಥರಿಗೂ ಪತ್ರ ಬರೆಯುವಾಗ ಪೂರ್ಣ ಒಕ್ಕಣಿಕೆಗಳನ್ನೇ ಬರೆಯಬೇಕು.

ಸಂಗತಿ:—ಈ ಭಾಗದಲ್ಲಿ ಪರಸ್ಪರರಿಗೆ ತಿಳಿಸತಕ್ಕ ಮನೆತನದ ಸಂಗತಿಗಳನ್ನು ಬರೆಯಬೇಕು. ಆ ಸಂಗತಿಗಳು ಕೆಲವೊಂದು ಪ್ರಸಂಗದಲ್ಲಿ ನಾಲ್ಕಾರು ಸಾಲಿನಲ್ಲಿ ಮುಗಿಯಬಹುದು. ಕೆಲವೊಂದು ಪ್ರಸಂಗದಲ್ಲಿ ನಾಲ್ಕಾರು ಪಾನುಗಳೂ ಸಾಲಲಿಕ್ಕಿಲ್ಲ. ಎಷ್ಟು ಬರೆದರೂ ಪತ್ರಗಳಲ್ಲಿ ಅಚ್ಚುಕಟ್ಟುತನವನ್ನು ಕಾಯ್ದುಕೊಳ್ಳತಕ್ಕದ್ದು. ಅದರಂತೆ ಬರಹದಲ್ಲಿ ಯೋಗ್ಯತೆಗೆ ತಕ್ಕಂತೆ ಮರ್ಯಾದೆಯನ್ನು ಕಾಯಬೇಕು. ಮರ್ಯಾದೆ ಕೊಟ್ಟರೆ ಮರ್ಯಾದೆಯು ಬರುತ್ತದೆ. ಪತ್ರದಲ್ಲಿ ತಕ್ಕಷ್ಟಕ್ಕಿಂತ ಸ್ವಲ್ಪ ಹೆಚ್ಚು ಮರ್ಯಾದೆ ಕೊಟ್ಟರೆ ನಡೆಯಬಹುದು. ಆದರೆ, ಉದ್ಧಟತನವು ಕೆಲಸದ್ದಲ್ಲ. ಮರ್ಯಾದೆಯ ಮಾತುಗಳಿಂದ ಮನಸ್ಸಿಗೆ ಸಮಾಧಾನವಾಗುತ್ತದೆ. ಉದ್ಧಟತನದಿಂದ ಅಸಮಾಧಾನವಾಗುತ್ತದೆ. ಅಸಮಾಧಾನವನ್ನು

ಟುಮಾಡುವದು ಶಿಷ್ಟಾಚಾರಕ್ಕೆ ವಿರುದ್ಧವಾದದ್ದು. ಸಾರಾಂಶವೇನೆಂದರೆ, ಪತ್ರಗಳು ಬಾಯಿಮಾತುಗಳಂತೆ ಮಿಂಚಿನ ಹಾಗೆ ಅಳಿದು ಹೋಗದೆ ಇರುವದರಿಂದ ಅವುಗಳನ್ನು ಬಹಳ ವಿಚಾರದಿಂದ ಬರೆಯಬೇಕು.

ಸಂಗತಿಗಳನ್ನು ಬರೆಯುವ ಕ್ರಮಗಳು ಬೇರೆ ಬೇರೆ ಪ್ರಸಂಗಗಳ ಪತ್ರಗಳಲ್ಲಿ ಬೇರೆ ಬೇರೆ ವಿಧವಾಗಿರುವವು. ಲಗ್ನಪತ್ರ ಬರೆಯುವ ಪದ್ಧತಿಯೇ ಬೇರೆ; ಸತ್ತ ಪತ್ರ ಬರೆಯುವ ಪದ್ಧತಿಯೇ ಬೇರೆ; ಹಡೆದ ಸುದ್ದಿಯ ಪತ್ರ ಬರೆಯುವ ಪದ್ಧತಿಯೇ ಬೇರೆ; ಊಟದ ಪತ್ರ ಬರೆಯುವ ಪದ್ಧತಿಯೇ ಬೇರೆ. ಈ ಬೇರೆ ಬೇರೆ ಪದ್ಧತಿಗಳನ್ನು, ಒಂದೊಂದು ಪಾಠದಲ್ಲಿ ಒಂದೊಂದು ಪದ್ಧತಿಯಂತೆ ಬರೆದು ತೋರಿಸಿರುವದಲ್ಲದೆ, ಪ್ರತಿ ಒಂದು ಪಾಠದಲ್ಲಿ ಹೊಸ ಸಂಗತಿಯನ್ನು ತಿಳಿಸುವ ಬೇರೆ ಪತ್ರಗಳೂ ಬರೆದು ತೋರಿಸಲ್ಪಟ್ಟಿರುವವು. ಒಟ್ಟಿಗೆ ಪ್ರತಿ ಒಂದು ಪಾಠದೊಳಗಿನ ಪತ್ರಗಳಿಂದ ಪತ್ರಗಳ ಬೇರೆ ಬೇರೆ ಪದ್ಧತಿಗಳೂ, ಹೊಸ ಸಂಗತಿಗಳೂ ತಿಳಿಯುವಂತೆ ವ್ಯವಸ್ಥೆ ಮಾಡಿರುತ್ತದೆ.

ಉಪಸಂಹಾರ:—ಪತ್ರವನ್ನು ಮುಗಿಸುವದಕ್ಕೆ ಉಪಸಂಹಾರವೆನ್ನುವರು. ಬಂಧುತ್ವ, ವಿದ್ವತ್ತೆ, ಮಾನಮರ್ಯಾದೆ ಮುಂತಾದ ಸಂಗತಿಗಳನ್ನು ಮನಸ್ಸಿನಲ್ಲಿ ತಂದು ಪತ್ರಗಳನ್ನು ಬೇರೆ ಬೇರೆ ವಿಧವಾಗಿ ಮುಗಿಸಬೇಕಾಗುವದು. ಈ ಪತ್ರ ಮುಗಿಸುವ ಕ್ರಮವಾದರೂ ಸಂಕ್ಷೇಪ, ವಿಸ್ತಾರ ಎಂದು ಎರಡು ವಿಧವಾಗಿರುತ್ತದೆ. ಆ ಬೇರೆ ಬೇರೆ ವಿಧಗಳನ್ನು ಕೆಳಗಿನ ಪತ್ರಗಳಿಂದ ತಿಳಕೊಳ್ಳಬಹುದು.

ಪತ್ರ ಬರೆಯುವ ಸಾಧನಗಳು:—ಇವುಗಳ ಸಂಬಂಧದಿಂದ ದುರ್ಲಕ್ಷ ಮಾಡುವ ಕೆಟ್ಟ ಚಾಳಿಯು ಬಹು ಜನರಲ್ಲಿರುತ್ತದೆ. ಕೆಲವರು ಕೆಟ್ಟ ಮಸಿಯನ್ನೂ, ಸಿಕ್ಕ ಲೆಕ್ಕಣಿಕೆಯನ್ನೂ, ಕಣ್ಣಿಗೆ ಬಿದ್ದ ಕಾಗದವನ್ನೂ ಉಪಯೋಗಿಸುವರು. ಕೆಲವರಂತು ಕಾಗದದ ತುಂಡನ್ನೂ, ಚಿನ್ನುಸಾಟ ಕಾಗದವನ್ನೂ ಉಪಯೋಗಿಸಿ ತಮ್ಮ ಕಂಗಾಲತನವನ್ನು ತೋರಿಸುವರು. ಇದರಿಂದ ಪತ್ರ ಬರಿಸಿಕೊಳ್ಳುವವನ ಅಪಮರ್ಯಾದೆಯಾಗುವದಲ್ಲದೆ, ಬರೆಯುವವನ ಬೆಲೆಯೂ ಕಟ್ಟುತ್ತದೆ. ಆದ್ದರಿಂದ ಪತ್ರ ಬರೆಯುವವರು ಯಾವಾಗಲೂ ಕಾಗದವನ್ನು ಮರ್ಯಾದೆಗೆ ತಕ್ಕಷ್ಟು ತಕ್ಕೊಳ್ಳಲೇ ಬೇಕು. ಒಳ್ಳೆಯ ಮಸಿಯನ್ನೂ, ಒಳ್ಳೆಯ ಲೆಕ್ಕ

ಣಿಕೆಯನ್ನೂ ಉಪಯೋಗಿಸಬೇಕು. ಪತ್ರ ಬರೆಯುವದಕ್ಕಾಗಿಯೇ ಉಪಯೋಗಿಸತಕ್ಕ ಕಾಗದಗಳು ದೊರೆಯುತ್ತವೆ. ಯೋಗ್ಯತೆಯಿದ್ದವರು ಅವನ್ನು ಸಂಪಾದಿಸಿಕೊಂಡಿರಬೇಕು. ಪತ್ರಕ್ಕಾಗಿ ಅರ್ಧ ತಾವನ್ನು ಉಪಯೋಗಿಸುವದಾದರೆ, ಅದನ್ನು ಸರಿಯಾಗಿ ಮಡಿಚಿ, ಮಡಿಕೆಯ ಉದ್ದ ಭಾಗವು ಕಣ್ಣೆದುರಿಗಾಗುವಂತೆ ಅದನ್ನು ಹಿಡಿದು ಬರೆಯಬೇಕು. ಪರಿಕೆಯನ್ನು ಉಪಯೋಗಿಸುವದಾದರೆ, ಅದನ್ನು ಸರಿಯಾಗಿ ಮಡಿಚಿ, ಮಡಿಕೆಯ ಉದ್ದಭಾಗವೇ ಕಣ್ಣೆದುರಿಗೆ ಬರುವಂತೆ ಹಿಡಿದು ಬರೆಯಬೇಕು. ಪರಿಕೆಗಿಂತ ಸಣ್ಣ ಕಾಗದವನ್ನು ಉಪಯೋಗಿಸಬಾರದು. ಉಪಯೋಗಿಸಿದರೆ, ಅವು ಎಣ್ಣೆಯ ಚೀಟಿಗಳಿಗೆ ಸರಿಯಾಗುವವು. ಅರ್ಧ ತಾವಿನಲ್ಲಿ ಪತ್ರ ಬರೆಯುವಾಗ ಮಾರ್ಜಿನವನ್ನು ಬಿಡಬೇಕು. ಪತ್ರದ ಕಾಗದದಲ್ಲಿಯೂ, ಪರಿಕೆಯಲ್ಲಿಯೂ ಪತ್ರ ಬರೆಯುವಾಗ ಮಾರ್ಜಿನವನ್ನು ಬಿಡದಿದ್ದರೂ ನಡೆಯಬಹುದು.

ಪತ್ರ ಕಳಿಸುವ ಬಗೆ—ಪತ್ರಗಳನ್ನು ಆಳುಗಳ ಸಂಗಡ ಕಳಿಸುವದೂ ಉಂಟು, ಟಪಾಲ ಮೇಲೆ ಕಳಿಸುವದೂ ಉಂಟು. ಟಪಾಲಿನಿಂದ ಕಳಿಸಲಿಕ್ಕೆ ವೆಚ್ಚವು ಕಡಿಮೆ ಬೀಳುವದರಿಂದ ಮುದ್ದಾಮಪತ್ರ ಕಳಿಸುವ ಪ್ರಚಾರವು ತೀರ ಕಡಿಮೆಯಾಗಿದೆ. ಟಪಾಲಿನಿಂದ ಪತ್ರಗಳನ್ನು ಕಳಿಸಲಿಕ್ಕೆ ಕಾರ್ಡುಗಳು, ಕವರುಗಳು (ಪಾಕೀಟುಗಳು) ಮುಖ್ಯ ಸಾಧನಗಳಾಗಿರುತ್ತವೆ. ಕಾರ್ಡುಗಳು ಬಿಲ್ಲಿಗೊಂದು ಬರುವವು; ಕವರುಗಳು ಎರಡು ಬಿಲ್ಲಿಗೊಂದು ಬರುವವು. ಇವುಗಳಲ್ಲದೆ ಖಾಸಗಿಯ ಕಾರ್ಡುಗಳೂ, ಕವರುಗಳೂ ಪತ್ರ ಕಳಿಸುವದಕ್ಕೆ ಉಪಯೋಗಿಸಲ್ಪಡುವವು. ಖಾಸಗಿಯ ಕಾರ್ಡಿಗೆ ಬಿಲ್ಲಿಯ ಟಿಕೀಟನ್ನು ಹಚ್ಚಬೇಕಾಗುವದು. ಕವರಿಗೆ ಪತ್ರದ ತೂಕವಿದ್ದಂತೆ ಎರಡು ಬಿಲ್ಲಿಗಳ ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಟಿಕೀಟು ಹಚ್ಚಬೇಕಾಗುವದು. ಗುಪ್ತವಲ್ಲದಂಥ ಸ್ವಲ್ಪ ಮಜಕೂರನ್ನು ಕಾರ್ಡಿನಲ್ಲಿ ಬರೆಯತಕ್ಕದ್ದು. ಜನರು ಓದಬಾರದ ಮಜಕೂರನ್ನೂ ವಿಸ್ತಾರವಾದ ಮಜಕೂರನ್ನೂ ಕವರಿನಲ್ಲಿ ಹಾಕಿ ಕಳಿಸಬೇಕು. ಪತ್ರಸಹಿತವಾದ ಕವರಿನ ತೂಕವು ೧ ತೊಲೆಯ ವರೆಗೆ ಇದ್ದರೂ ಅರ್ಧ ಆಣೆಯ ಟಿಕೀಟನ್ನು ಹಚ್ಚಬೇಕು. ಅದರ ಮುಂದೆ ಪತ್ರದ ತೂಕವು ಹತ್ತು ತೊಲೆಯ ವರೆಗೆ ಇದ್ದರೆ ಒಂದು ಆಣೆಯ ಟಿಕೀಟನ್ನೂ, ಅದರ

ಮುಂದೆ ಪ್ರತಿ ಹತ್ತು ತೊಲೆಯ ತೂಕಕ್ಕೂ ಅದರ ಭಾಗಕ್ಕೂ ಒಂದೊಂದು ಆಣೆಯ ಟಿಕೀಟನ್ನೂ ಹಚ್ಚುತ್ತ ಹೋಗಬೇಕು. ಕವರುಗಳ ಮೇಲೆ ಟಿಕೀಟು ಹಚ್ಚದೆ ಅವನ್ನು ಹಾಗೇ ಕಳಿಸಿದರೆ, ಅವಕ್ಕೆ ನಾಟವೇಡ, ಅಂದರೆ ಹಾಸಲು ತುಂಬದೆಯಿದ್ದ ಪತ್ರಗಳೆನ್ನುವರು. ಇವಕ್ಕೆ ಮುಂಗಡ ಹಾಸಲು ತುಂಬಿದ ಪತ್ರಗಳ ಇಮ್ಮಡಿ ಹಾಸಲು ಬೀಳುವದು. ಖಾಸಗಿಯ ಕಾರ್ಡುಗಳಿಗೆ ಟಿಕೀಟು ಹಚ್ಚದೆ ಹಾಗೇ ಕಳಿಸಿದರೆ ಅವು ಮುಂಬಯಿಯಲ್ಲಿದ್ದ "ಡೆಡ್‌ಲೆಟರ ಆಫೀಸ"(ಮೃತವಾದ ಪತ್ರಗಳ ಆಫೀಸು) ಎಂಬ ಆಫೀಸಿಗೆ ಕಳಿಸಲ್ಪಟ್ಟು ಅಲ್ಲಿ ನಾಶಮಾಡಲ್ಪಡುತ್ತವೆ. ಪತ್ರಗಳ ಹಾಸಲು ಭರಾಯಿಸುವ ಸಂಬಂಧದ ನಿಯಮಗಳು ಹೆಚ್ಚು ಕಡಿಮೆಯಾಗುವದುಂಟು. ಅದನ್ನು ಟಪಾಲ ಖಾತೆಯವರು ಆಗಾಗ್ಗೆ ತಿಳಿಸುವರು. ತೂಕದ ಹಾಸಲಿಗಿಂತ ಎರಡು ಆಣೆ ಹೆಚ್ಚು ಕೊಟ್ಟರೆ, ಕಾರ್ಡುಗಳನ್ನೂ ಕವರುಗಳನ್ನೂ ರಜಿಸ್ತರು ಮಾಡುವರು. ಮಹತ್ವದ ಪತ್ರಗಳನ್ನು ರಜಿಸ್ತರು ಮಾಡಿಸಬಹುದು. ಅವಶ್ಯವಿದ್ದವರು ಪೋಷ್ಟಿನ ಸಂಬಂಧದ ವಿಶೇಷ ನಿಯಮಗಳನ್ನು "ಪೋಸ್ಟಲ್ ಗಾಯಿಡ್" ಎಂಬ ಪುಸ್ತಕವನ್ನು ಸಂಗ್ರಹಿಸಿ ನೋಡಿಕೊಳ್ಳ ಬಹುದು. ಆ ಪುಸ್ತಕವು ಟಪಾಲ ಆಫೀಸುಗಳಲ್ಲಿ ನಾಲ್ಕು ಆಣೆಗೆ ದೊರೆಯುವದು.

ಪತ್ತೆ ಬರೆಯುವ ರೀತಿ:— ಎಷ್ಟೋ ಜನರು ಕಾರ್ಡು ಕವರುಗಳ ಮೇಲೆ ಪತ್ತೆಯನ್ನು ನೆಟ್ಟಗೆ ಬರೆಯದಿರುವದರಿಂದ ಅವು ಹೊತ್ತಿಗೆ ಮುಟ್ಟಲಿಕ್ಕೆ ಬಹಳ ತೊಂದರೆ ಯಾಗುತ್ತದೆ. ಪತ್ತೆ ಬರೆಯುವ ರೀತಿಯನ್ನು ಕೆಳಗೆ ತೋರಿಸಿರುತ್ತದೆ. ಅದರಂತೆ ಬರೆಯಬೇಕು. ಪ್ರಸಿದ್ಧ ಊರು ಇದ್ದರೆ ಬರಿಯ ಊರು ಹೆಸರು ಹಾಕಿದರೆ ಸಾಕಾಗುವದು. ಸಣ್ಣ ಊರು ಇದ್ದರೆ, ಪೋಷ್ಟಿನ ಹೆಸರನ್ನೂ, ಅದು ಗೊತ್ತಿಲ್ಲದಿದ್ದರೆ, ತಾಲೂಕಿನ ಹೆಸರನ್ನೂ ಬರೆಯಬೇಕು. ಅದಕ್ಕೂ ಸಂಶಯ ಬರುವ ಹಾಗಿದ್ದರೆ ಜಿಲ್ಹೆಯ ಹೆಸರನ್ನೂ, ಅವಶ್ಯ ತೋರಿದರೆ ಪ್ರಾಂತದ ಇಲ್ಲವೆ ಇಲಾಖೆಯ ಹೆಸರನ್ನೂ ಹಾಕುವರು. ಕಾರ್ಡಿನ ಹಿಂಬದಿಯಲ್ಲಿ ಪತ್ತೆ ಬರೆಯಲಿಕ್ಕೆ ಸಾತು ಉಳಿದ ಸ್ಥಳದಲ್ಲಿ ಒತ್ತಟ್ಟಿಗೆ ಪತ್ರದ ಮಜಕೂರನ್ನು ಬರೆಯಬಹುದು. ಪತ್ತೆ ಬರೆಯುವ ರೀತಿಯು ಮುಂದೆ ಕೊಟ್ಟ ಎರಡು ಉದಾಹರಣೆಗಳಿಂದ ತಿಳಿದು ಬರುವದು.

ದೊಡ್ಡ ಊರಪತ್ರ.

ರಾ॥ ರಾ॥ ರಾಮರಾವ ಹನಸಿ ಇವರಿಗೆ— ಜವಳಿಯಪೇಟೆ. ಮನೆಯ ನಂ॥ ೧೪೪. ಹುಬ್ಬಳ್ಳಿ.	ಟಿಕೇಟು.

ಸಣ್ಣ ಊರಪತ್ರ.

ಚಿ॥ ಗುಡ್ಡಭಟ್ಟ ಘೇವಂಡಲಿ ಇವರಿಗೆ— ಕರ್ಪೂರಗೇರಿಯಲ್ಲಿ. ಹಾವನೂರ. ಪೋ. ಹಾವೇರಿ, ಜಿ. ಧಾರವಾಡ.	ಟಿಕೇಟು.

ಪತ್ರ ಬರೆಯುವ ಕೆಲವು ಪದ್ಧತಿಗಳು.

ಗೃಹಸ್ಥರು ವೈದಿಕರಿಗೆ ಪತ್ರ ಬರೆಯುವದು.

೧. ವಿವೇಚನಕ್ರಮ:— ಭಿಕ್ಷುಕಬ್ರಾಹ್ಮಣರಿಗೆ, ವಿಶೇಷವಾಗಿ ವೇದಾಧ್ಯಯನ ಮಾಡಿದವರಿಗೆ ಪತ್ರ ಬರೆಯುವದಿದ್ದರೆ, ಒಕ್ಕಣಿಕೆಯನ್ನು "ಶ್ರೀಮದ್ಯಜನಾದಿಷಟ್ಕರ್ಮನಿರತ ವೇದಮೂರ್ತಿ ರಾಜಮಾನ್ಯ ರಾಜಶ್ರೀ" ಎಂದು ಬರೆಯಬೇಕು. ಶಾಸ್ತ್ರಿಗಳಿಗೆ ಬರೆಯುವದಿದ್ದರೆ, "ಶ್ರೀಮದ್ಯಜನಾದಿಷಟ್ಕರ್ಮನಿರತ ವೇದಶಾಸ್ತ್ರ ಸಂಪನ್ನ ರಾಜಮಾನ್ಯ ರಾಜಶ್ರೀ" ಎಂದು ಬರೆಯಬೇಕು. ತರುವಾಯ, ಈ ಒಕ್ಕಣಿಕೆಗಳ ಮುಂದೆ ಹೆಸರನ್ನು ಹಾಕಿ, ಆ ಹೆಸರಿನ ಮುಂದೆ "ಇವರ ಸನ್ನಿಧಿಗೆ" ಎಂದು ಬರೆದು, ಒಕ್ಕಣಿಕೆಯ ಸದರನ್ನು ಮುಗಿಸಬೇಕು.

ಅನಂತರ "ವಿದ್ಯಾರ್ಥಿ" ಅಥವಾ "ಸೇವಕ" ಎಂಬ ಶಬ್ದದಿಂದ

ಸಂಗತಿಯನ್ನು ಆರಂಭಿಸಿ, ಸ್ವಯಾರ್ಥಾರ್ಥವಾಗಿಯೂ, ಕಲ್ಯಾಣಸಂಪಾದನೆಗಾಗಿಯೂ "ಈತನು ಮಾಡುವ ಶಿರಸಾಷ್ಟಾಂಗನಮಸ್ಕಾರ. ವಿಜ್ಞಾಪನೆಗಳು—" ಎಂದು ಬರೆದು, ಕೆಳಗಿನ ನಮೂನೆಯಲ್ಲಿ ಬರೆದು ತೋರಿಸಿದ ಪದ್ಧತಿಯಂತೆ, ತನ್ನ ಕ್ಷೇಮವನ್ನು ತಿಳಿಸಿ, ಪ್ರತಿಕ್ಷೇಮದ ಬಯಕೆಯನ್ನು ಬರೆಯಬೇಕು. ತರುವಾಯ ಬರೆಯತಕ್ಕ ಸಂಗತಿಯನ್ನು ಪೂರ್ಣವಾಗಿ ಬರೆಯಬೇಕು.

ಇಷ್ಟಾದ ಬಳಿಕ ಪತ್ರದ ಕಡೆಯಲ್ಲಿ "ಹೆಚ್ಚಿಗೆ ಬರೆಯಲು ಶಕ್ತನಲ್ಲ" ಎಂದು ಬರೆದು ಪತ್ರವನ್ನು ಮುಗಿಸಬೇಕು.

೨. ಉದಾಹರಣ—

೧ ಲಗ್ನ ಪತ್ರ ಬರೆಯುವದು.

ಶ್ರೀಲಕ್ಷ್ಮೀ ವೆಂಕಟೇಶ ಪ್ರಸನ್ನ.

ಶ್ರೀಮದ್ಯಜನಾದಿಷಟ್ಕರ್ಮನಿರತ ವೇದಶಾಸ್ತ್ರಸಂಪನ್ನ ರಾಜಮಾನ್ಯ ರಾಜಶ್ರೀ ಪ್ರಭಾಕರಶಾಸ್ತ್ರಿಗಳವರ ಸನ್ನಿಧಿಗೆ—

ವಿದ್ಯಾರ್ಥಿ ಲಿಂಗೋಗಣೇಶ ಕುಲಕರ್ಣಿ ಈತನು ಮಾಡುವ ಶಿರಸಾಷ್ಟಾಂಗ ನಮಸ್ಕಾರಪೂರ್ವಕವಾದ ವಿಜ್ಞಾಪನೆಗಳು—

ಮಿತಿ ಸಾಧಾರಣನಾಮಸಂವತ್ಸರದ ಜ್ಯೇಷ್ಠಶುದ್ಧ ೧ ಯವರೆಗೆ ತಮ್ಮ ಆಶೀರ್ವಾದದಿಂದ ಸರ್ವರೂ ಕ್ಷೇಮದಿಂದ ಇದ್ದೇವೆ. ತಮ್ಮೆಲ್ಲರ ಕ್ಷೇಮವನ್ನು ಬರೆಸುವ ಕೃಪೆಯಾಗಬೇಕು.

ಈ ಶಾಲಿವಾಹನಶಕದ ನೇ ಸಾಧಾರಣನಾಮಸಂವತ್ಸರದ ಜ್ಯೇಷ್ಠವದ್ಯ ೨ ಗುರುವಾರದ ದಿವಸ ಗೋಧೂಳಿಯ ಲಗ್ನದಲ್ಲಿ ನನ್ನ ಕುಮಾರಿಯಾದ ಚಿ|| ಸೀತಕ್ಕನ ಲಗ್ನವನ್ನು ದೇವಗಿರಿಯಲ್ಲಿ ಮಾಡಬೇಕೆಂದು ನಿಶ್ಚಯವಾಗಿರುತ್ತದೆ. ಮ. ರಾ. ರಾ. ರಾಮರಾವ ಕುಲಕರಣಿ ಇವರ ಚಿರಂಜೀವರಾದ ಗೋವಿಂದರಾಯರನ್ನು ವರನಾಗಿ ಗೊತ್ತು ಮಾಡಿರುತ್ತೇನೆ. ಆದಕಾರಣ, ಈ ಶುಭಕಾರ್ಯಕ್ಕಾಗಿ ತಾವು ಸಕುಟುಂಬ ಸಪರಿವಾರವಾಗಿ ಎರಡು ದಿವಸ ಮುಂಚಿತವಾಗಿ ಬಂದು, ವಧೂವರರನ್ನು ಆಶೀರ್ವದಿಸಿ, ಸೇವಕನನ್ನು ಕೃತಾರ್ಥನನ್ನಾಗಮಾಡಬೇಕೆಂದು ಪ್ರಾರ್ಥಿಸುವೆನು. ಕಾರ್ಯವು ತಮ್ಮದಿರುವದರಿಂದ ಹೆಚ್ಚಿಗೆ ಬರೆಯಬಾರೆನು. ಪೂರ್ಣ ಕೃಪೆಯಿರಬೇಕು. ಇಂತೀ ವಿಜ್ಞಾಪನೆಗಳು.

೨. ಸಂಕ್ಷಿಪ್ತ ಪದ್ಧತಿಯ ಪತ್ರ.

ವೈದಿಕರ ಹೀನಸ್ಥಿತಿ.

ಶ್ರೀ. ಧಾರವಾಡ.

ತಾ॥ ೧೧-೬-೧೦

ವೇ. ಶಾ. ಸ. ರಾ. ರಾ. ಪ್ರಭಾಕರ ಶಾಸ್ತ್ರಿಗಳವರ ಸನ್ನಿಧಿಗೆ—

ಸೇವಕ ಲಿಂಗೋ ಗಣೇಶ ಕುಲಕರ್ಣಿ ಈತನು ಮಾಡುವ ಸಾ. ನ. ವಿಜ್ಞಾಪನೆಗಳು. ಈ ವರೆಗೆ ತಮ್ಮ ಆಶೀರ್ವಾದದಿಂದ ಸರ್ವರೂ ಕ್ಷೇಮ. ತಮ್ಮೆಲ್ಲರ ಕ್ಷೇಮವನ್ನು ಬರೆಸುವ ಕೃಪೆಯಾಗಬೇಕು.

ನಿಮ್ಮ ಚಿ. ಭೀಮಭಟ್ಟನು ನಮ್ಮ ತಂದೆಯ ಶ್ರಾದ್ಧಕ್ಕೆ ಬಂದಿದ್ದನು. ಆತನಿಗೆ ಶ್ರಾದ್ಧಪ್ರಯೋಗವು ಬರುತ್ತಿದ್ದಿಲ್ಲ. ಇನ್ನೊಬ್ಬ ಬ್ರಾಹ್ಮಣನಿಗೂ ಬರುತ್ತಿದ್ದಿಲ್ಲ. ಬರಿಯ ಬ್ರಾಹ್ಮಣಭೋಜನವನ್ನು ಮಾಡಿಸಬೇಕಾಯಿತು. ಬಹಳ ಅಸಮಾಧಾನವಾಯಿತು. ಬಹುತರ ಎಲ್ಲ ವೈದಿಕರ ಸ್ಥಿತಿಯು ಹೀಗೆಯೇ ಆಗಿರುವದು.

ವೈದಿಕವಿದ್ಯೆಗೆ ಆಶ್ರಯವಿಲ್ಲೆಂಬದು ನಿಜವು. ಆದರೆ ಮನುಷ್ಯನಿಗೆ ಯಾವದಾದರೊಂದು ವಿದ್ಯೆಯು ಬೇಕಷ್ಟೇ? ಇತ್ತ ವೈದಿಕ ವಿದ್ಯೆಯೂ ಇಲ್ಲ; ಅತ್ತ ಲೌಕಿಕ ವಿದ್ಯೆಯೂ ಇಲ್ಲ! ಇದೆಲ್ಲಿಯ ನ್ಯಾಯವು? ಓದಿದ ವೈದಿಕನಿಗೆ ತುಂಬಾ ಮಾನವುಂಟು. ಕೂಳಬಕ್ಕರಿಗೆ ಮಾತ್ರ ಮಾನವಿಲ್ಲ. ಬರಿಯ ಊಟ ಮಾಡುವದಷ್ಟೇ ವೈದಿಕನ ಕೆಲಸವಲ್ಲ. ಆತನು ಯಜಮಾನನ ಮನೆಯ ಧಾರ್ಮಿಕಕಾರ್ಯಗಳನ್ನು ಯಥಾವಿಧಿ ನಡಿಸಬೇಕಾಗುವದು; ಯಜಮಾನನಿಗೆ ಧರ್ಮವನ್ನು ಉಪದೇಶಿಸಬೇಕಾಗುವದು; ಸನ್ಮಾರ್ಗವನ್ನು ಬೋಧಿಸಬೇಕಾಗುವದು. ನಿಮ್ಮ ಭೀಮಭಟ್ಟನಿಗೆ ಲೌಕಿಕವಿದ್ಯೆಯೂ ಬರುವದಿಲ್ಲ; ವೈದಿಕ ವಿದ್ಯೆಯೂ ಬರುವದಿಲ್ಲ. ನಮ್ಮ ಪುರೋಹಿತರ ಮಗನ ಈ ಸ್ಥಿತಿಯನ್ನು ನೋಡಿ ನನಗೆ ಬಹಳ ವ್ಯಸನವಾಯಿತು.

ಕೆಲವು ವೈದಿಕಬ್ರಾಹ್ಮಣರು ಚಿಕ್ಕಂದಿನಲ್ಲಿ ತಮ್ಮ ಮಕ್ಕಳಿಗೆ ವಿದ್ಯೆ ಕಲಿಸುವದಿಲ್ಲ. ಮೊದಲು ಪರಾನ್ನದ ಸವಿಗಲಿಸುವರು. ಅವರನ್ನು ಭೂರಿಗೂ, ಲಗ್ನ ಮುಹೂರ್ತಗಳಿಗೂ ತಮ್ಮ ಸಂಗಡ ಊರೂರು ತಿರುಗಿಸು

ವೆರು. ಹೀಗೆ ಸ್ವಲ್ಪಕ್ಕಾಗಿ ಮಕ್ಕಳ ಬೆಲೆಯುಳ್ಳ ಆಯುಷ್ಯವನ್ನು ಹಾಳು ಮಾಡುವರು. ಇದು ನ್ಯಾಯವಲ್ಲ. ನಿಮ್ಮ ತಲೆಗೇ ವೈದಿಕ ವಿದ್ಯೆಯು ಮುಣುಗಬಾರದು. ನೀವು ಸ್ವಾಸ್ತಿಯುಳ್ಳವರು; ನಿಮ್ಮ ಭೀಮಭಟ್ಟನು ವೈದಿಕ ವಿದ್ಯೆ ಕಲಿತರೆ ನಡೆಯುವ ಹಾಗಿದೆ. ಆತನು ವಿದ್ವಾಂಸನೂ, ಕರ್ಮನಿಷ್ಠನೂ ಆದರೆ, ಹೋದಲ್ಲಿ ಮಾನ ಸಿಗುವದು. ಈಗಿನ ಕಾಲ ಕ್ಕೂ ನಿಮಗಿರುವ ಮಾನವೇ ಇದಕ್ಕೆ ಸಾಕ್ಷಿಯು.

ಪೂಜ್ಯರೇ, ಇದ್ದ ಸ್ಥಿತಿಯನ್ನು ಸಭಿಯಿಂದ ಬರೆದಿದ್ದೇನೆ. ಕ್ಷಮಿಸ ಬೇಕು. ವಿಶೇಷ ಬರೆಯಲು ಶಕ್ತನಲ್ಲ. ಇ. ವಿ.

ವೈದಿಕರು ಗೃಹಸ್ಥರಿಗೆ ಬರೆಯುವದು.

೧. ವಿವೇಚನಕ್ರಮ:–ಶಾಸ್ತ್ರಿಗಳು, ಭಿಕ್ಷುಕಬ್ರಾಹ್ಮಣರು, ವೇದಾ ಧ್ಯಾಯಿಗಳು ಮೊದಲಾದವರು ಗೃಹಸ್ಥರಿಗೆ ಪತ್ರವನ್ನು ಬರೆಯುವಾಗ "ಗೋಬ್ರಾಹ್ಮಣಪ್ರತಿಪಾಲಕ ರಾಜ್ಯಮಾನ್ಯರಾಜಶ್ರೀ" ಎಂದು, ಅಥವಾ "ಶ್ರೀಮಧ್ಧರಿಗುರುಭಕ್ತಿಪರಾಯಣ ರಾಜಮಾನ್ಯರಾಜಶ್ರೀ" ಎಂದು ಒಕ್ಕಣಿ ಕೆಯನ್ನು ಬರೆಯಬೇಕು. ತರುವಾಯ ಒಕ್ಕಣಿಕೆಯ ಮುಂದೆ ಹೆಸರ ನ್ನು ಹಾಕಿ, ಆ ಹೆಸರಿನ ಮುಂದೆ "ಇವರಿಗೆ" ಎಂದು ಬರೆದು, ಒಕ್ಕ ಣಿಕೆಯ ಸದರನ್ನು ಮುಗಿಸಬೇಕು.

ಅನಂತರ "ಆಶ್ರಿತ" ಎಂಬ ಶಬ್ದದಿಂದ ಸಂಗತಿಯನ್ನು ಆರಂಭಿ ಸಿ, ಕಲ್ಯಾಣಚಿಂತನೆಗಾಗಿ "ಮಾಡುವ ವೇದೋಕ್ತಾಶೀರ್ವಾದಗಳು" ಎಂ ದು ಬರೆದು, ಕೆಳಗಿನ ನಮೂನೆಯಲ್ಲಿ ತೋರಿಸಿದ ಪದ್ಧತಿಯಂತೆ ತನ್ನ ಕ್ಷೇಮವನ್ನು ತಿಳಿಸಿ, ಪ್ರತಿಕ್ಷೇಮದ ಇಚ್ಛೆಯನ್ನು ತೋರಿಸಬೇಕು. ತರುವಾಯ ಬರೆಯತಕ್ಕ ಸಂಗತಿಯನ್ನು ಪೂರ್ಣವಾಗಿ ಬರೆಯಬೇಕು.

ಇಷ್ಟಾದ ಬಳಿಕ ಪತ್ರದ ಕಡೆಯಲ್ಲಿ "ವಿಶೇಷ ಬರೆಯುವದೇನದೆ? ಇಂತಿ: ವೇದೋಕ್ತಾಶೀರ್ವಾದಗಳು" ಎಂದು ಬರೆದು ಪತ್ರವನ್ನು ಮುಗಿ ಸಬೇಕು.

೨. ಉದಾಹರಣ:–

ಮಗನುಹುಟ್ಟಿದ ಪತ್ರ.

ಶ್ರೀಲಕ್ಷ್ಮೀ ವೆಂಕಟೇಶ ಪ್ರಸನ್ನ.

ಗೋಬ್ರಾಹ್ಮಣಪ್ರತಿಪಾಲಕ ರಾಜಮಾನ್ಯರಾಜಶ್ರೀ ಲಿಂಗೋ ಗಣೇಶ

ಕುಲಕರಣಿ ಇವರಿಗೆ–

ನಿಮ್ಮ ಪುರೋಹಿತರಾದ ಪ್ರಭಾಕರ ಶಾಸ್ತ್ರಿಗಳು. ಮಾಡುವ ವೇದೋಕ್ತಾಶೀರ್ವಾದಗಳು. ವಿ:ತಿ ಸಾಧಾರಣ ನಾಮಸಂವತ್ಸರದ ಆಷಾಢ ಶು|| ೧. ಈ ವರೆಗೆ ಈಶಕೃಪೆಯಿಂದ ಸರ್ವರೂ ಕ್ಷೇಮದಿಂದ ಇದ್ದೇವೆ. ನಿಮ್ಮ ಕ್ಷೇಮವನ್ನು ಮೇಲೆಮೇಲೆ ಬರಿಸುತ್ತಿರಬೇಕು.

ಇಲ್ಲಿ ನಮ್ಮ ಮಗಳಾದ ಚಿ|| ಕುಂ|| ಸೌಭಾಗ್ಯವತಿ ಸುಬ್ಬಕ್ಕನು ಈ ಸಾಧಾರಣನಾಮ ಸಂವತ್ಸರದ ಜ್ಯೇಷ್ಠ ವದ್ಯ ದ್ವಾದಶಿಯ ದಿವಸ ಹಗಲು ನಾಲ್ಕು ತಾಸಿನ ಸಿಂಹಲಗ್ನದಲ್ಲಿ ಸುಖದಿಂದ ಗಂಡು ಮಗುವನ್ನು ಹೆತ್ತಿರುತ್ತಾಳೆ. ಕೂಸೂ ಬಾಣಂತಿಯೂ ಕ್ಷೇಮದಿಂದ ಇರುವರು. ಇದೇ ಆಷಾಢ ಶುದ್ಧ ೭ಯ ದಿವಸ ಮಂಗಲಸ್ನಾನವಾಗುವದರಿಂದ, ನಾಮಕರಣ ಮಹೋತ್ಸವವನ್ನು ನೆರವೇರಿಸತಕ್ಕದ್ದದೆ. ತಾವು ಕುಟುಂಬಸಹಿತವಾಗಿ ಬಂದು ಈ ಮಂಗಲ ಕಾರ್ಯವನ್ನು ಸಾಂಗ ಮಾಡಿಸಬೇಕು. ಪ್ರಾಜ್ಞರಿಗೆ ವಿಶೇಷ ಬರೆಯತಕ್ಕದ್ದೇನದೆ? ಲೋಭವಿರಬೇಕು. ಇತಿ ವೇದೋಕ್ತಾಶೀರ್ವಾದಗಳು.

---

೨. ಸಂಕ್ಷೇಪದ್ಧತಿಯ ಪತ್ರ.

ಗೃಹಸ್ಥರ ತಿಳಿಗೇಡಿತನ.

ಬಂಕಾಪುರ, ಆಷಾಢ|| ಶು. ೩.

ಗೋ. ಬ್ರಾ. ಪ್ರ. ರಾ. ರಾ. ಲಿಂಗೋ ಗಣೇಶ ಕುಲಕರ್ಣಿ ಇವರಿಗೆ:–

ನಿಮ್ಮ ಪುರೋಹಿತರಾದ ಪ್ರಭಾಕರ ಶಾಸ್ತ್ರಿಗಳು ಮಾಡುವ ವೇದೋಕ್ತಾಶೀರ್ವಾದಗಳು. ಈ ವರೆಗೆ ಈಶಕೃಪೆಯಿಂದ ಉಭಯಕ್ಷೇಮ ತರುವಾಯ:—

ನೀವು ನಮ್ಮ ಚಿ|| ಭೀಮಭಟ್ಟನ ವಿಷಯವಾಗಿ ಬರೆದ ಪತ್ರವು ಮುಟ್ಟಿತು. ನಿಮ್ಮ ಹಿತದ ಉಪದೇಶಕ್ಕೆ ತುಂಬಾ ಆನಂದಪಟ್ಟೆವು. ನಿಮ್ಮ ಪತ್ರದಿಂದ ನಮ್ಮ ಹುಡುಗನು ನಾಚಿಕೊಂಡಿರುತ್ತಾನೆ. ಆತನ ವೈದಿಕವ್ಯಾಸಂಗವು ಸಾಗಿರುವದು. ಆದರೆ, ನಾವು ಸುಜ್ಞರಾದ ಗೃಹಸ್ಥರ ಎಚ್ಚರಿಕೆಗಾಗಿ ಎರಡು ಮಾತುಗಳನ್ನು ಬರೆಯುವೆವು. ಅವನ್ನು ಗೃಹಸ್ಥ

ಕು ನೆನಪಿಡುವದು ಹಿತಕರವು. ಈಗಿನ ಕಾಲದಲ್ಲಿ ವೈದಿಕರೂ ಗೃಹಸ್ಥರೂ ಇಬ್ಬರೂ ವಿಚಾರ ಬಿಟ್ಟಿರುವರು. ವೈದಿಕರಾದ ನಾವು ವಿದ್ಯಾಹೀನರಾದೆವು. ನಮ್ಮ ಪೌರೋಹಿತ್ಯದ ಮಾನವು ಹಾಳಾಗಿ ಹೋಯಿತು. ಪುರೋಹಿತರು ಯಜಮಾನರ ಮನೆಯಲ್ಲಿ ದೇವರಪೂಜೆ ಮಾಡಬೇಕಾಗುವದು; ಎಲೆ ದೊನ್ನೆ ನೋಡಬೇಕಾಗುವದು; ಹೊತ್ತು ಬಿದ್ದರೆ ನೀರು ತರಬೇಕಾಗುವದು; ಅಡಿಗೆ ಮಾಡಬೇಕಾಗುವದು; ಅವಸರದ ಹೊತ್ತಿನಲ್ಲಿ ಹುಡುಗರ * * * ತೊಳೆಯಬೇಕಾಗುವದು! ಶ್ರೀರಾಮನಂಥ ಸಾರ್ವಭೌಮರಾಜರು, ಕುಲಪುರೋಹಿತರನ್ನು ದೇವರಂತೆ ಪೂಜಿಸುವ ಕಾಲವೆತ್ತ, ಈಗಿನ ಕುಲಪುರೋಹಿತರು ಯಜಮಾನನ ಮನೆಯಲ್ಲಿ ಆಳುಗಳಂತೆ ದುಡಿಯುವ ಕಾಲವೆತ್ತ!!

ಈಗಿನ ಪುರೋಹಿತರ ಮಟ್ಟನ್ನು ನಾವು ಬಲ್ಲೆವು. ಯಜಮಾನರ ಬಲವನ್ನೂ ಅರಿತಿರುವೆವು. ಈಗಿನ ಪುರೋಹಿತರಿಗೆ ಹಿಡುಬರಹ ಬೇಡ; ಯಜಮಾನರಿಗೆ ದುಡ್ಡು ಉಚ್ಚುವದು ಬೇಡ. ಪುರೋಹಿತರಿಗೆ ಮಡ್ಡ ಗೃಹಸ್ಥರು ಬೇಕು; ಗೃಹಸ್ಥರಿಗೆ ಮನೆಗೆಲಸ ಮಾಡುವ ಅಗ್ಗ ಪುರೋಹಿತರು ಬೇಕು. ನಿಮ್ಮಂಥ ಒಬ್ಬಿಬ್ಬ ಗೃಹಸ್ಥರು ಇದಕ್ಕೆ ಅಪವಾದವಾಗಿರಬಹುದು. ಕಲಿತ ಪುರೋಹಿತನು ಸ್ವಾಭಿಮಾನಿಯೂ, ಮಹತ್ವಾಕಾಂಕ್ಷಿಯೂ ಇರುವನು. ಅಂಥವನನ್ನು ಕವಡಿಚುಂಬಕರಾದ ದುರಭಿಮಾನದ ಗೃಹಸ್ಥರು ಸಮಾಧಾನ ಪಡಿಸಲಾರರು. ಅಗ್ಗದಾಸೆಗೆ ಮುಗ್ಗಜೋಳವೆಂಬಂತೆ ಇಂಥವರಿಗೆ ಕಲಿತ ಪುರೋಹಿತರು ಹ್ಯಾಗೆ ಸಿಗಬೇಕು!

ಈ ಸ್ಥಿತಿಯು ಒಳ್ಳೇಯದಲ್ಲ. ಪುರೋಹಿತರು ಯಜಮಾನರ ಹಿತಚಿಂತಕರಾಗಬೇಕು; ಯಜಮಾನರು ಪುರೋಹಿತರನ್ನು ಭಕ್ತಿಯಿಂದ ಮನ್ನಿಸಬೇಕು. ಪುರೋಹಿತರು ಸುಶೀಲರೂ, ಧರ್ಮತತ್ಪರರೂ, ವಿದ್ವಾಂಸರೂ ಆಗಬೇಕು. ಯಜಮಾನರು ಧರ್ಮಶ್ರದ್ಧೆಯುಳ್ಳವರೂ ನ್ಯಾಯದ ಗಳಿಕೆಗೆ ಮೆಚ್ಚಿದವರೂ, ದೊಡ್ಡ ಮನಸ್ಸಿನವರೂ ಆಗಬೇಕು. ಅವರು ತಮ್ಮ ಯೋಗ್ಯತೆಯಂತೆ ಪುರೋಹಿತರಿಗೆ ಆಶ್ರಯ ಕೊಡಬೇಕು; ಕಲಿಯದವರಿಗೆ ಆಶ್ರಯವನ್ನೇ ಕೊಡಬಾರದು. ಅಂದರೆ, ಪುರೋಹಿತರ ಯೋಗ್ಯತೆಯು ಹೆಚ್ಚಿದರೆ ಹೆಚ್ಚಬಹುದು.

ವಿಶೇಷ ಬರೆಯುವದೇನದೆ? ಉಭಯಪಕ್ಷದ ಕಲ್ಯಾಣದ ಈ ಸ್ಥಿತಿಯು ಉಡಗುತ್ತ ಹೋಗುವದೇ ಸುಲಕ್ಷಣವು ಲೋಭವಿರಬೇಕು. ಇ. ಅ.

[ವೆ. ತಿ. ಕುಲಕರ್ಣಿ.]

ಶಾಲೋಪಯುಕ್ತ ಲೇಖಗಳು.

ಅವಶ್ಯಕತೆಯೂ ದುಂದುಗಾರಿಕೆಯೂ.

(ಕಬ್ಬಿಣ.)

ಕಬ್ಬಿಣವು ಪೃಥ್ವಿಯಲ್ಲಿ ಎಲ್ಲ ಕಡೆಯಲ್ಲಿಯೂ ಇರುವದು. ಕಬ್ಬಿಣವು ಸಿಗದಂಥ ದೇಶವು ಅಪರೂಪ. ಇಷ್ಟೇ ಅಲ್ಲ; ಪೃಥ್ವಿಯಲ್ಲಿರುವ ಯಾವತ್ತು ಪದಾರ್ಥಗಳಲ್ಲಿ ಅಲ್ಪಸ್ವಲ್ಪ ಪ್ರಮಾಣದಿಂದ ಕಬ್ಬಿಣದ ವ್ಯಾಪ್ತಿಯು ಇದ್ದೇ ಇರುತ್ತದೆ. ಪ್ರಾಣಿಗಳ ಮೈಯಲ್ಲಿಯ ರಕ್ತದಲ್ಲಿ ಸಹ ಕಬ್ಬಿಣದ ಅಂಶವು ಇರುತ್ತದೆಂದು ಗೊತ್ತಾಗಿದೆ. ಇದು ಈಶ್ವರನ ಯೋಜನೆಯೇ ಸರಿ. ಉಳಿದ ಧಾತುಗಳಿಗಿಂತ ಕಬ್ಬಿಣವು ಮನುಷ್ಯನ ಯಾವತ್ತು ಉದ್ಯೋಗಗಳಲ್ಲಿ ಹೆಚ್ಚು ಅವಶ್ಯಕವೆಂದು ಹೇಳಬಹುದು. ಯಾಕೆಂದರೆ, ಒಂದಾನೊಂದು ದೇಶದಲ್ಲಿ ಕಬ್ಬಿಣವನ್ನುಳಿದು ಎಲ್ಲ ಧಾತುಗಳು ಇಲ್ಲವೆಂದು ಕಲ್ಪಿಸಿದರೂ ಆ ದೇಶದೊಳಗಿನ ಜನರ ಉದ್ಯೋಗಗಳಿಗೆ ಯಾವ ಪ್ರಕಾರದ ಅಡ್ಡಿಯೂ ಉಂಟಾಗಲಿಕ್ಕಿಲ್ಲ. ಆದರೆ ಕಬ್ಬಿಣವು ಇಲ್ಲದಂತಾದರೆ ಮಾತ್ರ ಮನುಷ್ಯನ ಬಹುತರ ಯಾವತ್ತು ಉದ್ಯೋಗಗಳೂ ಕಟ್ಟಾಗಿ, ಮನುಷ್ಯನು ಕಾಡುಸ್ಥಿತಿಗೆ ಬರಬಹುದು. ಕಬ್ಬಿಣವಿಲ್ಲದಿದ್ದರೆ ಉಗೆಹಡಗ, ಉಗೆಬಂಡಿ, ಛಾಪಖಾನೆ, ಕೃಷಿಕರ್ಮ ಮುಂತಾದವುಗಳೂ, ಬಡಿಗ, ಕಮ್ಮಾರ, ಅಕ್ಕಸಾಲಿ, ಸಿಂಪಿಗ, ಸಮಗಾರ ಮೊದಲಾದ ಕಸಬುದಾರರ ಹೋರೆಗಳೂ ಒಮ್ಮೆಲೇ ಕಟ್ಟಾಗಿ ಹೋಗುವವು. ಬಂಗಾರ ಬೆಳ್ಳಿಗಳ ಸಂಗ್ರಹವು ಜನರಲ್ಲಿ ಬೇಕಾದಷ್ಟು ಇದ್ದರೂ ಅವುಗಳಿಂದ ಮೇಲೆ ಹೇಳಿದ ಉದ್ಯೋಗಗಳಿಗೆ ಸ್ವಲ್ಪವಾದರೂ ಉಪಯೋಗವಾಗಲಿಕ್ಕಿಲ್ಲ. ಯಂತ್ರಗಳ ಚಕ್ರಗಳು, ಸುತ್ತಿಗೆ, ಉಳಿ, ಬಾಚಿ, ಗುದ್ದಲಿ, ಸೂಜಿ ಮೊದಲಾದ ಅನೇಕ ಸಾಧನಗಳು ಕಬ್ಬಿಣದಿಂದಾದಷ್ಟು ಪ್ರಯೋಜನಕರವಾಗಿ ಉಳಿದ ಧಾತುಗಳಿಂದ ಆಗಲಿಕ್ಕಿಲ್ಲ. ಇದನ್ನು ತಿಳಿದೇ ದೇವರು ಈ ಜಗತ್ತಿನಲ್ಲಿ ಕಬ್ಬಿಣವನ್ನು ಎಲ್ಲ ಕಡೆಯಲ್ಲಿಯೂ ನಿರ್ಮಿಸಿದ್ದಾನೆಂದು ತೋರುತ್ತದೆ.

ಇದರ ಮೇಲಿಂದ ಜ್ಞಾನಿಗಳು ಅನ್ನುವದೇನಂದರೆ, ಮನುಷ್ಯನ ನಿರ್ವಾಹಕ್ಕೆ ಅತ್ಯಂತ ಅವಶ್ಯಕವಾದ, ಅಂದರೆ ಯಾವ ವಸ್ತುವಿನ ಹೊರ್ತು ಮನುಷ್ಯನ ನಿರ್ವಾಹವೇ ಸಾಗುವದಿಲ್ಲವೋ, ಅಂಥ ಯಾವತ್ತು ವಸ್ತುಗಳು ನಿರಾಯಾಸದಿಂದ ಮನುಷ್ಯನ ಕೈಗೆ ಸಿಗುವಂತೆ ದೇವರು ಮಾಡಿದ್ದಾನೆ. ಹೀಗಿದ್ದು, ಈ ಸಂಸಾರ ಸಾಗಿಸುವಲ್ಲಿ ಮನುಷ್ಯನಿಗೆ ಅನೇಕ ತೊಂದರೆಗಳು ಪ್ರಾಪ್ತವಾಗುತ್ತವೆ. ಹೀಗೆ ಯಾಕೆ ಆಗಬೇಕು? ಎಂಬದರ ಕಾರಣವನ್ನು ಶೋಧಿಸಲು ತಿಳಿಯುವದೇನಂದರೆ, ಮನುಷ್ಯನಿಗೆ ಪ್ರಪಂಚಕ್ಕೆ ಅವಶ್ಯವಾದ ಪದಾರ್ಥಗಳನ್ನು ಸಂಪಾದಿಸುವದು ಕಷ್ಟವಾಗುವದಿಲ್ಲ. ಐಷಆರಾಮಿನ ಪ್ರಚಾರವು ಮೆಲ್ಲಮೆಲ್ಲನೆ ಹಬ್ಬುತ್ತ ನಡೆದದ್ದರಿಂದ ಆ ಪ್ರಚಾರವನ್ನು ಹಿಂಬಾಲಿಸಿ ಕಷ್ಟಬಡಬೇಕಾಗುತ್ತದೆ. ಮರ್ಯಾದೆಯ ರಕ್ಷಣೆಗೂ, ಶೀತೋಷ್ಣಗಳ ನಿವಾರಣೆಗೂ, ಸಾದಾ ಮತ್ತು ಉರುಟು ಬಟ್ಟೆಗಳಾದರೆ ಸಾಕು. ಇಂಥ ಬಟ್ಟೆಗಳಿಗೆ ಬೆಲೆ ಕಡಿಮೆಬೀಳುವದರಿಂದ ಕೊಂಡುಕೊಳುವದಕ್ಕೆ ಬಹಳ ತೊಂದರೆ ಬೀಳುವದಿಲ್ಲ. ಆದರೆ ಬಟ್ಟೆಗಳು ತೀರ ತಿಳುವಾದಂಥವೂ, ಚಿತ್ರ ವಿಚಿತ್ರಗಳುಳ್ಳಂಥವೂ, ಮೈಗೆ ಮೆತ್ತಗೆ ಹತ್ತುವಂಥವೂ ಇರಬೇಕೆಂಬ ಐಷಆರಾಮಿನ ಇಚ್ಛೆಯು ಮನುಷ್ಯನ ಮನಸಿನಲ್ಲಿ ಬೆಳೆಯುತ್ತ ನಡೆದದ್ದರಿಂದ ಈ ಪ್ರಬಲವಾದ ಇಚ್ಛೆಯ ಸಮಾಧಾನಾರ್ಥವಾಗಿ ಅರಿವೆಗಳಿಗೆ ಬೆಲೆಯನ್ನು ಹೆಚ್ಚೆಚ್ಚು ಕೊಡಬೇಕಾಗುತ್ತದೆ. ಇಂಥ ಹೆಚ್ಚಿನ ಖರ್ಚೇ ಮನುಷ್ಯನ ಕಷ್ಟಕ್ಕೆ ಕಾರಣವಾಗಿರುತ್ತದೆ. ಹಚ್ಚಡವನ್ನು ಹೊತ್ತುಕೊಂಡು ಮಲಗಿದ ಮನುಷ್ಯನ ನಿದ್ರೆಯ ಸುಖಕ್ಕೂ ಬಹು ಬೆಲೆಯುಳ್ಳ ಶಾಲುಜೋಡಿಯನ್ನು ಹೊತ್ತುಕೊಂಡು ಮಲಗಿದ ಮನುಷ್ಯನ ನಿದ್ರೆಯ ಸುಖಕ್ಕೂ ಏನೂ ಅಭ್ಯಂತರವಿಲ್ಲ. ಇದರಂತೆಯೇ ತಿಂಬುಂಬುವ ಪದಾರ್ಥಗಳ ವಿಷಯವಾಗಿಯೂ, ಭಾಂಡೆ ಪಾತ್ರೆಗಳ ವಿಷಯವಾಗಿಯೂ, ಮನೆಮಾರುಗಳ ವಿಷಯವಾಗಿಯೂ ತಿಳಿಯತಕ್ಕದ್ದು. ಹ್ಯಾಗಂದರೆ ರೊಟ್ಟೀ ಹಿಂಡಿ ತಿಂದರೂ ಹೊಟ್ಟೆತುಂಬುತ್ತದೆ; ಹೋಳಿಗೆ ತುಪ್ಪದಿಂದಲೂ ಹೊಟ್ಟೆತುಂಬುತ್ತದೆ. ಸಿತ್ತಾಳಿಯ ಪೇಲೆಯಿಂದ ನೀರುಕುಡಿದರೂ ನೀರಡಿಕೆ ಹೋಗುತ್ತದೆ; ಬೆಳ್ಳಿಯ ಪೇಲೆಯಿಂದ ಕುಡಿದರೂ ನೀರಡಿಕೆ ಹೋಗುತ್ತದೆ. ಸಣ್ಣ ಮನೆಯಲ್ಲಿದ್ದರೂ ಸುಖವುಂಟಾಗುತ್ತದೆ; ದೊಡ್ಡ ರಾಜವಾಡೆಯಲ್ಲಿದ್ದರೂ ಸುಖವಾಗುತ್ತದೆ. ಮುಖ್ಯ

ಉಪಯೋಗವೆಲ್ಲ ಒಂದೇ. ಐಷಆರಾಮಿನ ವಸ್ತುಗಳನ್ನು ದೊರಕಿಸುವ ದಕ್ಕೋಸ್ಕರ ಮಾತ್ರ ಕಷ್ಟಬಡಬೇಕಾಗುತ್ತದೆ. ಇದೇ ಜಗತ್ತಿನಲ್ಲಿ ಮುಖ್ಯವಾದ ಕಷ್ಟವು.

ಮನುಷ್ಯನ ಸ್ವಭಾವದಲ್ಲಿ ಒಂದು ದುಷ್ಟಪ್ರವೃತ್ತಿಯು ಮನೆಮಾಡಿ ರುತ್ತದೆ. ಅದೇನಂದರೆ, ಮೊದಲು ಐಷಆರಾಮಿನ ದೆಸೆಯಿಂದ, ಅಥವಾ ಮೋಜಿನ ದೆಸೆಯಿಂದ ಮಾಡುವ ಸಂಗತಿಗಳು ಮುಂದೆ ಬರಬರುತ್ತ ಆವಶ್ಯಕವಾಗಿ ತೋರಹತ್ತುತ್ತವೆ. ಈಗ ನೋಡಿರಿ, ನಮ್ಮ ದೇಶದಲ್ಲಿ ಚಹಾದ ರೂಢಿಯು ೨೦-೨೫ ವರ್ಷಗಳ ಹಿಂದೆ ಏನೂ ಇದ್ದಿಲ್ಲ. ಯುರೋಪೀಯ ಜನರ ಅನುಕರಣದಿಂದ ಅದು ಐಷಆರಾಮವೆಂದು ಮೊದಲು ಶ್ರೀಮಂತರಲ್ಲಿ ತಲೆದೋರಹತ್ತಿತು. ಅದು ಹಾಗೇ ಬೆಳೆಯುತ್ತ ಬೆಳೆಯುತ್ತ, ಈಗ ದಿನಾಲು ನಾಲ್ಕಾಣೆ ಕೂಲಿಯನ್ನು ಸಂಪಾದಿಸುವ ಕೂಲಿಕಾರನು ಕೂಡ ಮುಂಜಾನೆ ಎದ್ದ ಕೂಡಲೆ ಚಹಾದ ಒಂದಾದರೂ "ಕಪ್ಪ" ತೆಗೆದುಕೊಳ್ಳದೆ ಹೋರಗೆ ಸೊಗಸಾಗುವದಿಲ್ಲವೆನ್ನುವನು. ಈ ಚಹಾದ ವ್ಯಸನದಿಂದ ಸಾವಿರಾರು ರೂಪಾಯಿಗಳ ಕಾಜಿನ ಪಾತ್ರೆಗಳು ಒಡೆದು ಹೋಗುತ್ತವೆ. ಚಹಾ ಇದು ಮೊದಮೊದಲು ಐಷಆರಾಮದ ಪೇಯವಾಗಿದ್ದು, ಈಗ ಅತ್ಯಂತ ಆವಶ್ಯಕವಾಗಿ ಕೂತಿತು. ಇದರಂತೆ ಉಳಿದ ವ್ಯವಹಾರಗಳಲ್ಲಿ ಸಹ ಮೆಲ್ಲಮೆಲ್ಲಗೆ ನಡೆದಿರುತ್ತದೆ.

ಈ ಪ್ರವೃತ್ತಿಯು ಬೆಳೆಯುತ್ತ ಬೆಳೆಯುತ್ತ, ಮನುಷ್ಯನ ಹಾಗು ರಾಷ್ಟ್ರದ ನಾಶಕ್ಕೆ ಕಾರಣೀಭೂತವಾಗಿರುತ್ತದೆಂಬ ಸಿದ್ಧಾಂತವು ಅನುಭ ವಕ್ಕೆ ಬಂದದ್ದರಿಂದ ಸಾಧುಗಳು ಇದರ ವಿಷಯಕ್ಕೆ ಬಹಳ ಎಚ್ಚರಿಕೆ ಯನ್ನು ಪಡಬೇಕೆಂದು ಹೇಳುತ್ತಾರೆ. ಗರಜು ಎಷ್ಟು ಬೇಕು, ಅಷ್ಟು ಆಕುಂಚನವಾಗುತ್ತದೆ; ಬೆಳೆಯಗೊಟ್ಟರೆ ಬೇಕಾದಷ್ಟು ಬೆಳೆಯುತ್ತದೆ. ಇದರ ವಿಷಯಕ್ಕೆ ಕೆಲವು ದೃಷ್ಟಾಂತಗಳು:—

ಪ್ರಸಿದ್ಧ ತತ್ವಜ್ಞಾನಿಯಾದ ಸಾಕ್ರೇಟೀಸನು ಸಂತೆಯಲ್ಲಿ ಹೋಗು ವಾಗ್ಗೆ ಅಲ್ಲಿದ್ದ ನೂರಾರು ಪದಾರ್ಥಗಳನ್ನು ನೋಡಿ "ನನಗೆ ಅವಶ್ಯವಿಲ್ಲದ ಪದಾರ್ಥಗಳು ಎಷ್ಟು ಅವೆ ಇವು!" ಎಂಬ ಆಶ್ಚರ್ಯಯುಕ್ತ ಉದ್ಗಾರವನ್ನು ತೆಗೆದನು.

ಇಂಗ್ಲಂಡದ ಮುಖ್ಯ ಮಂತ್ರಿಯಾಗಿದ್ದ ಪ್ರಸಿದ್ಧ ಗ್ಲಾಡಸ್ಟನ್ ಸಾಹೇ

ಒಂದು ಒಂದು ಪ್ರಸಂಗದಲ್ಲಿ ಉಗೆಬಂಡಿಯ ೩ನೇ ವರ್ಗದ ಡಬ್ಬಿಯಲ್ಲಿ ಕೂತು ಪ್ರವಾಸ ಮಾಡುವಾಗ್ಗೆ, ಒಬ್ಬನು ಸಾಹೇಬರನ್ನು ಕುರಿತು "ತಾವು ೩ನೇ ವರ್ಗದ ಡಬ್ಬಿಯಲ್ಲಿ ಯಾಕೆ ಪ್ರವಾಸ ಮಾಡುತ್ತೀರಿ!" ಎಂದು ಕೇಳ ಲಾಗಿ, ಸಾಹೇಬರು—"೪ನೇ ವರ್ಗದ ಡಬ್ಬಿ ಇಲ್ಲದ್ದರಿಂದ" ಎಂದು ಉತ್ತರ ಕೊಟ್ಟರು.

ಟ್ರಾನ್ಸವಾಲದ ಪ್ರಜಾಸತ್ತಾಕ ರಾಜ್ಯದ ಅಧ್ಯಕ್ಷರಾಗಿದ್ದ ಕ್ರೂಗರ ಸಾಹೇಬರ ಮನೆಯಲ್ಲಿ ಚಿತ್ರ ವೈಚಿತ್ರ್ಯವೆಂಬುವದು ಎಲ್ಲಿಯೂ ಇದ್ದಿಲ್ಲ. ಹಾಗು ಅವರು ಸಾಧಾರಣ ಮನುಷ್ಯರಂತೆ ಉಡುಪುಗಳನ್ನು ಧರಿಸುತ್ತಿದ್ದರು; ತೀರ ಬಡತನದ ಆಹಾರವನ್ನು ತಿನ್ನುತ್ತಿದ್ದರು; ಅವರು ಕೇವಲ ನಿರ್ವಾಹದ ಕಡೆಗೆ ದೃಷ್ಟಿ ಇಟ್ಟು ಯಾವತ್ತು ವ್ಯವಹಾರಗಳನ್ನು ಮಾಡುತ್ತಿದ್ದರು; ಐಷಆರಾಮ ಬೆಳೆಸುತ್ತಿದ್ದಿಲ್ಲ.

ದುಂದುಗಾರಿಕೆಯ ಬೆಳವಣಿಗೆಯು ಬಿಕ್ಕೆಯ ಪೂರ್ವಚಿಹ್ನವಾಗಿರುತ್ತದೆಂದು ಪ್ರಾಚೀನ ಕಾಲದಿಂದಲೂ ದೊಡ್ಡದೊಡ್ಡ ಗೃಹಸ್ಥರು ತಿಳಿಯುತ್ತ ಬಂದಿರುತ್ತಾರೆ. ಈ ನಿಯಮವು ಮನುಷ್ಯರಿಗೆ ಇದ್ದಂತೆ ರಾಷ್ಟ್ರಕ್ಕೂ ಇರುತ್ತದೆ. "सुखा अंग देउनये" ಎಂಬ ಉಕ್ತಿಯನ್ನು ಶ್ರೀ ಸಮರ್ಥ ರಾಮದಾಸ ಸ್ವಾಮಿಗಳು ಅಂದಿರುತ್ತಾರೆ. ಮನುಷ್ಯನು ಚೈನಬಾಜಿಗೆ ಬಿದ್ದನೆಂದರೆ, ತೀವ್ರವಾಗಿಯೇ ಕಷ್ಟಕ್ಕೆ ಗುರಿಯಾಗುತ್ತಾನೆಂಬದನ್ನು ಬೇರೆ ಹೇಳುವ ಕಾರಣವಿಲ್ಲ. ಇದೇ ಅವಸ್ಥೆಯು ರಾಷ್ಟ್ರಕ್ಕೂ ಬರುತ್ತದೆ. ಪ್ರಾಚೀನ ಕಾಲದಲ್ಲಿ ಒಳ್ಳೆ ಬಲಾಢ್ಯ ರಾಷ್ಟ್ರಗಳಾಗಿದ್ದ ಗ್ರೀಕ, ರೋಮನ್ ರಾಜ್ಯಗಳು ಅಲ್ಲಿಯ ರಾಜ್ಯಕರ್ತರು ಮಿತಿ ಮೀರಿದ ದುಂದುಗಾರರಾದ್ದರಿಂದಲೇ ನಾಶವಾದವೆಂಬದನ್ನು ಇತಿಹಾಸವು ಸಾರಿ ಹೇಳುತ್ತದೆ. ಇತ್ತ ಕಡೆಗೆ ನಮ್ಮ ಭರತಖಂಡದಲ್ಲಿ ಆಳಿದ ಮೋಗಲ್, ಮಹಾರಾಷ್ಟ್ರರ ರಾಜ್ಯಗ್ಳಾದರೂ ಆ ಆ ಅರಸರಲ್ಲಿ ದುಂದುಗಾರಿಕೆಯು ಮಿತಿಮೀರಿ ಬೆಳೆದದ್ದರಿಂದಲೇ ಲಯವಾದವೆಂದು ಇತಿಹಾಸದಿಂದ ತಿಳಿಯುತ್ತದೆ. ಈ ತತ್ವವನ್ನು ಅಫಗಾಣಿಸ್ತಾನದ ಮಾಜೀಅಮೀರನಾಗಿದ್ದ ಅಬ್ದುಲ್ ರಹಿಮಾನನು ತಿಳಿದವನಾಗಿದ್ದದರಿಂದಲೇ, ಅರಸನಾಗುವದಕ್ಕೆ ಮುಂಚೆ ಬಹಳ ಕಷ್ಟ ಸಹಿಸಿದವನಾಗಿದ್ದರೂ, ಅರಸನಾದ ಮೇಲೆ ಸುಖಕ್ಕೆ ಎಳ್ಳಷ್ಟಾದರೂ ಮೋಹಿಸಲಿಲ್ಲ. ಆದ್ದರಿಂದ ಅವನ ರಾಜ್ಯದಲ್ಲಿ ಸುಖಸಮೃದ್ಧಿಗಳು ನೆಲೆಗೊಂಡವು.

ಆದ ಕಾರಣ, ವ್ಯಕ್ತಿಯೇ ಆಗಲಿ, ಸಮಾಜವೇ ಆಗಲಿ, ದುಂದುಗಾರಿಕೆಯ ಹವ್ಯಾಸಕ್ಕೆ ಬೀಳಬಾರದು. ಕಷ್ಟದಲ್ಲಿರುವವರಿಗಂತೂ ದುಂದುಗಾರಿಕೆಯು ವಿಷಸಮಾನವಿರುತ್ತದೆಂಬದನ್ನು ಮರೆಯ ಕೂಡದು. ಹೋಳಿಗೆ ಸಿಗುವಂತಿದ್ದರೆ ಅದನ್ನು ಬಿಟ್ಟು ರೊಟ್ಟೀ ತಿನ್ನಬೇಕೆಂದೂ, ಇರಲಿಕ್ಕೆ ಚಲೋ ಮನೆ ಸಿಗುತ್ತಿದ್ದು, ಬುದ್ಧಿಪೂರ್ವಕವಾಗಿ ಗುಡಿಸಲಲ್ಲಿರಬೇಕೆಂದೂ ನಮ್ಮ ಮಾತಿನ ಆಶಯವಿಲ್ಲ. ಮೃಷ್ಟಾನ್ನ ಉಣ್ಣಲಿ, ದೊಡ್ಡ ಮನೆಯಲ್ಲಿರಲಿ, ಪ್ರಸಂಗ ಬಂದಾಗ್ಗೆ ಮಾತ್ರ ರೊಟ್ಟೀ ತಿನ್ನಲಿಕ್ಕೂ, ಗುಡಿಸಲಲ್ಲಿರಲಿಕ್ಕೂ ಸಿದ್ಧವಾಗಿರಲಿಕ್ಕೆ ಬೇಕು; ಇದಕ್ಕೆ ಹಿಂಜರಿಯಬಾರದು. ಮೊದಲನೇ ಬಾಜೀರಾವ ಪೇಶ್ವೆಯು ಯುದ್ಧಕ್ಕೆ ಹೋದಾಗ್ಗೆ, ಪ್ರಸಂಗ ಬಿದ್ದರೆ ಕುದುರೆಯ ಮೇಲೆಯೇ ಹೊಲದೊಳಗಿನ ಬೆಳಸಿಗಳನ್ನು ತನ್ನ ಕೈಯಿಂದಲೇ ತಿಕ್ಕಿಕೊಂಡು ಮುಕ್ಕುತ್ತಿದ್ದನಂತೆ. ಈ ಸ್ಥಿತಿಯ ಇವನ ಚಿತ್ರವನ್ನು ಯಾವನೋ ಒಬ್ಬನು ಅವನ ಎದುರಾಳಿಯಾದ ನಿಝಾಮನಿಗೆ ತೋರಿಸಲಾಗಿ, ನಿಝಾಮನು ಅದನ್ನು ನೋಡಿ ಹೆದರಿ, "ಏತೋ ಸೈತಾನ ಹೈ" ಎಂದು ಅಂದು, ಇಂಥವನ ಗೂಡ ಯುದ್ಧ ಮಾಡುವದು ಬಿಗಿಯಾಗಿದೆ ಎಂದು ನುಡಿದನಂತೆ. ಬಾಜೀರಾಯನು ಸುಖಕ್ಕೆ ಒಳಗಾಗಿದ್ದಿಲ್ಲವೆಂದು ಇದರ ಮೇಲಿಂದ ಸ್ಪಷ್ಟವಾಗುತ್ತದೆ. ಆದ ಕಾರಣ, ಮನುಷ್ಯನು ತನ್ನ ಕರ್ತವ್ಯದ ಮೇಲೆ ದುಂದುಗಾರಿಕೆಯ ಅಮಲನ್ನು ಕೂಡ್ರಗೊಡಬಾರದು.

ಕಲ್ಲಪ್ಪ ಮ. ಬರದವಾಡ,
ಶಾಲಾ-ಮಾಸ್ತರ ಕಣಗಿನಹಾಳ.

ಅಗಸ್ಟ ತಿಂಗಳ ಸಂಚಿಕೆಯಲ್ಲಿ ಗುರಯ್ಯಾ ನಂಜಯ್ಯಾ ಮಠದ ಇವರು ಬರೆದ ಲೆಕ್ಕಗಳ ಉತ್ತರಗಳು:—

೧ನೇ ಉದಾ:– ಈ ಉದಾಹರಣೆಯನ್ನು ಉದಾಹರಣೆಯಲ್ಲಿ ಕೊಟ್ಟಷ್ಟೇ ಸಂಗತಿಗಳ ಆಧಾರದಿಂದ ಬಿಡಿಸಲಸಾಧ್ಯವು, ಎಂಬದನ್ನು ಬೀಜಗಣಿತದ ಸಮೀಕರಣಗಳನ್ನು ಬಿಡಿಸಲಿಕ್ಕೆ ಕಲಿತವರು ಕೆಳಗೆ ಬಿಡಿಸಿ ತೋರಿಸಿದ್ದರ ಮೇಲಿಂದ ತಿಳುಕೊಳ್ಳಬಹುದು.

ಅ	ಬ	ಕ	ದ
ಇ	ಫ	ಗ	ರ
ಡ.	ಜ	ಖ	ಲ
ಮ	ನ	ಟ	ಪ

ಬದಿಗೆ ಕೊಟ್ಟ ಆಕೃತಿಯೊಳಗಿನ ಒಂದೊಂದು ಚೌರಸಿನೊಳಗಿನ ಅಕ್ಷರವು ಒಂದೊಂದು ಬುಟ್ಟಿಯಲ್ಲಿದ್ದ ಮಾವಿನ ಹಣ್ಣುಗಳ ಸಂಖ್ಯೆಯೆಂತ ತಿಳಿಯುವ.

ಅ+ಬ+ಕ+ಡ=ಇ+ಫ+ಗ+ಹ
=ಯ+ಜ+ಖ+ಲ=ಮ+ನ+ಒ+ಪ
=ಅ+ಇ+ಯ+ಮ=ಬ+ಫ+ಜ+ನ
=ಕ+ಗ+ಖ+ಒ=ಡ+ಹ+ಲ+ಪ

ಈ ಲೆಖ್ಖಕಲ್ಲಿ ಮೇಲೆ ಕೊಟ್ಟ ರೀತಿಯು ೩ ಸಮೀಕರಣಗಳು ಹುಟ್ಟುತ್ತವೆ. ಆದರೆ ಆ ಸಮೀಕರಣಗಳಲ್ಲಿ ೧೬ ಅವ್ಯಕ್ತ ಪದಗಳಿರುವದರಿಂದ ಆ ಅವ್ಯಕ್ತ ಪದಗಳ ಬೆಲೆಗಳನ್ನು ತೆಗೆಯಲು ಅಸಾಧ್ಯವು. ಆದರೆ ಇದೇ ಲೆಕ್ಕದಲ್ಲಿ ಪ್ರತಿಯೊಂದು ಬುಟ್ಟಿಯಲ್ಲಿರುವ ಹಣ್ಣುಗಳ ಸಂಖ್ಯೆಗಳು ಅನುಕ್ರಮಾಂಕೆಗಳಿರುವವು ಎಂಬದಾಗಿ, ಇಲ್ಲವೆ ಬೇರೆ ಯಾವದೊಂದು ಗಣಿತಶ್ರೇಢಿಯ ಸಂಖ್ಯೆಗಳಿರುವವೆಂಬದಾಗ ಹೇಳಿದ್ದು, ಒಂದೊಂದು ಬುಟ್ಟಿಯಲ್ಲಿ ಕ್ರಮವಾಗಿ ಹಣ್ಣುಗಳ ಸಂಖ್ಯೆಯನ್ನು ಕೇಳಿದ್ದರೆ ಅದನ್ನು ಬಿಡಿಸಬಹುದಾಗಿತ್ತು. ಅದು ಹ್ಯಾಗೆಂದರೆ:-

ಸದರಿ ಬುಟ್ಟಿಯೊಳಗಿನ ಹಣ್ಣುಗಳು ೧, ೨, ೩, ಇತ್ಯಾದಿ ೧೬ ಈ ಸಂಖ್ಯೆಯಷ್ಟು ಇರುವವೆಂಬದಾಗಿ ಹೇಳಿದ್ದಲ್ಲಿ, ಅವುಗಳನ್ನು ಆ ೧೬ ಬುಟ್ಟಿಗಳಲ್ಲಿ ಇಡುವ ಕ್ರಮವನ್ನು ತೆಗೆಯುವ ರೀತಿಯು ಕೆಳಗೆ ವಿವರಿಸಿದಂತಿರುವದು.

$೧+೨+೩+\text{ಇತ್ಯಾದಿ}+೧೬=\frac{೧೬\times೧೭}{೨}=೧೭\times೮$ ಗಣಿತಶ್ರೇಢಿಯ ನಿಯಮದ ಪ್ರಕಾರ.

∴ ಪ್ರತಿಯೊಂದು ಉದ್ದ ಅಥವಾ ಅಡ್ಡ ಸಾಲಿನ ಬೇರೀಜು $=\frac{೧೭\times೮}{೪}=೩೪$ ಇರತಕ್ಕದ್ದು.

೩೪ ಬೇರಿಜು ಆಗುವ ನಾಲ್ಕು ಸಂಖ್ಯೆಗಳನ್ನು ಒಂದು ಸಾಲಿನಲ್ಲಿ ಬರೆ. ೧, ೨, ೧೫, ೧೬ ಈ ಪ್ರಕಾರ ಬರೆ. (ಗಣಿತಶ್ರೇಢಿಯಲ್ಲಿ ಆದ್ಯಂತ ಪದಗಳ ಬೇರಿಜು ಅವುಗಳಿಂದ ಸಮಾನ ಅಂತರದ ಮೇಲಿರುವ ೨ ಪದಗಳ ಬೇರೀಜಿಗೆ ಸರಿ ಇರುವದೆಂಬದನ್ನು ಇಲ್ಲಿ ಜ್ಞಾಪಿಸಿಕೊಳ್ಳಬೇಕು.

೧	೧೪	೧೨	೭
೨	೧೩	೧೧	೮
೧೫	೪	೬	೯
೧೬	೩	೫	೧೦

ಇದೇ ಮೇರೆಗೆ ೨ನೇ ಉದ್ದ ಸಾಲಿನಲ್ಲಿ ೧೪, ೧೩, ೪, ೩ ಈಪ್ರಕಾರ ಅನುಕ್ರಮವಾಗಿ ಬರೆ. ೩ನೇ ಸಾಲಿನಲ್ಲಿ ೧೨, ೧೧, ೬, ೫ ಹೀಗೆ ಬರೆ.

ಶಾಲಾಪತ್ರಕ.

ಪದ್ಯಂ

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀ ಪತ್ರಮಂ ಮುದ್ರಿಸಿ ||
ನಯದಿಂದಿತ್ತಪೆವೀ ದುವರ್ಗೆ ಸುಗುಣಂದೋರಲ್ಕೆ ಕೈಕೊಂಬುದೈ
ದಯೆಯಿಂ ದೋಷವತಿದ್ದವೇಳ್ವುದು ಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ||೧||

ಪುಸ್ತಕ ೪೬ | ಅಕ್ಟೋಬರ ೧೯೧೦. | ಸಂಚಿಕೆ ೧೦

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ನಾಮದಾರ ಗವ್ಹರ್ನರ ಸಾಹೇಬರವರು ಪುಣೆಯ ಫರ್ಗ್ಯೂಸನ್ ಕಾಲೇಜದ ವಿದ್ಯಾರ್ಥಿಗಳಿಗೆ ಮಾಡಿದ ಉಪದೇಶ.

ನಮ್ಮ ಲೋಕಪ್ರಿಯ ಗವ್ಹರ್ನರರಾದ ನಾಮದಾರ ಸರ್ ಜಾರ್ಜ ಕ್ಲಾರ್ಕ ಸಾಹೇಬರವರು ಕಳೆದ ತಿಂಗಳ ೮ನೇ ತಾರೀಖಿನ ದಿವಸ ಪುಣೆಯ ಫರ್ಗ್ಯೂಸನ್ ಕಾಲೇಜಕ್ಕೆ ಹೋಗಿದ್ದರು. ಆ ಕಾಲದಲ್ಲಿ ನಾಮದಾರರವರು ಆ ಕಾಲೇಜದ ವಿದ್ಯಾರ್ಥಿಗಳಿಗೆ ನಾಲ್ಕು ಉಪದೇಶದ ಮಾತುಗಳನ್ನು ಹೇಳಿದರು. ನಾಮದಾರವರ ಭಾಷಣವು ಯಾವತ್ತು ಶಾಲಾಧ್ಯಾಪಕರೂ ತರುಣ ವಿದ್ಯಾರ್ಥಿಗಳೂ, ಭಾವೀ ಪ್ರಜೆಯ ಹಿತವನ್ನು ಬಯಸುವಂಥ ಇತರ ಗೃಹಸ್ಥರೂ ನಿರಂತರದಲ್ಲಿ ಧ್ಯಾಸದಲ್ಲಿಡುವದಕ್ಕೆ ಯೋಗ್ಯವಾಗಿರುವದರಿಂದ ಅದನ್ನು ನಮ್ಮ ವಾಚಕರಿಗೋಸ್ಕರ ಇದರಡಿಯಲ್ಲಿ ಕನ್ನಡಿಸಿದ್ದೇವೆ:—

ನಾಮದಾರ ಗವ್ಹರ್ನರ ಸಾಹೇಬರವರು ವಿದ್ಯಾರ್ಥಿಗಳನ್ನು ಕುರಿತು ಅಂದದ್ದೇನಂದರೆ:—

ನಿಮ್ಮ ಪ್ರಿನ್ಸಿಪಾಲರು ಕೆಲವು ದಿವಸಗಳ ಪೂರ್ವದಲ್ಲಿ—"ನನ್ನ ವಿದ್ಯಾರ್ಥಿಗಳಿಗೆ ನಾಲ್ಕು ಉಪದೇಶದ ಮಾತುಗಳನ್ನು ಹೇಳುವಿರಾ?" ಎಂದು ನನಗೆ ಕೇಳಿದರು. ಅದಕ್ಕೆ ನಾನು ಒಪ್ಪಿಕೊಂಡೆನು. ನಿಮ್ಮ ಪ್ರಿನ್ಸಿಪಾಲರ ವಿನಂತಿಯನ್ನು ಮಾನ್ಯ ಮಾಡುವದರಲ್ಲಿ ನನ್ನ ಉದ್ದೇಶವು ನಿಮ್ಮ ಕಾಲೇ

ಜಗದೊಳಗಿನ ನಿಮ್ಮ ಈಗಿನ ಆಯುಷ್ಯಕ್ರಮದಲ್ಲಿಯೂ ತದನಂತರದ ಆಯುಷ್ಯಕ್ರಮದಲ್ಲಿಯೂ ನಿಮಗೆ ಉಪಯೋಗವಾಗುವಂಥ ಉತ್ತೇಜನ ಪರವಾದ ಕೆಲವು ಮಾತುಗಳನ್ನು ಹೇಳಬೇಕೆಂಬದೇ ಇರುತ್ತದೆ. ಹಿಂದುಸ್ಥಾನಕ್ಕೆ ಅವಶ್ಯವಾದ ಸಂಗತಿಗಳು ಅನೇಕ ಉಂಟು; ಹಾಗೂ ಅವು ಅನೇಕ ಪ್ರಕಾರದವಿರುವವು. ನಾವು ಅವುಗಳನ್ನು ಪೂರೈಸುವ ಯತ್ನವನ್ನು ನಡಿಸಿರುವೆವು. ಆದರೆ ಯಾವ ಸರಕಾರಕ್ಕೂ ಮಾಡಲಿಕ್ಕೆ ಶಕ್ಯವಲ್ಲದಂಥ ಎಷ್ಟೋ ಕೆಲಸಗಳು, ಹಿಂದೀ ಜನರ ಪ್ರಯತ್ನಗಳನ್ನೇ ಅವಲಂಬಿಸಿರುವವೆಂಬದನ್ನು ನಾನು ಬೇರೆ ಹೇಳುವ ಕಾರಣವಿಲ್ಲ. ಈ ಕೆಲಸಗಳು ಮುಖ್ಯವಾಗಿ ಸುಶಿಕ್ಷಿತರಾದ ಹಿಂದೀ ಜನರನ್ನೇ ಕೂಡಿರುವವು. ಸುಶಿಕ್ಷಿತ ಜನರ ಪ್ರಯತ್ನಗಳಿಂದ ಹಿತವಾಗುವದೂ ಅಹಿತವಾಗುವದೂ ಅವರಲ್ಲಿರುವ ಜವಾಬದಾರಿಯ ಯೋಗ್ಯಾಯೋಗ್ಯವಾದ ತಿಳುವಳಿಕೆಯನ್ನೂ, ಅವರ ತಿಳುವಳಿಕೆಗಳಿಗೆ ಆಧಾರಭೂತವಾದ ತಪ್ಪಿಲ್ಲದ ಅಥವಾ ತಪ್ಪುಳ್ಳ ಜ್ಞಾನವನ್ನೂ ಅವಲಂಬಿಸಿರುವವು.

ರಾಷ್ಟ್ರೀಯತ್ವದ ಕಲ್ಪನೆ.

ಹಿಂದೀ ರಾಷ್ಟ್ರೀಯತ್ವದ ಕಲ್ಪನೆಯು ಹೆಚ್ಚು ಕಡಿಮೆ ಪ್ರಮಾಣದಿಂದ ನಿಮ್ಮೆಲ್ಲರ ಮನಸ್ಸಿನಲ್ಲಿ ಬಿಂಬಿಸಿರುವದೆಂದು ನಾನು ಎಣಿಸುತ್ತೇನೆ. ಈ ರಾಷ್ಟ್ರೀಯತ್ವದ ಕಲ್ಪನೆಯು ಬಹು ಸುಂದರವಾದದ್ದೂ ಎಲ್ಲ ಜನರ ಪ್ರೇಮಕ್ಕೆ ಪಾತ್ರವಾದದ್ದೂ ಅವರ ಪ್ರಯತ್ನಗಳಿಗೆ ಯೋಗ್ಯ ವಿಷಯವಾದದ್ದೂ ಇರುತ್ತದೆ. ಈ ಕಲ್ಪನೆಯನ್ನು ನೀವು ದೃಢವಾಗಿ ಇಟ್ಟುಕೊಳ್ಳುವಿರೆಂದು ನಾನು ಆಶಿಸುತ್ತೇನೆ. ಆದರೆ ಈ ವಿಷಯಕ್ಕೆ ಸಂಬಂಧಿಸಿದ ಅನೇಕ ಸಂಗತಿಗಳು ನೀವು ಮರೆಯಕೂಡದಂಥವುಗಳಿರುತ್ತವೆ; ಅವುಗಳನ್ನು ಮರೆಯಿಸುವಂಥ ಮೋಹಕ್ಕೆ ನೀವು ಒಳಗಾಗಬಾರದು. ಸದ್ಯಕ್ಕೆ ನಿಮ್ಮ ಕಣ್ಣೆದುರಿಗೆ ಇರುವ ರಾಷ್ಟ್ರೀಯತ್ವದ ಕಲ್ಪನೆಯು ಅರ್ವಾಚೀನ ಕಾಲದಲ್ಲಿ ಹುಟ್ಟಿದ್ದಿರುವದು; ಹಾಗೂ ಅದು ಸರ್ವಾಂಶದಿಂದ, ಬ್ರಿಟಿಶ್ ಸರಕಾರದವರು ಈ ದೇಶದಲ್ಲಿ ಪ್ರಾರಂಭಿಸಿದ ಪಾಶ್ಚಾತ್ಯಶಿಕ್ಷಣದಿಂದಲೇ ನೀವು ಗ್ರಹಿಸಿಕೊಂಡದ್ದಾಗಿರುವದು. "ರಾಷ್ಟ್ರ"ವೆಂಬ ಶಬ್ದದಿಂದ ನಾವು ಈ ಕಾಲದಲ್ಲಿ ತಿಳಕೊಳ್ಳುವ ಅರ್ಥದಂತೆ, ಪ್ರಾಚೀನಕಾಲದ ರೋಮನ್ನರು ಕೂಡ ಒಂದು ರಾಷ್ಟ್ರವಾಗಿ ಎಂದೂ ಇರಲಿಲ್ಲ. ಪರಾಕ್ರಮಿಗಳಾದ

ರೋಮನ್ನ ಜನರು ಆ ಕಾಲದ ಜಗತ್ತಿನೊಳಗಿನ ಜನಾಂಗಗಳನ್ನು ಗೆದ್ದು, ಅವರ ಮೇಲೆ ಕೆಲವು ಕಾಲದವರೆಗೆ ಹೆಚ್ಚು ಕಡಿಮೆ ಯಶಸ್ವಿಗಳಾಗಿ ಅಧಿಕಾರವನ್ನು ನಡಿಸಿದರು. ಗ್ರೀಕರಂತೂ ನಿಜವಾದ ರಾಷ್ಟ್ರೀಯತ್ವಕ್ಕೆ ಸಮಸಮೀಪವಾಗಿ ಸಹ ಎಂದೂ ಬರಲಿಲ್ಲ; ಹಾಗೂ ಅವರು ಕಡೆತನಕ ತಮ್ಮ ತಮ್ಮೊಳಗಾಗಲಿ ತಮ್ಮ ವಸಾಹತುಗಳೊಡನೆಯಾಗಲಿ ಬಡದಾಡುವಂಥ ಸಣ್ಣ ಪುಟ್ಟ ಸಂಸ್ಥಾನಿಕರ ಸ್ಥಿತಿಯಲ್ಲಿಯೇ ಇದ್ದರು. ಹಿಂದುಸ್ಥಾನದ ಜನರಲ್ಲಿ ರಾಷ್ಟ್ರೀಯತ್ವದ ಕಲ್ಪನೆಯು ಎಂದೂ ಇರಲಿಲ್ಲೆಂಬದನ್ನು ಈ ದೇಶದ ಇತಿಹಾಸವನ್ನು ಕೇವಲ ಮೇಲೆ ಮೇಲೆ ಓದಿದವರು ಕೂಡಾ ನಿಮಗೆ ಹೇಳುವರು. ಈ ದೇಶದಲ್ಲಿ ಒಕ್ಕಲಾಗಿನಿಲ್ಲುವ ಉದ್ದೇಶದಿಂದಾಗಲಿ, ಕೊಳ್ಳೆ ಮಾಡುವ ಉದ್ದೇಶದಿಂದಾಗಲಿ ಪರದೇಶಗಳಿಂದ ನಾನಾಜಾತಿಯ ಜನರ ತಂಡಗಳು ತೆರೆಗಳಂತೆ ಒಂದರ ಹಿಂದೊಂದು ಬಂದು ಈ ದೇಶವನ್ನು ಒಳನುಗ್ಗಿದವು. ಈ ಹೊಸ ತಂಡಗಳು ಹಳೇ ತಂಡಗಳನ್ನು ಕೆಲಕೆಲವು ಪ್ರಸಂಗಗಳಲ್ಲಿ ತಮ್ಮೊಳಗೆ ಸೇರಿಸಿಕೊಂಡಿರುವವು; ಕೆಲವು ಪ್ರಸಂಗಗಳಲ್ಲಿ ಅವುಗಳನ್ನು ಹೊಡೆದು ಓಡಿಸಿಬಿಟ್ಟಿರುವವು. ಈ ಮೇರೆಗೆ ಈ ದೇಶಕ್ಕೆ ಬಂದ ವಿದೇಶದ ಕೆಲ ಜನರು ತಮಗಿಂತ ಮೊದಲು ಬಂದ ವಿದೇಶದ ಜನರೊಳಗೆ ಬೆರೆತುಕೊಂಡಿರುವರು; ಅಥವಾ ಈ ದೇಶದೊಳಗಿನ ಮೂಲನಿವಾಸಿಗಳಾದ ಕಾಡು ಜನರೊಳಗೆ ಕೂಡಿಕೊಂಡಿರುವರು. ಇದರಿಂದಾಗಿರುವ ಪರಿಣಾಮವೇನಂದರೆ, ಈ ದೇಶದಲ್ಲಿ ಒಂದಕ್ಕೊಂದರ ತಾಳಮೇಳದಂಥ ಅನೇಕಾನೇಕ ಜಾತಿಗಳ ಹಾಗು ಬಿನ್ನ ಬಿನ್ನವಾದ ರೀತಿರಿವಾಜುಗಳ ಗೊಂದಲ ಉಂಟಾಗಿರುವದು. ಅವುಗಳಲ್ಲಿ ಒಕ್ಕಟ್ಟು ಹುಟ್ಟಿಸುವದಕ್ಕೆ ಅವಶ್ಯವಾದ ಗುಣಗಳಂತು ಮೂಲತಃ ಇಲ್ಲವೇ ಇಲ್ಲ. ಇಷ್ಟೇ ಅಲ್ಲ. ಸಮಾಜದಲ್ಲಿ ಒಡಕು ಹುಟ್ಟಿಸುವಂಥ ಕಾರಣಗಳು ಮಾತ್ರ ಅಸಂಖ್ಯವಾಗಿರುತ್ತವೆ. ಇದೇ ಕಾರಣದಿಂದ ಈ ದೇಶದಲ್ಲಿ ಬ್ರಿಟಿಶರ ಶಾಂತತಾಪ್ರಚುರವಾದ ಆಳಿಕೆಯು (Pax Brittanica) ಸ್ಥಾಪಿತವಾಗುವದಕ್ಕಿಂತ ಮುಂಚಿನ ಈ ದೇಶದ ಇತಿಹಾಸವು ಯುದ್ಧಗಳಿಂದಲೂ ರಕ್ತಪಾತಗಳಿಂದಲೂ ತುಂಬಿ ಹೋಗಿರುವದು.

ಬ್ರಿಟಿಶರ ಆಳಿಕೆಯಿಂದ ಆಗಿರುವ ಲಾಭಗಳು.

ಸದ್ಯಕ್ಕೆ ನೀವು ಅಖಂಡ ಶಾಂತತೆಯ ಹಾಗು ಸುವ್ಯವಸ್ಥಿತವಾದ ರಾಜ್ಯಕಾರಭಾರದ ಸೌಖ್ಯವನ್ನು ಅನುಭವಿಸುತ್ತಿರುವಿರಿ. ಇಂಥ ಶಾಂತ

ತೆಯು ಕಾಲದಲ್ಲಿ ರಾಷ್ಟ್ರಘಟನೆಯ ಕಾರ್ಯವು ಸುಲಭವಾಗಿ ಸಾಗುವ ದೆಂದು ತೋರುವದು ಸ್ವಾಭಾವಿಕವೇ ಸರಿ. ಸಮಾಜದಲ್ಲಿ ಗೊಂದಲವನ್ನು ಎಬ್ಬಿಸುವಂಥ ಸಂಗತಿಗಳೆಲ್ಲ ಸದ್ಯಕ್ಕೆ ಇಲ್ಲದಂತಾಗಿರುವವು. ಈ ದೇಶದ ಮೇರೆಯ ಮೇಲೆ ಒಮ್ಮೊಮ್ಮೆ ಆಗುತ್ತಿರುವ ಸಣ್ಣಪುಟ್ಟ ದಾಳಿಗಳ ಹೊರ್ತು, ಪರದೇಶದವರ ದಾಳಿಗಳ ಭಯವು ಎಷ್ಟು ಮಾತ್ರವೂ ಉಳಿದಿರು ವದಿಲ್ಲ. ನೀವು ವಿಚಾರ ಮಾಡಿ ನೋಡಿದರೆ, ಹಿಂದೀ ರಾಷ್ಟ್ರದ ಘಟನೆಯು ಸದ್ಯದ ಪರಿಸ್ಥಿತಿಯಲ್ಲಿಯೇ ಕ್ರಮ ಕ್ರಮವಾಗಿ ಆಗುವ ಸಂಭವವಿರುತ್ತ ದೆಂಬ ಸಂಗತಿಯು ನಿಮಗೆ ನಿಶ್ಚಯವಾಗಿ ಮನದಟ್ಟಾಗುವದೆಂದು ನಾನು ತಿಳಿಯುತ್ತೇನೆ. ಈ ಪರಿಸ್ಥಿತಿಯು ಬದಲಾದರೆ, ಪೂರ್ವಕಾಲದಲ್ಲಿ ಬೇಬಂದ ಶಾಹಿಗೆ ಕಾರಣವಾಗಿದ್ದ ದ್ವೇಷಮೂಲಕವಾದ ಪ್ರವೃತ್ತಿಗಳು ಈ ದೇಶ ದಲ್ಲಿ ಮತ್ತೆ ತಲೆದೋರಿ, ಈ ದೇಶವು ಪರಿಪರಿಯ ಸಂಕಟಗಳಿಗೆ ಒಳಗಾಗ ಬಹುದು; ಮತ್ತು ಈ ದೇಶದ ಪ್ರಗತಿದರ್ಶಕವಾದ ಗಡಿಯಾಳದ ಮುಳ್ಳು ಗಳು ಒಂದು ಶತಕ ಹಿಂದಕ್ಕೆ ಸರಿಯುವವು.

ಬ್ರಿಟಿಶ ಸರಕಾರದ ಉದ್ದೇಶ.

ಹಿಂದುಸ್ತಾನದೊಳಗಿನ ನಾನಾಜಾತಿಗಳ ಜನರು ಒಂದೇ ರಾಷ್ಟ್ರ ವಾಗಿ, ಅವರು ತಮ್ಮ ರಾಜ್ಯಕಾರಭಾರವನ್ನು ತಾವೇ ಸಾಗಿಸಿಕೊಳ್ಳುವ ಪಾತ್ರತೆಯು ಅವರಲ್ಲುಂಟಾಗುವ ಹಾಗೆ ಅವರು ಮುಂದಡಿಯನ್ನಿಕ್ಕು ವಂತೆ ಮಾಡುವದೇ ನಮ್ಮ ಉದ್ದೇಶವು; ಮತ್ತು ಇದೇ ನಮ್ಮ ಕರ್ತವ್ಯವು. ಈ ಉದ್ದಿಷ್ಟಹೇತುವು ಕೊನೆಗಾಣುವಂತೆ ಸದ್ಯಕ್ಕೆ ತಕ್ಕಮಾರ್ಗದಿಂದ ಪ್ರಯತ್ನಗಳು ನಡೆದಿರುವವೆಂದು ನನ್ನ ತಿಳುವಳಿಕೆಯುಂಟು. ಕನಿಷ್ಠ ಜಾತಿಯವರ ಉನ್ನತಿಯ ಸಲುವಾಗಿ ಸ್ಥಾಪಿಸಲ್ಪಟ್ಟ ಮಿಶನ್ನದಂಥ ಸಂಸ್ಥೆ ಗಳು ಉದಯಕ್ಕೆ ಬರುತ್ತಲಿವೆ. ಇಂಥ ಸಂಸ್ಥೆಗಳು ದೇಶದ ಜನರಲ್ಲಿ ಪರ ಸ್ಪರರಲ್ಲಿ ಬಂಧುತ್ವದ ತಿಳುಹನ್ನು ಹುಟ್ಟಿಸದೆ ಇರವು. ಪ್ರಚಂಡವಾದ ಮುಂಬಯಿ ಪಟ್ಟಣದಲ್ಲಿ ವ್ಯಾಪಾರದ ನಿಮಿತ್ತವಾಗಿ ಭಿನ್ನ ಭಿನ್ನ ಜಾತಿಗಳ ಹಾಗು ಪಂಥಗಳ ಜನರು ಒಬ್ಬರೊಬ್ಬರೊಡನೆ ದಿನದಿನಕ್ಕೆ ಹೆಚ್ಚು ಐಕ್ಯಭಾ ವದಿಂದ ನಡೆಯುತ್ತಿರುವರು. ಇದೇ ಮಾತು ಇತರ ಎಲ್ಲ ಪಟ್ಟಣಗಳಿಗೂ ಹತ್ತುವದು. ಇದು ಸಣ್ಣ ಲಾಭವಲ್ಲ. ಸ್ಥಾನಿಕಸ್ವರಾಜ್ಯದ ವ್ಯಾಪಕವಾ ದಂಥ ಉದಾರವಾದಂಥ ಪದ್ಧತಿಯಿಂದಾದರೂ ಇದೇ ಪರಿಣಾಮವಾಗು

ತ್ತಿರುವದು. ಇದಲ್ಲದೆ ಸಧ್ಯದ ಕಾಯಿದೆಕೌನ್ಸಿಲುಗಳ ಅಧಿಕಾರಮರ್ಯಾದೆ ಯನ್ನು ಬಹಳವಾಗಿ ಬೆಳೆಯಿಸಿರುವದರಿಂದ, ಅವುಗಳಲ್ಲಿ ನಾನಾತರದ ಜನರ ಮೋದರಿಗಳಾದಂಥ ಪ್ರತಿನಿಧಿಗಳು ದೇಶದ ಎಲ್ಲ ಜನರಲ್ಲಿ ಶಾಂತತಾಯುಕ್ತವಾದ ಪ್ರಗತಿಯನ್ನುಂಟುಮಾಡಬೇಕೆಂಬ ಒಂದೇ ಧ್ಯೇಯವನ್ನು ಮುಂ ಬಿಟ್ಟುಕೊಂಡು, ಒಮ್ಮನಸಿನಿಂದ ಕೆಲಸಮಾಡುತ್ತಿರುವರು. ಇದರಿಂದಲೂ ಬಹು ದೊಡ್ಡ ಕಾರ್ಯವಾಗಬಹುದೆಂದು ಹೇಳಲಿಕ್ಕೆ ಯಾವ ಬಾಧಕವೂ ಇಲ್ಲ. ಆದರೆ ಇಷ್ಟರಿಂದಲೇ ಕಾರ್ಯಭಾಗವಾಗಲಾರದು. ಯಾಕಂದರೆ ರಾಷ್ಟ್ರವೆಂಬ ಶಬ್ದದ ಅರ್ಥವನ್ನು ನಿಮಗೆ ಗೊತ್ತಿದ್ದಂತೆ ತಕ್ಕೊಂಡರೆ, ಅದರಲ್ಲಿ ಇನ್ನೂ ಅನೇಕ ಸಂಗತಿಗಳ ಸಮಾವೇಶವಾಗುತ್ತದೆ.

ಜಾತಿಭೇದದಿಂದಾಗುವ ಹಾನಿಗಳು.

ರಾಷ್ಟ್ರದ ಕಲ್ಪನೆಯಲ್ಲಿ ನಿಕೃಷ್ಟ ಜಾತಿಯವರ ಹಾಗೂ ಅಸ್ಪೃಶ್ಯ ಜಾತಿಯವರ ಅಸ್ತಿತ್ವವೇ ಅಸಂಭವನೀಯವಾಗಿರುತ್ತದೆ. ಇಂಥ ಜಾತಿಗಳ ಜನರ ಸಂಖ್ಯೆಯು—ಈ ದೇಶದಲ್ಲಿ ಸುಮಾರು೬ ಕೋಟಿಯವರೆಗೆ ಇರುತ್ತದೆ. ಜಾತಿನಿರ್ಬಂಧಗಳಿಂದ ಶ್ರೇಷ್ಠಕನಿಷ್ಠ ಜಾತಿಗಳಲ್ಲಿ ಉಂಟಾಗಿರುವ ಸೂಕ್ಷ್ಮವಾದ ಭೇದಗಳು ಏಕರಾಷ್ಟ್ರೀಯತ್ವದ ಕಲ್ಪನೆಗೆ ತೀರ ವಿಸಂಗತವಾಗಿರುತ್ತವೆ. "ಪೌರ್ವಾತ್ಯರಾಷ್ಟ್ರಗಳೆಂ" ಬ ಶಬ್ದವನ್ನು ನಾವು ಒಮ್ಮೊಮ್ಮೆ ಅದರ ಅರ್ಥದ ಕಡೆಗೆ ಲಕ್ಷಕೊಡದೆ ಉಪಯೋಗಿಸುತ್ತಿರುತ್ತೇವೆ. ಆದರೆ ನಿಜವಾಗಿ ಪೌರ್ವಾತ್ಯರಲ್ಲಿ ಜಪಾನೀ ಜನರ ರಾಷ್ಟ್ರವು ಮಾತ್ರ ರಾಷ್ಟ್ರವೆಂಬ ಸ್ಥಿತಿಗೆ ಬಂದಿರುತ್ತದೆ; ಮತ್ತು ಅನೇಕ ವರ್ಷಗಳ ನಂತರ ಚೀನೀ ಜನರ ರಾಷ್ಟ್ರವೂ ಸಿದ್ಧವಾಗುವ ಲಕ್ಷಣಗಳು ತೋರಹತ್ತಿರುವವು.

ಜಪಾನದೇಶದ ಇತಿಹಾಸವನ್ನೂ ಆ ಜನರ ವಿಶಿಷ್ಟ ಗುಣಗಳನ್ನೂ ನೀವು ಅರಿತುಕೊಂಡವರಿದ್ದರೆ, ಜಪಾನದ ರಾಷ್ಟ್ರವು ಹ್ಯಾಗೆ ಉಂಟಾಯಿತೆಂಬದು ಸಹಜವಾಗಿ ನಿಮ್ಮ ಲಕ್ಷಕ್ಕೆ ಬರುವದು; ಮತ್ತು ಜಪಾನೀ ಜನರಿಗೂ, ನಾನಾವಿಧಜಾತಿಗಳುಳ್ಳ ಹಿಂದೀ ಜನರಿಗೂ ನೈಸರ್ಗಿಕವಾದಂಥ ಮಹತ್ವವುಳ್ಳಂಥ ಹೆಚ್ಚುಕಡಿಮೆಗಳು ಎಷ್ಟಿರುವವೆಂಬದೂ ನಿಮಗೆ ಗೊತ್ತಾಗುವದು.

ಪಾಶ್ಚಿಮಾತ್ಯ ಶಿಕ್ಷಣದಿಂದ ನಿಮ್ಮ ಸಮಾಜದಲ್ಲಿ ಉಂಟಾಗುತ್ತಿರುವ ಅನೇಕ ಪರಿಣಾಮಗಳಲ್ಲಿ ನೀವು ಉತಾವಳಿಯುಳ್ಳ ಸ್ವಭಾವದವರಾಗುವದು ಒಂದು ಪರಿಣಾಮವಾಗಿರುತ್ತದೆ. ಈ ಪ್ರವೃತ್ತಿಯನ್ನು ನೀವು ಸುಧಾರಿಸಿಕೊಳ್ಳಬೇಕೆಂದು ನಾನು ಆಗ್ರಹಪೂರ್ವಕವಾಗಿ ಸೂಚಿಸುತ್ತೇನೆ. ಮಾನವಜಾತಿಗೆ ಹಿತವನ್ನುಂಟು ಮಾಡಿದಂಥ ದೊಡ್ಡ ಸುಧಾರಣೆಗಳು ಯಾವಾಗಲೂ ಸಾವಕಾಶವಾಗಿ ಸಾಗಿರುತ್ತವೆ. ಆದಕಾರಣ, ಹಿಂದುಸ್ತಾನದ ಭಿನ್ನಭಿನ್ನ ಜಾತಿಯ ಜನಾಂಗಗಳೆಲ್ಲ ಐಕ್ಯಹೊಂದಿ ಅವರೆಲ್ಲರದೊಂದೇ ರಾಷ್ಟ್ರವಾಗುವದಕ್ಕೆ ಎಷ್ಟೋ ತಲಾಂತರಗಳು ಸಂದುಹೋಗಲಿಕ್ಕೆ ಬೇಕೆಂಬುದನ್ನು ಚನ್ನಾಗಿ ಲಕ್ಷ್ಯದಲ್ಲಿಡಿರಿ. ಯಾವ ಪರಿಸ್ಥಿತಿಯಿಂದ ಮಾತ್ರವೇ ನೀವು ಏಕರಾಷ್ಟ್ರೀಯತ್ವನೆಂಬ ಅತ್ಯಂತ ಗೌರವವುಳ್ಳ ಅಂತಿಮಸಾಧ್ಯವನ್ನು ಸಾಧಿಸಲಿಕ್ಕೆ ಸಮರ್ಥರಾಗಬಹುದೋ, ಆ ಪರಿಸ್ಥಿತಿಯನ್ನು ಉಂಟುಮಾಡುವ ಕೆಲಸದಲ್ಲಿ ಸರಕಾರದೊಡನೆ ಸಹಕಾರಿತ್ವದಿಂದ ನಡೆದು, ಆ ಗೌರವವುಳ್ಳ ಅಂತಿಮ ಸಾಧ್ಯವನ್ನು ಸಾಧಿಸುವದಕ್ಕೆ ಸಹಾಯಮಾಡುವದು ನಿಮ್ಮಲ್ಲಿ ಪ್ರತಿಯೊಬ್ಬರ ಕೈಯಲ್ಲಿರುತ್ತದೆ. ಇಷ್ಟೇ ಅಲ್ಲ. ನೀವು ಇದಕ್ಕೂ ಹೆಚ್ಚಿನ ಸಹಾಯವನ್ನೂ ಮಾಡಬಹುದು. ಅದೇನಂದರೆ, ನಿಮ್ಮ ದೇಶದೊಳಗಿನ ಬೇರೆ ಬೇರೆ ಸಮಾಜಗಳಲ್ಲಿ ಪರಸ್ಪರರ ವಿಷಯದಲ್ಲಿ ಪ್ರೇಮಭಾವ, ವಿಶ್ವಾಸ, ಉದಾರವಾದಂಥ ಪರಮತಸಹಿಷ್ಣುತೆ ಇವೇ ಮೊದಲಾದ ಗುಣಗಳು ನೆಲೆಗೊಳ್ಳುವಂತೆ ನಿಮ್ಮಲ್ಲಿ ಪ್ರತಿಯೊಬ್ಬನು ಯತ್ನಮಾಡಬಹುದು. ಇಂಗ್ಲಂಡದೊಳಗಿನ ಎಷ್ಟೋ ಕಾಲೇಜಗಳಿಂದ ಹೊರಬಿದ್ದ ಸುಶಿಕ್ಷಿತ ಜನರು ಬಡಬಗ್ಗರ ಉದ್ಧಾರಕ್ಕಾಗಿ ಧರ್ಮೋಪದೇಶಕರ ಕೆಲಸವನ್ನು ವಹಿಸುತ್ತಾರೆ. ಅದೇ ಪ್ರಕಾರ ನೀವು ಇಲ್ಲಿಯ (ಪುಣೆಯ) ಅಂತ್ಯಜ ಬಾಲಕರ ಶಿಕ್ಷಣದ ಸಲುವಾಗಿ ನಿಮ್ಮ ಕೆಲವು ವೇಳೆಯನ್ನು ವೆಚ್ಚಮಾಡಿ, ಈ ದೀನೋದ್ಧಾರದ ಕೆಲಸಕ್ಕೆ ಸಹಾಯ ಮಾಡಲಾರಿರೋ? ಅಥವಾ, ಈಗ ಇಂಥ ಹುಡುಗರನ್ನು ಎಷ್ಟೋ ಸಾಲೆಗಳಲ್ಲಿ ತಕ್ಕೊಳ್ಳುವದಕ್ಕೆ ಬಲವತ್ತರವಾದ ಜನರೂಢಿಯಿಂದ ಪ್ರತಿಬಂಧವಾಗುತ್ತದಷ್ಟೇ. ಅವರನ್ನು ಸಾಲೆಗಳಲ್ಲಿ ಪಕ್ಷಪಾತವಿಲ್ಲದೆ ಬೇರೆ ವಿದ್ಯಾರ್ಥಿಗಳಂತೆ ಪ್ರವೇಶಮಾಡಿಸಲಿಕ್ಕಾದರೂ ನಿಮ್ಮ ಮುತವರ್ಜಿಯನ್ನು ವೆಚ್ಚಮಾಡುವದು ನಿಮಗೆ ಶಕ್ಯವಿಲ್ಲವೆ?

ರಾಜಕೀಯ ವಿದ್ಯಾವ್ಯಾಸಂಗ.

ಸರಕಾರದವರು ಅನ್ಯಾಯದಿಂದಲೂ ಜುಲುಮೆಯಿಂದಲೂ ನಿಮಗೆ ರಾಜಕೀಯವಿಷಯಗಳ ಅಧ್ಯಯನವನ್ನೇ ಮಾಡಗೊಡುವದಿಲ್ಲೆಂತಲೂ ರಾಜಕಾರಣಗಳಲ್ಲಿ ಕೈಹಾಕಗೊಡುವದಿಲ್ಲೆಂತಲೂ ನಿಮ್ಮ ತಿಳುವಳಿಕೆಯಾಗಿರಬಹುದು. ಆದರೆ ಇದು ತಪ್ಪು ತಿಳುವಳಿಕೆಯೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಮಿ|| ಸಿ. ರಾಮಲಿಂಗ ರಡ್ಡಿ ಎಂಬವರು ಕೆಲದಿವಸಗಳ ಹಿಂದೆ ಮೈಸೂರ ವಿದ್ಯಾರ್ಥಿಗಳಿಗೆ ಕೊಟ್ಟ ಒಂದು ಉತ್ತಮವಾದ ವ್ಯಾಖ್ಯಾನದಲ್ಲಿ ಈ ಪ್ರಕಾರ ಹೇಳಿದರು:—"ಪ್ರಯೋಜನವಿಲ್ಲದಂಥ ಹಾನಿಕರವಾದಂಥ ಆವೇಶದ ಉದ್ವೇಗಗಳಿಗೆ ನೀವು ಒಳಗಾಗಿ ಕೆಡಬಾರದೆಂಬುದಿದ್ದರೆ, ನಿಮಗೆ ರಾಜಕೀಯ ವಿಷಯಗಳ ವ್ಯವಹಾರಸಹಿತವಾದ ವ್ಯಾಸಂಗವಾಗಲಿ, ವ್ಯಾವಹಾರಿಕವಾದ ರಾಜಕೀಯವಿಷಯಗಳ ವ್ಯಾಸಂಗವಾಗಲಿ ಆಗುವದು ಅತ್ಯವಶ್ಯವಿರುತ್ತದೆ." ಈ ಪ್ರಕಾರ ಹೇಳಿ, ಮುಂದೆ ಅವರು ವಿದ್ಯಾರ್ಥಿಗಳಿಗೆ ಉಪಯುಕ್ತವಾದಂಥ "ರಾಜಕಾರಣಶಾಸ್ತ್ರಾಧ್ಯಯನ"ದ ಕ್ರಮವನ್ನೂ ಸೂಚಿಸಿದರು. ಮಿ|| ರಡ್ಡಿ ಇವರ ಅಭಿಪ್ರಾಯವು ನನಗೆ ಸಂಪೂರ್ಣವಾಗಿ ಮಾನ್ಯವಿರುತ್ತದೆ, ಹಾಗು ವಿಶ್ವವಿದ್ಯಾಲಯದ ಅಭ್ಯಾಸಕ್ರಮದಲ್ಲಿ ಹಿಂದುಸ್ತಾನದ ಇತಿಹಾಸ ಹಾಗೂ ರಾಜನೀತಿ ಈ ವಿಷಯಗಳ ಸಾಮಾನ್ಯಸ್ವರೂಪವಿವೇಚನವನ್ನು ಆವಶ್ಯಕವಿಷಯವನ್ನಾಗಿ ಸೇರಿಸಬೇಕೆಂದು ನನ್ನ ಅಪೇಕ್ಷೆ ಇರುತ್ತದೆಂಬುದು ನಿಮಗೆ ಗೊತ್ತದೆ. ಆದರೆ ಸರಕಾರದವರು ಆಗ್ರಹ ಪೂರ್ವಕವಾಗಿ ಇಚ್ಛಿಸುದೇನಂದರೆ, ಲಜ್ಜಾಸ್ಪದವಾದ ಗುನ್ಹೆಗಳಿಗೆ ಪ್ರತ್ಯಕ್ಷಕಾರಣವಾದಂಥ ದ್ವೇಷಪರಿಪೂರಿತವಾದ ಮತಗಳನ್ನು ಉಪದೇಶಿಸುವದೇ ರಾಜಕಾರಣವೆಂಬ ತಪ್ಪು ತಿಳುವಳಿಕೆಯನ್ನು ನೀವು ಮಾಡಿಕೊಳ್ಳಬಾರದು; ಮತ್ತು ನಿಜವಾದ ಸಂಗತಿಗಳಿಗೆ ಎಷ್ಟು ಮಾತ್ರವೂ ಹೊಂದದಂಥ ಅಸಂಬದ್ಧವಾದ ಸಂಗತಿಗಳನ್ನು, ಅವು ಮುದ್ರಿಸಲ್ಪಟ್ಟಿರುವವೆಂಬುದಿಷ್ಟೇ ಕಾರಣದಿಂದ, ನಿಜವೆಂದು ತಿಳಕೊಳ್ಳುವ ಮೋಹಕ್ಕೆ ನೀವು ಎಂದೂ ಒಳಗಾಗಬಾರದು. ವರ್ತಮಾನಪತ್ರದೊಳಗಿನ ಲೇಖಗಳನ್ನು ಓದಿದ್ದರಿಂದಲೇ ಖೂನು ಮೊದಲಾದ ಅತ್ಯಾಚಾರಗಳನ್ನು ಮಾಡಲಿಕ್ಕೆ ಪ್ರವೃತ್ತರಾದೆವೆಂದು ಎಷ್ಟೋ ತಪ್ಪುಗಾರರು ತಮ್ಮ ಜವಾಬಿನಲ್ಲಿ ಸ್ಪಷ್ಟವಾಗಿ ಹೇಳಿರುತ್ತಾರೆ. ಆದಕಾರಣ ಯಾವ ಮೋಹಜಾಲ

ಗಳೂ ಭ್ರಾಮಕಕಲ್ಪನೆಗಳೂ ಈಗಲೇ ಎಷ್ಟೋ ಕೊಲೆಗಳಿಗೂ ಹೇಳ ಲಾಗದ ದುಃಖಕ್ಕೂ ಕಾರಣವಾಗಿವೆಯೋ, ಆ ಭ್ರಾಮಕ ಕಲ್ಪನೆಗಳಿಂದಲೂ ಮೋಹಜಾಲಗಳಿಂದಲೂ ನಿಮ್ಮನ್ನು ರಕ್ಷಿಸುವದಕ್ಕಾಗಿ ಸರಕಾರದವರು ಮಾಡುವ ಪ್ರಯತ್ನಗಳು ನಿಜವಾಗಿ ನಿಮ್ಮ ಪರಮಾವಧಿಯ ಕಲ್ಯಾಣದ ಸಲುವಾಗಿಯೇ ಇರುತ್ತವೆಂದು ನೀವು ನಿಶ್ಚಯವಾಗಿ ತಿಳಿದುಕೊಳ್ಳಿರಿ.

ಕೇಡಿನ ಕಾರಣವು.

ಈ ವಿಷಯದಲ್ಲಿ ಎರಡೇ ಉದಾಹರಣೆಗಳನ್ನು ತಕ್ಕೊಳ್ಳುವಾ. ಯಾವ ಮತದ ಉಪದೇಶದಿಂದ ಹಿಂದೀ ಜನರ ಅತ್ಯಂತ ಹಿತಚಿಂತಕರಾದಂಥ ಇಬ್ಬರು ಗೃಹಸ್ಥರು ಪ್ರತ್ಯಕ್ಷವಾಗಿ ಅತಿ ನೀಚತನದಿಂದ ಕೊಲ್ಲಲ್ಪಟ್ಟರೋ, ಆ ಮತದ ವಿಷಯದಲ್ಲಿ ಯಾರು ಏನೇ ಹೇಳಲಿ, ಅದು ರಾಜಕಾರಣವು ಮಾತ್ರ ಅಲ್ಲವೆಂದು ಖಂಡಿತವಾಗಿ ಹೇಳಬಹುದು. ಜನರಲ್ಲಿ ಹಬ್ಬುವ ಸುಳ್ಳು ಸಂಗತಿಗಳ ನಿಜಸ್ಥಿತಿಯನ್ನು ತಿಳಕೊಳ್ಳುವದಕ್ಕೆ ಬೇಕಾಗುವಂಥ ಸಾಕಷ್ಟು ಜ್ಞಾನವು ನಿಮಗೆ ದೊರೆಯುವ ತನಕ, (ಅದು ಎಂದಿಲ್ಲೊಂದು ದಿವಸ ನಿಮಗೆ ದೊರೆಯಲಿಕ್ಕೇಬೇಕು.) ನಿಮ್ಮ ಮನಸ್ಸು ದುಷ್ಟ ಗ್ರಹಿಕೆಗಳಿಂದ ದೂಷಿಸಲ್ಪಡಬಾರದೆಂಬದು ನ್ಯಾಯವಲ್ಲವೆ? ಮತ್ತು ಇದೇ ಕಾಲದಲ್ಲಿ ನೀವು ನಿಜವಾದ ರಾಜಕಾರಣಗಳ ಕೆಲ ಜ್ಞಾನವನ್ನು ಸಂಪಾದಿಸುವದೂ ಅತ್ಯಂತ ಇಷ್ಟವಾಗಿರುತ್ತದೆ. ಯಾಕಂದರೆ, ಆ ನಿಜವಾದ ಜ್ಞಾನದ ಬಲದಿಂದಲೇ ಮುಂದೆ ನೀವು ಹಿಂದುಸ್ತಾನದೊಳಗಿನ ಎಷ್ಟೋ ಸಾರ್ವಜನಿಕ ಪ್ರಶ್ನಗಳ ಸಂಬಂಧದಿಂದ ಯುಕ್ತಾಯುಕ್ತಗಳನ್ನು ವಿಚಾರಿಸಿ ನಿಮ್ಮ ಸ್ವಂತ ಅಭಿಪ್ರಾಯಗಳನ್ನು ಮಾಡಿಕೊಳ್ಳಲು ಸಮರ್ಥರಾಗುವಿರಿ. ಈ ಸಂಬಂಧದಿಂದ ನನ್ನ ಅಭಿಪ್ರಾಯವನ್ನು ಸ್ಪಷ್ಟೀಕರಿಸುವದಕ್ಕಾಗಿ ನಿಮಗೊಂದು ಉದಾಹರಣೆಯನ್ನು ಕೊಡುತ್ತೇನೆ. ಕೊಲೆ ಮಾಡುವ ಪ್ರವೃತ್ತಿಯುಳ್ಳ ಜನರು ಹುಟ್ಟಲಿಕ್ಕೆ ಕಾರಣವಾಗಿದ್ದಂಥ ಸಂಗತಿಗಳಲ್ಲಿ, ಇಂಗ್ಲಂಡವು ಹಿಂದುಸ್ತಾನದ ದ್ರವ್ಯವನ್ನು ಶೋಷಿಸಿಕೊಳ್ಳುತ್ತಿರುವದರಿಂದ ಒಂದಾನೊಂದು ಕಾಲದಲ್ಲಿ ಒಳ್ಳೇ ಘನತೆಗೇರಿದ ಹಿಂದುಸ್ತಾನವು ಅತ್ಯಂತ ಶೀಘ್ರಗತಿಯಿಂದ ನಾಶವಾಗುತ್ತ ನಡೆದಿರುವದು ಎಂದು ಹೇಳಲ್ಪಡುವ ಸಂಗತಿಯು ಬಲವತ್ತರವಾದ ಕಾರಣವಾಗಿರುವದು.

[ಈ ವ್ಯಾಖ್ಯಾನವು ಮುಂದೆ ಇದೇ ಸಂಚಿಕೆಯ ೩೧೩ ನೇ ಪುಟದಲ್ಲಿ ನಾಗಿರುವದು]

ನಾಮದಾರ ಗವ್ಹರ್ನರರ ಸಾಹೇಬರವರು ಪುಣೆಯ ಫೆರ್ಗ್ಯುಸನ್ ಕಾಲೇಜಿನ ವಿದ್ಯಾರ್ಥಿಗಳಿಗೆ ಮಾಡಿದ ಉಪದೇಶ.

(ಇದೇ ಸಂಚಿಕೆಯ ೫೯೭ನೇ ಪುಟದಿಂದ ಮುಂದೆ ಸಾಗಿದ್ದು.)

ಈ ದ್ರವ್ಯಶೋಷಣದ ಮೂಲಕವಾಗಿ ಪ್ರತಿವರ್ಷ ಈ ದೇಶದಿಂದ ೫೦।೧೦೦ ಕೋಟಿ ರೂಪಾಯಿಗಳು ವಿಲಾಯತಿಗೆ ಹೋಗುತ್ತವೆಂದು ಎಷ್ಟೋ ಕಡೆಗೆ ಬರೆದದ್ದನ್ನು ನಾನು ಓದಿರುತ್ತೇನೆ. ಈ ದ್ರವ್ಯಶೋಷಣದ ಭ್ರಾಮಕವಾದ ಕಲ್ಪನೆಯ ಸಂಬಂಧದಿಂದ ಇಲ್ಲಿ ಚರ್ಚೆ ಮಾಡಬೇಕೆಂದು ನನ್ನ ಉದ್ದೇಶವಿಲ್ಲ. ಯಾಕಂದರೆ ಅದರಿಂದ ನೀವು ಬೇಸರಿಯಬಹುದು. ಆದರೆ ನೀವು ಈ ವಿಷಯದಲ್ಲಿ ಪ್ರಾಮಾಣಿಕತನದಿಂದ ನಿಜಸ್ಥಿತಿಯನ್ನು ಅರಿತುಕೊಳ್ಳಲಿಕ್ಕೆ ಇಚ್ಛಿಸುತ್ತಿದ್ದರೆ, ನೀವು ಯಾವ ಯಾವ ಸಂಗತಿಗಳನ್ನು ವಿಚಾರಿಸಬೇಕೆಂಬ ಬಗ್ಗೆ ಸ್ವಲ್ಪ ದಿಗ್ದರ್ಶನವನ್ನು ಮಾತ್ರ ನಿಮ್ಮಗೋಸ್ಕರ ಮಾಡುತ್ತೇನೆ.

ಹಿಂದುಸ್ತಾನದ ಕಂದಾಯ.

ಮೊದಲು ನೀವು ಸರಕಾರದವರು ಹಿಂದುಸ್ತಾನದ ಕಂದಾಯದೊಳಗಿಂದ ಪ್ರತಿವರ್ಷ ವಿಲಾಯತಿಯಲ್ಲಿ ಎಷ್ಟು ಹಣವನ್ನು ಕೊಡುತ್ತಾರೆಂಬದನ್ನು ಮನವರಿಕೆ ಮಾಡಿಕೊಳ್ಳಿರಿ. ಅದು ೧೦೦ಕೋಟಿ, ಅಥವಾ ೫೦ಕೋಟಿ ಸಹ ಇರದೆ, ಕೇವಲ ೨೯½ ಕೋಟಿಗಿಂತ ಕಡಿಮೆ ಇರುವದು. ಇನ್ನು, ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಪ್ರತಿಫಲ ಬಾರದೆ ಹೋಗುವ ದ್ರವ್ಯದ ಪ್ರವಾಹಕ್ಕೆ ಡ್ರೇನ (Drain) ಅಥವಾ ದ್ರವ್ಯಶೋಷಣವೆಂದು ಅನ್ನಬಹುದು. ಪುಣೆಯ ಮ್ಯುನಿಸಿಪಾಲಿಟಿಯವರು, ತಮ್ಮ ಪಟ್ಟಣದೊಳಗಿನ ನಾಗರಿಕರ ಹಿತದ ಸಲುವಾಗಿ ಇಂಗ್ಲಂಡದಿಂದ ಉಗಿಯ ಶಕ್ತಿಯಿಂದ ನಡೆಯುವ ಒಂದು ರೂಲನ್ನು ತರಿಸಿ, ಇಂಗ್ಲಂಡಕ್ಕೆ ಅದರ ಬೆಲೆಯನ್ನು ಕಳಿಸಿದರೆ, ಅದಕ್ಕೆ ನೀವು ದ್ರವ್ಯಶೋಷಣವೆಂದು ಅನ್ನಲಿಕ್ಕಿಲ್ಲೆಂದು ನಾನು ಎಣಿಸುತ್ತೇನೆ. ಇನ್ನು, ಆ ರೂಲು ಹಿಂದುಸ್ತಾನದಲ್ಲಿಯೇ ಆಗಿದ್ದರೆ ಒಳಿತಾಗುತ್ತಿತ್ತೆಂಬ ವಿಚಾರವು ನಿಮ್ಮ ಮನಸ್ಸಿನಲ್ಲಿ ಬರುವದು ಸ್ವಾಭಾವಿಕವೇ ಸರಿ; ಹಾಗೂ ಕೆಲವು ದಿವಸಗಳಲ್ಲಿ ಇಂಥ ರೂಲುಗಳು ಹಿಂದುಸ್ತಾನದಲ್ಲಿ ನಿಶ್ಚಯವಾಗಿ ತಯಾರಾದರೂ ಆಗಬಹುದು. ಈ ತತ್ವವನ್ನು ಲಕ್ಷ್ಯದಲ್ಲಿಟ್ಟು ಅದನ್ನು ಹಿಂದುಸ್ತಾನದಿಂದ ಪರದೇಶಕ್ಕೆ ಹೋಗುವ ಹಣದ ಪ್ರತಿ ಒಂದು ಬಾಬಿಗೆ ಹಚ್ಚಿ ನೋಡಿರಿ. ಉದಾಹರಣಾರ್ಥವಾಗಿ, ಮಹೆ

ತ್ವದ ಒಂದು ಬಾಬನ್ನು ತೆಗೆದುಕೊಳ್ಳುವ. ಇ. ಸ. ೧೯೦೮-೦೯ನೇ ಇಸವಿಯಲ್ಲಿ ಸಾರ್ವಜನಿಕ ಸಾಲ (Public debt)ದ ಬಡ್ಡಿಯೆಂದು ಸುಮಾರು ೨ಕೋಟಿ ೮೫ಲಕ್ಷ ರೂಪಾಯಿಗಳು ಇಂಗ್ಲಂಡಕ್ಕೆ ಕೊಡಲ್ಪಟ್ಟವು. ಯಾವ ಬಂಡವಲದಿಂದಲೇ ಹಿಂದುಸ್ತಾನಕ್ಕೆ ಸದ್ಯದ ಸ್ಥಿತಿಯು ಪ್ರಾಪ್ತವಾಗಿರುತ್ತದೆಯೋ, ಹಾಗೂ ಯಾವ ಬಂಡವಲದಿಂದಲೇ ಹಿಂದುಸ್ತಾನದ ಸಂಪತ್ತಿಯು ಬಹಳವಾಗಿ ಬೆಳೆದಿರುತ್ತದೆಯೋ, ಆ ಬಂಡವಲವು ಬಹಳ ಕಡಿಮೆ ದರದ ಬಡ್ಡಿಯಿಂದ ದೊರೆತದ್ದಕ್ಕಾಗಿ ಈ ಹಣವನ್ನು ಬಡ್ಡಿಯಾಗಿ ಇಂಗ್ಲಂಡಕ್ಕೆ ಕೊಡಬೇಕಾಯಿತು. ಈ ವಿಷಯದಲ್ಲಿ ಸಂಪೂರ್ಣವಾದ ಜ್ಞಾನವನ್ನು ಪಡಕೊಳ್ಳಲಿಕ್ಕೆ ನೀವು ಬಯಸುತ್ತಿದ್ದರೆ, ಪರದೇಶದ ಬಂಡವಲದ ಸಹಾಯದಿಂದ ಉತ್ಕರ್ಷ ಹೊಂದಿದ ಬೇರೆ ಬೇರೆ ದೇಶಗಳ ಸಾರ್ವಜನಿಕ ಸಾಲವು ಎಷ್ಟಿರುವದೆಂಬದನ್ನು ವಿಚಾರಿಸಿರಿ. ಉದಾಹರಣಾರ್ಥವಾಗಿ, ಆಸ್ಟ್ರೇಲಿಯಾ ದ್ವೀಪದಲ್ಲಿ ಒಟ್ಟಿಗೆ ೪೫ ಲಕ್ಷ ಜನಸಂಖ್ಯೆಯು ಇರುವದು. ಆ ದ್ವೀಪದಲ್ಲಿದ್ದ ವಿಸ್ತಾರವಾದ ಅಡವಿಗಳನ್ನು ಕಡಿದು, ಅಲ್ಲಿಯ ಪ್ರದೇಶಗಳನ್ನು ಜನವಸತಿಗೆ ತಕ್ಕವುಗಳಾಗುವಂತೆ ಮಾಡಿ, ಅವುಗಳಿಗೆ ಸದ್ಯದ ವೈಭವವುಳ್ಳ ಸ್ವರೂಪವನ್ನುಂಟು ಮಾಡಲಿಕ್ಕೆ ಇಷ್ಟು ಸಣ್ಣ ದ್ವೀಪಕ್ಕೂ ಕೂಡ ಸುಮಾರು ೩೭೦ಕೋಟಿ ರೂಪಾಯಿಗಳ ವರೆಗೆ ಸಾರ್ವಜನಿಕ ಸಾಲವನ್ನು ಮಾಡಬೇಕಾಯಿತು. ಆದರೆ ಆಸ್ಟ್ರೇಲಿಯಾ ದೇಶವು ಬ್ರಿಟಿಶ್ ಸಾಮ್ರಾಜ್ಯದ ಒಂದು ಭಾಗವಾಗಿರುವದರಿಂದ ಅವರ ಸಾರ್ವಜನಿಕ ಸಾಲಕ್ಕಿಂತಲೂ, ಬೇರೆ ಯಾವದೊಂದು ದೇಶದ ಸಾಲದ ವಿಷಯವಾಗಿ ವಿಚಾರ ಮಾಡುವದು ನಿಮಗೆ ಯುಕ್ತವಾಗಿ ತೋರಬಹುದು. ೫ ಕೋಟಿ ಜನಸಂಖ್ಯೆಯುಳ್ಳ ಜಪಾನದೇಶದ ರಾಷ್ಟ್ರೀಯ ಸಾಲವು ೧೭೭ಕೋಟಿ ಇರುವದು. ಕೇವಲ ೬೫ ಲಕ್ಷ ಜನಸಂಖ್ಯೆಯುಳ್ಳ ಅರ್ಜಂಟಾಯಿನ ದೇಶಕ್ಕೆ ೧೪೩ ಕೋಟಿ ಸಾಲವಿರುವದು. ಹೀಗಿದ್ದು ೨೩ಕೋಟಿ ಜನವಸತಿಯುಳ್ಳ ಬ್ರಿಟಿಶ್ ಹಿಂದುಸ್ತಾನಕ್ಕೆ ೧೯೦೮ರಲ್ಲಿ ಒಟ್ಟಿಗೆ ೩೮೯ ಕೋಟಿ, ೬೫ ಲಕ್ಷ ರೂಪಾಯಿ ರಾಷ್ಟ್ರೀಯ ಸಾಲವಿತ್ತು. ಈ ಅಂಕೆಗಳಿಂದ ಈ ವಿಷಯದಲ್ಲಿ ನೀವು ವಿಚಾರಮಾಡತಕ್ಕಂಥ ಅಂಶಗಳು ಬಹಳ ಇರುವವೆಂದು ಕಂಡು ಬರುವದು; ಹಾಗೂ ಈ ವಿಷಯದ ಸಂಬಂಧದಿಂದ ಹೆಚ್ಚಿಗೆ ಜ್ಞಾನವನ್ನು ಸಂಪಾದಿಸುವ ಜಿಜ್ಞಾಸೆಯು ನಿಮ್ಮಲ್ಲಿ ಹುಟ್ಟಬಹುದೆಂದು ನಾನು ಎಣಿಸುತ್ತೇನೆ.

ಸರಕಾರದ ವೆಚ್ಚ.

ಉದಾಹರಣಾರ್ಥವಾಗಿ, ಹಿಂದುಸ್ತಾನದಲ್ಲಿ ಸರಕಾರದ ವೆಚ್ಚವು ಮಿತಿಮಿಾರಿ ಇರುತ್ತದೆಂದು, ನಿಮ್ಮ ತಿಳುವಳಿಕೆಯು ಇರಬಹುದು. ಆದರೆ ಕ್ಷೇತ್ರಫಲದ ಮಾನದಿಂದ ಮುಂಬಯಿ ಇಲಾಖೆಗಿಂತಲೂ ಸಣ್ಣದಾದ ಜಪಾನ ದೇಶವು ವರ್ಷಕ್ಕೆ ೭೮ಕೋಟಿ ರೂಪಾಯಿ ವೆಚ್ಚ ಮಾಡುತ್ತದೆ. ಇ. ಸ. ೧೯೦೮-೦೯ರಲ್ಲಿ ಬ್ರಿಟಿಶ್ ಹಿಂದುಸ್ತಾನವು ೧೧೦ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿರುತ್ತದೆ. ಅದರಲ್ಲಿಯೂ, ೭೪ ಕೋಟಿ, ೩೫ ಲಕ್ಷರೂಪಾಯಿ ಮಾತ್ರ ನಿವಳ ವೆಚ್ಚವಿತ್ತು. ಇನ್ನು, ನೀವು ಸೂಕ್ಷ್ಮದೃಷ್ಟಿಯ ಟೀಕಾಕಾರರಿದ್ದರೆ,-"ಈ ಅಂಕೆಗಳಿಂದ ಹಿಂದುಸ್ತಾನದ ದ್ರವ್ಯಶೋಷಣದ ಯಥಾರ್ಥ ಕಲ್ಪನೆಯು ನಮ್ಮ ಮನಸಿನಲ್ಲಿ ಬರುವದಿಲ್ಲ. ಯಾಕಂದರೆ ಬ್ರಿಟಿಶ್ ವ್ಯಾಪಾರಸ್ಥರೂ ಬೇರೆ ದೇಶಗಳ ವ್ಯಾಪಾರಸ್ಥರೂ ತಮ್ಮ ಲಾಭದ ಕೆಲವು ಭಾಗವನ್ನು ಈ ದೇಶದ ಹೊರಗೆ ಕಳುಹುತ್ತಿರುವರು; ಆ ಸಂಬಂಧದ ಅಂಕೆಗಳು ಇದರಲ್ಲಿ ಬಂದಿರುವದಿಲ್ಲ" ವೆಂದು ಅನ್ನಬಹುದು. ಈ ನಿಮ್ಮ ಮಾತಿನಲ್ಲಿ ಕೆಲ ಸತ್ಯಾಂಶವೂ ಇರುವದು. ಯಾಕಂದರೆ ಈ ಸಂಬಂಧದ ನಿಶ್ಚಿತವಾದ ಅಂಕೆಗಳು ದೊರೆಯುವದು ಅಶಕ್ಯವಿರುತ್ತದೆ. ಆದರೆ ಆ ವ್ಯಾಪಾರಸ್ಥರು ಹಿಂದುಸ್ತಾನದ ಸಂಪದುತ್ಪಾದನದ ಅನೇಕ ಕೆಲಸಗಳನ್ನು ಕೈಕೊಂಡು, ಅವುಗಳನ್ನು ದೊಡ್ಡ ಪ್ರಮಾಣದಿಂದಲೂ, ಬಳ್ಳೇ ಸಾಹಸದಿಂದಲೂ, ಮಾಡುತ್ತಿರುವರೆಂಬದು ನಿಮ್ಮ ಲಕ್ಷದಲ್ಲಿ ಬರುವದು. ಅವರ ಈ ಪ್ರಚಂಡವಾದ ಉದ್ಯೋಗಗಳನ್ನು ಆಶ್ರಯಿಸಿ, ಎಷ್ಟೋ ಹಿಂದೀ ಜನರು ತಮ್ಮ ಚರಿತಾರ್ಥವನ್ನು ಸಾಗಿಸಿಕೊಳ್ಳುತ್ತಿರುವರು. ಇದಲ್ಲದೆ ಇನ್ನೊಂದು ಸಂಗತಿಯನ್ನು ನೀವು ಜ್ಞಾಪಕಕ್ಕೆ ತರಬಹುದು. ಅದೇನಂದರೆ, ಇಂಗ್ಲಂಡವೂ ಬೇರೆ ಯುರೋಪದ ದೇಶಗಳೂ ಅಮೇರಿಕವೂ ಬೇರೆ ಬೇರೆ ಮಿಶನುಗಳಿಗೆ ಸಹಾಯರೂಪವಾಗಿ ಕೊಡುವ ಧನವು ಆಯಾ ದೇಶಗಳ ಪ್ರಚಂಡವಾದ ದ್ರವ್ಯಶೋಷಣವೇ ಇರುತ್ತದೆ. ಈ ದ್ರವ್ಯಶೋಷಣದಿಂದ ಸಾವಿರಗಟ್ಟಲೆ ಅನಾಥ ಹಿಂದೀ ಹುಡುಗರ ಪಾಲನ-ಪೋಷಣ ಶಿಕ್ಷಣಗಳು ನಡೆದು ಅವರ ಸ್ಥಿತಿಯು ಸುಧಾರಿಸುತ್ತಿರುವದು. ನೆರವಿನ ಅವಶ್ಯಕತೆಯುಳ್ಳವರಿಗೆ ತಕ್ಕ ಸಹಾಯವನ್ನು ಮಾಡಿ, ಇಡೀ ಮನುಷ್ಯಜಾತಿಯ ಬಂಧುತ್ವದ ಸಂಬಂಧವನ್ನು ನಿದರ್ಶನಕ್ಕೆ ತಂದು ಕೊಡುವದ

ರಿಂದ ದೊರೆಯುವ ಮಾನಸಿಕ ಸಮಾಧಾನದ ಹೊರತು, ಬೇರೆ ಯಾವ ಪ್ರತಿಫಲವೂ ಆ ದೇಶಗಳಿಗೆ ಈ ಹಣದಿಂದ ದೊರೆಯುವದಿಲ್ಲ. ಆದದರಿಂದ ಇದು ನಿಜವಾಗಿಯೇ ದ್ರವ್ಯಶೋಷಣವು.

ಹಿಂದುಸ್ಥಾನದ ಊರ್ಜಿತಾವಸ್ಥೆ.

ಈ ವಿಷಯದಲ್ಲಿ ನಿಮಗೆ ಕಟ್ಟಕಡೆಗೆ ಹೇಳತಕ್ಕ ಇನ್ನೊಂದು ಸಂಗತಿಯುಂಟು. ಹಿಂದುಸ್ಥಾನದಲ್ಲಿ ⅕ ಕ್ಕಿಂತ ಹೆಚ್ಚು ಜನರು ದೇಶೀ ಸಂಸ್ಥಾನಗಳಲ್ಲಿದ್ದು ಸ್ವರಾಜ್ಯವನ್ನು ಅನುಭೋಗಿಸುತ್ತಿರುವದರಿಂದ, ಈ ಪ್ರಜೆಗಳು ಹಿಂದುಸ್ಥಾನದ ದ್ರವ್ಯಶೋಷಣದ ಕೇಡಿನಲ್ಲಿ ಪಾಲುಗಾರರಾಗುವ ಕಾರಣವಿಲ್ಲ. ಅಂದ ಮೇಲೆ, ದ್ರವ್ಯಶೋಷಣದಿಂದ ಬ್ರಿಟಿಶರ ಅಧೀನದಲ್ಲಿದ್ದ ಹಿಂದುಸ್ಥಾನದ ಭಾಗವು ಹಾಳಾಗುತ್ತ ಇದ್ದದ್ದೇ ನಿಜವಿದ್ದರೆ, ದೇಶೀ ಸಂಸ್ಥಾನಗಳಲ್ಲಿ ದ್ರವ್ಯಶೋಷಣವು ಇಲ್ಲದ ಮೂಲಕವಾಗಿ, ಅಲ್ಲಿಯ ಪ್ರಜೆಗಳು ಬ್ರಿಟಿಶ್ ಹಿಂದುಸ್ಥಾನದ ಪ್ರಜೆಗಳಿಗಿಂತಲೂ ಹೆಚ್ಚು ಉತ್ಕರ್ಷವನ್ನು ಹೊಂದಿರಬೇಕಾಗಿತ್ತು; ಮತ್ತು ಅವರ ಉತ್ಕರ್ಷವನ್ನು ಕಂಡು, ಬ್ರಿಟಿಶ್ ಹಿಂದುಸ್ಥಾನದೊಳಗಿನ್ನ ಪ್ರಜೆಗಳು ಗುಳೆ ಕಟ್ಟಿಕೊಂಡು ಗುಂಪುಗುಂಪಾಗಿ ಸಂಸ್ಥಾನಗಳಿಗೆ ಹೋಗುವದು ನಿಮ್ಮ ದೃಷ್ಟಿಗೆ ಬೀಳಬೇಕಾಗಿತ್ತು. ಆದರೆ ನಿಜವಾಗಿ ಹಿಂದುಸ್ಥಾನವು ನಷ್ಟವಾಗುತ್ತಿರುವ ಲಕ್ಷಣಗಳೇನಾದರೂ ಕಾಣುತ್ತಿರುವವೋ? ಇಂಥ ಲಕ್ಷಣಗಳು ತೋರುವದಂತೂ ಹಾಗಿರಲಿ. ಇದಕ್ಕೆ ವಿಪರೀತವಾಗಿ, ಅದು ಉತ್ಕರ್ಷವನ್ನು ಹೊಂದುತ್ತಿರುವದು. ಸದ್ಯಕ್ಕೆ ಈ ದೇಶದಲ್ಲಿ ಎಷ್ಟು ಸಂಪತ್ತು ಇರುವದೋ, ಮತ್ತು ಅದು ಎಷ್ಟು ದೊಡ್ಡ ಪ್ರಮಾಣದಿಂದ ಈಗ ಅಭಿವೃದ್ಧಿ ಹೊಂದುತ್ತಿರುವದೋ ಅಷ್ಟು ಸಂಪತ್ತೂ ಅಭಿವೃದ್ಧಿಯೂ ಮುಂಚೆ ಈ ದೇಶದಲ್ಲಿ ಯಾವ ಕಾಲದಲ್ಲಿಯೂ ಇರಲಿಲ್ಲ. ಬ್ರಿಟಿಶರ ಆಳಿಕೆಯಲ್ಲಿ ಕೆಲವು ವರ್ಗದ ಜನರು ಬಳ್ಳೇ ಧನಾಢ್ಯರಾಗಿರುವರು. ಬೇರೆ ದೇಶಗಳಂತೆ ಈ ದೇಶದಲ್ಲಿಯೂ ಸಂಪತ್ತು ಸರಿಯಾಗಿ ಹಂಚಲ್ಪಟ್ಟಿಲ್ಲೆಂಬದು ನಿಜವು. ಆದರೂ ಬಹುಜನಸಮಾಜವು ಮೊದಲಿಗಿಂತ ಹೆಚ್ಚು ಸುಖದಿಂದ ಇರುವದೆಂಬದರಲ್ಲಿ ಎಳ್ಳಷ್ಟು ಸಂದೇಹವಿಲ್ಲ. ನಾನು ಈ ದೇಶದಲ್ಲಿ ಕಳೆದ ಅಲ್ಪಾವಧಿಯಲ್ಲಿಯೇ ಈ ದೇಶದಲ್ಲಿ ಸುಧಾರಣೆಯು ಕಂಡು ಬಂತೆಂದು ನನ್ನ ಅಭಿಪ್ರಾಯವಿಲ್ಲ. ಆದರೆ ಈ ದೇಶದ ಒಕ್ಕಲಿಗರ ಆಯುಷ್ಯಕ್ರಮದಲ್ಲಿ ಸ್ಪಷ್ಟವಾಗಿ ಕಂಡು ಬರುವಂಥ ಸುಧಾ

ಕಣೆಯು ದೃಷ್ಟಿಗೆ ಬೀಳಹತ್ತಿರುವದೆಂದು, ಪುಣೆಯೊಳಗಿನ ಇಬ್ಬರು ಸನ್ಮಾನ್ಯರಾದ ವೃದ್ಧನಾಗರಿಕರು ನನಗೆ ಮೊನ್ನೆ ಮೊನ್ನೆ ಹೇಳುತ್ತಿದ್ದರು; ಮತ್ತು ಹಿಂದುಸ್ತಾನದ ಇತಿಹಾಸವನ್ನು ನಾನು ಅವಲೋಕಿಸಿದ್ದರ ಮೇ ಲಿಂದ, ಬ್ರಿಟಿಶರ ಆಳಿಕೆಯಲ್ಲಿ ಹಿಂದುಸ್ತಾನದ ಜನಸಂಖ್ಯೆಯು ಬಹಳ ಬೆಳೆದಾಗ್ಯೂ ಬಹುಜನಸಮಾಜದ ಸ್ಥಿತಿಯು ಈ ಕಾಲಕ್ಕೆ ಚಲೋ ಇದ್ದಂತೆ ಮುಂಚೆ ಎಂದೂ ಇರಲಿಲ್ಲೆಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಈ ದೇಶದ ಊರ್ಜಿತಸ್ಥಿತಿಯನ್ನು ನಿಶ್ಚಿತವಾಗಿ ತೋರಿಸುವಂಥ ಮೂರು ಲಕ್ಷಣಗಳುಂಟು:—(೧) ಈ ದೇಶದ ಭೂಮಿಗಳ ಬೆಲೆಯು ಏರಹತ್ತಿರುವದು. ಕೆಲಕೆಲವು ಕಡೆಗಂತೂ ಈ ಏರಿಕೆಯ ಪ್ರಮಾಣವು ಬಹು ದೊಡ್ಡದಿರುವದು. (೨) ಕೂಲಿಯ ದರವು ಏರುತ್ತ ನಡೆದಿರುವದು. ನನ್ನ ಅಲ್ಪಕಾಲದ ಆಳಿಕೆಯಲ್ಲಿ ಕೂಡ, ಕೂಲಿಯು ಬಹಳ ಏರಿರುವದು. ಹಾಗೂ, (೩) ಈ ದೇಶದಿಂದ ಪರದೇಶಕ್ಕೆ ಹೋಗುವ ಬಂಗಾರಕ್ಕಿಂತ ಪರದೇಶದಿಂದ ಈ ದೇಶಕ್ಕೆ ಬರುವ ಬಂಗಾರವು ಹೆಚ್ಚು ಇರುವದು.

ಈ ಹೊತ್ತಿನ ನನ್ನ ವ್ಯಾಖ್ಯಾನವು ನಿಮಗೆ ನೀರಸವಾಗಿ ತೋರುವ ಸಂಭವವಿರುತ್ತದೆ. ಆದರೆ ಮೇಲೆ ಹೇಳಿದ ರಾಜಕೀಯ ಪ್ರಶ್ನೆಗಳು ಎಷ್ಟು ತೊಡಕುಳ್ಳವಿರುವವು? ಅವುಗಳ ಸಂಬಂಧದಿಂದ ತಮ್ಮ ಸ್ವಂತ ಅಭಿಪ್ರಾಯವನ್ನು ಸಿದ್ಧಮಾಡಿಕೊಳ್ಳಬೇಕಾದರೆ ಅವುಗಳ ಅಧ್ಯಯನವನ್ನು ಎಷ್ಟು ಮಾಡಬೇಕಾಗುವದು? ಮತ್ತು ಸಾಹಸವುಳ್ಳ ವಿಧಾನಗಳನ್ನು, ಅವು ಬರೇ ಅಚ್ಚುಹಾಕಲ್ಪಟ್ಟಿರುವವೆಂಬ ಕಾರಣವನ್ನಷ್ಟೇ ಲಕ್ಷದಲ್ಲಿಟ್ಟು ಅವುಗಳ ಸತ್ಯಾಸತ್ಯತೆಯ ವಿಚಾರ ಮಾಡದೆ ನಿಜವೆಂದು ನಂಬಿ ನಡೆಯುವದು ಎಷ್ಟು ಘಾತಕವಿರುವದು? ಇವೇ ಮೊದಲಾದ ಸಂಗತಿಗಳನ್ನು ನಾನು ನಿಮಗೆ ಮನದಟ್ಟಾಗುವಂತೆ ಹೇಳಿದ್ದೇನೆಂದು ಆಶಿಸುತ್ತೇನೆ.

ನಿಮ್ಮ ಕಾಲೇಜವು ಒಂದು ಸಣ್ಣ ಜಗತ್ತೇ ಇರುವದೆಂದು ಹೇಳಬಹುದು. ಈ ಜಗತ್ತಿನಲ್ಲಿ ನೀವು ಪ್ರತ್ಯಕ್ಷವಾಗಿ ಹೊಂದುವ ಶಿಕ್ಷಣದ ಹೊರತು, ನಿಮ್ಮ ಭಾವೀ ಆಯುಷ್ಯಕ್ರಮದಲ್ಲಿ ನಿಮಗೆ ಉಪಯೋಗಿಸುವಂಥ ಅನೇಕ ಸಂಗತಿಗಳನ್ನು ನೀವು ಸ್ವತಃ ಕಲಿಯಬಹುದು. ಆಟಗಳಲ್ಲಿ ನಿಮಗೆ ಬಹಳ ಸೇರಿಕೆ ಇರುವದನ್ನು ಕಂಡು ನನಗೆ ಬಹಳ ಸಂತೋಷವಾಗುತ್ತದೆ. ಉತ್ತಮವಾದ ಆಟಗಳನ್ನು ಯೋಗ್ಯ ಪ್ರಕಾರದ ಮನಃಪ್ರ

ವೃತ್ತಿಗಳಿಂದ ಆಡುತ್ತ ಹೋಗುವದು ಉತ್ತಮವಾದ ಶೀಲವನ್ನುಂಟುಮಾಡು ದಕ್ಕೆ ಅತ್ಯಂತ ಸಹಾಯಕಾರಿಯಾಗಿರುವದು. ಬರೆ ಪುಸ್ತಕದ ಜ್ಞಾನಕ್ಕಿಂತ ಶೀಲವು ಬಹಳ ಹೆಚ್ಚು ಮಹತ್ವವುಳ್ಳದ್ದಿರುತ್ತದೆ. ಬ್ರಿಟಿಶ್ ಜನರಲ್ಲಿಸಾಲೆಗ ಳಲ್ಲಿಯೂ ಕಾಲೇಜಗಳಲ್ಲಿಯೂ ಇರುವ ವಿದ್ಯಾರ್ಥಿಗಳ ಆಯುಷ್ಯಕ್ರಮ ಕ್ಕೆ ಸಂಬಂಧಿಸಿದಂಥ ಒಂದು ಲೋಕೋಕ್ತಿಯುಂಟು. ನೀತಿಯ ಸಂಬಂಧ ದಿಂದ, ನಿರ್ದೋಷವಾದ ಆಟಗಳ ಬೆಲೆಯು ಎಷ್ಟಿರುವದೆಂಬದು ಈ ಲೋಕೋಕ್ತಿಯಿಂದ ಸ್ಪಷ್ಟವಾಗುತ್ತದೆ. ಇಂಗ್ಲಿಷ ಭಾಷೆಯಲ್ಲಿ "ಆಟವ ನ್ನು ಆಡೋಣ" (To play the game) ಎಂಬ ಶಬ್ದಗಳಲ್ಲಿ ನಿಜವಾದ ಪೌ ರುಷ, ನಿಜವಾದ ನಾಗರಿಕತೆ, ನಿಜವಾದ ರಾಷ್ಟ್ರೀಯತ್ವ ಇವುಗಳ ಪೋಷ ಣೆಗೆ ಬೇಕಾಗುವ ಅತ್ಯಂತ ಅವಶ್ಯವಾದ ಗುಣಗಳ ಸಮಾವೇಶವಾಗುತ್ತದೆ. ಈ ಶಬ್ದಗಳ ಅರ್ಥಕ್ಕನುಸಾರವಾಗಿ ಆಟಗಳನ್ನು ಆಡಿದ ಮನುಷ್ಯರು, ಸಾಮಾನ್ಯ ಹಿತದ ಸಲುವಾಗಿ ಸ್ವಂತದ ಹಿತಾಹಿತಗಳನ್ನು ಬದಿಗೊತ್ತಲಿಕ್ಕೆ ಸಿದ್ಧರಾಗುವರು; ಅವರು ತಮ್ಮ ಯಾವತ್ತು ವ್ಯವಹಾರಗಳನ್ನು ಪ್ರಾಮಾಣಿ ಕತನದಿಂದಲೂ ನ್ಯಾಯದಿಂದಲೂ ಮಾಡುವರು; ಕ್ರಿಕೆಟ್ ಆಟದಲ್ಲಿ ಜಯ ಶಾಲಿಗಳಾಗುವದಕ್ಕೆ ಅವಶ್ಯವಾಗಿರುವದಕ್ಕಿಂತಲೂ ಸಾಮಾಜಿಕ ಐಕ್ಯವ ನ್ನುಂಟು ಮಾಡಲಿಕ್ಕೆ ಹೆಚ್ಚು ಅವಶ್ಯವಾಗಿದ್ದಂಥ ನಿಯಮಗಳನ್ನು ಅವರು ಅಚ್ಚಳಿಯದೆ ಅನುಸರಿಸಿ ನಡೆಯುವರು; ಮತ್ತು ವಿಪತ್ತಿನಲ್ಲಿ ಸಿಕ್ಕ ತಮ್ಮ ಬಾಂಧವರ ಪಕ್ಷವನ್ನು ಅವರು ಎಂದೂ ಬಿಡಲಾರರು. ನೀವು ನಿಮ್ಮ ಸದ್ಯದ ಹಾಗು ಮುಂದಿನ ಆಯುಷ್ಯಕ್ರಮದಲ್ಲಿ ನಿಮ್ಮ ಹಟವೇ ನಡೆಯಬೇಕೆಂಬ ಬುದ್ಧಿಯುಳ್ಳವರಾಗದೆ, ನಿಜವಾದ ಬಂಧುತ್ವದಿಂದಲೂ ಗಾಂಭೀರ್ಯದಿಂದಲೂ ಪ್ರೇಮದಿಂದಲೂ ಜಗತ್ತಿನ ವ್ಯವಹಾರವೆಂಬ ಆಟವನ್ನು ಆಡಬೇಕೆಂದು ನಾನು ಅಪೇಕ್ಷಿಸುತ್ತೇನೆ. ನಿಮ್ಮ ಈಗಿನ ಹಾಗೂ ಮುಂದಿನ ಆಯುಷ್ಯಕ್ರಮದ ಸಂಬಂಧದಿಂದ ಇದಕ್ಕೂ ಹೆಚ್ಚು ಒಳ್ಳೆಯದಾದ ಅಪೇಕ್ಷೆಯನ್ನು ಮಾಡುವದು ಶಕ್ಯವಿಲ್ಲೆಂದು ನನಗೆ ತೋರುತ್ತದೆ. ಈ ಪ್ರಸಂಗದಲ್ಲಿ ಬುದ್ಧಮುನಿಯ ಕೆಲವು ವಚನಗಳನ್ನು ನಿಮ್ಮ ಮನಸಿನಲ್ಲಿ ಬಿಂಬಿಸುವದು ನನಗೆ ಇಷ್ಟವಾಗಿ ತೋರುತ್ತದೆ. ಅವು ಯಾವದೆಂದರೆ:—"ನೀವು ಸ್ವಾರ್ಥದ ಆಸಕ್ತಿಯನ್ನು ಬಿಟ್ಟು ಬಿಡಿರಿ; ಯಾರಿಗೂ ನಿಷ್ಠುರ ಮಾತುಗಳನ್ನು ಆಡಬೇಡಿರಿ; ಲೋಹದಂತೆ ಸ್ವದ್ಯ

ಥರೂ ನಿಶ್ಚಯವುಳ್ಳವರೂ ಆಗಿರಿ; ಆದರೆ ನಿಮ್ಮ ಅಂತಃಕರಣವು ನಿಶ್ಚಯ ವುಳ್ಳದ್ದೂ ಪ್ರೀತಿಯುಕ್ತವಾದದ್ದೂ ಆಗಿರಲಿ." ಇಲ್ಲಿ ನಾನು ನಿಮ್ಮ ಮಿತ್ರ ನೆಂಬ ಸಂಬಂಧದಿಂದಲೂ, ಹಿತಚಿಂತಕನೆಂಬ ಸಂಬಂಧದಿಂದಲೂ ಇದಕ್ಕೂ ಹೆಚ್ಚು ಹಿತಕರವಾದ ಉಪದೇಶವನ್ನು ನಿಮಗೆ ಮಾಡಲಾರೆನು. ಕೇವಲ ದೇಶಸೇವೆಯನ್ನು ಮಾಡಬೇಕೆಂಬ ಉದ್ದೇಶದಿಂದ ತೀರ ಸ್ವಲ್ಪ ಸಂಬಳವನ್ನು ತೆಗೆದುಕೊಂಡು ಶಿಕ್ಷಣದ ಕೆಲಸವನ್ನು ಮಾಡುವ ಅಧ್ಯಾಪ ಕರಿಂದ ಈ ಕಾಲೇಜವು ನಡಿಸಲ್ಪಟ್ಟಿರುವದು. ಇಂಥ ಗುಣವುಳ್ಳವರು ನಿಮ್ಮ ಈ ಕಾಲೇಜದ ಹೊರತು ಬೇರೆ ಕಡೆಗೆ ಕಂಡು ಬರುವದು ಅಪ ರೂಪ. ಅಧ್ಯಾಪಕರ ಈ ಸ್ವಾರ್ಥತ್ಯಾಗದ ಬೆಲೆಯು ನನಗೆ ಎಷ್ಟು ದೊಡ್ಡದಾಗಿ ಕಾಣುವದೋ ಅಷ್ಟೇ ದೊಡ್ಡದಾಗಿ ಅವರ ಛಾತ್ರವರ್ಗಕ್ಕೂ ಕಾಣಿಸುತ್ತಿರಬಹುದೆಂದು ನಾನು ಆಶಿಸುತ್ತೇನೆ. ನಿಮ್ಮನ್ನು ಒಳ್ಳೇ ವಿದ್ಯಾವಂತರನ್ನಾಗಿ ಮಾಡಲಿಕ್ಕೆ ಅವರು ಬಹಳ ಪ್ರಯತ್ನಗಳನ್ನು ಮಾಡು ತ್ತಿರುವರೆಂದು ನನ್ನ ನಂಬಿಗೆಯುಂಟು; ಹಾಗೂ ನೀವು ಸದ್ಗೃಹಸ್ಥರಾಗ ಬೇಕೆಂತಲೂ, ಹಿಂದುಸ್ತಾನದ ನಿಜವಾದ ನಾಗರಿಕರಾಗಬೇಕೆಂತಲೂ, ನಿಮ್ಮ ಮುಂದಿನ ಆಯುಷ್ಯಕ್ರಮವು ಆರಂಭವಾದ ಮೇಲೆ ನೀವು ಹಿಂದೀ ರಾಷ್ಟ್ರಘಟನೆಯ ಕೆಲಸದಲ್ಲಿ ನಿಮಗೆ ಭೂಷಣಾಸ್ಪದವಾದಂಥ ಮಹತ್ವದ ಕಾರ್ಯವನ್ನು ಮಾಡುವದಕ್ಕೆ ಸಮರ್ಥರಾಗಬೇಕೆಂತಲೂ ಅವರು ಪೂರ್ಣ ಉತ್ಸುಕರಾಗಿರುವರೆಂದು ನಾನು ನಂಬಿದ್ದೇನೆ. ಈ ರಾಷ್ಟ್ರಘಟ ನೆಯ ಕಾರ್ಯವು ನಿಮ್ಮ ಜೀವಮಾನದಲ್ಲಿ ಈಡೇರಲಾರದು. ಆದರೆ ಶಕ್ಯ ವಾದ ಯೋಗ್ಯಮಾರ್ಗದಿಂದ ಹಿಂದೀ ಜನರು ತಮ್ಮ ಪ್ರಯತ್ನಗಳನ್ನು ನಡಿಸಿದರೆ, ಅವರ ಪ್ರಯತ್ನಗಳು ಯೋಗ್ಯ ಕಾಲದಲ್ಲಿ ಫಲಸ್ವರೂಪಕ್ಕೆ ಬರು ವವೆಂಬಲ್ಲಿ ಏನೇನು ಸಂದೇಹವಿಲ್ಲ. ಎಲೈ ಫರ್ಗ್ಯುಸನ್ನ ಕಾಲೇಜದ ವಿದ್ಯಾರ್ಥಿಗಳೇ, ಈ ನಮ್ಮ ಉದ್ದೇಶವು ನೇರವೇರುವದಕ್ಕೆ ನೀವೆಲ್ಲರೂ ಸಹಾಯ ಮಾಡಬೇಕೆಂತಲೂ, ಈ ಪ್ರಕಾರ ನೀವು ನಮಗೆ ಸಹಾಯ ಮಾಡುವಾಗ್ಗೆ ನಿಮ್ಮ ಆಯುಷ್ಯಕ್ರಮವು ಸುಖವುಳ್ಳದ್ದೂ ಉತ್ಕರ್ಷವು ಳ್ಳದ್ದೂ ಆಗಲೆಂತಲೂ ನಾನು ಅಂತಃಕರಣಪೂರ್ವಕವಾಗಿ ಅಪೇಕ್ಷಿ ಸುತ್ತೇನೆ.

ವಿದ್ಯಾಖಾತೆಯ ನೋಟೀಸುಗಳು.

ನಂಬರು. ೫೦೪೫. ೧೯೧೦|೧೧

ಕೆಳಗೆ ಪ್ರಸಿದ್ಧ ಮಾಡಿದ ಮೆ|| ಡಾಯರೆಕ್ಟರ ಸಾಹೇಬರವರ ನಂಬರ ೫೦೪೫/೫-೮-೧೯೧೦ ನೇ ಹುಕುಮು ದಕ್ಷಿಣ ಭಾಗದ ಶಾಲಾಮಾಸ್ತರರಿಗೂ ಲಾಗೂ ಇರುತ್ತದೆ.

ಎ. ಶಾ. ಪ.

ನಂಬರು ೫೦೪೫—೧೯೧೦-೧೧

ಪುಣೆ – ಡಾಯರೆಕ್ಟರ ಅಫ್ ಪಬ್ಲಿಕ್

ಇನ್‌ಸ್ಟ್ರಕ್‌ಶನ್‌ರವರ ಆಫೀಸು.

೫-೮-೧೯೧೦.

ಯಾದಿ:—ಉತ್ತರ ಭಾಗದ ಎಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬರವರ ನಂಬರ ೪೭೬೮/೨೫-೭-೧೯೧೦ ನೇ ಪತ್ರದ ಸಂಬಂಧವಾಗಿ ತಿಳಿಸುವದೇನಂದರೆ:— ಡ್ರಾಯಿಂಗ ಟೀಚರ್ಸ ಪರೀಕ್ಷೆಗೆ ಹೋಗಲಪೇಕ್ಷಿಸುವ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೂ, ದೇಶಭಾಷೆಯ ಸಾಲೆಗಳ ಮಾಸ್ತರರಿಗೂ ಪರೀಕ್ಷೆಯ ಫೀ ಮಾಫೀ ಮಾಡಿರುತ್ತದೆ.

W. H. SHARP,

ಡಾಯರೆಕ್ಟರ ಅಫ್ ಪಬ್ಲಿಕ್

ಇನ್‌ಸ್ಟ್ರಕ್‌ಶನ್.

ಪತ್ರ ಕಳಿಸಿದವರಿಗೆ ಸೂಚನೆಗಳು.

ಮಿ|| ಶ್ರೀನಿವಾಸ ವೆಂಕಟೇಶ ಚಿಮ್ಮಲಗಿ ಹೆಡ್ ಮಾಸ್ತರ ಶಾಳಾ ಶೊರಪಾಲಿ ಇವರು ಶಾಲಾಪತ್ರಿಕದ ಕಳೆದ ನವಂಬರ ತಿಂಗಳ ಸಂಚಿಕೆಯಲ್ಲಿ ಮುದ್ರಿಸಿದ ಡಾಕ್ಟರ ಭಾಂಡಾರಕರರವರ ವ್ಯಾಖ್ಯಾನದ ಸಂಬಂಧದಿಂದ ಮಿ|| ರಾಜವಾಡೆ ಎಂಬವರು ಧರ್ಮವೆಂಬ ಮಾಸಿಕ ಪುಸ್ತಕದ ೧|೨ ನೇ ಅಂಕಗಳಲ್ಲಿ ಕೊಟ್ಟ ಉತ್ತರದ ಭಾಗವನ್ನು ಕನ್ನಡಿಸಿ ಕಳುಹಿದ್ದಾರೆ. ಈ ವಿಷಯವು ಮಹತ್ವವುಳ್ಳದ್ದಿರುವದರಿಂದ, ಮಿ|| ಚಿಮ್ಮಲಗಿ ಇವರು ಕನ್ನಡಿಸಿದ ಮೂಲ ಅಂಕಗಳನ್ನು ಕಳುಹಿ ಕೊಟ್ಟರೆ ನೋಡಿ ಅವರ ಕನ್ನಡ ಭಾಷಾಂತರವು ಸರಿಯಾಗಿರುವದೆಂದು ಕಂಡರೆ ಮುದ್ರಿಸುವೆವು. ಅಥವಾ, ಮಿ|| ರಾಜವಾಡೆಯವರ ಸಮಗ್ರ ಲೇಖದ ಭಾಷಾಂತರವನ್ನಾದರೂ ಮುದ್ರಿಸಬಹುದು. ಅಂಕಗಳನ್ನು ನೋಡಿ ಕಳಿಸಬಾರದೀತು. [ಎ. ಶಾ. ಪ.

ನಾಗಾರ್ಜುನನ ವಿಷಯಕ್ಕೆ ಕರ್ನಾಟಕ ಪ್ರಾಂತದಲ್ಲೂ ವಿಶೇಷವಾಗಿ ಧಾರವಾಡ ಜಿಲ್ಹೆಯಲ್ಲೂ ಪ್ರಖ್ಯಾತಿಯುಂಟು. ಗದಗಿನ ಹತ್ತರ ಕಪ್ಪತ್ತ ಗುಡ್ಡದಲ್ಲಿ ಇವನು ರಸವಿದ್ಯೆಯ ಭಟ್ಟಿಯನ್ನು ಹಾಕಿ ನಾಗಾಂವಿಯಲ್ಲಿ ಸದಾ ವಾಸಿಸುತ್ತಿದ್ದನೆಂದೂ ಕಪೋತ ಪರ್ವತವನ್ನೆಲ್ಲ ಹೇಮಾಚಲದಂತೆ ಬಂಗಾರದ್ದನ್ನು ಮಾಡಿ ಲಕ್ಷ್ಮಿಯ ಬೆಲೆಯನ್ನೇ ಇಲ್ಲದಂತೆ ಮಾಡುವ ಹವ್ಯಾಸಕ್ಕೆ ಬಿದ್ದ ಮೂಲಕ ದೇವರು ಸಿಟ್ಟಾಗಿ ಇವನನ್ನು ಸಂಹಾರ ಮಾಡಿದನೆಂದೂ ಪ್ರಸಿದ್ಧವಿರುತ್ತದೆ. ಇದಲ್ಲದೆ ಸಾಯುವ ಕಾಲದಲ್ಲೂ ಅವನು ತನ್ನ ರಸವಿದ್ಯೆಯು ಪ್ರಕಟವಾಗಬೇಕೆಂದು ಕೆಳಗೆ ಬರೆದಂತೆ ಅರ್ಧಮರ್ಧ ಶ್ಲೋಕವನ್ನು ಉಚ್ಚರಿಸಿದನೆಂದು ಆಖ್ಯಾಯಿಕೆಯುಂಟು:—

॥ ತುಥ್ಯರಸಗಂಧಕಂ । ತುಥ್ಯರಸಗಂಧಕಂ ।

ಮತ್ತೊಂದು ಮತ್ತೊಂದು । ಮತ್ತೊಂದು ಮತ್ತೊಂದು ॥.

ಅಂದರೆ, ಮೇಲಿನ ಸಾಲಿನಲ್ಲಿ ಬರೆದ ಮೂರು ಪದಾರ್ಥಗಳೂ ಕೆಳಗಿನ ಸಾಲಿನಲ್ಲಿಯ ನಾಲ್ಕನೆಯದೊಂದು ಪದಾರ್ಥವೂ ಕೂಡಿ ಕಾರ್ಯವಾಗುತ್ತ ದೆಂದು ಭಾವವು. ಆ ನಾಲ್ಕನೆಯ ವಸ್ತುವನ್ನುಚ್ಚರಿಸುವದರೊಳಗಾಗಿಯೇ ಅವನ ಸ್ಮರಣಶಕ್ತಿಯೂ ಉಚ್ಚಾರವೂ ಕುಂಠಿತವಾಗಿ ಅವನು ಮರಣ ಹೊಂದಿದನು. ಇದೇ ಮೇರೆಗೆ ಈ ಮಹಾಪುರುಷನು ತನ್ನ ರಸವಿದ್ಯೆಯ ಪ್ರಯೋಗ ಮಾಡುವಾಗ ಎಷ್ಟೋ ಬಾರಿ ನಿರಾಶೆಯುಳ್ಳವನಾದರೂ ತನ್ನ ಪ್ರಯತ್ನವನ್ನು ಕೊನೆಗಾಣಿಸದೆ ಬಿಡಲಿಲ್ಲ. ಈದರಿಗಾಗಿ ಪ್ರಸಿದ್ಧಿಯಲ್ಲಿ ರುವ ಇವನ ಉದ್ಗಾರವನ್ನೊಂದು ಇಲ್ಲಿ ಕೊಟ್ಟಿರುತ್ತದೆ:—

ಭೃಂಗ ಬೆಯ್ಯಲಿಲ್ಲ । ವಂಗ ಬಲಿಯಲಿಲ್ಲ ।

ರಸ ನಿಲ್ಲಲಿಲ್ಲ । ಸುಟ್ಟು ಕಂಗೆಟ್ಟು ಹಾಳನಾದೆ ॥ ಭಿಕ್ಷಾಂ ದೇಹಿ.

"ಅಂದರೆ, ಭೃಂಗ (ಅಭ್ರಕ) ರಸವಾಗಲಿಲ್ಲ; ವಂಗ (ತವರು)ದ ಕಂಬವಾಗಲಿಲ್ಲ; ಮತ್ತು ಪ್ರಯಾಸಬಟ್ಟು ಮಾಡಿದ ರಸವೂ ಅಗ್ನಿಯಲ್ಲಿ ನಿಲ್ಲಲಿಲ್ಲ; ಇದಕ್ಕಾಗಿ ನಾನು ಕಂಗಾಲನಾಗಿ ಬಿಕ್ಕೆ ಬೇಡುತ್ತೇನೆ. ಭಿಕ್ಷೆ ಹಾಕಿರಿ" ಎಂದು ಎಷ್ಟೋ ದಿವಸ ದೆಸೆಗೆಟ್ಟು ಸಂಚಾರಮಾಡಿದನು. ಇಂಥವರಿಗಲ್ಲವೇ ವಿಜಯಲಕ್ಷ್ಮಿಯು ತನ್ನ ಮಾಲೆಯನ್ನು ಹಾಕುವಳು? ಇವನು ರಸವಿದ್ಯೆಯ ಮೇಲೆ ಕನ್ನಡದಲ್ಲೂ ಸಂಸ್ಕೃತದಲ್ಲೂ ಅನೇಕ ಗ್ರಂ

ಥೆಗಳನ್ನು ರಚಿಸಿದ ಬಗ್ಗೆ ಕೃತಪುರ (ಗದಗ) ಪುರಾಣದಲ್ಲಿ ಪ್ರಖ್ಯಾತಿಯುಂಟು. ಈ ಪುರಾಣದಲ್ಲಿ ಗದಗಿನ ಹಾಗು ನೆರೆಹೊರೆಯ ಪ್ರದೇಶದ ಮಹಾತ್ಮ್ಯೆ ವುಂಟು.

ನಾಗಾರ್ಜುನನು ಆದಿಯಲ್ಲಿ ಶೈವನಾದರೂ ಆಗಿನ ಕಾಲದ ಧರ್ಮಾಂತರ ಮಾಡುವ ಪ್ರಚಾರಕ್ಕನುಸಾರವಾಗಿ ಜೈನ ಮತವನ್ನೂ, ಅನಂತರದಲ್ಲಿ ಬೌದ್ಧ ಮತವನ್ನೂ ಸ್ವೀಕರಿಸಿರಬಹುದೆಂದು ತೋರುತ್ತದೆ. ಯಾಕೆಂದರೆ, ವೈದಿಕ-ಜೈನ-ಬೌದ್ಧ-ಗ್ರಂಥಪರಂಪರೆಗಳಲ್ಲಿ ಹಲವು ಕಡೆಯಲ್ಲಿ ಇವನ ರಸವೈದ್ಯಕ ಸಾದಾವೈದ್ಯಕ ಹಾಗೂ ತಂತ್ರ ವಿದ್ಯೆಗಳ ನೈಪುಣ್ಯದ ಬಗ್ಗೆ ಸರಸಾದ ವರ್ಣನೆ ದೊರೆಯುತ್ತದೆ. ಅತಿ ಪ್ರಾಚೀನಕಾಲದ ಪ್ರಸಿದ್ಧ ಪುರುಷರು ಇದ್ದ ಕಾಲ ಹಾಗೂ ಅವರ ಚರಿತ್ರ ಇವುಗಳು ಸಾಮಾನ್ಯವಾಗಿ ಯಾವಾಗಲೂ ವಾದಗ್ರಸ್ತವಿಷಯಗಳಾಗಿರುವಂತೆ ಈ ನಮ್ಮ ಚರಿತ್ರನಾಯಕನ ಬಗ್ಗೆಯೂ ಉಂಟು. ಆದರೂ, ನಾಗಾರ್ಜುನಕೃತ 'ರಸರತ್ನಾಕರ' ವೆಂಬ ಈಗ ಉಪಲಬ್ಧವಾಗಿದ್ದ ಗ್ರಂಥದಲ್ಲಿ ಅವನು ತನ್ನ ಆತ್ಮಚರಿತ್ರೆಯನ್ನು ಬರೆದಿರುವನು. ಅದರ ಮೇಲಿಂದ ಇವನು ಕ್ರಿಸ್ತಶಕದ ೧ನೇ ಶತಕದಲ್ಲಿಯೇ ಇದ್ದನೆಂದು ತಿಳಿಯುತ್ತದೆ. ಇದಕ್ಕೆ ಸುಪ್ರಸಿದ್ಧ ಚೀನೀ ಪ್ರವಾಸಿಯಾದ ಹ್ಯುವೆನ್‌ತ್ಸಾಂಗನ ಲೇಖದ ಆಧಾರವೂ ದೊರೆಯುತ್ತದೆ. ಹುವೆನ್‌ತ್ಸಾಂಗನು ಆಗಿನ ಕಾಲದ ಕೆಲವು ಸ್ಥಾನಿಕ ದಂತಕಥೆಗಳನ್ನು ಬರೆದಿರುವನು. ಅವುಗಳಲ್ಲಿ ಬೀಲ್ಸ್ ಬುದ್ಧಿಸ್ಟ ರೆಕಾರ್ಡ್ಸ್ ಆಫ್ ದೀ ವೆಸ್ಟರ್ನ ವರ್ಲ್ಡ ಭಾಗ ೨ ಪುಟ ೨೧೨ರಲ್ಲಿ ಕೆಳಗಿನಂತೆ ಬರೆದಿರುತ್ತದೆ:-

ಬೌದ್ಧ ಧರ್ಮಿಯಾದ "ನಾಗಾರ್ಜುನನು ವೈದ್ಯಕದಲ್ಲಿ ನಿಪುಣನಾಗಿದ್ದನು. ಕೆಲವೊಂದು ಔಷಧದ ಸೇವನೆಯಿಂದ ಮನುಷ್ಯನು ೧೦೦ ವರ್ಷಗಳವರೆಗೆ ಶಾರೀರಿಕ ಮಾನಸಿಕ ದೌರ್ಬಲ್ಯಗಳೇನೂ ಉಂಟಾಗದೆ ಬದಕುವಂತೆ ಮಾಡುವನು. ಸಾತವಾಹನ ರಾಜನು ಈ ಗೂಢವಾದ ಔಷಧವನ್ನು ತೆಕ್ಕೊಂಡಿದ್ದನು." ಹ್ಯೂವೆನ್‌ತ್ಸಾಂಗನು ಹಿಂದುಸ್ತಾನದಲ್ಲಿ ಕ್ರಿ. ಶ. ೬೨೯ದ ನಂತರ ೧೫-೨೦ ವರ್ಷ ಮಾತ್ರ ಪ್ರವಾಸ ಮಾಡಿದನು. ಇವನು ಮತ್ತೂ ಬರೆದದ್ದೇನಂದರೆ- "ನಾಗಾರ್ಜುನನು ಓಡಿಸಾ ಪ್ರಾಂತದ ನೈಋತ್ಯಕ್ಕೆ ಇದ್ದಂಥ, ಮಹಾ ನದಿಯ ಉತ್ತರ ಶಾಖೆಗಳು ಹಾಯ್ದಂಥ ಕೋಸಲ ದೇಶದ

ಅರಸನಾದ ಸಾತವಾಹನನ ಗೆಳೆಯನಾಗಿದ್ದನು." ಸಾತವಾಹನನ ಕಾಲದ ಬಗ್ಗೆ "ಬರ್ಗೆಸ್ ಆರ್ಕಿಯಾಲಾಜಿಕಲ್ ಸರ್ವೇ ಆಫ್ ಇಂಡಿಯಾ"ದಲ್ಲಿ ನಿಷ್ಕರ್ಷವಾಗಿ ಬರೆದದ್ದುಂಟು. ಈ ಕಾಲಕ್ಕೂ ಪ್ರಬಂಧಚಿಂತಾಮಣಿಯಲ್ಲಿ ಆದಿಯಲ್ಲಿ ಬರೆದ ನಾಗಾರ್ಜುನನ ಕಾಲಕ್ಕೂ ಹುವೆನ್‌ತ್ಸಾಂಗನ ಲೇಖಕ್ಕೂ ತಂತೋತಂತವಾಗಿ ಕೂಡುವ ಕಾರಣ, ಕ್ರಿ.ಶ. ೧ನೆಯ ಶತಮಾನವೇ ನಾಗಾರ್ಜುನನ ಕಾಲವೆಂದು ನಿರ್ಧಾರವಾಗಿ ಹೇಳಬೇಕಾಗುತ್ತದೆ. ಯಾಕಂದರೆ, ೧೧ನೆಯ ಶತಮಾನದಲ್ಲಿ ಆಗಿ ಹೋದ ರಾಜತರಂಗಿಣಿಕಾರನು ಬರೆದದ್ದೇನಂದರೆ:- ನಾಗಾರ್ಜುನನು ಶಾಕ್ಯಸಿಂಹನ ನಂತರ ೧೫೦ ವರ್ಷಗಳ ಮೇಲೆ ಆಗಿ ಹೋದನು. ಅಲ್ಬೀರುಣಿ ಎಂಬ ಅರಬ ಲೇಖಕನು ಈ ನಾಗಾರ್ಜುನನ ಕಾಲವನ್ನು ಕ್ರಿ. ಶ. ೯೦೦ ಎಂದು ಬರೆದಿರುವನು. ಇವರ ಬರಹಗಳು ಹುವೆನ್‌ತ್ಸಾಂಗನ ಲೇಖಗಳಿಂದ ನಿಷ್ಫಲವಾಗುತ್ತವೆ. ಹಾಗು ಯುರೋಪಿಯನ್ ಗ್ರಂಥಕಾರರು ಬೌದ್ಧ ಪರಂಪರೆಗಳಿಂದ ನಾಗಾರ್ಜುನನು ಇ. ಸ. ೧ನೆಯ ಶತಕದಲ್ಲೇ ಇದ್ದನೆಂದು ನಂಬಿರುತ್ತಾರೆ.

ಬೌದ್ಧಪ್ರಾಬಲ್ಯಕಾಲದಲ್ಲಿ ಮುಖ್ಯ ರೋಗಗಳನ್ನು ಶಿಲಾಸ್ತಂಭಗಳ ಮೇಲೆ ಕೊರೆದಿಡುತ್ತಿದ್ದಂತೆ ಪಾಟಲಿ ಪುತ್ರದಲ್ಲಿ ನಾಗಾರ್ಜುನನ "द्रव्याण्येतानि संचूर्ण्य वर्तिःकार्या नभोंबुना। नागार्जुनेन लिखिता स्तंभे पाटलि पुत्रके" ಎಂಬ ಅವತರಣವನ್ನು ವೃಂದ, ಚಕ್ರಪಾಣಿ ಎಂಬ ಪಂಡಿತರು ಬರೆದಿದ್ದಾರೆ. ಚಕ್ರಪಾಣಿಯ ಕಾಲವು ೧೦೪೦. ಈತನ ಅಜ್ಜ ಗೌಡನಾಥನು ನಯಪಾಲನ (ಕ್ರಿ. ಶ. ೯ನೇ ಶತಕದ) ದರಬಾರದಲ್ಲಿ ವೈದ್ಯಕಿಯನ್ನು ಮಾಡುತ್ತಿದ್ದನು. ಈ ಗೌಡನಾಥನು ವೃಂದ ಸಿದ್ಧಯೋಗದ ಆಧಾರದಿಂದ ವೈದ್ಯಕಿಯನ್ನು ಮಾಡುತ್ತಿದ್ದ ಕಾರಣ ಇವನ ಪೂರ್ವದಲ್ಲಿ ವೃಂದನಿರಬೇಕು. ಅವನ ಪೂರ್ವದಲ್ಲಿ ನಾಗಾರ್ಜುನನಿರಬೇಕು.

ಇನ್ನು ಎಷ್ಟೋ ಜನರು ಬೌದ್ಧಮಾಧ್ಯಮಿಕ ಮತದ ತತ್ವಜ್ಞಾನಿಯಾದ ನಾಗಾರ್ಜುನನು ಬೇರೆ, ಮತ್ತು ರಸವಿದ್ಯಾವಿಜ್ಞಾನಿಯೂ ತಂತ್ರವಿದ್ಯಾವಿಶಾರದನೂ ಆದ ಈ ನಾಗಾರ್ಜುನನು ಬೇರೆ, ಎಂದು ಶಂಕಿಸುತ್ತಾರೆ. ಹೀಗಾದರೆ ರಾಜತರಂಗಿಣೀಕಾರನು ಬರೆದ ನಾಗಾರ್ಜುನನು ಶಾಕ್ಯಸಿಂಹನ ನಂತರ ೧೫೦ ವರ್ಷದಲ್ಲಿ, ಅಂದರೆ ಕ್ರಿ. ಶ. ಪೂರ್ವದ ೩೦೦ ವರ್ಷದಲ್ಲಿ ಇದ್ದನೆಂದು ಸಿದ್ಧವಾಗುತ್ತದೆ. ಹ್ಯಾಗೇ ಆಗಲಿ, ಈ ನಮ್ಮ ರಸವಿದ್ಯೆ,

ತಂತ್ರವಿದ್ಯೆಗಳಲ್ಲಿ ಪಾರಂಗತನಾದ ನಾಗಾರ್ಜುನನು ಸಾತವಾಹನನ ಕಾಲದಲ್ಲಿ, ಅಂದರೆ ಕ್ರಿ. ಶ. ೧ನೆಯ ಶತಮಾನದಲ್ಲಿದ್ದನೆಂಬದಕ್ಕೇನೂ ಸಂದೇಹವಿಲ್ಲ.

ಸಿದ್ಧನಾಗಾರ್ಜುನನ ಗ್ರಂಥಗಳು.

(೧) ನಾಗಾರ್ಜುನಸಂಹಿತಾ(ಒಂದುಲಕ್ಷಗ್ರಂಥಗಳುತಂತ್ರಶಾಸ್ತ್ರ). ಅಪ್ರಸಿದ್ಧ.

(೨) ನಾಗಾರ್ಜುನ ಕಕ್ಷ (ತಂತ್ರಶಾಸ್ತ್ರ). ಅಚ್ಚಾಗಿರುತ್ತದೆ.

(೩) ನಾಗಾರ್ಜುನ ತಂತ್ರ (ಬೌದ್ಧ ತಂತ್ರ). ಅಪ್ರಸಿದ್ಧ.

(೪) ಆಶ್ಚರ್ಯಯೋಗ ರತ್ನಮಾಲಾ (ತಂತ್ರಶಾಸ್ತ್ರ). ಅಚ್ಚಾಗಿರುತ್ತದೆ.

(೫) ನಾಗಾರ್ಜುನ ಕಲ್ಪ (ವೈದ್ಯಶಾಸ್ತ್ರ). ಅಪ್ರಸಿದ್ಧ.

(೬) ರತಿಶಾಸ್ತ್ರ (ಕಾಮಶಾಸ್ತ್ರ). ಅಚ್ಚಾಗಿದೆ.

(೭) ಲೋಹಶಾಸ್ತ್ರ. ಅಪ್ರಸಿದ್ಧ.

(೮) ಆರೋಗ್ಯಮಂಜರಿ (ವೈದ್ಯಶಾಸ್ತ್ರ). ಅಪ್ರಸಿದ್ಧ.

(೯) ರಸರತ್ನಾಕರ. ಪ್ರಸಿದ್ಧ.

(೧೦) ಧಾತುರತ್ನಮಾಲಾ. ಅಪ್ರಸಿದ್ಧ.

ಭಾಷಾಂತರ.

ಐನಾಪೂರ
ತಾ|| ೩೦—೧೧—೧೦
ತಾಲೂಕ ಅಥಣಿ.

ಬಾಳಪ್ಪಾ ಪರಪ್ಪಾ ಮುರಕೀಭಾವಿ
೨ನೇ ಆ|| ಮಾಸ್ತರ ಐನಾಪೂರ.

ಶಿಷ್ಯಕರ್ತವ್ಯ.

ಭಾ. ಷ.— ಸತ್ಯಸನ್ಮಾರ್ಗದಲಿ ಬಿಡದೆ ಪ್ರ|
ವರ್ತನೆಯನುಪದೇಶಬಲದಿಂ|
ಪತ್ತಿಸುವನಾಚಾರ್ಯಪದವಿಗೆ ತಕ್ಕನಾದಪನು ॥
ಮತ್ತೆಗುರುಮುಖದಿಂದ ಹೊರಡುವ।
ಸ್ತುತ್ಯವಾಗಿಹ ಶಾಸನದಿ ಸ್ಥಿರ|
ವೃತ್ತಿಯಾದವ ಶಿಷ್ಯನೆನಿಪನು ಮತದಿಸಜ್ಜನರಾ ॥೧॥

ಆರ್ಯಾ — ಮಗನಂತೆ ಶಿಷ್ಯನಿರ್ಪಂ ।
ಬಗೆಗೊಳಲಾಚಾರ್ಯನಂತು ಪಿತೃಸದೃಶಂ ॥

ತಗಹುಂಟವರೊಳ್ ತಮ ತಮ |
ಗಗಾಧಶುದ್ಧಂ ಜಗನ್ಮಾನ್ಯಂ ॥೩॥
ಗುರುವಕ್ಕರಯಿಂ ಪೇಳ್ದ |
ಕ್ಕರವೊಂದರ ಋಣವಕಳೆಯುವಾಪ್ರವ್ಯಂ ॥
ಧರೆಯೊಳಗೆತ್ತಲು ತೊಳಲಲ್ |
ದೊರೆಯದು, ಗುರುವೇ ಮಹಾಮಹಿಮಂ ॥೩॥

ಭಾ ಷ.— ಗುರುಪರೀವಾದಗಳ ಮೇಣ್ ಗುರು |
ವರನ ನಿಂದೆಯ ನುಡಿವರಲ್ಲಿಂ |
ಪರಿದು ಪೋಪುದು ಶಿಸ್ಯನಿಲ್ಲವೆ ತನ್ನ ಕಿವಿಗಳನು ॥
ಕರಗಳಿಂ ಮುಚ್ಚುವದು ಕೇಳ್ದೊಡೆ |
ಗುರುಚರಣದಲಿ ತನಗಿರುವ ನಿ |
ರ್ಭರದ ಭಕ್ತಿಯ ದೀಪ ಕಿಡುಗುಂ ಕ್ರಮದೆ ಮಸುಳಿಸುತಾ ॥೪॥
ತನಗೆ ಪಿರರಿರಿದಿಟ್ಟ ಬಿರುನುಡಿ |
ಯೆಣಿಸದವ್ರಗಳ ತಾಳುತಿಹುದಾ |
ರನವಮಾನಿಸಲಾಗದೀ ಮೈಕಟ್ಟ ನಾಶ್ರಯವಾ ॥
ಮನಕೆ ತಂದಾರೊಡನೆ ವೈರವ |
ನೆನೆಯಬಾರದು ಸಕಲ ಜನರಲಿ |
ವಿನಯದಿಂ ನಗೆವೊಗದಿ ನುಡಿವುದು ಪಿರಿದುಸೂನೃತವಾ ॥೫॥

ಭಾ. ಷ.— ಕಾಮಮಂ ಕ್ರೋಧವನು ಲೋಭವ |
ನೇಮದಿಂ ಕಳೆದಿಡುತ ವಾರದ |
ಕಾಮಿನಿಯ ನರ್ತಸಕೆ ಗಾಯನವಾದನಂಗಳಿಗೆ ॥
ಸೀಮೆಗಾಣಿಸಿ ಕೇಶ-ವೇಶದಿ |
ಕಾಮುಕರವೋಲ್ ಮನವನೂಡದೆ |
ಕ್ಷೇಮವಿರುವದು ಸಾಧುತನದಲಿ ನಡೆದಹರ್ನಿಶವು ॥೬॥
ಹಸನವಲ್ಲದ ಪಾಸು, ನೆಲೆ, ಸೋ |
ದಿಸದ ತಿನಸಂದಂದು ಸೆಳೆಯದ |
ಕಸದುಡಿಗೆತೊಡಿಗೆಗಳು ನಾರುವ ಕೊಳೆ ಮುಸಕಿದೊಡಲು ॥
ಪಸರವಿದು ದೋಷಗಳ ಹೊರಗಣ, |
ವಿಷಸಮಾಸದ್ವಿಷಯವನು ಚಿಂ |
ತಿಸುವದಾಂತರದೋಷವೆನಿಸುವದಿವನು ಬಿಸುಡುವದು ॥೭॥

ಕಂದ.—ಪಗಲು ಪವಡಿಸುವದಿರುಳೊಳ್ |
ಒಗೆಬಗೆಯಾಟದಲಿ ತೊಡಗಿ ಯೆಚ್ಚರಿರುವದುಂ ॥
ತೆಗೆದಿಕ್ಕಿ ಬೋಧಶಕ್ತಿಯ |
ಬಗಿವುದು ಬಲವಂ ಸಮಂತುಕ್ಷಯಿಸುವದನಿಶಂ ॥೮॥

ಭಾ. ಷ.— ದುಡತಕೆದೆಗೆಡದಿರ್ದು ಸಹಿಸುತ |
ಕೊಡುವದೂಟವಹಿತದ, ಹಸಿವಿಗೆ |
ಕೆಡಿಸದಲೆ ಮಿತಭಾವಮಂ ಪ್ರತಿದಿನ ಸಕಾಲದೊಳು ॥
ನಡೆಯುದಿಂತತಿಭೋಜನಕೆ ಜಾ |
ಯಡಸಲಿತ್ತರೆ ಸ್ವಾಸ್ಥ್ಯನಾಶವು |
ತಡೆಯುದೆಯ್ದುವವಲಸಿಕೆ,ಯುನಾರೋಗ್ಯ ಬಂಧುಗಳು ॥೯॥
ಹೊತ್ತು ಹೊಳೆಯುವ ಮುಂಚೆ ಬೆಳಗಿನ |
ಕೃತ್ಯಗಳನೇರ್ಪಡಿಸಿ ಶುಚಿಯಾ |
ಗುತ್ತ ಚಿತ್ತವನಿಲಿಸಿಯಧ್ಯಯನದಲಿ ಶ್ರಮಿಸುವದು ॥
ಶಾಸ್ತ್ರಪಾಠಕನನ್ಯವಾಗಿಹ |
ಚಿತ್ತಬೇಹುದರಿಂದ ಯತ್ನದಿ |
ಛಾತ್ರರಿರ್ಪುದದಾವಗಂ ಪರಿಶುದ್ಧಭಾವದಲಿ ॥೧೦॥
ಸಾವಧಾನದಿ ಸ್ಪಷ್ಟವಾಗಿಯೆ |
ಸೇವಿಸುವದಾ ಶಾಸ್ತ್ರಪಾಠವ |
ಭಾವನಿಶ್ಚಲತೆಯಲಿ ತಿಳಿವುದು ತತ್ತ್ವದರ್ಥಗಳಾ ॥೧೧॥
ಸೋವ ಹೊಸ ಹೊಸಬೋಧಕಿಂತಲು |
ಕಾವುದೊಳ್ಳಿತು ಕಲಿತುದನು, ಪುನ |
ರಾವಲೋಕನವೆಸಗುತಿರುವದು ತಿಳಿದ ವಿಷಯಗಳಾ ॥
ಇಂದು ಜರಗಿಸಲಾಪ ಕಾರ್ಯವ |
ನಿಂದೆ ತೀರ್ಚದೆ ನಾಳೆ ನಿಲಿಸುವ |
ದೊಂದು ಬಲು ಕೆಡಕಾದ ಚಾಳಿಗೆ ಕದವ ಮುಚ್ಚುವದು ॥೧೨॥
ಬಂದ ಮಾನುಷದೈವ ವಿಘ್ನವು |
ಸಂದು ನೋಡುತ ಭರದೆರಗಿ ಸಿಡಿ |
ಲಂದದಲಿ ಮಾಡಿದನ ಮಾಡದನನ್ನು ಹೊಡೆಯುವದು ॥
ಪುರುಷರೆನಿಸಲು ಬಾಯ್ದರೆವ ಶಿ
ಷ್ಯರುಗಳನುಸರ್ತವ್ಯ ನಿಯಮಗ |
ಳರಿತಿರಲು ತಾರಾಕುಮಾರನು ತನ್ನ ಶಿಕ್ಷೆಯಲಿ ॥

ಭಾ. ಪ.—ಮೆರೆಯುತಿಹ ಗೀರ್ವಾಣ ಭಾಷೆಯ |
ಲೊರೆದ ತತ್ವವ ಕನ್ನಡದ ನುಡಿ |
ಗೆರಕವೆನಿಸಿದ ನೋಡಿ! ಮತ್ಪ್ರಿಯ ಬಂಧುಗಳಿ! ದಯದಿ॥೧೩॥

ಕುಮಟಾ. | ವೆಂಕಟೇಶ ರಾಮಚಂದ್ರ ಪ್ರಭು.
ತಾ॥ ೩೧ನೇ ಅಗಸ್ಟ ೧೯೧೦ನೇ ಇಸ್ವಿ. | ಅ॥ ಮಾ॥ ಶಾಲಾ ಬಾಡ (ಕಾರವಾರ)

ಮನುಷ್ಯಪ್ರಾಣಿಯೂ ಅವನ ಕಲಾಕೌಶಲ್ಯಗಳೂ.

—:೦:—

ಮನುಷ್ಯನು ಎಲ್ಲ ಪ್ರಾಣಿಗಳಲ್ಲಿ ಶ್ರೇಷ್ಠನಿದ್ದಾಗ್ಯೂ, ಎಷ್ಟೋ ಕಲಾಕೌಶಲ್ಯದ ಕೆಲಸಗಳಲ್ಲಿ ತನಗಿಂತ ನೈಜಸ್ಥಿತಿಯಲ್ಲಿದ್ದ ಪಶುಪಕ್ಷಿಗಳ ಅನುಕರಣವನ್ನು ಮಾಡಬೇಕಾಗುತ್ತದೆ. ಅವುಗಳನ್ನು ನೋಡಿ ಕಲಿತ ಕಲೆಗಳಲ್ಲಿ ಅವಕ್ಕಿಂತ ಮೇಲಾಗುವದು ಒತ್ತಟ್ಟಿಗಿರಲಿ, ಅವುಗಳನ್ನು ಸರಿಗಟ್ಟುವದು ಸಹ ಸಾಧ್ಯವಲ್ಲದ್ದರಿಂದ ಮನುಷ್ಯನು ನಾಚಿಕೊಳ್ಳಬೇಕಾಗುತ್ತದೆ. ಜೇಡಹುಳದಷ್ಟು ಚಂದವಾದ ಜಾಳಿಗೆಯನ್ನು ಯಾವ ಮೀನಬಲೆಗಾರನು ಮಾಡಬಲ್ಲನು.? ರೇಸಿಮೆಹುಳದಷ್ಟು ಸುಂದರವಾದ ಬಟ್ಟೆಗಳನ್ನು ಯಾವ ನೇಕಾರನು ನೇಯುವನು? ಪಕ್ಷಿಗಳಿಗೆ ಸರಿಯಾದ ಶಿಲ್ಪಿಗನೆಲ್ಲಿ? ಅವು ಮಾಡುವ ಉದ್ಯೋಗಗಳಲ್ಲಿ ನ್ಯೂನವಂತು ಏನೂ ಕಂಡು ಬರುವದಿಲ್ಲ. ಅವುಗಳಿಗೆ ಬೇಕಾದ ಹಿಡಿಸಳ್ಳು ಅರ್ನ ಮುಂತಾದ ಆಯುಧಗಳೆಲ್ಲ ಅವುಗಳ ಹತ್ತರವೇ ಇರುತ್ತವೆ.

ಈ ಕುಶಲಪ್ರಾಣಿಗಳಿಗೆ ಕೆಲಮಟ್ಟಿಗೆ ನಮ್ಮಂತೆ ಬುದ್ಧಿಯು ಇರುತ್ತವೆ. ಆದರೆ ಸ್ವಲ್ಪ ಹೆಚ್ಚುಕಡಿಮೆ ಕಂಡು ಬರುವದೇನಂದರೆ, ಮನುಷ್ಯನಂತೆ ಅವುಗಳ ಬುದ್ಧಿಗೆ ದಿನಾಲು ಹೊಸ ಹೊಸ ಉದ್ಯೋಗಗಳೂ, ಅವನ್ನು ಮಾಡುವ ಹೊಸ ಹೊಸ ರೀತಿಗಳೂ ತೋಚುವದಿಲ್ಲ. ಅವಕ್ಕೆ ದೇವರು ಆರಂಭದಲ್ಲಿ ಹಾಕಿಕೊಟ್ಟ ಮಾರ್ಗವು ಒಂದೇ ಗೊತ್ತು; ಅದಕ್ಕೆ ಸರಿಯಾದದ್ದು ಇನ್ನೊಂದಿಲ್ಲ; ಅದನ್ನು ಕಲಿಯಬೇಕಾಗುವದಿಲ್ಲ; ಅದರಿಂದ ಎಂದೂ ತಪ್ಪಾಗುವ ಸಂಭವವಿಲ್ಲ.

ಜಗತ್ಕರ್ತನು ಮಾಡಿದ ನಿಯಮಗಳಿಗನುಸರಿಸುವದರಿಂದ ಅವು ತಪ್ಪದೆ ತಮ್ಮ ಕಾರ್ಯದಲ್ಲಿ ಯಶಸ್ಸು ಹೊಂದುತ್ತವೆ. ಈ ನಿಯಮಗಳಲ್ಲಿ ಅವಕ್ಕೆ ಪೂರ್ಣ ವಿಶ್ವಾಸವು. ಅವುಗಳ ಆತ್ಮಪ್ರತ್ಯಯವು ಬಹು ದೊಡ್ಡ

ಡು. ಇಂಥ ಉದ್ಯೋಗವನ್ನು ಮಾಡಬೇಕೋ ಮಾಡಬಾರದೋ, ಇದ ರಿಂದ ಇಷ್ಟಫಲಪ್ರಾಪ್ತಿಯು ಆಗುವದೋ ಇಲ್ಲವೋ ಎಂಬ ಸಂಶಯವು ಅವಕ್ಕೆಂದೂ ತಟ್ಟುವದಿಲ್ಲ. ಸತತೋದ್ಯೋಗದಲ್ಲಿರುವದೇ ಅವುಗಳ ಸುಖ ವು. ತಮ್ಮ ಜೀವಕ್ಕೆ ಅವು ಎಂದೂ ಬೇಸರಿಯುವದಿಲ್ಲ. ಅಕಾಲಕ್ಕೆ ಸಾವು ಬಂದೀತೆಂಬ ಅಂಜಿಕೆಯು ಅವಕ್ಕಿರುವದಿಲ್ಲ. ಅವುಗಳ ದೇಹದಲ್ಲಿ ತನ್ನಿಂ ದ ತಾನೇ ವಾಸಿಯಾಗುವ ಗುಣವಿರುವದರಿಂದ ನೋವು ಬೇನೆ ಮುಂತಾದ ಪೀಡೆಗಳಿಗೆ ಔಷಧೋಪಾಯ ಮಾಡಬೇಕಾಗುವದಿಲ್ಲ. ಇದನ್ನೆಲ್ಲ ಕಂಡು, ಅವುಗಳನ್ನು ಹುಟ್ಟಿಸಿ ಸಲಹುವ ಸೃಷ್ಟಿಕರ್ತನ ಕೃತಿಯನ್ನು ಎಷ್ಟು ಕೊಂಡಾಡಿದರೂ ತೀರದು.

ಮನುಷ್ಯನಾದರೂ ಉದ್ಯೋಗಿಯು. ಆದರೆ ಅವನ ಉದ್ಯೋಗದ ಕಾರಣವೇ ಬೇರೆ; ಅವನ ಉದ್ಯೋಗದ ರೀತಿಯೋ ಬೇರೆ. ಹುಟ್ಟುಗುಣ ದಿಂದ ಮಾಡಬರುವ ಉದ್ಯೋಗಗಳು ತೀರ ಸ್ವಲ್ಪ; ಪ್ರಯತ್ನದಲ್ಲಿ ವಿಶ್ವಾ ಸವು ಅದಕ್ಕೂ ಕಡಿಮೆ; ಅವಶ್ಯಕತೆಗಳು ಮಾತ್ರ ಪ್ರಾಣಿಗಳಿಗಿಂತ ನೂರಾ ರು ಪಾಲು ಹೆಚ್ಚು; ಮತ್ತು ಸ್ವಾಭಾವಿಕವಾದ ಹೊದಿಕೆಗಳನ್ನೂ, ಸ್ವಾಭಾ ವಿಕವಾದ ಆಯುಧಗಳನ್ನೂ ಪಡೆಯದೆ ಈ ಜಗತ್ತಿನಲ್ಲಿ ಬಂದದ್ದರಿಂದ ನಾನಾವಿಧವಾದ ಉದ್ಯೋಗಗಳನ್ನು ಕೈಕೊಂಡಿರುತ್ತಾನೆ.

ಸಹಜವಾದ ವಸ್ತ್ರಪ್ರಾವರಣಗಳಿಲ್ಲದ್ದರಿಂದ ಮನುಷ್ಯನು ಹುಟ್ಟಿಸಿದ ಕಲೆಗಳು ಅಗಣಿತವಾಗಿವೆ. ಅತಿ ಶೀತ ಪ್ರದೇಶದಲ್ಲಿರುವ ಮನುಷ್ಯನು ಕರ ಡಿ, ಚಿಗರೆ, ನೀರ್ನಾಯಿ, ನೀರಾನೆಗಳನ್ನು ಕೊಂದು ಅವುಗಳ ಸ್ವಾಭಾವಿಕ ವಾದ ಹೊದಿಕೆಗಳನ್ನು ಅಪಹರಿಸಿ ತಾನು ಹೊದ್ದುಕೊಳ್ಳಲಾರಂಭಿಸಿದನು. ಉಷ್ಣಪ್ರದೇಶದಲ್ಲಿರುವವನು ಸೂರ್ಯನ ತಾಪವನ್ನು ತಡೆಯಲಾರದೆ ತಾಡವೃಕ್ಷ, ಬಾಳೇಗಿಡ, ಹತ್ತೀಗಿಡ ಮುಂತಾದ ಗಿಡಗಳ ಎಲೆಗಳನ್ನೂ ತೊಗಟೆಯನ್ನೂ ನಾರನ್ನೂ ಉಪಯೋಗಿಸಿ ಸುಂದರವಾದ ಬಟ್ಟೆಗಳನ್ನು ರಚಿಸಿದನು. ಸಮಶೀತೋಷ್ಣ ಪ್ರದೇಶದವನು ದೊಡ್ಡ ದೊಡ್ಡ ಪ್ರಾಣಿಗ ಳೂ ವೃಕ್ಷಗಳೂ ನೆರೆಯಲ್ಲಿಲ್ಲದ್ದರಿಂದ ಕಲ್ಲುಮಣ್ಣಿನಿಂದ ಅಚ್ಚುಕಟ್ಟಾದ ಕಟ್ಟಡಗಳನ್ನು ಕಟ್ಟಿದನು. ನಮ್ಮ ಕಣ್ಣು ಮುಂದೆ ಕಾಣುವ ಅವಶ್ಯಕ ವಾದ ಮತ್ತು ವಿಲಾಸದ ಒಡಿವೆಗಳೆಲ್ಲ ಈ ನಮ್ಮ ಮುಖ್ಯವಾದ ಕೊರತೆ ಯನ್ನು ಪೂರೈಸುವದಕ್ಕಾಗಿಯೇ ಮಾಡಲ್ಪಟ್ಟಿರುವವು.

ತನ್ನ ಕೊರತೆಗಳನ್ನು ಪೂರೈಸುವ ಮನುಷ್ಯನ ರೀತಿಯು ಅನ್ಯ

ಪ್ರಾಣಿಗಳ ರೀತಿಗಿಂತ ತೀರ ಭಿನ್ನವಾದದ್ದೆಂದು ಮೇಲೆ ಹೇಳಿಯದೆ. ಮನುಷ್ಯನು ತನ್ನ ಕೆಲಸಕ್ಕೆ ಉಪಯುಕ್ತವಾದ ಹೊಸದೊಂದು ಸಾಧನವನ್ನು ಹುಡುಕಿ ತೆಗೆದಿದ್ದಾನೆ. ಇದರ ಉಪಯೋಗವು ಪ್ರಾಣಿಗಳಿಗೆ ಎಳ್ಳಷ್ಟಾದರೂ ಆಗದೆ, ಇದಕ್ಕೆ ಅಂಜಿ ಇದರ ಜೊತೆಯಲ್ಲಿ ಸಹ ಅವು ಇರಲಾರವು. ಬೆಂಕಿಯೆಂಬ ಸಾಧನದಿಂದ ಮನುಷ್ಯನು ತನ್ನ ಪರತಂತ್ರಸ್ಥಿತಿಯನ್ನು ಹೋಗಲಾಡಿಸಿದ್ದಾನೆ. ಬೆಂಕಿಯ ಸಹಾಯದಿಂದಲ್ಲದೆ ಮತ್ತೆ ಯಾತರಿಂದಲೂ ಮನುಷ್ಯನು ಕಲಾ ಕೌಶಲ್ಯಗಳಲ್ಲಿ ಮುಂದಾಗಲಿಲ್ಲ.

'ಬೆಂಕಿಯನ್ನು ಹೊತ್ತಿಸಬಲ್ಲ ಪ್ರಾಣಿಯು ಮನುಷ್ಯನು' ಎಂದು ಮನುಷ್ಯ ಶಬ್ದದ ವ್ಯಾಖ್ಯೆಯನ್ನು ಹೇಳಿದರೆ, ಅದು ಅಪೂರ್ಣವಾದಾಗ್ಯೂ, ಅಷ್ಟರಿಂದಲೇ ಎಲ್ಲ ಪ್ರಾಣಿಗಳನ್ನು ತನ್ನ ಕೈಯಲ್ಲಿಡುವ ಸಾಮರ್ಥ್ಯವು ಅವನಲ್ಲಿದೆಯೆಂದು ವ್ಯಕ್ತವಾಗುತ್ತದೆ. ತೀರ ಕಾಡು ಸ್ಥಿತಿಯಲ್ಲಿರುವ ಮನುಷ್ಯನಿಗೆ ಸಹ ಕಟ್ಟಿಗೆಯ ಮೇಲೆ ಕಟ್ಟಿಗೆಯನ್ನಿಟ್ಟು ತಿಕ್ಕಿ ತಿಕ್ಕಿ ಬೆಂಕಿಯ ಹೊತ್ತಿಸುವ ಯುಕ್ತಿಯು ಗೊತ್ತಿರುತ್ತದೆ. ಕಾಡು ಮನುಷ್ಯನಿಂದ ಮೊದಲ್ಗೊಂಡು ಬಳ್ಳೇ ಸುಧಾರಿಸಿದ ಮನುಷ್ಯನ ವರೆಗೆ ಎಲ್ಲರೂ ಒಂದಿಲ್ಲೊಂದು ರೀತಿಯಿಂದ ಅಗ್ನಿ ದೇವತೆಯನ್ನು ಪೂಜಿಸುತ್ತಾರೆ. ಬೆಂಕಿಯ ಉಪಯೋಗವನ್ನು ಒಳಿತಾಗಿ ಬಲ್ಲಂಥ ರಾಷ್ಟ್ರಗಳೇ ಹೇರಳ ಸಂಪತ್ತನ್ನು ಸಂಗ್ರಹಿಸಿ ಪ್ರಬಲವಾಗಿವೆ. ಮನುಷ್ಯನ ಈಗಿನ ಸುಧಾರಿಸಿದ ಸ್ಥಿತಿಗೆ ಬೆಂಕಿಯೇ ಕಾರಣವು.

ಮನುಷ್ಯನು ಹುಟ್ಟಿದಾಗ ಶೀತೋಷ್ಣಗಳನ್ನು ನಿವಾರಿಸುವ ಸಾಧನಗಳು ಅವನ ಕೂಡ ಹುಟ್ಟುವದಿಲ್ಲ; ಇಷ್ಟೇ ಅಲ್ಲ, ಅವನಿಗೆ ಬೇಕಾದ ಆಯುಧಗಳೂ ಸಹಜವಾಗಿ ದೊರಕುವದಿಲ್ಲ. ಎರಡನೇ ಪ್ರಾಣಿಗಳ ಹತ್ತಿರ ತಕ್ಕ ಆಯುಧಗಳು ಯಾವಾಗಲೂ ಸಿದ್ಧವಾಗಿರುತ್ತವೆ, ಮತ್ತು ಅವುಗಳನ್ನು ಯಾವ ರೀತಿಯಿಂದ ಉಪಯೋಗ ಮಾಡಬೇಕೆಂಬ ಅಪಚಣಿಯು ಅವಕ್ಕೆಂದೂ ಇರುವದಿಲ್ಲ. ಆದರೆ ಮನುಷ್ಯನದು ಹೀಗಲ್ಲ. ಅವನಿಗೆ ಮೊದಲು ಆಯುಧಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಅವುಗಳನ್ನು ಉಪಯೋಗಿಸ ಹೋದಂತೆ ಕಂಡು ಬಂದ ದೋಷಗಳನ್ನು ತೆಗೆದು ಹಾಕಿ ಸುಧಾರಿಸಿದಂತೆ ಅವು ಪೂರ್ಣತೆ ಹೊಂದುವವು. ಈ ಪ್ರಕಾರ ತಯಾರಾದ ಆಯುಧಗಳನ್ನು ಒಮ್ಮೇಲೇ ಉಪಯೋಗಿಸಬೇಕೆಂದರೆ ಆಗದು. ಅವುಗಳನ್ನು ಕೈಯಲ್ಲಿ ಹಿಡಿಯುವದು ಹ್ಯಾಗೆ? ಉಪಯೋಗಿಸುವ ಬಗೆ

ಹ್ಯಾಗೆ? ಎಂಬದನ್ನು ಅಭ್ಯಾಸದಿಂದ ಕಲಿಯಬೇಕು. ಹೀಗೆ ಒಂದು ಕೆಲಸವನ್ನು ಸಾಧ್ಯ ಮಾಡುವ ನೆವದಿಂದ ಮಾಡಿದ ಪ್ರಯತ್ನಗಳ ಮುಕ್ಕಾಲು ಪಾಲು ಪ್ರಯತ್ನಗಳು ಪೂರ್ವಸಿದ್ಧತೆಯಲ್ಲಿಯೇ ಕ್ಷೀಣವಾಗುವವು. ಎರಡು ಅರಿವೆಗಳ ತುಂಡುಗಳನ್ನು ಒಂದಕ್ಕೊಂದು ಜೋಡಿಸಿ ಹೊಲೆಯ ಬೇಕಾದರೆ ಸೂಜಿಯು ಬೇಕು, ಮತ್ತು ಸೂಜಿಯನ್ನು ಉಪಯೋಗ ಮಾಡಬಲ್ಲ ಕೈಯುಬೇಕು. ನೂರಾರು ಜನರು ತಮ್ಮ ಬುದ್ಧಿಯನ್ನು ವೆಚ್ಚ ಮಾಡಿದ ಹೊರ್ತು ಸೂಜಿಯಾಗುವದಿಲ್ಲ. ಅನೇಕ ದಿವಸಗಳ ವರೆಗೆ ಕೈಗೆ ಚುಚ್ಚಿ ಚುಚ್ಚಿ ದಡ್ಡು ಬಿದ್ದು ಅಭ್ಯಾಸವಾದ ಹೊರ್ತು ಕೈಗೆ ಹೊಲೆಯಲಿಕ್ಕೆ ಬರುವದಿಲ್ಲ.

ಯಾವ ಉದ್ಯೋಗದಲ್ಲಿಯಾದರೂ ಮನುಷ್ಯನ ಹಾಡು ಇದೇ. ಇದಲ್ಲದೆ, ಎಲ್ಲ ಉದ್ಯೋಗಗಳು ಒಂದನ್ನೊಂದು ಅವಲಂಬಿಸಿವೆ. ಒಂದು ಉದ್ಯೋಗದ ಅಸ್ತಿತ್ವವು ಮತ್ತೊಂದು ಉದ್ಯೋಗದ ಅಸ್ತಿತ್ವಕ್ಕೆ ಕಾರಣವಾಗಿದೆ. ಉಪ್ಪಾರನಿಗೆ ಬಡಿಗನ ಹೊರ್ತು ಆಗದು; ಬಡಿಗನಿಗೆ ಕಮ್ಮಾರನ ಹೊರ್ತು ನಡೆಯುವದಿಲ್ಲ. ಪ್ರಾಣಿಗಳ ಸ್ಥಿತಿಯು ಹೀಗೆ ಪರತಂತ್ರವಲ್ಲ. ತಮಗೆ ಅವಶ್ಯವಾದ ಬೇರೆ ಬೇರೆ ತರದ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತವೆ.

ಇದನ್ನೆಲ್ಲ ವಿಚಾರಮಾಡಿ ನೋಡಿದರೆ, ಮನುಷ್ಯನು ಕೆಲವೆಡೆಯಲ್ಲಿ ಪರತಂತ್ರನು, ಕೆಲವೆಡೆಯಲ್ಲಿ ಹೆಚ್ಚು ಸಾಮರ್ಥ್ಯವುಳ್ಳವನೆಂದು ಸ್ಪಷ್ಟವಾಗಿ ತೋರುತ್ತದೆ. ಸ್ವಲ್ಪ ಅಲಕ್ಷ್ಯ ಮಾಡಿದರೆ, ತನ್ನ ದೇಹಸ್ವಾಸ್ಥ್ಯವು ಕೆಡುವ ಅಂಜಿಕೆ, ಲೆಖ್ಖವಿಲ್ಲದಷ್ಟು ಅವಶ್ಯಕತೆಗಳು, ಅವನ್ನು ಕೂಡಲೆ ತೃಪ್ತಿಗೊಳಿಸುವ ಶಕ್ತಿಯನ್ನು ಕೊಡುವ ಸಹಜಗುಣಗಳ ಹಾಗು ಉಪಕರಣಗಳ ಅಭಾವವು— ಇಂಥ ಸ್ಥಿತಿಯೊಳಗಿಂದ ಪಾರಾಗುವದಕ್ಕಾಗಿ ತನ್ನ ತಿಳುವಳಿಕೆಯ ಸಹಾಯದಿಂದ ತನ್ನ ಅವಯವಗಳಿಗೆ ಉದ್ಯೋಗ ಮಾಡುವದಕ್ಕೆ ಅವನು ಆಜ್ಞಾಪಿಸುವನು. ಅವನ ವಿಚಾರ ಶಕ್ತಿಯು ಜಾಗೃತವಾಗಿ, ಕೈಕಾಲು ಸುಶಿಕ್ಷಣದಿಂದಲೂ ಅಭ್ಯಾಸದಿಂದಲೂ ಹೇಳಿದಂತೆ ಕೆಲಸ ಮಾಡಹತ್ತಿದವೆಂದರೆ, ಪ್ರಾಣಿಗಳ ಸಹಜಬುದ್ಧಿಯೂ ಆಯುಧಗಳೂ ಇವನ ಸಾಮರ್ಥ್ಯವನ್ನು ಸರಿಗಟ್ಟಲಾರವು. ಹೀಗಾಗಿ ಮನುಷ್ಯನು ಎಲ್ಲ ಪ್ರಾಣಿಗಳಿಗೆ ಅರಸನಾಗಿ ನಿರಾತಂಕವಾಗಿ ರಾಜ್ಯವಾಳುತ್ತಾನೆ. ದೇವರ ಮಹಿಮೆಯು ಅಗಾಧವಾಗಿದೆ!

ಗ. ವಾ. ಗೋಖಲೆ.

೧೨. ಅಪ್ಪಣೆಯಿಲ್ಲದೆ ಎರಡನೆಯವರ ಮನೆಯಲ್ಲಿ ಹೋಗಬಾರದು.

೧೩. ಹೊತ್ತು ಬಂದಾಗ ತನಗಿಂತ ಬುದ್ಧಿವಂತರಾದವರ ಆಲೋಚನೆಯನ್ನು ಕೇಳಬೇಕು.

೧೪. ಮೂರ್ಖರಿಗೆ ಜವಾಬದಾರಿಯ ಕೆಲಸವನ್ನು ಹೇಳಬಾರದು.

೧೫. ಅಪರಾಧಿಗಳ ಅಂಭೋಣವನ್ನು ಸಮಾಧಾನದಿಂದ ಕೇಳಿಕೊಳ್ಳಬೇಕು. ತಪ್ಪಿಗೆ ಕ್ಷಮೆ ಮಾಡಬೇಕು.

೧೬. ಉದ್ಧಾಮರಿಗೆ ಖಂಡಿತವಾಗಿ ಶಿಕ್ಷೆಯನ್ನು ವಿಧಿಸಬೇಕು.

೧೭. ಧರ್ಮದ ಸಂಬಂಧದಿಂದಲೂ, ಜಾತಿಯ ಸಂಬಂಧದಿಂದಲೂ ಪರರ ಮನಸ್ಸನ್ನು ನೋಯಿಸಬಾರದು; ಮತ್ತು ತೊಂದರೆ ಪಡಿಸಬಾರದು.

೧೮. ತಮ್ಮ ಶರೀರಕ್ಕೆ ಹಿತಕರವಾದಷ್ಟೇ ಆಹಾರ-ನಿದ್ರೆಗಳನ್ನು ತೆಗೆದುಕೊಳ್ಳುತ್ತಿರಬೇಕು.

೧೯. ಯಾರ ಕೂಡಲೂ ವೈರವನ್ನು ಬಳಿಸಬಾರದು.

೨೦. ಮೋಸಗಾರರ ಗೆಳೆತನ ಮಾಡಬಾರದು.

೨೧. ಕಲಾಕೌಶಲ್ಯಗಳ ಜ್ಞಾನವನ್ನು ಬೆಳಿಸಲಿಕ್ಕೆ ಪ್ರಯತ್ನ ಮಾಡಬೇಕು.

೨೨. ಶಿಪಾಯಿಗಳನ್ನು ಒಂದೇ ಸ್ಥಳದಲ್ಲಿ ಬಹಳ ದಿವಸಗಳ ವರೆಗೆ ಇಡಬಾರದು.

೨೩. ಬೇಟೆಯ ವ್ಯಸನವು ಒಳಿತಲ್ಲ; ಸರ್ವಕಾಲವೂ ಅದರಲ್ಲಿ ಮನಸು ಹಾಕಬಾರದು. ಯುದ್ಧಕ್ಕೆ ಅವಶ್ಯವಿದ್ದಷ್ಟು ಅದರ ಅಭ್ಯಾಸವನ್ನು ಮಾಡಬೇಕು.

೨೪. ಕೈಕೆಳಗಿನ ಜನರ ಸಂಗಡಲೂ, ಆಳುಗಳ ಸಂಗಡಲೂ ವಿನೋದವನ್ನು ಮಾಡಬಾರದು.

೨೫. ಜನರ ಅರ್ಜಿಗಳನ್ನು ತಕ್ಕೊಳ್ಳಲಿಕ್ಕೆ ಸ್ವತಂತ್ರ ಮನುಷ್ಯರನ್ನೂ ನೇಮಿಸಬೇಕು.

೨೬. ಪಟ್ಟಣದ ಹೊರಗೆ ಚೌಕಿಗಳನ್ನೂ ಶಿಪಾಯಿಗಳ ಕಾವಲನ್ನೂ ಇಡಬೇಕು.

೨೭. ಗುರುತಿಲ್ಲದ ಮನುಷ್ಯನು ಯಾರು, ಏನು ಎಂಬ ಬಗ್ಗೆ ಗೊತ್ತು ಹಚ್ಚಬೇಕು.

೨೮. ಸತ್ತ ಮನುಷ್ಯನ ಸಂಪತ್ತನ್ನು ಅವನ ಯೋಗ್ಯ ಪಾರಸದಾರರನ್ನು ಗೊತ್ತು ಹಚ್ಚಿ ಅವರಿಗೆ ಕೊಡಬೇಕು.

೨೯. ಸರಾಯಿಯನ್ನು ಕೊಳ್ಳುವವನಿಗೂ, ಮಾರುವವನಿಗೂ, ಕುಡಿಯು ವವನಿಗೂ ಶಿಕ್ಷೆಯನ್ನು ವಿಧಿಸಬೇಕು. ಮತ್ತು ಇನ್ನೊಮ್ಮೆ ಈ ಕೆಲ ಸವನ್ನು ಮಾಡುವದಿಲ್ಲೆಂದು ಅವನಿಂದ ಜಾಮೀನುತಕ್ಕೊಳ್ಳಬೇಕು.

೩೦. ನದಿಯಲ್ಲಿ ಸ್ನಾನ ಮಾಡುವದಕ್ಕಾಗಿ ಹೆಂಗಸರಿಗೂ ಗಂಡಸರಿಗೂ ಬೇರೆ ಬೇರೆ ಸ್ಥಳಗಳನ್ನು ಗೊತ್ತು ಮಾಡಿಕೊಡಬೇಕು.

ಕೆಳಗೆ ಬರೆದ ಪತ್ರವ್ಯವಹಾರವನ್ನು ಶಾಲಾಪತ್ರಕದಲ್ಲಿ ಮುದ್ರಿಸಲು ಸ್ಥಳವಿಲ್ಲ.—

೧. ಗದಗ ತಾಲೂಕ ಡಂಬಳ ಶಾಲೆಯಲ್ಲಿ ಖಂಡೇ ಪೂಜೆಯ ದಿವಸ ಶಾರದಾ ಪೂಜೆಯ ನಿಮಿತ್ತವಾಗಿ ನೆರೆದ ಸಭೆಯ ವೃತ್ತಾಂತ.

೨. ಬಾನಗಿತ್ತಿ ಗುಡಿಹಾಳ ಶಾಲೆಯಲ್ಲಿ ವ್ಹಿಜಿಟರ್ಸ ಬುಕ್ಕಿನಲ್ಲಿ ಶಾಲಾ ಪಂಚರು ಬರೆದ ಅಭಿಪ್ರಾಯ.

೩. ಕರ್ಜಿಗಿ ಸಾಲೆಯ ಹೆಡ್ಡ ಮಾಸ್ತರರ ಪ್ರಕಟನೆ.

೪. ಮಿ|| ವೈಜನಾಥ ವಾಸುದೇವ ಮರಾಠೆ ಇವರು ಬರೆದ ಐತಿಹಾಸಿಕ ಪ್ರಸಿದ್ಧ ಹೆಸರುಗಳ ಸಂಬಂಧದ ಟಿಪ್ಪಣಿ ಹಾಗೂ ಜ್ಯೋತಿಷ ಶಾಸ್ತ್ರ ಸಂಬಂಧದ ಪ್ರಶ್ನೋತ್ತರಗಳು.

೫. ಮಿ|| ರಾಮಾ ಗಣಪಹೆಗಡೆ ಸ್ಕೂಲಮಾಸ್ತರ—ಕೋಡಸರ ತಾಲೂಕ ಸಿದ್ದಾಪೂರ ಇವರು ಕಳಿಸಿದ ಲೆಖ್ಖಗಳೂ ರೀತಿಗಳೂ. ವರ್ಗ ಸಮೀ ಕರಣವನ್ನು ಅಂಕಗಣಿತದಿಂದ ಬಿಡಿಸುವ ಸಾಮಾನ್ಯ ರೀತಿಯನ್ನು ಸೂಚಿಸಿರುವದಿಲ್ಲ. ಆದ್ದರಿಂದ ಉಪಯುಕ್ತವಾದವುಗಳಲ್ಲ.

೬. ಹುಬ್ಬಳ್ಳಿ ಪ್ರಾಯವ್ಹೇಟ ಸ್ಕೂಲಿನಲ್ಲಿ ಆದ ಇನಾಮಿನ ಸಮಾರಂಭದ ವರ್ಣನೆ.

೭. ಕರ್ಜಿಗಿಯ ಗಂಡು ಹುಡುಗರ ಸಾಲೆಯಲ್ಲಿ ಮಾಡಿದ ಕೃಷಿಯ ಕೆಲಸ ದ ವರ್ಣನೆ. ಸ್ವಲ್ಪದರಲ್ಲಿ ಮಹತ್ವದ ಸಂಗತಿಗಳನ್ನು ಮಾತ್ರ ಬರೆ ದರೆ ಮುದ್ರಿಸಬಹುದು. ಹುಡುಗರ ಸಂಭಾಷಣೆಯನ್ನು ಮುದ್ರಿಸಲು ಸ್ಥಳವಿಲ್ಲ.

೮. ಮಿ॥ ಅಣ್ಣಪ್ಪಾ ಅಪ್ಪಯ್ಯಾ ಕರ್ಜಗಿ– ಸ್ಕೂಲ ಮಾಸ್ತರ ಕರಜಿಗಿ ತಾ॥ ಚಿಕ್ಕೋಡಿ ಇವರು ಬರೆದು ಕಳುಹಿದ ಕಡ್ಡೀ (ಕಂಬಳೀ) ಹುಳದ ರೂಪಾಂತರದ ಬಗ್ಗೆ. ವರ್ಣನೆಯಲ್ಲಿ ಮುದ್ರಿಸತಕ್ಕಂಥ ಮಹತ್ವದ ಸಂಗತಿಯೇನೂ ಇಲ್ಲ.

ವಿದ್ಯಾಖಾತೆಯ ನೋಟೀಸುಗಳು.

—(೦)—

ಕೆಳಗೆ ಕೊಟ್ಟ ಜಾಹೀರಾತು ಸರಕಾರದಿಂದ ಒಪ್ಪಿಗೆ ಹೊಂದಿದ ಶಾಲೆಗಳ ವ್ಯವಸ್ಥಾಪಕರ ತಿಳುವಳಿಕೆಯ ಬಗ್ಗೆಯೂ ಬೇರೆ ಜನರಿಗೆ ಎಚ್ಚರಿಕೆ ಹುಟ್ಟುವ ಬಗ್ಗೆಯೂ ಪ್ರಸಿದ್ಧ ಮಾಡಲ್ಪಟ್ಟಿರುತ್ತದೆ:—

ಸನ್ ೧೯೧೦–೧೧ ಇಸವಿಯ ನಂಬರ ೭೮೨೪.

ಜಾಹೀರಾತು.

ಠಾಣೆ ಜಿಲ್ಹೆಯ ವಸಯಿ ತಾಲೂಕಿನ ಆರ್ನಾಲ ಗ್ರಾಮದ ಲೋಕಲ್ ಬೋರ್ಡ ಶಾಲೆಯ ವಿದ್ಯಾರ್ಥಿಯಾದ ಗಣೇಶ ಬಾಪುಜೀ ಮಹಾಜನ ಎಂಬವನು ರಾಜದ್ರೋಹವನ್ನು ಸೂಚಿಸಬೇಕೆಂದು ತನ್ನ ವಾಚನ ಪುಸ್ತಕದಲ್ಲಿರುವ ಮಾಜೀ ಬಾದಶಹರಾದ ೭ನೇ ಎಡ್ವರ್ಡ ಪ್ರಭುಗಳವರ ಹಾಗೂ ಅಲೆಕ್ಸಾಂಡ್ರಾ ಮಹಾರಾಣಿಯವರ ಚಿತ್ರಗಳನ್ನು ವಿರೂಪ ಮಾಡಿದ್ದರಿಂದ ಇವನನ್ನು ೧೯೧೦ನೇ ಇಸ್ವಿಯ ಸಪ್ಟಂಬರ ತಿಂಗಳಿನ ೫ನೇ ತಾರೀಖಿನಿಂದ ಸಾಲೆಯಿಂದ ತೆಗೆದು ಹಾಕಿರುತ್ತದೆ. ವಿದ್ಯಾಖಾತೆಯ ಆಶ್ರಯದಲ್ಲಿರುವ ಯಾವ ಸಾಲೆಯಲ್ಲಿಯೂ ಇವನನ್ನು ಸೇರಿಸಿಕೊಳ್ಳಬಾರದು.

೨. ಇದೇ ಸಾಲೆಯ ವಿಷ್ಣು ಮೋರೇಶ್ವರ ತೆಂಡೂಲಕರ, ಹಾಗು ರಂಗೂ ಪಿಲ್ಯಾ ಪಟೇಲ ಎಂಬ ಇನ್ನಿಬ್ಬರು ಹುಡುಗರನ್ನು ಇದೇ ದುಷ್ಕೃತ್ಯಕ್ಕೋಸ್ಕರ ೧೯೧೦ನೇ ಇಸ್ವಿಯ ಸಪ್ಟಂಬರ ತಿಂಗಳ ೫ನೇ ತಾರೀಖಿನಿಂದ ೧ ವರ್ಷದ ವರೆಗೆ ಆ ಸಾಲೆಯಿಂದ ಹೊರಗೆ ಹಾಕಿಯದೆ. ಇವರಿಬ್ಬರನ್ನಾದರೂ ವಿದ್ಯಾಖಾತೆಯ ಆಶ್ರಯದಲ್ಲಿರುವ ಯಾವ ಸಾಲೆಯವರೂ

ಆ ಅವಧಿಯು ಮುಗಿಯುವವರಿಗೆ ತಮ್ಮ ಸಾಲೆಗೆ ಸೇರಿಸಿಕೊಳ್ಳಬಾರದು.

ಎಜ್ಯುಕೇಶನಲ್ ಇನಸ್ಪೆಕ್ಟರರ ಆಫೀಸು ಉತ್ತರಭಾಗ ಅಹಮ್ಮದಾಬಾದ ೨೬—೯—೧೦ } F. W. MARRS. ಅಕ್ಟಿಂಗ ಎ. ಇ. ಉ. ಭಾಗ.

ಸರ್ಕ್ಯುಲರ ಹುಕುಂ.

—:೦:—

ರತ್ನಾಗಿರೀ ಮ್ಯುನಿಸಿಪಲಿಟಿಯ ೧ನೇ ನಂಬರ ಮರಾಠೀ ಶಾಲೆಯ (೧) ತುಕಾರಾಮ ವಿಶ್ರಾಮಸಾವಂತ, (೨) ಪುರುಷೋತ್ತಮ ರಾಮಚಂದ್ರ ಮುಳೆ, (೩) ವಿಷ್ಣು ಕೃಷ್ಣಲೇಲೇ ಎಂಬ ಮೂವರು ವಿದ್ಯಾರ್ಥಿಗಳೂ, ರತ್ನಾಗಿರಿಯ ಖಾಸಿಗೀ ಅಂಗ್ಲೋವರ್ನ್ಯಾಕ್ಯುಲರ ಸ್ಕೂಲಿನ ವಿಷ್ಣು ವಿನಾಯಕ ಖೇರ ಎಂಬ ವಿದ್ಯಾರ್ಥಿಯೂ ೧೫ ಹಾಗೂ ಹೆಚ್ಚು ವರ್ಷದವರಿದ್ದು ರಾಜನಿಷ್ಠೆಗೂ ಸಭ್ಯಾಚರಣೆಗೂ ಸಲ್ಲದ ಹಾಗೆ ತಮ್ಮ ವಾಚನ ಪುಸ್ತಕಗಳಲ್ಲಿ ಹೆಚ್ಚು ಕಡಿಮೆಗಳನ್ನು ಮಾಡಿದ್ದರಿಂದ ಅವರು ಸರಕಾರದ ಆಶ್ರಯದಲ್ಲಿರುವ ಇಲ್ಲವೆ ಸರಕಾರಕ್ಕೆ ಮಾನ್ಯವಾದ, ಇಲ್ಲವೆ ಸರಕಾರದ ಯಾವ ಸಾಲೆಗಳಿಗೂ ಸೇರಿಸಿಕೊಳ್ಳಲಿಕ್ಕೆ ತಕ್ಕವರಲ್ಲೆಂದು, ಸರಕಾರದ ಅಪ್ಪಣೆಯನ್ನು ಪಡೆದು ಜಾಹೀರ ಮಾಡಲ್ಪಟ್ಟಿರುವದು.

ಸಹಿ. } R. B. Karandikar. ಎಜ್ಯುಕೇಶನಲ್ ಇನ್‌ಸ್ಪೇಕ್ಟರ ದ. ಭಾ.

ವರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆ.

ದಕ್ಷಿಣ ಭಾಗ.

ಜಾಹೀರಾತು.

೧೯೦೭ನೇ ಇಸ್ವಿಯ ೨೧ನೇ ನವಂಬರದ ಬಾಂಬೇ ಗವ್ಹರ್ನಮೆಂಟ ಗ್ಯಾಝೇಟಿನ ಮೊದಲನೆಯ ಭಾಗದ ೧೮೯೪—೧೪೯೭ ಪುಟಗಳಲ್ಲಿ ಪ್ರಸಿದ್ಧ ಪಡಿಸಿದ ನಿಯಮಗಳಿಗನುಸರಿಸಿ ೧೯೧೧—೧೨ನೇ ಇಸ್ವಿಯ ವ್ಹರ್ನ್ಯಾಕ್ಯುಲರ ಫಾಯನಲ್ ಸರಟಫಿಕೇಟ ಪರೀಕ್ಷೆಗೆ, ದಕ್ಷಿಣಭಾಗದ (ಬೆಳಗಾವ, ಧಾರವಾಡ, ವಿಜಾಪೂರ, ಕಾನಡಾ, ರತ್ನಾಗಿರೀ, ಕುಲಾಬಾ)

ಹಾಗೂ ಕೊಲ್ಹಾಪುರ ಮತ್ತು ಇತರ ದೇಶೀಯ ಸಂಸ್ಥಾನಗಳಲ್ಲಿರುವ ಉಮೇದವಾರರ ದೆಸೆಯಿಂದ ಕೆಳಗೆ ಬರೆದ ಪುಸ್ತಕಗಳು ಆರಿಸಲ್ಪಟ್ಟವೆ.

೨. ಬೆಳಗಾವ, ವಿಜಾಪೂರ, ಕಾರವಾರ, ಸೆಂಟರುಗಳಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠೀ ಭಾಷೆಗಳಲ್ಲಿ ತೆಗೆದುಕೊಳ್ಳಲಾದೀತು. ಧಾರವಾಡ ಸೆಂಟರಿನಲ್ಲಿ ಕನ್ನಡದಲ್ಲಿ ಮಾತ್ರವೂ, ರತ್ನಾಗಿರೀ, ಕುಲಾಬಾ, ಕೊಲ್ಹಾಪುರ ಸೆಂಟರುಗಳಲ್ಲಿ ಮರಾಠಿಯಲ್ಲಿ ಮಾತ್ರವೂ ತೆಗೆದುಕೊಳ್ಳಲಾಗುವದು.

೩. ಧಾರವಾಡದಲ್ಲಿದ್ದ ಮರಾಠೀ ವ್ಹರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆಗೆ ಕೂಡಲಿಚ್ಛಿಸುವ ಉಮೇದವಾರರು ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರವರ ಅಪ್ಪಣೆಯನ್ನು ಪಡೆದುಕೊಂಡು ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರಬಹುದು.

ಮರಾಠೀ ಭಾಷೆ.

೧. ಗದ್ಯ—ಹೊಸ ಕ್ರಮಿಕ ಪುಸ್ತಕಮಾಲೆಯ ಏಳನೇ ಪುಸ್ತಕ ಪೂರ್ಣ.
೨. ಪದ್ಯ—ಹೊಸ ಕ್ರಮಿಕ ಪುಸ್ತಕಮಾಲೆಯ ಏಳನೇ ಪುಸ್ತಕದಲ್ಲಿರುವ ಕೊನೆಯ ಮುನ್ನೂರು ಪಂಕ್ತಿಗಳನ್ನು ಬಾಯಿಪಾಠ ಅನ್ನುವದೂ ಅವುಗಳ ಅರ್ಥವನ್ನು ಹೇಳುವದೂ.

ಕನ್ನಡ ಭಾಷೆ.

೧. ಗದ್ಯ—ಹೊಸ ಕ್ರಮಿಕ ಪುಸ್ತಕಮಾಲೆಯ ಏಳನೇ ಪುಸ್ತಕ, ಪೂರ್ಣ.
೨. ಪದ್ಯ—ಹೊಸ ಕ್ರಮಿಕ ಪುಸ್ತಕಮಾಲೆಯ ಏಳನೇ ಪುಸ್ತಕದಲ್ಲಿರುವ ಕೊನೆಯ ಮುನ್ನೂರು ಪಂಕ್ತಿಗಳನ್ನು ಬಾಯಿಪಾಠ ಅನ್ನುವದೂ, ಅವುಗಳ ಅರ್ಥವನ್ನು ಹೇಳುವದೂ.

ಉರ್ದು ಭಾಷೆ.

"ತೌಬತನ ನಸೂ" ಮೌಲ್ವಿನಾಜಿರಅಹಮ್ಮದ ಇವರು ಬರೆದದ್ದು.

ಧಾರವಾಡ ಎ. ಇ. ದ. ಭಾ. ಆಫೀಸು ೪ನೇನವಂಬರ ೧೯೧೦	R. B. Karandikar. ಎಜ್ಯುಕೇಶನಲ್ ಇನಸ್ಪೆಕ್ಟರ ದ. ಭಾ.

ಈ ಅವಧಿಯು ಮುಗಿಯುವವರಿಗೆ ತಮ್ಮ ಸಾಲೆಗೆ ಸೇರಿಸಿಕೊಳ್ಳಬಾರದು.

ಎಜ್ಯುಕೇಶನಲ್ ಇನಸ್ಪೆಕ್ಟರರ ಆಫೀಸು ಉತ್ತರಭಾಗ ಅಹಮ್ಮದಾಬಾದ ೨೬–೯–೧೦ } F. W. MARRS. ಅಕ್ಟಿಂಗ ಎ. ಇ. ಉ. ಭಾಗ.

ಸರ್ಕ್ಯುಲರ ಹುಕುಂ.

—:೦:—

ರತ್ನಾಗಿರೀ ಮ್ಯುನಿಸಿಪಲಿಟಿಯ ೧ನೇ ನಂಬರ ಮರಾಠೀ ಶಾಲೆಯ (೧) ತುಕಾರಾಮ ವಿಶ್ರಾಮಸಾವಂತ, (೨) ಪುರುಷೋತ್ತಮ ರಾಮಚಂದ್ರ ಮುಳೆ, (೩) ವಿಷ್ಣು ಕೃಷ್ಣ ಲೇಲೇ ಎಂಬ ಮೂವರು ವಿದ್ಯಾರ್ಥಿಗಳೂ, ರತ್ನಾಗಿರಿಯ ಖಾಸಿಗೀ ಅಂಗ್ಲೋವರ್ನ್ಯಾಕ್ಯುಲರ ಸ್ಕೂಲಿನ ವಿಷ್ಣು ವಿನಾಯಕ ಖೇರ ಎಂಬ ವಿದ್ಯಾರ್ಥಿಯೂ ೧೫ ಹಾಗೂ ಹೆಚ್ಚು ವರ್ಷದವರಿದ್ದು ರಾಜನಿಷ್ಠೆಗೂ ಸಭ್ಯಾಚರಣೆಗೂ ಸಲ್ಲದ ಹಾಗೆ ತಮ್ಮ ವಾಚನ ಪುಸ್ತಕಗಳಲ್ಲಿ ಹೆಚ್ಚು ಕಡಿಮೆಗಳನ್ನು ಮಾಡಿದ್ದರಿಂದ ಅವರು ಸರಕಾರದ ಆಶ್ರಯದಲ್ಲಿರುವ ಇಲ್ಲವೆ ಸರಕಾರಕ್ಕೆ ಮಾನ್ಯವಾದ, ಇಲ್ಲವೆ ಸರಕಾರದ ಯಾವ ಸಾಲೆಗಳಿಗೂ ಸೇರಿಸಿಕೊಳ್ಳಲಿಕ್ಕೆ ತಕ್ಕವರಲ್ಲೆಂದು, ಸರಕಾರದ ಅಪ್ಪಣೆಯನ್ನು ಪಡೆದು ಜಾಹೀರ ಮಾಡಲ್ಪಟ್ಟಿರುವದು.

ಸಹಿ. } R. B. Karandikar. ಎಜ್ಯುಕೇಶನಲ್ ಇನ್‌ಸ್ಪೇಕ್ಟರ ದ. ಭಾ.

ವರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆ.

ದಕ್ಷಿಣ ಭಾಗ.

ಜಾಹೀರಾತು.

೧೯೦೩ನೇ ಇಸ್ವಿಯ ೨೧ನೇ ನವಂಬರದ ಬಾಂಬೇ ಗವ್ಹರ್ನಮೆಂಟ ಗ್ಯಾಝೀಟನ ಮೊದಲನೆಯ ಭಾಗದ ೧೮೯೪–೧೮೯೬ ಪುಟಗಳಲ್ಲಿ ಪ್ರಸಿದ್ಧ ಪಡಿಸಿದ ನಿಯಮಗಳಿಗನುಸರಿಸಿ ೧೯೧೧–೧೨ನೇ ಇಸ್ವಿಯ ವ್ಹರ್ನ್ಯಾಕ್ಯುಲರ ಫಾಯನಲ್ ಸರಟಿಫಿಕೇಟ ಪರೀಕ್ಷೆಗೆ, ದಕ್ಷಿಣಭಾಗದ (ಬೆಳಗಾವ, ಧಾರವಾಡ, ವಿಜಾಪೂರ, ಕಾನಡಾ, ರತ್ನಾಗಿರೀ, ಕುಲಾಬಾ)

ಹಾಗೂ ಕೊಲ್ಲಾಪುರ ಮತ್ತು ಇತರ ದೇಶೀಯ ಸಂಸ್ಥಾನಗಳಲ್ಲಿರುವ ಉಮೇದವಾರರ ದೆಸೆಯಿಂದ ಕೆಳಗೆ ಬರೆದ ಪುಸ್ತಕಗಳು ಆರಿಸಲ್ಪಟ್ಟವೆ.

೨. ಬೆಳಗಾವ, ವಿಜಾಪೂರ, ಕಾರವಾರ, ಸೆಂಟರುಗಳಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠೀ ಭಾಷೆಗಳಲ್ಲಿ ತೆಗೆದುಕೊಳ್ಳಲಾದೀತು. ಧಾರವಾಡ ಸೆಂಟರಿನಲ್ಲಿ ಕನ್ನಡದಲ್ಲಿ ಮಾತ್ರವೂ, ರತ್ನಾಗಿರೀ, ಕುಲಾಬಾ, ಕೊಲ್ಹಾಪುರ ಸೆಂಟರುಗಳಲ್ಲಿ ಮರಾಠಿಯಲ್ಲಿ ಮಾತ್ರವೂ ತೆಗೆದುಕೊಳ್ಳಲಾಗುವದು.

೩. ಧಾರವಾಡದಲ್ಲಿದ್ದ ಮರಾಠೀ ವ್ಹರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆಗೆ ಕೂಡಲಿಚ್ಛಿಸುವ ಉಮೇದವಾರರು ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರವರ ಅಪ್ಪಣೆಯನ್ನು ಪಡೆದುಕೊಂಡು ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರಬಹುದು.

ಮರಾಠೀ ಭಾಷೆ.

೧. ಗದ್ಯ—ಹೊಸ ಕ್ರಮಿಕ ಪುಸ್ತಕಮಾಲೆಯ ಏಳನೇ ಪುಸ್ತಕ ಪೂರ್ಣ.
೨. ಪದ್ಯ—ಹೊಸ ಕ್ರಮಿಕ ಪುಸ್ತಕಮಾಲೆಯ ಏಳನೇ ಪುಸ್ತಕದಲ್ಲಿರುವ ಕೊನೆಯ ಮುನ್ನೂರು ಪಂಕ್ತಿಗಳನ್ನು ಬಾಯಿಪಾಠ ಅನ್ನುವದೂ ಅವುಗಳ ಅರ್ಥವನ್ನು ಹೇಳುವದೂ.

ಕನ್ನಡ ಭಾಷೆ.

೧. ಗದ್ಯ—ಹೊಸ ಕ್ರಮಿಕ ಪುಸ್ತಕಮಾಲೆಯ ಏಳನೇ ಪುಸ್ತಕ, ಪೂರ್ಣ.
೨. ಪದ್ಯ—ಹೊಸ ಕ್ರಮಿಕ ಪುಸ್ತಕಮಾಲೆಯ ಏಳನೇ ಪುಸ್ತಕದಲ್ಲಿರುವ ಕೊನೆಯ ಮುನ್ನೂರು ಪಂಕ್ತಿಗಳನ್ನು ಬಾಯಿಪಾಠ ಅನ್ನುವದೂ, ಅವುಗಳ ಅರ್ಥವನ್ನು ಹೇಳುವದೂ.

ಉರ್ದು ಭಾಷೆ.

"ತೌಬತನ ನಸೂ" ಮೌಲ್ವಿನಾಜಿರಅಹಮ್ಮದ ಇವರು ಬರೆದದ್ದು

ಧಾರವಾಡ ಎ. ಇ. ದ. ಭಾ. ಆಫೀಸು ೬ನೇನವಂಬರ ೧೯೧೦ } R. B. Karandikar. ಎಜ್ಯುಕೇಶನಲ್ ಇನಸ್ಪೆಕ್ಟರ ದ. ಭಾ.

ವರ್ಧ ಪ್ರಾಯಿ ಝು ಪರೀಕ್ಷೆಯ ಪ್ರಶ್ನಗಳು

ಕನ್ನಡದ ವ್ಯಾಕರಣ ಭಾದುಸ್ಸಗಳು.

೧. (ಅ) ಕೇಶವನು ಗಜಗ...............ಸುವರ್ಾಗರ್ಮಿದರೊಳ್ ಲಕ್ಷ್ಯಂ. ಎಂದು ಹೇಳಿದ ಕವಿವಾಲಿಕೆಯಲ್ಲಿ ರನ್ನನ ಹೆಸರನ್ನೇಕೆ ಹೇಳಿಲ್ಲ? ಅವನ ಗ್ರಂಥಸ್ಥ ಪ್ರಯೋಗಗಳನ್ನಾದರೂ ಉದಹರಿಸಿರುವನೇ ತೋರಿಸಿರಿ.

(ಬ) ಯಾವ ಯಾವ ಕವಿಗಳ ಗ್ರಂಥಸ್ಥ ಪ್ರಯೋಗಗಳನ್ನು ಅಪಪ್ರಯೋಗ ಸಂದರ್ಭವನ್ನು ತೋರಿಸುವದಕ್ಕಾಗಿಯೇ ಉದಾಹರಿಸುವನು? ಏಕೆ?

(ಕ) "ಪ್ರಯೋಗಶರಣಾ ವೈಯಾಕರಣಾಃ" ಎಂಬವಾಕ್ಯಾಭಿಪ್ರಾಯವು ಕೇಶವನಿಗೆ ವಿಸ್ಮೃತಿ ಬಂದಂಥ ಕೆಲವು ಸಂದರ್ಭಗಳನ್ನು ತೋರಿಸಿ ಆ ವಿಷಯದಲ್ಲಿ ನಿಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿರಿ.

೨. (ಅ) ಹೊಸಗನ್ನಡವನ್ನು ಕಲಿತವರಿಗೆ ಶಬ್ದಮಣಿದರ್ಪಣವ್ಯಾಸಂಗದಿಂದ ಪ್ರಯೋಜನವುಂಟೇ? ಇಲ್ಲವೆ? ಚರ್ಚಿಸಿ ನಿರ್ಣಯಮಾಡಿರಿ.

(ಬ) ತದ್ಭವಗಳು ಅಶುದ್ಧವಾಗಿ ಉಚ್ಚರಿಸಿದ ಸಂಸ್ಕೃತ ಶಬ್ದಗಳಾದುದರಿಂದ ಅವಕ್ಕೆ (ಅಶುದ್ಧ ಶಬ್ದಗಳಿಗೆ) ಸಾಧುತ್ವವನ್ನು ಹೇಳುವದಕ್ಕಾಗಿಯೇ ಕನ್ನಡ ವೈಯ್ಯಾಕರಣರು ಪ್ರವರ್ತಿಸಿರುವದು ಸರಿಯೇ? ಸಕಾರಣವಾಗಿ ಉತ್ತರಹೇಳಿರಿ.

೩. ಕ್ರಿಯೆಯಪದಂ ತಾಂ ಕರ್ತೃ |
ಪ್ರಯುಕ್ತಮಾಗಲ್ಲಿಯೇನನೆಂಬಿಚ್ಛೆಯನಾ ||
ಕ್ರಿಯಿಪುರು ಸಕರ್ಮಕಮದಲ್
ಪ್ರಯುಕ್ತ ಪಡುಧಾತು ಸರ್ವಧಾತುಗಮುಕ್ಕು ||
ಅಭಿರೂಪದಿನಾಪ್ರಥಮಾ
ವಿಭಕ್ತಿಲಿಂಗಾರ್ಥ ವಚನಸಂಬೋಧನದೊಳ್ |
ಪ್ರಭವಿಪ್ಪುದಾದ್ವಿತೀಯಾ
ವಿಭಕ್ತಿಕರ್ಮದೊಳನಾಕುಳಂವರ್ತಿಸುಗುಂ ||

ಮೇಲಿನ ಸೂತ್ರಗಳಿಗೆ ಸೂತ್ರಕಾರನ ಇಷ್ಟಾನುಸಾರ ವೃತ್ತಿಯನ್ನು ಬರೆದು ಆಕ್ಷೇಪಗಳಿದ್ದರೆ ತೋರಿಸಿ ಸಮಾಧಾನವನ್ನು ಹೇಳಿರಿ.

ಪೋರ್ತುಗಾಲದ ರಾಜ್ಯಕ್ರಾಂತಿಯು.

೧೫ನೇ ೧೬ನೇ ಶತಮಾನಗಳಲ್ಲಿ ಪೋರ್ತುಗಾಲವು ಬಹಳ ವೈಭವ ಶಾಲಿಗಳಾದ ರಾಷ್ಟ್ರಗಳಲ್ಲಿ ಎಣಿಸಲ್ಪಡುತ್ತಿತ್ತು. ಆ ಕಾಲಕ್ಕೆ ಕೋಲಂಬ ಸನೆಂಬ ಪೋರ್ತುಗಾಲ ದೇಶದ ಪ್ರವಾಸಿಯು ಅಮೇರಿಕಾಖಂಡವನ್ನು ಗೊತ್ತು ಹಚ್ಚಿ ಯುರೋಪದ ನಿವಾಸಿಗಳಿಗೆ ಒಕ್ಕಲುಗಲಿಕ್ಕೆ ಹೊಸ ಭೂಮಿಯನ್ನು ದೊರಕಿಸಿ ಕೊಟ್ಟನು. ಸದ್ಯಕ್ಕೆ ಬಹಳ ಘನತೆಯನ್ನು ಹೊಂದಿದ ಬ್ರಿಟಿಶರಿಗೆ ಈ ದೇಶವು ಗೊತ್ತು ಸಹ ಇಲ್ಲದಾಗ ವಾಸ್ಕೋಡಿಗಾಮಾ ಎಂಬ ಪೋರ್ತುಗೀಜ ಸರದಾರನು ಇಲ್ಲಿಗೆ ಬಂದು ಇಲ್ಲಿಯ ಅರಸರ ಕೂಡ ಸ್ನೇಹ ಬೆಳಸಿ ಪೋರ್ತುಗೀಜ ರಾಜ್ಯದ ಬೀಜಾರೋಪಣವನ್ನು ಮಾಡಿದನು. ಅದೇ ಅಂಕುರವು ಬೆಳೆದು ದೊಡ್ಡದಾಗಿ ಗೋವೆ ಎಂಬ ಹೆಸರಿನಿಂದ ಹಿಂದುಸ್ಥಾನದಲ್ಲಿ ಪೋರ್ತುಗೀಜರ ಮುಖ್ಯ ಠಾಣ್ಯವಾಗಿರುತ್ತದೆ. ಪೋರ್ತುಗೀಜರ ತರುವಾಯ ಫ್ರೆಂಚ, ಡಚ್ಚ, ಇಂಗ್ಲಿಷ ಮೊದಲಾದ ಜನಾಂಗದವರು ಈ ದೇಶಕ್ಕೆ ಬಂದರೆಂಬದು ಇತಿಹಾಸದಲ್ಲಿ ಪ್ರಸಿದ್ಧವಿರುವದು. ಸಾರಾಂಶವೇನಂದರೆ, ಆ ಕಾಲಕ್ಕೆ ಪೋರ್ತುಗೀಜರು ವಿದ್ಯಾ, ಸುಧಾರಣಾ, ಜಲಪರ್ಯಟಣ ಮೊದಲಾದವುಗಳ ಬಗ್ಗೆ ಜಗತ್ತಿನಲ್ಲಿ ಅಗ್ರಸ್ಥಾನವನ್ನು ಹೊಂದಿದ್ದರೆಂದು ಹೇಳಬಹುದು.

ಯಾವದೊಂದು ವ್ಯಕ್ತಿಗಾಗಲಿ, ಕುಟುಂಬಕ್ಕಾಗಲಿ, ರಾಷ್ಟ್ರಕ್ಕಾಗಲಿ ಉತ್ಕರ್ಷಾಪಕರ್ಷಗಳು ಇದ್ದೇ ಇರುವವು. ಅದೇ ಪ್ರಕಾರ ಪೋರ್ತುಗಾಲ ದೇಶವಾದರೂ ಕಾಲಚಕ್ರಕ್ಕೊಳಗಾಗಿ ಅತಿ ಹೀನಸ್ಥಿತಿಯನ್ನು ಹೊಂದಿತು. ಅದರ ಶೌರ್ಯಸಾಹಸಾದಿ ರಾಷ್ಟ್ರೀಯ ಸದ್ಗುಣಗಳೆಲ್ಲ ನಷ್ಟವಾಗಿ ಹೋದವು. ಈ ಶತಮಾನದಲ್ಲಂತೂ ಅದನ್ನು ಯಾರೂ ಮಾತಾಡಿಸದಂತಾದರು. ಆದರೆ ಪ್ರತಿಯೊಂದು ವಸ್ತುವು ಹೊರಗೆ ಕಾಣುವಂತೆಯೇ ಅದರ ಅಂತರಂಗದ ಸ್ಥಿತಿಯು ಇರುವದೆಂದು ನಂಬಲಿಕ್ಕಾಗುವದಿಲ್ಲ. ಪೋರ್ತುಗಾಲ ದೇಶದ ಅಂತರಂಗದಲ್ಲಿ ಎಷ್ಟೋ ದಿವಸಗಳಿಂದ ರಾಜ್ಯಕ್ರಾಂತಿಯ ಬೆಂಕಿಯು ಹೊತ್ತುತ್ತಿತ್ತು. ಪೃಥ್ವಿಯ ಹೊಟ್ಟೆಯಲ್ಲಿ ಯಾರಿಗೂ ತೋರದಂತೆ ಇರುವ ‹ ಲಾವಾ ’ ಎಂಬ ಅತಿ ತಪ್ತವಾದ ರಸವು ಒಮ್ಮಿಂದೊಮ್ಮೆ ಜ್ವಾಲಾಮುಖಿಯ ಮಾರ್ಗದಿಂದ ಸ್ಫೋಟನವಾಗುವಂತೆ

ಈ ರಾಜ್ಯಕ್ರಾಂತಿಯ ಬೆಂಕಿಯು ಮೊನ್ನೆ ತಾರೀಖು ೩ನೇ ಅಕ್ಟೋಬರ ದಿವಸ ಅಕಸ್ಮಾತ್ತಾಗಿ ಹೊರಬಿದ್ದು ರಾಜಧಾನಿಯಾದ ಲಿಸಬನ್ ಪಟ್ಟಣವನ್ನು ಸುಡ ಹತ್ತಿತು. ಈ ಸಂಬಂಧದಿಂದ ಇಲ್ಲಿಯ ವರೆಗೆ ಪ್ರಸಿದ್ಧವಾದ ಸಂಗತಿಗಳ ಸಾರಾಂಶವನ್ನು ನಮ್ಮ ವಾಚಕರಿಗಾಗಿ ಕೊಡುವೆವು.

ಎಷ್ಟೋ ದಿವಸಗಳಿಂದ ಈ ದೇಶದಲ್ಲಿ ರಾಜಪಕ್ಷವೆಂತಲೂ ಪ್ರಜಾಪಕ್ಷವೆಂತಲೂ ಎರಡು ಪಕ್ಷಗಳು ಇದ್ದೇ ಇದ್ದವು. ರಾಜಪಕ್ಷದ ಜನರು ಪ್ರಜೆಗಳನ್ನು ಪರಿಪರಿಯಿಂದ ಪೀಡಿಸುತ್ತಿದ್ದರು. ದೇಶದಲ್ಲಿ ಅನಾಚಾರಗಳು ಹಬ್ಬಿದ್ದವು; ಅನ್ಯಾಯಗಳು ವಿಶೇಷವಾಗಿ ಸಂಭವಿಸುತ್ತಿದ್ದವು. ಬೊಂಬಾರ್ಡಾ ಎಂಬ ಒಬ್ಬ ಪ್ರಜಾಪಕ್ಷದ ಮುಂದಾಳು ಪ್ರಜೆಗಳ ಹಿತದ ಸಲುವಾಗಿ ಕಾಯಾವಾಚಾಮನಸಿನಿಂದ ಪ್ರಯತ್ನ ಮಾಡುತ್ತಿದ್ದನು. ಕೆಲವು ದಿವಸ ಹುಚ್ಚರ ಆಸ್ಪತ್ರಿಯಲ್ಲಿದ್ದ ಸೆಂಟೋಸ ಎಂಬವನೊಬ್ಬ ರಾಜಪಕ್ಷದ ಲೆಫ್ಟನೆಂಟನು ಆ ಬೊಂಬಾರ್ಡಾನ ಕೊಲೆಯನ್ನು ನಿಷ್ಕಾರಣವಾಗಿ ಮಾಡಿದನು. ಮೊದಲೇ ಕ್ಷುಬ್ಧರಾಗಿದ್ದ ಪ್ರಜೆಗಳು ಈ ಕೊಲೆಯಿಂದ ಮತ್ತಿಷ್ಟು ಕ್ಷುಬ್ಧರಾದರು. ಸೆಕ್ಯಲೊ ಎಂಬ ಒಂದು ಪ್ರಜಾಪಕ್ಷದ ವರ್ತಮಾನಪತ್ರವು ಕಳೆದ ಅಕ್ಟೋಬರ ೩ನೇ ತಾರೀಖಿನ ದಿವಸ ಲಿಸಬನ್ ಪಟ್ಟಣದಲ್ಲಿ ಅಲ್ಲಲ್ಲಿಗೆ ಜಾಹೀರನೋಟೀಸುಗಳನ್ನು ಹಚ್ಚಿತು. ಆ ನೋಟೀಸಿನಲ್ಲಿ, "ಯಾವ ರಾಜಸತ್ತೆ ಇರುವಾಗ ಇಂಥ ಅನ್ಯಾಯದ ಹಾಗು ಅನಾಚಾರದ ಕೃತ್ಯಗಳು ಸಂಭವಿಸುವವೋ ಆ ರಾಜಸತ್ತೆಯನ್ನು ನಿರ್ಮೂಲ ಮಾಡಿರಿ," ಎಂದು ಬರೆದಿತ್ತು. ಆ ನೋಟೀಸುಗಳನ್ನು ಓದಿ, ಅದೇ ದಿವಸ ಸಾಯಂಕಾಲಕ್ಕೆ ಜನರು ದಂಗೆಯನ್ನೆಬ್ಬಿಸಿದರು. ಆ ದಂಗೆಯು ಮುರಿಯಲ್ಪಟ್ಟಾಗ್ಯೂ ದಾಳಿಗಾರರು ತೋಫಖಾನೆಯೊಳಗಿನ ಜನರನ್ನು ತಮ್ಮ ಪಕ್ಷಕ್ಕೆ ಒಲಿಸಿಕೊಂಡದ್ದರಿಂದ ದಾಳಿಗಾರರ ಪಕ್ಷವೇ ಪ್ರಬಲವಾಯಿತು. ಅಷ್ಟರಲ್ಲಿ ಕಾಲಾಳುಗಳ ಸೈನ್ಯದೊಳಗಿನ ಸಾರ್ಜಂಟರು ದಂಗೆಯನ್ನೆಬ್ಬಿಸಿ, ತಮ್ಮ ಮೇಲಧಿಕಾರಿಗಳಿಗೆ ಗುಂಡು ಹಾಕಿ ಕೊಂದು ದಾಳಿಗಾರರನ್ನು ಕೂಡಿಕೊಂಡರು. ಈ ಮೇರೆಗೆ ಕಾಲಾಳುಗಳಿಂದಲೂ, ತೋಫಖಾನೆಯಿಂದಲೂ ಪ್ರಬಲವಾದ ದಾಳಿಗಾರರ ಸೈನ್ಯವು ಪಟ್ಟಣವನ್ನು ಸೇರಿ ಕೊಳ್ಳ ಹತ್ತಿತು. ಆ ಕಾಲಕ್ಕೆ ರಾಜಧಾನಿಯಲ್ಲಿ ಮುಖ್ಯ ಪ್ರಧಾನನೂ ದಂಡಿನ ಮುಖ್ಯಾಧಿಕಾರಿಗಳೂ ಇರಲಿಲ್ಲ. ಅರಸರಾದ ಮ್ಯಾನ್ಯುಯಿಲ ಎಂಬವರು

ಜಪಾನ ದೇಶದ ಸಮಾಜ ಸ್ಥಿತಿಯ ಬಗ್ಗೆ ಕೆಲವು ಸಂಗತಿಗಳು.

ಕಳೆದ ಶತಮಾನದ ಆರಂಭದಲ್ಲಿ ಅಪ್ರಸಿದ್ಧವಾಗಿದ್ದ ಜಪಾನದೇಶವು ಒಮ್ಮಿಂದೊಮ್ಮೆ ಸುಧಾರಣೆಯ ಅತ್ಯುಚ್ಚ ಶಿಖರವನ್ನು ಏರಿದ್ದು ಆಶ್ಚರ್ಯದ ಸಂಗತಿಯಾಗಿದೆ. ಜಪಾನದ ನಾಗರಿಕತೆಯನ್ನು ಕಂಡು, ಇಂಗ್ಲಂಡದಂಥ ಪ್ರಬಲ ರಾಷ್ಟ್ರಗಳು ಕೂಡ ಅದರೊಡನೆ ಸ್ನೇಹ ಬಳೆಸಿರುತ್ತವೆ. ಯಾವದೊಂದು ದೇಶದಲ್ಲಿ ನಾನಾ ಪ್ರಕಾರದ ಸುಧಾರಣೆಗಳಾಗುವ ಪೂರ್ವದಲ್ಲಿ ಸಾಮಾಜಿಕ ಸುಧಾರಣೆಯಾಗುವದು ಅತ್ಯವಶ್ಯವು. ಇತರ ಎಲ್ಲ ಸುಧಾರಣೆಗಳು ಬಹುಶಃ ಸಮಾಜಸುಧಾರಣೆಯನ್ನೇ ಅವಲಂಬಿಸಿರುವವು. ಎಷ್ಟೋ ಶತಮಾನಗಳಿಂದ ಪ್ರಚಲಿತವಾಗಿದ್ದ ಸರಂಜಾಮು ರಾಜ್ಯಪದ್ಧತಿಯು ಕಾನ್‌ಸ್ಟಿಟ್ಯೂಶನಲ್ ಎಂಬ ನಿಯಮ ಶಾಸನಪದ್ಧತಿಯಾಗಿ ರೂಪಾಂತರವಾಗುವದೂ, ರಕ್ತಪಾತವೇ ಮೊದಲಾದ ಯಾವತರದ ಗೊಂದಲಗಳೂ ಆಗದೆ ಕೇವಲ ಬಾದಶಹನ ಅಪ್ಪಣೆಗಳಿಂದಲೇ ಜಾತಿಪಂಥಗಳ ತೊಡಕು ಇಲ್ಲದಂತಾಗುವದೂ, ಶಾಂತತೆಯಿಂದಲೂ ದೃಢನಿಶ್ಚಯದಿಂದಲೂ ಔದ್ಯೋಗಿಕ ಉನ್ನತಿಯು ಒಂದೇ ಸಮವಾಗಿ ಸಾಗುತ್ತ ಹೋಗುವದೂ ಈ ಮೊದಲಾದ ಸಂಗತಿಗಳು ದೇಶದೊಳಗಿನ ಬೇರೆ ಬೇರೆ ವರ್ಗದ ಜನರ ಸಹಕಾರಿತ್ವದಿಂದಲೂ ಸಮಾಜದ ಪ್ರತಿ ಒಂದು ವ್ಯಕ್ತಿಗೆ ನ್ಯಾಯವು ದೊರೆಯಬೇಕೆಂದು ಪ್ರಯತ್ನ ಮಾಡುವ ಪ್ರಜಾವಾತ್ಸಲ್ಯವುಳ್ಳ ಸರಕಾರದ ಸಹಾನುಭೂತಿಯಿಂದಲೂ ಸಂಭವಿಸುವವು. ಇವೆಲ್ಲವುಗಳ ಅಪೂರ್ವ ಯೋಗವು ಜಪಾನದ ಹೊರತು ಬೇರೆ ಯಾವ ದೇಶದ ಇತಿಹಾಸದಲ್ಲಿಯೂ ದೊರೆಯಲಿಕ್ಕಿಲ್ಲ. ಮೇಲೆ ಹೇಳಿದ ಎಲ್ಲ ಸಂಗತಿಗಳಿಗೆ ಆ ದೇಶದ ಸಮಾಜಸ್ಥಿತಿಯೇ ಬಹುಮಟ್ಟಿಗೆ ಕಾರಣವಾಗಿರುವದು. ಈ ಬಗ್ಗೆ ತದ್ದೇಶದ ಒಬ್ಬ ಮುತ್ಸದ್ದಿಯ ಬಾಯಿಂದ ಹೊರಟ ಉದ್ಗಾರಗಳ ಸಾರಾಂಶವನ್ನು ಇಲ್ಲಿ ಕೊಡುವೆವು. ಆ ಮುತ್ಸದ್ದಿಯು ಅಂದದ್ದೇನಂದರೆ :—

"ಒಮ್ಮಿಂದೊಮ್ಮೆ ಆದ ನಮ್ಮ ಈ ಪ್ರಗತಿಯನ್ನು ಕಂಡು, ಪರದೇಶದವರು ಬಹಳ ಆಶ್ಚರ್ಯಪಡುತ್ತಾರೆ. ಆದರೆ ನಿಜವಾಗಿ ಆಶ್ಚರ್ಯ

ಪಡಲಿಕ್ಕೇನೂ ಕಾರಣವಿಲ್ಲ. ಯಾಕಂದರೆ ಯಾವದೊಂದು ರಾಷ್ಟ್ರವು ಜೀವದಿಂದ ಇರಲಿಕ್ಕೆ ಅತ್ಯವಶ್ಯವಾದ ಪೂರ್ವೇತಿಹಾಸ, ದಂತಕಥೆ, ತತ್ವಜ್ಞಾನ, ವಾಙ್ಮಯ ಇವೇ ಮೊದಲಾದ ಸಂಗತಿಗಳು ನಮ್ಮ ಬಳಿಯಲ್ಲಿರುತ್ತವೆ. ಇವುಗಳಿಗೆ ಪಾಶ್ಚಾತ್ಯ ಸುಧಾರಣೆಯ ಜೋಡು ಸಿಕ್ಕದ್ದರಿಂದ ಜಪಾನವು ಮುಂದರಿಯಿತು. ನಮಗೆ ಉಪಯುಕ್ತವೆಂದು ಕಂಡು ಬಂದ ಸಂಗತಿಗಳನ್ನು ನಾವು ಪರಕೀಯರಿಂದ ಯಾವ ಅಂದೇಶವನ್ನು ತಕ್ಕೊಳ್ಳದೆ ಅನುಸರಿಸಿರುತ್ತೇವೆ. ಚೀನ ದೇಶದ ಕಾನಫ್ಯೂಸಿ-ಅಸ್ ಧರ್ಮವನ್ನೂ ಹಿಂದುಸ್ಥಾನದ ಬೌದ್ಧಧರ್ಮವನ್ನೂ ತತ್ವಜ್ಞಾನ-ವಾಙ್ಮಯಗಳನ್ನೂ ನಾವು ತೆಗೆದುಕೊಂಡಿರುತ್ತೇವೆ. ಆದರೆ ಅವುಗಳನ್ನು ನಮ್ಮ ದೇಶಕ್ಕೆ ಅನುಕೂಲವಾಗುವಂತೆ ಹೆಚ್ಚು ಕಡಿಮೆ ಮಾಡಿಕೊಂಡಿರುತ್ತೇವೆ. ಪಾಶ್ಚಾತ್ಯ ಭೌತಿಕ ಸುಧಾರಣೆಗಳಿಂದ ನಮಗೆ ಹಲವು ಲಾಭಗಳಾಗಿರುತ್ತವೆ. ಆದರೆ ಅವುಗಳ ಸಂಗಡಲೇ ಔದ್ಯೋಗಿಕಕಲಹಗಳಂಥ ಕೆಲವು ಅನರ್ಥಗಳು ಸಂಭವಿಸುವಂತೆ ತೋರುತ್ತಿರುವದು; ಅವುಗಳನ್ನು ಇನ್ನು ನಾವು ಹೊಡೆದು ಹಾಕಲಿಕ್ಕೆ ಬೇಕು.

“ಬಹು ಪುರಾತನ ಕಾಲದಿಂದ ಜಪಾನದ ನಿವಾಸಿಗಳಿಗೂ ಜಪಾನದಲ್ಲಿ ಒಕ್ಕಲಾಗಿ ನಿಂತ ಪರದೇಶದ ನಿವಾಸಿಗಳಿಗೂ ಶರೀರಸಂಬಂಧವು ಆಗುತ್ತಿರುವದು. ಮಂಗೋಲಿಯನ್, ಮಲಾಯಿ, ಆರ್ಯ ಮೊದಲಾದ ಜನಾಂಗದವರು ಜಪಾನ ದೇಶಕ್ಕೆ ಬಂದು ಇಲ್ಲಿಯ ಮೂಲನಿವಾಸಿಗಳಲ್ಲಿ ಬೆರೆತುಕೊಂಡಿರುವರು. ಕಳೆದ ಐವತ್ತು ವರ್ಷಗಳಿಂದ ಎಷ್ಟೋ ಪರಕೀಯರು ಈ ದೇಶಕ್ಕೆ ಬಂದು ಇಲ್ಲಿ ವಾಸ್ತವ್ಯವನ್ನು ಮಾಡಿಕೊಂಡಿರುವದಲ್ಲದೆ ಶರೀರ ಸಂಬಂಧವನ್ನೂ ಮಾಡಿರುವರು. ಸದ್ಯಕ್ಕೆ ಅವರೆಲ್ಲರೂ ಜಪಾನೀ ಜನರೇ ಆಗಿರುವರು. ಇವರಿಂದಲೂ, ಈ ಪದ್ಧತಿಯಿಂದಲೂ, ನಮ್ಮ ದೇಶಕ್ಕೇನಾದರೂ ಹಾನಿಯು ತಟ್ಟೇತೆಂದು ನನಗೆ ತೋರುವದಿಲ್ಲ.

“ನಮ್ಮ ದೇಶದಲ್ಲಿ ಸಾವುಕಾರರಿಗೂ ಕೂಲಿಕಾರರಿಗೂ ಪ್ರೇಮದ ಬಳಿಕೆಯಿರುತ್ತದೆ. ಇಡೀ ಜಪಾನದೇಶವು ಒಂದು ಕುಟುಂಬವೆಂತಲೂ, ಅರಸನು ಆ ಕುಟುಂಬದ ಅಧಿಪತಿಯೆಂತಲೂ ಎಲ್ಲ ಪ್ರಜೆಗಳ ಮನಸಿನಲ್ಲಿ ಭಾವನೆಯಿರುತ್ತದೆ. ಅರಸನ ರಾಜ್ಯಕಾರಭಾರದ ಮುಖ್ಯಧೋರಣವು ಬಡಬಗ್ಗರ ಹಿತವನ್ನು ಸಾಧಿಸುವದೇ ಇರುವದರಿಂದ ಸಮಾಜಸತ್ತಾವಾದಿ

ಗಳಾದ ಸಾಮಾನ್ಯ ಜನರಿಗೂ ದೊಡ್ಡ ಜನರಿಗೂ ವಿತುಷ್ಟಿಯು ಉತ್ಪನ್ನವಾಗಿ ಅದು ವಿಕೋಪಕ್ಕೆ ಹೋಗುವ ಸಂಭವವು ತೀರ ಕಡಿಮೆ ಇರುತ್ತದೆ. ಮೊದಲು ಈ ದೇಶದಲ್ಲಿ ಸಾಮುರಿ ಜನರು, ಒಕ್ಕಲಿಗರು, ಕೂಲಿಕಾರರು ವ್ಯಾಪಾರಸ್ಥರು ಎಂದು ನಾಲ್ಕು ವರ್ಗದ ಜನರು ಇದ್ದರು. ಇನ್ನು ಐದನೇದೊಂದು ಅಂತ್ಯಜವರ್ಗವಿತ್ತು. ಈ ವರ್ಗದಲ್ಲಿ ಕಟುಕರೂ ಸಮಗಾರರೂ ಸೇರುತ್ತಿದ್ದರು. ಸುಧಾರಣೆಯು ಹೊತ್ತು ಬಂದ ಕೂಡಲೆ ಸಾಮುರಿ ಜನರು ತಮ್ಮ ವಂಶಪರಂಪರಾಗತವಾದ ಹಕ್ಕುಗಳನ್ನೂ ಸಂಪತ್ತನ್ನೂ ಬಾದಶಹನಿಗೆ ಒಪ್ಪಿಸಿ, ಎಲ್ಲ ವರ್ಗದವರ ಕೂಡ ಅನ್ನವ್ಯವಹಾರವನ್ನೂ ಶರೀರಸಂಬಂಧವನ್ನೂ ಮಾಡತೊಡಗಿದರು.

"ನಮ್ಮ ದೇಶದ ಶಾಲೆಗಳಲ್ಲಿ ಯಾವದೊಂದು ವಿಶಿಷ್ಟಧರ್ಮದ ಶಿಕ್ಷಣವು ಕೊಡಲ್ಪಡುವದಿಲ್ಲ. ಪ್ರತಿಯೊಂದು ಧರ್ಮದಲ್ಲಿರುವ ಕೆಲವು ಉತ್ಕೃಷ್ಟ ತತ್ತ್ವಗಳಿಗನುಸರಿಸಿ ನೈತಿಕ ಶಿಕ್ಷಣವನ್ನು ಕೊಡುವ ವ್ಯವಸ್ಥೆಯು ಮಾಡಲ್ಪಟ್ಟಿರುವದು. ಜಪಾನ ದೇಶಕ್ಕೆ ಒಂದು ವಿಶಿಷ್ಟವಾದ ಧರ್ಮವಿಲ್ಲೆಂಬ ಕಾರಣದಿಂದ ಈ ದೇಶದ ರಾಷ್ಟ್ರೀಯ ಪ್ರಗತಿಗೆ ಅಡ್ಡಿಯಾಗಬಹುದೆಂದು ನನಗೆ ತೋರುವದಿಲ್ಲ. ಯಾವದೊಂದು ದೇಶದಲ್ಲಿ ಯಾವದಾದರೊಂದೇ ಧರ್ಮವು ಯಥಾವಿಧಿಯಾಗಿ ಪಾಲಿಸಲ್ಪಡುತ್ತಿರುವದು ಆ ದೇಶದ ಉತ್ಕರ್ಷದ ಲಕ್ಷಣವಲ್ಲ. ರಶಿಯಾ ದೇಶದಲ್ಲಿ ಗ್ರೀಕ ಚರ್ಚುಗಳೂ, ಸ್ಪೇನ ದೇಶದಲ್ಲಿ ರೋಮನ ಕ್ಯಾಥಲಿಕ್ ಚರ್ಚುಗಳೂ ಒಳ್ಳೇ ಉತ್ಕರ್ಷವನ್ನು ಹೊಂದಿರುವವು; ಆದರೆ ಅಲ್ಲಿಯ ಜನರು ಸುಧಾರಣೆಯಲ್ಲಿ ಬಹಳ ಹಿಂದೆ ಉಳಿದಿರುವರು. ಇಷ್ಟೇ ಅಲ್ಲ, ಆ ಜನರು ಧರ್ಮದ ಏಕದೇಶೀಯತ್ವದಿಂದಲೇ ಹಿಂದುಳಿದಿರುವರೆಂದು ಖಂಡಿತವಾಗಿ ಹೇಳಬಹುದು. ಇದೇ ಕಾರಣದಿಂದ ತುರ್ಕಸ್ಥಾನ, ಇರಾಣ, ಹಿಂದುಸ್ಥಾನ, ಸಯಾಮ, ಬ್ರಹ್ಮದೇಶ ಈ ದೇಶಗಳಿಗೆ ದೈನ್ಯಾವಸ್ಥೆಯು ಪ್ರಾಪ್ತವಾಗಿರುವದು. ಜಪಾನಿಯರು ಹೆಸರಿಗೆ ಒಂದೇ ಧರ್ಮಕ್ಕೆ ಹೊಂದಿಕೊಂಡು ಕೂಡ್ರಲಾರರು. ಎಲ್ಲ ಧರ್ಮಗಳೊಳಗಿನ ಸರ್ವಮಾನ್ಯವಾದ ತತ್ತ್ವಗಳನ್ನು ಆಯ್ದುಕೊಂಡು, ಗ್ರಹಣ ಮಾಡಲಿಕ್ಕೆ ಅವರು ಹಿಂದೆ ಮುಂದೆ ನೋಡುವದಿಲ್ಲ.

ಪ್ರತಿಯೊಬ್ಬ ಧರ್ಮೋಪದೇಶಕನು ತನ್ನ ಧರ್ಮವೇ ಶ್ರೇಷ್ಠವಾದದ್ದೆಂದು ಅನ್ನುತ್ತಾನೆ. ಸದ್ಯಕ್ಕೆ ನಮ್ಮ ದೇಶದಲ್ಲಿ ಕ್ರಿಸ್ತೀ ಧರ್ಮದ ಪ್ರಸಾ

ಕವು ಹೆಚ್ಚಾಗುವಂತೆ ಅನುಕೂಲ ಪರಿಸ್ಥಿತಿಯು ಇರುವದು. ಟೋಕಿಯೋ ವಿಶ್ವವಿದ್ಯಾಲಯದ ಧರ್ಮಶಾಸ್ತ್ರದ ಅಧ್ಯಾಪಕರಾದ ಡಾಕ್ಟರ ಅನೇರ್ಸುಕಿ ಇವರು ಬೌದ್ಧ ಧರ್ಮವೇ ಹೆಚ್ಚು ಪ್ರಸಾರವಾಗಬಹುದೆಂಬ ಅಭಿಪ್ರಾಯ ಪಡುತ್ತಾರೆ. ಬಹು ಪ್ರಾಚೀನಕಾಲದಿಂದ ಬೌದ್ಧ ಧರ್ಮಕ್ಕೆ ರಾಜಾಶ್ರಯವು ಸಿಗುತ್ತ ಬಂದಿರುವದರಿಂದ ಅದೇ ಧರ್ಮವು ಜಪಾನದ ಸದ್ಯದ ಧರ್ಮವಾಗಿರುತ್ತದೆ. ರಾಜಕೀಯ ಧೋರಣದಿಂದಲೂ, ವ್ಯಾಪಾರದ ಧೋರಣದಿಂದಲೂ, ಸದ್ಯದ ಪರಿಸ್ಥಿತಿಯು ಬದಲಾದಾಗ್ಯೂ ಜಪಾನದ ಜನರು ಹಿಂದುಸ್ಥಾನಕ್ಕೆ ಬಹಳ ಪೂಜ್ಯಬುದ್ಧಿಯಿಂದ ಮಾನ ಕೊಡುತ್ತಾರೆ. ಜಪಾನದ ಬಹಳ ಜನರು ಹಿಂದುಸ್ಥಾನಕ್ಕೂ ಹಿಂದುಸ್ಥಾನದ ಅನೇಕರು ಜಪಾನಕ್ಕೂ ಬರುವ ಹೋಗುವ ರೂಢಿಯನ್ನಿಟ್ಟರೆ ಎರಡೂ ದೇಶಗಳಲ್ಲಿ ನಿಕಟ ಸ್ನೇಹವುಂಟಾಗಬಹುದು."

ಆಯುರ್ವೃದ್ಧಿ.

ವಾಡಿಕೆಯಾಗಿ ಮನುಷ್ಯನಿಗೆ ನೂರು ವರ್ಷ ಆಯುಸ್ಸೆಂದು ಹೇಳುವದುಂಟು. ಅನುಭವಾಮೃತಸಾರದ ಕರ್ತನಾದ ಒಬ್ಬ ಕರ್ನಾಟಕ ಕವಿಯು 'ವರುಷ ನೂರಾಯುಸ್ಯ'ವೆಂದು ಹೇಳಿರುವನು. ಆದರೆ ಈ ಮಾತಿಗೆ ಕೆಲವು ಅಪವಾದಗಳುಂಟು. ನಿಜಾಮ-ಉಲ್-ಮುಲ್ಕನು ೧೦೪ ವರ್ಷ ಬದುಕಿದನೆಂದು ಇತಿಹಾಸದಲ್ಲಿ ಉಲ್ಲೇಖವದೆ. ಗ್ಲಾಸಗೋ ಪಟ್ಟಣದಲ್ಲಿಯ ಕಥೆಡ್ರಲ್‌ದ ಸ್ಥಾಪಕನಾದ ಕೆಂಟಿಗೇರು ಎಂಬವನು ತನ್ನ ವಯಸ್ಸಿನ ೧೮೫ ನೇ ವರುಷ, ಅಂದರೆ ಕ್ರಿ. ಶ. ೧೬೦೦ನೇ ಇಸವಿಯ ಜಾನೇವಾರಿ ೫ನೇ ತಾರೀಖಿಗೆ ಮರಣ ಹೊಂದಿದನು. ಇದಲ್ಲದೆ ಹಂಗರಿ ಮೊದಲಾದ ಮೊದಲಾದ ದೇಶಗಳಲ್ಲಿ ೧೫೦–೧೭೫ ವರ್ಷಗಳ ವರೆಗೆ ಬದುಕಿದ ಜನರ ಎಷ್ಟೋ ಉದಾಹರಣೆಗಳು ಪ್ರಸಿದ್ಧವಿರುತ್ತವೆ. ಈ ಮಾತಿಗೆ ನಮ್ಮ ದೇಶದಲ್ಲಿಯೂ ಹಲಕೆಲವು ಉದಾಹರಣೆಗಳು ದೊರೆಯಬಹುದು. ಸಾರಾಂಶವೇನಂದರೆ, ಮನುಷ್ಯನ ಆಯುರ್ಮರ್ಯಾದೆಯು ನೂರೇ ವರ್ಷವೆಂದು ಖಂಡಿತವಾಗಿ ಹೇಳಲಿಕ್ಕಾಗದು. ಮತ್ತು ಸೃಷ್ಟಿಕರ್ತನಾದ ಪರಮೇಶ್ವರನ ಮನಸ್ಸಿನಲ್ಲಿ ಮನುಷ್ಯ ಪ್ರಾಣಿಯು ಇಷ್ಟೇ ದಿವಸಗಳ ವರೆಗೆ ಬದುಕಬೇಕೆಂದು

ಮುಂತಾದ ಪ್ರಾಣಿಗಳು ಬಹಳ ದಿವಸಗಳ ವರೆಗೆ ಬದುಕುವದಿಲ್ಲ. ಈ ವಿಷಯವಾಗಿ ಪ್ರಾಣಿಶಾಸ್ತ್ರಜ್ಞರ ಮತಗಳು ಭಿನ್ನಭಿನ್ನವಾಗಿರುವವು. ಕೆಲವರು ಸಂತತ್ಯಭಿವೃದ್ಧಿಯು ಹೆಚ್ಚು ಇರುವ ಪ್ರಾಣಿಗಳು ಬೇಗ ಸಾಯುತ್ತವೆ, ಎಂದು ಹೇಳುತ್ತಾರೆ; ಹಲವರು ಪ್ರಾಣಿಗಳ ಆಯುರ್ಮರ್ಯಾದೆಯು ಆಯಾ ಪ್ರಾಣಿಗಳ ಬೆಳವಣಿಗೆಗೆ ಹತ್ತುವ ದಿವಸಗಳಿಗೆ ಕೆಲವೊಂದು ನಿಯಮಿತ ಪ್ರಮಾಣದಲ್ಲಿ ಇರುವದೆಂದು ಅಭಿಪ್ರಾಯ ಪಡುವರು; ಮತ್ತೆ ಕೆಲವರು ವನಸ್ಪತ್ಯಾಹಾರವನ್ನು ಮಾಡುವ ಪ್ರಾಣಿಗಳು ಮಾಂಸಭಕ್ಷಕ ಪ್ರಾಣಿಗಳಿಗಿಂತ ಹೆಚ್ಚು ಕಾಲ ಬದುಕುವವೆಂದು ವಾದಿಸುವರು. ಆದರೆ ಮೇಲೆ ಹೇಳಿದ ಪ್ರತಿಯೊಂದು ಸಿದ್ಧಾಂತಕ್ಕೆ ಅಪವಾದಗಳನ್ನು ತೋರಿಸಿ ಕೊಡಬಹುದು. ಆದಾಗ್ಯೂ ಪ್ರೊಫೆಸರ್ ಮೆಚನಿಕಾಫ್ ಎಂಬ ಶಾಸ್ತ್ರಜ್ಞನ ಸಿದ್ಧಾಂತವು ಹೆಚ್ಚು ಸಯುಕ್ತಿಕವಾಗಿ ತೋರುತ್ತದೆ. ಅವನು ಅನ್ನುವದೇನಂದರೆ:—

“ಪ್ರಾಣಿಗಳ ಜೀವನಮರ್ಯಾದೆಯು ಅವುಗಳ ಕಿಬ್ಬೊಟ್ಟೆಯಲ್ಲಿ ಬಲಗಡೆಯ ಮೂಲೆಯಲ್ಲಿರುವ ಸ್ಥೂಲಾಂತ್ರದ (large intestine) ವಿಕಾಸವನ್ನೂ ಅದರ ಕಾರ್ಯವನ್ನೂ ಅವಲಂಬಿಸಿರುತ್ತದೆ. ಮೀನುಗಳ ಶರೀರರಚನೆಯಲ್ಲಿ ಸ್ಥೂಲಾಂತ್ರವು ವಿಕಾಸ ಹೊಂದಿರುವದಿಲ್ಲ; ಏಡಿ ಮೊದಲಾದ ಪ್ರಾಣಿಗಳ ಸ್ಥೂಲಾಂತ್ರವು ಸ್ವಲ್ಪ ಮಾತ್ರ ವಿಕಾಸ ಹೊಂದಿರುತ್ತದೆ. ಬೆನ್ನೆಲವುಳ್ಳ ದೊಡ್ಡ ಕೋಟಿಯ ಪ್ರಾಣಿಗಳ ಸ್ಥೂಲಾಂತ್ರವು ಚನ್ನಾಗಿ ವಿಕಾಸಹೊಂದಿರುತ್ತದೆ. ಪ್ರಾಣಿಶರೀರದ ಆ ಭಾಗವು ಹೆಚ್ಚು ಹೆಚ್ಚು ವಿಕಾಸ ಹೊಂದಿದ್ದಷ್ಟರೆ, ಅಲ್ಲಿ ಶರೀರದೊಳಗಿನ ಮಲವು ಸಂಚಯವಾಗಲಿಕ್ಕೆ ಆಸ್ಪದವಾಗುತ್ತದೆ. ಆ ಮಲದಿಂದ ಅಲ್ಲಿ ಬ್ಯಾಕ್ಟೀರಿಯಾ ಎಂಬ ಅತಿ ಸೂಕ್ಷ್ಮ ಜಂತುಗಳ ಉತ್ಪತ್ತಿಯಾಗಿ ಅವು ಬೆಳವಣಿಗೆಯನ್ನು ಹೊಂದುವವು. ಪ್ರಾಣಿಗಳ ರಕ್ತದ ಮೇಲೆ ಈ ಜಂತುಗಳಿಂದ ಕೆಟ್ಟ ಪರಿಣಾಮವಾಗಿ ಒಂದು ಪ್ರಕಾರದ ಮದವು ಉತ್ಪನ್ನವಾಗುತ್ತದೆ. ಈ ಮದದಿಂದಲೇ ಶರೀರಕ್ಕೆ ಮುಪ್ಪು ಬರುತ್ತದೆ. ಕಟ್ಟಕಡೆಗೆ ಆ ಮದದ ಪರ್ಯವಸಾನವು ಮರಣದಲ್ಲಿ ಆಗುತ್ತದೆ. ಪಕ್ಷಿಗಳ ಶರೀರರಚನೆಯಲ್ಲಿ ಈ ಮೇರೆಗೆ ಮಲಸಂಚಯವಾಗಿ ಕೊಳೆತು ಅಲ್ಲಿ ಮೇಲೆ ಹೇಳಿದ ಪ್ರಕಾರದ ಸೂಕ್ಷ್ಮ ಜಂತು

ಗಳ ಉತ್ಪತ್ತಿಯು ಆಗುವದಿಲ್ಲಾದ ಕಾರಣ ಅವು ಬಹುದಿವಸ ಬಾಳು ತ್ತವೆ."

ಈ ವಿಚಾರದಿಂದ ಆಯುರ್ವೃದ್ಧಿಗೆ, ಸ್ಥೂಲಾಂತ್ರದಲ್ಲಿ ಮಲಸಂಚಯವಾಗಿ ಅದು ಕೊಳೆಯದಂತೆ ಎಚ್ಚರಪಡುವದು ಮುಖ್ಯೋಪಾಯವೆಂದು ಗೊತ್ತಾಗುತ್ತದೆ. ಯಾಕಂದರೆ ಬ್ಯಾಕ್ಟೀರಿಯಾ, ಮಾಯಕ್ರೋಬ ಈ ಜಂತುಗಳು ಅವುಗಳಿಗೆ ಆಹಾರವು ವಿಶೇಷವಾಗಿ ಇದ್ದಲ್ಲಿ ಮಾತ್ರ ಪೋಷಿಸಲ್ಪಡುತ್ತವೆ. ಆದರೆ ಅವುಗಳಿಗೆ ಸಾಕಷ್ಟು ಆಹಾರವು ಇರದಿದ್ದರೆ ಅವುಗಳಲ್ಲಿ ಜೀವನಕಲಹವು ಉತ್ಪನ್ನವಾಗಿ ಅವುಗಳಲ್ಲಿ ಎಷ್ಟೋ ಜಂತುಗಳು ತಮ್ಮಿಂದ ತಾವೇ ಸತ್ತು ಹೋಗುತ್ತವೆ. ಆದಕಾರಣ, ಪಚನವಾಗುವಷ್ಟೇ ಅನ್ನವನ್ನು ಉಂಡರೆ ನಿರುಪಯುಕ್ತವಾದಂಥ ಅಥವಾ ಪಚನವಾಗದೆ ಇದ್ದಂಥ ಭಾಗವು ಆಂತ್ರಗಳಲ್ಲಿ ಸಂಚಯವಾಗಿ ಕೊಳೆಯುವ ಸಂಭವವೇ ಇಲ್ಲದಂತಾಗುವದು. ಹಾಲು ಕೆಟ್ಟರೆ ಅದರಲ್ಲಿ ಉತ್ಪನ್ನವಾಗುವ ಸೂಕ್ಷ್ಮ ಜಂತುಗಳು (Bacilli) ಮನುಷ್ಯನ ಆಂತ್ರಗಳಲ್ಲಿ ಬೆಳವಣಿಗೆಯನ್ನು ಹೊಂದಿದರೆ, ಅವು ತಮ್ಮಲ್ಲಿರುವ ಕ್ಷಾರ ಹುಟ್ಟಿಸುವ ಶಕ್ತಿಯಿಂದ ಕೊಳೆಯುವ ಕಾರ್ಯಕ್ಕೆ ಪ್ರತಿಬಂಧವನ್ನುಂಟುಮಾಡುವವೆಂದು ಪ್ರೊಫೆಸರ್ ಮೆಚನಿಕಾಫ ಇವರು ಪ್ರಯೋಗಗಳಿಂದ ಸಿದ್ಧಮಾಡಿರುವರು. ಅವರು ಈಗ ಎಂಟು ವರ್ಷಗಳಿಂದ ಮಜ್ಜಿಗೆಯ ಉಪಯೋಗವನ್ನು ಮಾಡುತ್ತಿರುವರು. ಮತ್ತು ಮಜ್ಜಿಗೆಯನ್ನು ಕುಡಿಯುತ್ತಿರಬೇಕೆಂದು ಅವರು ಎಲ್ಲರಿಗೂ ಉಪದೇಶಮಾಡುತ್ತಿರುವರು. ನಮ್ಮ ದೇಶದಲ್ಲ ಕಡೆಯ ಅನ್ನಕ್ಕೆ ಮಜ್ಜಿಗೆಯನ್ನು ಹಾಕಿಕೊಳ್ಳುವ ಪದ್ಧತಿಯು ಬಹುಕಾಲದಿಂದ ನಡೆದು ಬಂದಿರುತ್ತದಷ್ಟೇ. ಈ ಪದ್ಧತಿಯು ಆಯುರ್ವೃದ್ಧಿಗೆ ಸಹಾಯಕಾರಿಯಾಗಿರುವದೆಂಬದಕ್ಕೆ ಸಂದೇಹವಿಲ್ಲ.

ಈ ಎಲ್ಲ ವಿವೇಚನದಿಂದ ಮನುಷ್ಯ ಪ್ರಾಣಿಯು ದೀರ್ಘಾಯುಷ್ಯವಂತನಾಗಲಿಕ್ಕೆ ಅವಶ್ಯಕವಾದ ಸಂಗತಿಗಳು ೩ ಇರುವವೆಂದು ಗೊತ್ತಾಗುತ್ತದೆ. ಅವು ಯಾವವೆಂದರೆ:—

೧. ಆರೋಗ್ಯ ಶಾಸ್ತ್ರದ ನಿಯಮಗಳನ್ನು ಪಾಲಿಸುವದು; ಅಂದರೆ ಆಹಾರವನ್ನು ಮಿತವಾಗಿ ತಕ್ಕೊಳ್ಳುವದು. ವ್ಯಾಯಾಮವನ್ನು ಮಾಡುವದು ಹಾಗೂ ಸ್ವಚ್ಛತೆಯಿಂದ ಇರುವದು.

೨. ಪಾತ್ರಗಳಲ್ಲಿ ಮಲವು ಸಂಚಯವಾಗಿ ಕೊಳೆಯದಂತೆ ಯತ್ನ ಯಿಸುವದು.

೩. ಪ್ರೊ|| ಮೆಚನಿಕಾಫ ಇವರ ಅಭಿಪ್ರಾಯದ ಪ್ರಕಾರ ಆಂತ್ರ ದಲ್ಲಿ ನಡೆಯುವ ಕೊಳೆಯುವ ಕಾರ್ಯಕ್ಕೆ ಪ್ರತಿಬಂಧವನ್ನು ಮಾಡು ವದು.

ಶಾಲಾಧ್ಯಾಪಕರ ಲೇಖಗಳು.

ರಾವಸಾಹೇಬ ಶಾಲಾಪತ್ರಿಕದ ಎಡಿಟರರವರ ಸನ್ನಿಧಿಗೆ—ತಮ್ಮ ಕರ ಕಮಲದಿಂದ ಉದ್ಭವಿಸುವ ಮಾಸಿಕ ಪತ್ರಿಕದಲ್ಲಿ ಕೆಳಗೆ ಕಾಣಿಸಿದ ಸಿಂದ ಗಿಯ ವರ್ಣನೆಗೆ ಇಂಬು ದೊರದೀತೆಂದು ಬೇಡಿಕೊಳ್ಳುತ್ತೇನೆ:—

ಸಿಂದಗಿ ಗ್ರಾಮವು ವಿಜಾಪುರದ ಈಶಾನ್ಯಕ್ಕೆ ೩೫ ಮೈಲಿನ ಮೇಲೆ ಇರುತ್ತದೆ. ಈ ಗ್ರಾಮವನ್ನು "ಸಿಂಧು ಬಲ್ಲಾಳ" ಎಂಬ ಮಹಾಪುರುಷನು ೧೨ನೇ ಶತಕದಲ್ಲಿ ಸ್ಥಾಪಿಸಿದನು. ಈ ಊರಿಗೆ ಪೂರ್ವದಲ್ಲಿ "ಸಿಂದಾ ಪುರ" ಎಂದು ಅನ್ನುತ್ತಿದ್ದರು. ಇದು ತಾಲೂಕಿನ ಮುಖ್ಯಗ್ರಾಮವು. ಈ ಊರಿಗೆ ಪೂರ್ವಕಾಲದಲ್ಲಿ ಕೋಟೆ ಇತ್ತು; "ದಿವಾಕರ ದೀಕ್ಷಿತ" ಎಂಬ ದಾಳಿಗಾರನು ಸನ್ನ ೧೮೫೮ ರಲ್ಲಿ ಈ ಕೋಟೆಗೆ ಮುತ್ತಿಗೆ ಹಾಕಿ ಸುಲಿಯು ತ್ತಿದ್ದನ. ಸರಕಾರದವರು ಅವನನ್ನು ಶಿಕ್ಷಿಸಿ ಕೋಟೆಯನ್ನು ಕೆಡವಿದ ರು. ಈ ಊರ ಪೂರ್ವದ ಕಾಲಕಣಿ ಯರಾದ "ಜಕ್ಕಪ್ಪಯ್ಯ" ಎಂಬವರು ಸನ್ಯಾಸಿಗಳಾಗಿ "ದತ್ತಾತ್ರಯ"ನನ್ನು ಆರಾಧಿಸಿದರು. ಇವರು ಮಹಾ ಸತ್ಪುರುಷರೆನಿಸಿಕೊಂಡು ಇದೇ ಊರಲ್ಲಿ ದೇಹವಿಟ್ಟರು. ಅವರ ಸಮಾ ಧಿಯ ಮೇಲೆ ಗುಡಿಕಟ್ಟಿಸಿ ಈಗ ಉತ್ಸವ ಮಾಡುವರು. ಈ ಉತ್ಸವವು ಫಾಲ್ಗುಣ ಶುದ್ಧ ೪ ರು ದಿವಸ ಆಗುತ್ತದೆ. ಇವರ ಹಿರಿಯರಾದ ಭೀಮಾ ಶಂಕರಪ್ಪಯ್ಯ ಸ್ವಾಮಿಗಳು ಮಹಾಪುರುಷರೆನಿಸಿಕೊಂಡರು. ಇವರ ಆರಾ ಧನೆಯು ಆಶ್ವೀನ ಪೌರ್ಣಿಮೆಯಿಂದ ಮೂರು ದಿವಸಗಳ ವರೆಗೆ ಆಗುವ ದು. ಕಡೇ ದಿವಸ "ಬಿಂದಿಗೆ ಮಹಾತ್ಮೆ" ಆಗುವದು. ಈ ಮಹಾತ್ಮೆ ಹ್ಯಾಗಂದರೆ:—ಒಂದು ಚೌಕು ಕಟ್ಟೆಯ ಮೇಲೆ ಗಚ್ಚಿನ ಗುಂಡು ಬಿಂದಿ

ಗೆ ಹಿಡಿಸುವಷ್ಟು ಮಾಡಿ ತಳಕ್ಕೆ ಅರಿಷಿಣ, ಕುಂಕುಮ ಹಾಕಿ ಬಿಂದಿಗೆ ಇಡುತ್ತಾರೆ. ಆ ಮೇಲೆ ಗಟ್ಟಿನ ಗೂಡಿನ ಮೇಲೆ ಅದರ ಅಳತೆಯ ಒಂದು ಹಲಿಗೆಯನ್ನು ಹಾಕುವರು. ಆ ಹಲಿಗೆಗೆ ಒಂದು ಸಣ್ಣ ತೂತು ಇರುವದು. ಆ ಹಲಿಗೆಯ ಮೇಲೆ ಮಣ್ಣಿನಿಂದ ಒಡ್ಡಿಯನ್ನು ಕಟ್ಟಿ ಉತ್ಸವಕ್ಕೆ ಬಂದ ಬ್ರಾಹ್ಮಣರ ಪಾದಗಳನ್ನು ತೊಳೆಯುವರು. ಆ ಪಾದಪೂಜೆಗೆ ನೂರಾರು ಕೊಡ ನೀರು ಖರ್ಚು ಆಗುವವು. ಆ ಮೇಲೆ ಎಲ್ಲ ಜನರು ಭೋಜನಕ್ಕೆ ಕೂತ ಬಳಿಕ ಆ ಪಾದಪೂಜೆಯ ದೆಸೆಯಿಂದ ಕಟ್ಟೆಯ ಮೇಲೆ ಕಟ್ಟಿದ ಒಡ್ಡಿಯನ್ನೂ ಹಲಿಗೆಯನ್ನೂ ತೆಗೆಯುವರು. ಆ ಮೇಲೆ ಬಿಂದಿಗೆ ನೋಡಲಾಗಿ ಅದು ಎರಡು ಮೂರು ಬೆರಳು ಕಡಿಮೆ ಇರುವದು. ಈ ಮಾತು ಈಗಲೂ ಅನುಭವಕ್ಕೆ ಬರುತ್ತದೆ. ಈ ಊರಲ್ಲಿ "ನೀಲಗಂಗವ್ವ" ಎಂಬ ದೊಡ್ಡ ದೇವಸ್ಥಾನವಿದೆ. ಈ ಗುಡಿಯಲ್ಲಿ ಎರಡು ಭಂಗಾರದ ತಂಬಿಗೆ, ಒಂದು ಬೆಳ್ಳಿಯ ತಂಬಿಗೆ ನೀರು ತುಂಬಿ ಇಟ್ಟಿರುತ್ತಾರೆ. ಈ ದೇವರ ಉತ್ಸವವು ಹಾಗು ಬೇರೆ ದೇವರ ರಥೋತ್ಸವವು ವೈಭವದಿಂದ ಆಗುತ್ತದೆ. ಇಂತಿ ಸಾ॥ ನಮಸ್ಕಾರಗಳು ತಾರೀಖು ೨೮-೧೨-೧೦.

ಹೊನಗನಹಳ್ಳಿ
ತಾ॥ ವಿಜಾಪುರ. }

ಬಾಳಾಜಿ ವಿಶ್ವನಾಥ ದೀಕ್ಷಿತ
ಪ್ರಥಮೋಪ ಶಿಕ್ಷಕ.

ಶ್ರೀ ಜಾರ್ಜ ಸಾರ್ವಭೌಮರವರ ಸಿಂಹಾಸನಾ ರೋಹಣ ಸಂಗೀತವು.

ರಾಗ ॥ ಶಂಕರಾಭರಣ ॥ ಆದಿತಾಳ ॥ ಬ್ಯಾಂಡದ ಧಾಟಿ॥

ಅಂದವೆಲ್ಲರಿಗೆ! । ಆ । ನಂದವೆಲ್ಲರಿಗೆ ॥ಪಲ್ಲ॥

ಸಂಪದ್ವರ್ಧನರ । ನಂದನ ಜಾರ್ಜರು । ಇಂದರಸರಾಗೆ!! ॥ ಅನುಪಲ್ಲ ॥

ಚಂದ್ರಸಮ ಕಾಂತರ್! । ದೇ । ವೇಂದ್ರೋಪಮ ಕಾಂತರ್! ॥
ಇಂದಿರೆಯಾಳು । ಕ್ಸಾಂದ್ರಾಮರ ಚಲು । ಕಂದ ಶ್ರೀಮಂತರ್! ॥ ೧ ॥
ಮಾರಸುಂದರರು । ಗುಣ । ಹಾರಶೋಭಿತರು ॥
ಮಹಾರಾಣೀ ವಿ । ಕ್ಟೋರಿಯಾ ನ । ಪ್ತಾರರಾಗಿಹರು!! ॥ ೨ ॥
ಶೀತಹಯುವರುಷಾ । ಷ । ಣ್ಮೂರ್ತಿಯುತ ದಿವಸಾ ॥

ಖ್ಯಾತಾಂಗ್ಲೇಳಾ। ಮಾತೃಭುವನಸಂ। ಜಾತಧರಣೀಶಾ। ॥ ೩ ॥
ನಾಕಾಕಲೆ ಮೊದಲು। ವಿ। ದ್ಯಾಕರಂಡಕರು ॥
ಶ್ರೀಕರಧರಕರು। ಸಾಕರ ಘನಸುವಿ। ವೇಕ ಮತಿಯುತರು ॥ ೪ ॥
ಧೀರರವರು, ಬಹು। ಗಂ। ಭೀರ ನೃಪವರರು ॥
ಧೀರತೆಯೊಳಗಾ। ಮಾರಸತೀಸಮ। ಮೇರೀಪರಿಣತರು ॥ ೫ ॥
ಭೂತವೇದನಲೀ। ಸಂ। ಭೂತಾನಂದನಲೀ ॥
ಮಾತಂಗಾಂತಕ। ಪೀಠಾಸೀನರ। ಮಾತನೇನನಲಿ!!! ॥ ೬ ॥
ನೃಪ ಶ್ರೀ ಕೀರ್ತಿಯನು, । ಎಡೆ। ವಿಡದಾರೋಗ್ಯವನು, ॥
ಕಡಲಶಯನಸಿರಿ। ಯೊಡೆಯನು ಕರುಣಿವಿ। ಕೊಡೆ ಪೊಡಮಡುತಿ ಹೆನು. ॥ ೭ ॥

ರಾಗ ॥ ತೋಡಿ ॥ ಆದಿತಾಳ ॥

ನೋಡಿರಿ ಈ ನೃಪರಾ!। ಮನದಣಿ ॥ ಪಲ್ಲ ॥

ಉತ್ತಮದಾಂಗ್ಲಧ। ರಿತ್ರೀವಲಯ। ಸೂತ್ರಧರೆಡ್ವರ್ಡ। ಪುತ್ರ ಶ್ರೀಯುತರಾ! ॥ ೧ ॥
ಇಂದುಮದಾಲೆ। ಕ್ಸಾಂದ್ರದ್ವಿತೀಯಾ। ಕಂದ ಪಂಚಮಜಾರ್ಜ। ಸುಂದರಾಧಿಪರಾ ॥ ೨ ॥
ಶೀತಹಯಾಬ್ದಸಂ। ಜಾತರ ಬಹುವಿ। ಖ್ಯಾತರ ಪ್ರಜೆಗಳ। ನೋತು ರಕ್ಷಿಪರಾ ॥ ೩ ॥
ಧೀರೋದಾತ್ತಗಂ। ಭೀರರ ತಪ್ಪ್ಯಾ। ಧೀರವಿಟೆಕ್ಮರ। ಮೇರೀ ಪರಿಣತರಾ! ॥ ೪ ॥
ವರನಯಧಿಟವಾ। ಹರಿವಿಷ್ಟರದೊಳ್। ಮೆರೆದಿಹ ಹಿಂದೂ ಧರಣೀ ಧವರಾ! ॥ ೫ ॥
ಅವಿದ್ಯಾವಂತರ। ನುದ್ಯೋಗಿಗಳಾ। ಉದ್ಯಮಿಗಳ ಸಿರಿ। ವೃದ್ಧಿಗೆಯ್ಯುವರಾ! ॥ ೬ ॥
ಮಂಡಲಗಂಡರ ಗಂಡರ ನಾಕಾ। ಪಂಡಿತ ತರಣಿ। ಮಂಡಲೋಪಮರಾ!! ॥ ೭ ॥
ಅಷ್ಟಸುಖಂಗಳ। ಕೊಟ್ಟು ರಕ್ಷಿಪಪ್ರೋಲ್। ಸೃಷ್ಟಿಯೊಡೆಯ ಶ್ರೀ। ಕೃಷ್ಣನನಮಿಸಿ ॥ ೮ ॥

ಕುಮಟಾ. ವೆ. ಪ. ಹೆಗಡೆ ಬಾಡ.
ತಾ॥ ೧೦-೧೧-೧೯೧೧ ಇಸ್ವಿ. ಹಿ. ಮಾ. ಕುಮಟಾ ನಂ. ೧ ಶಾಲೆ.